ಗುರುವಾರ, ಜನವರಿ 23, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 23 | ಪುಟ 16

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಬಾಹ್ಯಾಕಾಶ ತ್ಯಾಜ್ಯದ ಫಲ 'ಕೆಸ್ಲರ್ ಸಿಂಡ್ರೋಮ್'!



ಆಳ-ಅಗಲ
ಬ್ರಿಕ್ಸ್ ಕರೆನ್ಸಿ: ಬೆದರಿತೇ ಅಮೆರಿಕ?

ಅಂತ್ಯಸಂಸ್ಕಾರದಲ್ಲಿ ಗ್ರಾಮಸ್ಥರ ಸೌಹಾರ್ದ 8

ಅರಮನೆ ರಸ್ತೆ ವಿಸ್ತರಣೆ ಕೈಬಿಡಲು ತೀರ್ಮಾನ 3B

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
76,404	23,155	₹84,560 (ಬೆಂಗಳೂರು)	₹ 97,000 (ಬೆಂಗಳೂರು)	86.35

ಖಾಸಗಿ ಫೈನಾನ್ಸ್‌ಗಳಿಂದ ವಂಚನೆ • ಪರಿಹಾರದ ನಿರೀಕ್ಷೆಯಲ್ಲಿ ಗ್ರಾಮೀಣ ಮಹಿಳೆಯರು

ಸಂತ್ರಸ್ತೆಯರಿಂದ 7.80 ಲಕ್ಷ ದೂರು

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಒಂದೆಡೆ, ಬಡ-ಮಧ್ಯಮ ವರ್ಗದವರಿಗೆ ಖಾಸಗಿ ಫೈನಾನ್ಸ್‌ಗಳ ಕಿರುಕುಳ ಹೆಚ್ಚಾಗುತ್ತಿದೆ. ಮತ್ತೊಂದೆಡೆ, ಖಾಸಗಿ ಹಣಕಾಸು ಸಂಸ್ಥೆಗಳನ್ನು ನಂಬಿ ಹಣ ಹೂಡಿಕೆ ಮಾಡಿ, ವಂಚನೆಗೊಳಗಾದ ಲಕ್ಷಾಂತರ ಗ್ರಾಮೀಣ ಮಹಿಳೆಯರು ಕಣ್ಣೀರಿಡುತ್ತಿದ್ದಾರೆ.

ರಾಜ್ಯದ ಖಾಸಗಿ ಹಣಕಾಸು ಸಂಸ್ಥೆ ಮತ್ತು ಕಂಪನಿಗಳಿಗೆ 'ಅನಿಯಂತ್ರಿತ ಠೇವಣಿ' (ಅನ್‌ರೆಗ್ಯುಲೇಟೆಡ್ ಡೆಪಾಸಿಟ್) ಯೋಜನೆಗಳ ಅಡಿ ಹಣ ಹೂಡಿಕೆ ಮಾಡಿ ವಂಚನೆಗೊಳಗಾದ ಸಂತ್ರಸ್ತೆಯರಿಂದ 7.80 ಲಕ್ಷಕ್ಕೂ ಹೆಚ್ಚು ದೂರು ಅರ್ಜಿಗಳು ರಾಜ್ಯದ ವಿವಿಧ ಜಿಲ್ಲಾಧಿಕಾರಿ ಕಚೇರಿಗಳಿಗೆ ಸಲ್ಲಿಕೆಯಾಗಿವೆ.

ಬೆಳಗಾವಿ- 2,71,466, ಬಾಗಲಕೋಟೆ- 89,037, ವಿಜಯಪುರ- 75,000 ಹಾಗೂ ಮಂಡ್ಯ ಜಿಲ್ಲೆಯಲ್ಲಿ 42,500 ದೂರು ಅರ್ಜಿಗಳು ಸಲ್ಲಿಕೆಯಾಗಿವೆ. ಈ ಜಿಲ್ಲೆಗಳಲ್ಲಿ ರಾಜ್ಯದಲ್ಲೇ ಅತಿ ಹೆಚ್ಚು ದೂರುಗಳಿವೆ.



ಮಂಡ್ಯ ಜಿಲ್ಲಾಡಳಿತ ವತಿಯಿಂದ ತೆರೆದಿದ್ದ 'ದೂರು ಸ್ವೀಕಾರ ಕೇಂದ್ರ'ಕ್ಕೆ ಅರ್ಜಿ ಸಲ್ಲಿಸಿದ ಸಂತ್ರಸ್ತೆಯರು (ಸಂಗ್ರಹ ಚಿತ್ರ)

ಕಳೆದ ವರ್ಷ ರಾಜ್ಯದ ವಿವಿಧ ಜಿಲ್ಲಾಧಿಕಾರಿ ಕಚೇರಿಗಳಲ್ಲಿ ತೆರೆದಿದ್ದ 'ದೂರು ಸ್ವೀಕಾರ ಕೇಂದ್ರ'ಗಳಿಗೆ ಮಹಿಳೆಯರಿಂದ ಅರ್ಜಿಗಳ ಮಹಾಪೂರವೇ ಹರಿದು ಬಂದಿದೆ. 'ಸರ್ಕಾರ ಪರಿಹಾರ ಕೊಡಿಸುತ್ತದೆ' ಎಂಬ ನಿರೀಕ್ಷೆಯಲ್ಲಿ ಸಂತ್ರಸ್ತೆಯರು ಕಾಯುತ್ತಿದ್ದಾರೆ.

ಸಕ್ಷಮ ಪ್ರಾಧಿಕಾರ ರಚನೆ: ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ 2004 (ಕೆ.ಪಿ.ಐ.ಡಿ ಅಧಿನಿಯಮ) ಮತ್ತು 2019ರ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಕಾಯ್ದೆ (ಬಡ್ಸ್ ಆ್ಯಕ್ಟ್) 2019ರ ಅಡಿಯಲ್ಲಿ 127 ಕಂಪನಿಗಳನ್ನು ವಿಚಾರಣೆ ನಡೆಸಲು ಪ್ರತ್ಯೇಕ 'ಸಕ್ಷಮ ಪ್ರಾಧಿಕಾರ'ವನ್ನು ಸರ್ಕಾರ ನೇಮಿಸಿದೆ.

ಅತಿ ಹೆಚ್ಚು ದೂರು ಅರ್ಜಿ ಸಲ್ಲಿಕೆಯಾದ ಜಿಲ್ಲೆಗಳ ವಿವರ

ಜಿಲ್ಲೆ	ದೂರು ಅರ್ಜಿಗಳು
ಬೆಳಗಾವಿ	2,71,466
ಬಾಗಲಕೋಟೆ	89,037
ವಿಜಯಪುರ	75,000
ಮಂಡ್ಯ	42,500
ಗದಗ	41,116
ಧಾರವಾಡ	36,489
ರಾಮನಗರ	33,326
ಶಿವಮೊಗ್ಗ	25,525
ಹಾಸನ	24,556
ಚಿಕ್ಕಬಳ್ಳಾಪುರ	22,054

'ಕೆಲವು ಸಂಸ್ಥೆಗಳಿಗೆ ಸಂಬಂಧಿಸಿ ಪ್ರಾಧಿಕಾರ ನೇಮಕಾತಿಗೆ ಪ್ರಸ್ತಾವ ಸ್ವೀಕೃತವಾಗಿಲ್ಲ. ಅಂಥ ಸಂಸ್ಥೆಗಳ ವಿರುದ್ಧ ಸಲ್ಲಿಕೆಯಾಗಿರುವ ದೂರು ಅರ್ಜಿಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕಳುಹಿಸಿ, ತನಿಖೆ ನಡೆಸಿ ವರದಿ ನೀಡಿ' ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯವರು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

ತಪ್ಪಿತಸ್ಥ ಕಂಪನಿಗಳ ಆಸ್ತಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡು, ಸಂತ್ರಸ್ತೆಯರಿಗೆ ತಕ್ಷಣ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು

ದೇವಿ, ರಾಜ್ಯ ಪ್ರಧಾನ ಕಾರ್ಯದರ್ಶಿ, ಜನವಾದಿ ಮಹಿಳಾ ಸಂಘ

ಜಿಲ್ಲೆಯಲ್ಲಿ ಸಲ್ಲಿಕೆಯಾಗಿರುವ ದೂರು ಅರ್ಜಿಗಳನ್ನು ವಿಂಗಡಿಸಿ, ಆಯಾ ಸಕ್ಷಮ ಪ್ರಾಧಿಕಾರಗಳಿಗೆ ಕಳುಹಿಸಿಕೊಡುವ ಪ್ರಕ್ರಿಯೆ ಜಾರಿಯಲ್ಲಿದೆ

ಕುಮಾರ, ಜಿಲ್ಲಾಧಿಕಾರಿ, ಮಂಡ್ಯ

'ಅಧಿಕ ಬಡ್ಡಿ ಆಸೆ ತೋರಿಸಿ, ಮಹಿಳೆಯರಿಂದ ಹಣ ಕಟ್ಟಿಸಿಕೊಳ್ಳುವ ಖಾಸಗಿ ಫೈನಾನ್ಸ್ ಏಜೆಂಟರು ರಾತ್ರೋರಾತ್ರಿ ಪರಾರಿಯಾಗುತ್ತಿದ್ದಾರೆ. ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಖಾಸಗಿ ಫೈನಾನ್ಸ್‌ಗಳಿಗೆ ಸರ್ಕಾರ ಮೂಗುದಾರ ಹಾಕಬೇಕು' ಎಂದು ಸಿಐಟಿಯು ಮಂಡ್ಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಕುಮಾರಿ ಆಗ್ರಹಿಸಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸುದೀಪ್ ಅತ್ಯುತ್ತಮ ನಟ, 'ಮೋಹನ ದಾಸ' ಅತ್ಯುತ್ತಮ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರ 2019ನೇ ಸಾಲಿನ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಘೋಷಿಸಿದ್ದು, ನಟ ಕಿಚ್ಚ ಸುದೀಪ್, ನಟಿ ಅನುಪಮಾ ಗೌಡ, ನಿರ್ದೇಶಕ ಪಿ.ಶೇಷಾದ್ರಿ ಸೇರಿದಂತೆ ಚಿತ್ರರಂಗದ ಹಲವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.



ಪಿ.ಶೇಷಾದ್ರಿ

ರಾಜ್ಯ ಸರ್ಕಾರ ಈ ಪ್ರಶಸ್ತಿಗಳನ್ನು ಬುಧವಾರ ಪ್ರಕಟಿಸಿದೆ. ಏಳು ವರ್ಷಗಳ ಬಳಿಕ ವಾರ್ಷಿಕ ಚಲನಚಿತ್ರ ಪ್ರಶಸ್ತಿಗೆ ಮರುಚಾಲನೆ ದೊರೆತಿದೆ. 25 ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗಿದ್ದು, ಸುದೀಪ್ ಅವರಿಗೆ 'ಪೈಲ್ವಾನ್' ಚಿತ್ರಕ್ಕಾಗಿ ಅತ್ಯುತ್ತಮ ನಟ, ಅನುಪಮಾ ಗೌಡ ಅವರಿಗೆ 'ತ್ರಯಂಬಕಂ' ಚಿತ್ರಕ್ಕಾಗಿ ಅತ್ಯುತ್ತಮ ನಟಿ ಪ್ರಶಸ್ತಿ ಲಭಿಸಿದೆ.



ಸುದೀಪ್



ಅನುಪಮಾ ಗೌಡ

8ನೇ ಪುಟ ನೋಡಿ

ವದಂತಿ ನಂಬಿ ರೈಲಿನಿಂದ ಹಾರಿದ ಪ್ರಯಾಣಿಕರು: 12 ಸಾವು

ಜಲಗಾಂವ್ (ಮಹಾರಾಷ್ಟ್ರ) (ಪಿಟಿಐ): ಬೋಗಿಯೊಂದರಲ್ಲಿ ಬೆಂಕಿ ಹೊತ್ತಿಕೊಂಡಿದೆ ಎಂಬ ವದಂತಿ ಹಬ್ಬುತ್ತಿದ್ದಂತೆಯೇ ಲಖನೌ-ಮುಂಬೈ ಪುಷ್ಪಕ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸುತ್ತಿದ್ದ ಹಲವರು ರೈಲಿನಿಂದ ಹಾರಿ ಓಡತೊಡಗಿದರು. ಇದೇ ವೇಳೆಗೆ ಮತ್ತೊಂದು ಹಳಿಯಲ್ಲಿ ಬೆಂಗಳೂರಿನಿಂದ ದೆಹಲಿಗೆ ಸಾಗುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್ ರೈಲಿಗೆ ಸಿಕ್ಕಿ ಕನಿಷ್ಠ 12 ಮಂದಿ ಮೃತಪಟ್ಟಿದ್ದಾರೆ.

ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯಲ್ಲಿ ಬುಧವಾರ ಸಂಜೆ 5ರ ವೇಳೆಗೆ ಈ ಅವಘಡ ಸಂಭವಿಸಿದೆ. 'ಮಾಹಿತಿ ಪ್ರಕಾರ, ಸಾವಿನ ಸಂಖ್ಯೆ 40ಕ್ಕಿಂತ ಅಧಿಕಗೊಳ್ಳುವ ಸಂಭವವಿದೆ' ಎಂದು ಜಲಗಾಂವ್‌ನವರೇ ಆದ ಕೇಂದ್ರ ಸಚಿವೆ ರಕ್ಷಾ ಖಡಸೆ ಹೇಳಿದರು.

ಗಾಯಾಳುಗಳ ಚಿಕಿತ್ಸೆಗೆ ತಯಾರಾಗಿರಿ ಎಂದು ಸುತ್ತಮುತ್ತಲ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಲಾಗಿದೆ

ದೇವೇಂದ್ರ ಫಡಣವೀಸ್, ಮುಖ್ಯಮಂತ್ರಿ

'ಮುಂಬೈನಿಂದ 400 ಕಿ.ಮೀ. ದೂರದ ಪಚೋರಾ ರೈಲು ನಿಲ್ದಾಣದ ಬಳಿ ಪುಷ್ಪಕ್ ಎಕ್ಸ್‌ಪ್ರೆಸ್ ರೈಲು ಸಂಚರಿಸುತ್ತಿತ್ತು. ಈ ವೇಳೆ ಬೋಗಿಯಲ್ಲಿ ಬೆಂಕಿ ಹೊತ್ತಿಕೊಂಡಿರುವ ವದಂತಿ ಹಬ್ಬಿದೆ' ಎಂದು ಅಧಿಕಾರಿ ಮಾಹಿತಿ ನೀಡಿದರು.

13ನೇ ಪುಟ ನೋಡಿ



ಜನ್ಮದಿಂದ ಸಿಗುವ ಪೌರತ್ವ: ಟ್ರಂಪ್ ಆದೇಶಕ್ಕೆ ವಿರೋಧ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಜನ್ಮದಿಂದ ಸಿಗುವ ಪೌರತ್ವ ಹಕ್ಕನ್ನು ರದ್ದುಪಡಿಸಿ ಹೊರಡಿಸಿರುವ ಆದೇಶಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದೆ.



ಡೊನಾಲ್ಡ್ ಟ್ರಂಪ್

ಭಾರತೀಯ ಅಮೆರಿಕನ್ ಸಂಸದರು ಈ ಆದೇಶಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದು, ಶಿಕ್ಷಣ ಮತ್ತು ಉದ್ಯೋಗ ಅರಸಿ ಅಮೆರಿಕಕ್ಕೆ ಬಂದಿರುವ ಭಾರತೀಯರ ಮೇಲೆ ಪರಿಣಾಮ ಬೀರುತ್ತದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಇನ್ನೊಂದೆಡೆ, ಈ ಆದೇಶವನ್ನು ಪ್ರಶ್ನಿಸಿ ಅಮೆರಿಕದ 22 ರಾಜ್ಯಗಳು ನ್ಯಾಯಾಲಯದ ಮೆಟ್ಟಿಲೇರಿದ್ದರೆ, ಟ್ರಂಪ್ ಹೊರಡಿಸಿರುವ ಆದೇಶ ಅಸಾಂವಿಧಾನಿಕ ಎಂದು ವಲಸೆ ಹಕ್ಕುಗಳ ಗುಂಪು ಆರೋಪಿಸಿದ್ದು, ಇದರ ವಿರುದ್ಧ ಮೊಕದ್ದಮೆ ಹೂಡಿದೆ.

ಇನ್ನಷ್ಟು ಸುದ್ದಿ 12

ಬಿಜೆಪಿ ಸಭೆಯಲ್ಲೂ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯಲ್ಲಿ ಬಣ ಜಗಳ ತಾರಕಕ್ಕೆ ಹೋಗಿದ್ದು, ಮಂಗಳವಾರ ರಾತ್ರಿ ನಡೆದ ಪ್ರಮುಖ ನಾಯಕರ ಸಭೆಯಲ್ಲಿ ಇದು ಸ್ಫೋಟಗೊಂಡಿದೆ.

ಇದೇ ಮೊದಲ ಬಾರಿಗೆ ಮಾಜಿ ಸಚಿವ ಬಿ.ಶ್ರೀರಾಮುಲು ಮತ್ತು ಶಾಸಕ ಗಾಲಿ ಜನಾರ್ದನ ರೆಡ್ಡಿ ನಡುವಿನ ಮುಸುಕಿನ ಗುದ್ದಾಟ ಸಭೆಯಲ್ಲಿಬಯಲಾಗಿದೆ.

ಮಂಗಳವಾರ ರಾತ್ರಿ ಜಿಲ್ಲಾ ಅಧ್ಯಕ್ಷರ ಆಯ್ಕೆಗೆ ಸಂಬಂಧಿಸಿದಂತೆ ಪ್ರಮುಖ ನಾಯಕರ ಸಭೆ ಸುದೀರ್ಘವಾಗಿ ನಡೆಯಿತು. ಆದರೆ, ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಬಗ್ಗೆ ಹಲವು ನಾಯಕರ ಆಕ್ಷೇಪ ವ್ಯಕ್ತವಾಯಿತು. ವಿಜಯೇಂದ್ರ ಅವರು ಹಲವು ಜಿಲ್ಲೆಗಳಲ್ಲಿ ಏಕಪಕ್ಷೀಯವಾಗಿ ಅಧ್ಯಕ್ಷರ ನೇಮಕಕ್ಕೆ ಮುಂದಾಗಿದ್ದಾರೆ. ಪಕ್ಷದ ಇತರ ನಾಯಕರ ಮಾತುಗಳನ್ನು ಕೇಳುತ್ತಿಲ್ಲ ಎಂಬ ಆಕ್ರೋಶ ವ್ಯಕ್ತವಾಯಿತು. ಬೆಂಗಳೂರು ಉತ್ತರ ಜಿಲ್ಲೆಗೆ ಸಂಬಂಧಿಸಿದಂತೆ ತಾವು ಹೇಳಿದ ಹೆಸರುಗಳನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಆಕ್ಷೇಪ ವ್ಯಕ್ತಪಡಿಸಿದರು.

ಬಳ್ಳಾರಿ ಜಿಲ್ಲೆಯ ವಿಷಯ ಬಂದಾಗ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರವಾಲ್ ಅವರು ಸಂಡೂರು ಉಪಚುನಾವಣೆಯಲ್ಲಿ ಸೋಲಿನ ವಿಚಾರ ಪ್ರಸ್ತಾಪಿಸಿ, ಗೆಲುವಿಗೆ ಶ್ರಮಿಸಲಿಲ್ಲ ಎಂದು ಹೇಳಿದ್ದು ಶ್ರೀರಾಮುಲು ಅವರನ್ನು ಕೆರಳಿಸಿತು.

'ಉಪಚುನಾವಣೆಯಲ್ಲಿ ನಾನು ಪಕ್ಷದ ಅಭ್ಯರ್ಥಿ ಪರವಾಗಿ ಕೆಲಸ ಮಾಡಿದ್ದೇನೆ. ಕ್ಷೇತ್ರದಲ್ಲಿ ಯಾರನ್ನು ಬೇಕಾದರೂ ಕೇಳಬಹುದು. ನೀವು ಮಾಡಿದ ಆರೋಪದಿಂದ ಬೇಸರವಾಗಿದೆ. ಡಿ.ವಿ.ಸದಾನಂದಗೌಡ ಅವರು ಇನ್ನೂ ಉಪಚುನಾವಣೆ ಕುರಿತು ವರದಿಯನ್ನೇ ಕೊಟ್ಟಿಲ್ಲ. ಚುನಾವಣೆಯಲ್ಲಿ ಕೆಲಸ ಮಾಡಿಲ್ಲ ಎಂದು ಯಾವ ಆಧಾರದ ಮೇಲೆ ನನ್ನ ಮೇಲೆ ಆರೋಪ ಮಾಡುತ್ತೀರಿ? ಜನಾರ್ದನ ರೆಡ್ಡಿ ಅವರ ಚಿತಾವಣೆಯಿಂದ ಆರೋಪ ಮಾಡುತ್ತಿದ್ದೀರಿ. ಅಗರ್‌ವಾಲ್ ಉತ್ತರ ಭಾರತದವರು, ಅವರಿಗೆ ಇಲ್ಲಿ ಏನು ನಡೆಯುತ್ತಿದೆ ಎನ್ನುವುದು ಗೊತ್ತಿಲ್ಲ' ಎಂದು ಶ್ರೀರಾಮುಲು ಏರಿದ ಧ್ವನಿಯಲ್ಲಿ ಹೇಳಿದರು.

'ಮಾಧ್ಯಮದ ಮುಂದೆ ಹೋಗಿ ಎಲ್ಲವನ್ನು ಹೇಳುತ್ತೇನೆ' ಎಂದು ಎದ್ದಾಗ, ವಿಜಯೇಂದ್ರ ಮತ್ತು ಸಿ.ಟಿ.ರವಿ ಅವರು ಸಮಾಧಾನಪಡಿಸಿದರು.

ಡಿವಿಎಸ್ ನೇತೃತ್ವದಲ್ಲಿ ಒಕ್ಕಲಿಗರ ಸಭೆ

ಪಕ್ಷದಲ್ಲಿ ಬದಲಾವಣೆಯ ತೂಗುಗತ್ತಿ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರನ್ನು ಕಾಡುತ್ತಿದ್ದು, ಒಕ್ಕಲಿಗರಿಗೆ ಅಧ್ಯಕ್ಷ ಅಥವಾ ವಿರೋಧ ಪಕ್ಷದ ನಾಯಕ ಇವೆರಡರಲ್ಲಿ ಯಾವುದಾದರೂ ಒಂದನ್ನು ಉಳಿಸಿಕೊಳ್ಳುವ ಬಗ್ಗೆ ಚರ್ಚಿಸಲು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಅವರ ನೇತೃತ್ವದಲ್ಲಿ ಬುಧವಾರ ರಾತ್ರಿ ಒಕ್ಕಲಿಗ ಶಾಸಕರ ಸಭೆ ನಡೆಯಿತು.

ಗಾಯಾಳುಗಳಿಗೆ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಚಿಕಿತ್ಸೆ

ಪ್ರತ್ಯೇಕ ಅಪಘಾತ: 14 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): ರಾಜ್ಯದಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಒಟ್ಟು 14 ಮಂದಿ ಮೃತಪಟ್ಟಿದ್ದಾರೆ.

ಯಲ್ಲಾಪುರ ತಾಲ್ಲೂಕಿನ ಗುಳ್ಳಾಪುರದ ಮೊಗದ್ದೆ ಸಮೀಪ ರಾಷ್ಟ್ರೀಯ ಹೆದ್ದಾರಿ-63ರಲ್ಲಿ ಬುಧವಾರ ನಸುಕಿನ ಜಾವ ಲಾರಿಯೊಂದು ಉರುಳಿಬಿದ್ದಿದ್ದು, ಅದರಲ್ಲಿದ್ದ 10 ಮಂದಿ ಮೃತಪಟ್ಟಿದ್ದಾರೆ. 19 ಮಂದಿಗೆ ಗಾಯಗಳಾಗಿದ್ದು, ಯಲ್ಲಾಪುರ ಹಾಗೂ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಿಂಧನೂರು-ರಾಯಚೂರು ಮುಖ್ಯ ರಸ್ತೆಯಲ್ಲಿ ವೈಷ್ಣವಿದೇವಿ ದೇವಸ್ಥಾನದ ಸಮೀಪ ಮಂಗಳವಾರ ರಾತ್ರಿ ಕ್ರೂಸರ್ ಪಲ್ಟಿಯಾಗಿ ಚಾಲಕ ಹಾಗೂ ಮೂವರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ. ಹತ್ತು ಮಂದಿ ಗಾಯಗೊಂಡಿದ್ದಾರೆ.

ಲಾರಿ ಪಲ್ಟಿಯಾಗಿ ಹಾವೇರಿ ಜಿಲ್ಲೆಯ ಸವಣೂರಿನ ವಸೀಂ ಅಲ್ಲಾಭಕ್ಷ ಗುಡಗೇರಿ (24), ಜಿಲಾನಿ ಅಬ್ದುಲ್ ಗಫಾರ ಜಕಾತಿ (20), ಇಮ್ತಿಯಾಜ್ ಅಹಮ್ಮದ್ ಜಾಫರ್ ಮುಳಕೇರಿ (32), ಅಸ್ಲಂ ಉರುಫ್ ಮುಜರರಾಜಾ ಗೌಸಮುದ್ದೀನ್ ಬೆಣ್ಣಿ (26), ಹುಸೇನಮೀಯ್ಯಾ ಮಹಮ್ಮದ್ ಜಾಫತ್ ರಮಣೆದ (25), ಫಯಾಜ್ ಇಮಾಮಸಾಬ್ ಜಮಖಂಡಿ (42), ಗುಲಾಂ ಹುಸೇನ ಗೂಡುಸಾಬ್ ಜವಳಿ (22), ಮಹಮ್ಮದ್ ಸಾದಿಕ್ ಅಪ್ಸರ ಬಾಷಾಪರಾಸ (28), ಇಜಾಜ್‌ಮುಸ್ತಾಕ್ ಮುಲ್ಲಾ (23) ಹಾಗೂ ಜಲಾಲ್ ಮಂಚಕ್ಕಿ (29) ಮೃತಪಟ್ಟಿದ್ದಾರೆ.

ಮೃತರೆಲ್ಲರೂ ವ್ಯಾಪಾರಿಗಳಾಗಿದ್ದು, ಸವಣೂರಿನಿಂದ ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ನಡೆಯುವ ವಾರದ ಸಂತೆಗೆ ಹಣ್ಣು-ತರಕಾರಿ ಮಾರಾಟ ಮಾಡಲು ಲಾರಿಯಲ್ಲಿ ಹೊರಟಿದ್ದರು.

'ಕೆಲವರು ಲಾರಿಯ ಕ್ಯಾಬಿನ್‌ನಲ್ಲಿ ಮಲಗಿದ್ದರೆ, ಏಳು ಮಂದಿ ತರಕಾರಿ ಮೂಟೆಗಳ ಮೇಲೆ ಮಲಗಿದ್ದರು. ಲಾರಿ ಉರುಳಿಬಿದ್ದ ಪರಿಣಾಮ ತರಕಾರಿ ಮೂಟೆಗಳು ವ್ಯಾಪಾರಿಗಳ ಮೇಲೆ ಬಿದ್ದಿತ್ತು. ಕೆಲವರು ಉಸಿರುಗಟ್ಟಿ ಮೃತಪಟ್ಟಿದ್ದಾರೆ. ಅಪಘಾತಕ್ಕೆ ಚಾಲಕನ ನಿರ್ಲಕ್ಷ್ಯವೇ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದ್ದು ಚಾಲಕ ನಿಯಾಜ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಯಲ್ಲಾಪುರ ಪೊಲೀಸರು ತಿಳಿಸಿದ್ದಾರೆ.

ಮೃತದೇಹಗಳನ್ನು ಇರಿಸಿದ್ದ ಇಲ್ಲಿನ ಸರ್ಕಾರಿ ಆಸ್ಪತ್ರೆ ಎದುರು ಬೆಳಿಗ್ಗೆಯೇ ಮೃತರ ಸಂಬಂಧಿಕರು ಬಂದಿದ್ದರು. ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ, ಶಿಗ್ಗಾವಿ ಶಾಸಕ ಯಾಸಿರ್ ಅಹಮ್ಮದ್ ಖಾನ್ ಪಠಾಣ ಭೇಟಿ ನೀಡಿ, ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಮೃತರ ಕುಟುಂಬಕ್ಕೆ ₹5 ಲಕ್ಷ ಪರಿಹಾರ

ಲಾರಿ ಅಪಘಾತದಲ್ಲಿ ಮೃತಪಟ್ಟ 10 ಜನರ ಕುಟುಂಬಕ್ಕೆ ರಾಜ್ಯ ಸರ್ಕಾರ ತಲಾ ₹3 ಲಕ್ಷ ಘೋಷಿಸಿದೆ. ಸಿಂಧನೂರು-ರಾಯಚೂರು ಮುಖ್ಯ ರಸ್ತೆಯಲ್ಲಿ ಕ್ರೂಸರ್ ಅಪಘಾತದಲ್ಲಿ ಮೃತಪಟ್ಟ ನಾಲ್ಕು ಜನರ ಕುಟುಂಬಕ್ಕೂ ತಲಾ ₹3 ಲಕ್ಷ ಪರಿಹಾರ ಘೋಷಿಸಲಾಗಿದೆ.

'ಪ್ರಧಾನಿ ನರೇಂದ್ರ ಮೋದಿ ಅವರು ತರಕಾರಿ ವ್ಯಾಪಾರಿಗಳ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರದಿಂದ ಮೃತರ ಕುಟುಂಬಕ್ಕೆ ತಲಾ ₹2 ಲಕ್ಷ, ಗಾಯಾಳುಗಳಿಗೆ ತಲಾ ₹50 ಸಾವಿರ ಪರಿಹಾರ ಘೋಷಿಸಿದ್ದಾರೆ' ಎಂದು ಉತ್ತರ ಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ.

3 ವಿದ್ಯಾರ್ಥಿ ಸೇರಿ ನಾಲ್ವರ ಸಾವು

ರಾಯಚೂರು: ಸಿಂಧನೂರು-ರಾಯಚೂರು ಮುಖ್ಯ ರಸ್ತೆಯಲ್ಲಿ ಕ್ರೂಸರ್ ಪಲ್ಟಿಯಾಗಿ ಮಂತ್ರಾಲಯದ ಸಂಸ್ಕೃತ ವಿದ್ಯಾಪೀಠದ ವಿದ್ಯಾರ್ಥಿಗಳಾದ ಸುಜಯೇಂದ್ರ ಕೃಷ್ಣಮೂರ್ತಿ (22), ಬಳ್ಳಾರಿಯ ಹಯವದನ ಪ್ರಹ್ಲಾದಾಚಾರಿ (18), ಕೊಪ್ಪಳದ ಅಭಿಲಾಷ ಅಶ್ವತ್ ಓಲಿ (20) ಹಾಗೂ ಚಾಲಕ ಕಂಸಾಲಿಶಿವಾ ಸೋಮಣ್ಣ (20) ಮೃತಪಟ್ಟಿದ್ದಾರೆ.

ಹಂಪಿ ಸಮೀಪದ ನರಹರಿ ತೀರ್ಥರ ವೃಂದಾವನದಲ್ಲಿ ಮೂರು ದಿನಗಳ ಆರಾಧನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮಂತ್ರಾಲಯದಿಂದ ನಾಲ್ಕು ಕ್ರೂಸರ್‌ಗಳಲ್ಲಿ ರಾತ್ರಿ ಹೊರಟಿದ್ದರು.



ವೈ.ವೈ.ಬಗಲಿ ಅವರಿಗೆ ನಿವೇಶನ ಮಂಜೂರು • ಮಾಹಿತಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

‘ವೀರಪ್ಪನ್ ಕಾರ್ಯಾಚರಣೆಯಲ್ಲಿ ಬಗಲಿ ಇದ್ದರೇ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೈಸೂರಿನ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯ ನಿವೃತ್ತ ಸಹಾಯಕ ಆಡಳಿತಾಧಿಕಾರಿ ವೈ.ವೈ. ಬಗಲಿ ಅವರು ಕಾಡುಗಳ್ಳ ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರೇ ಹೇಗೆ ಎಂಬ ಬಗ್ಗೆ ಪರಿಶೀಲಿಸಿ ಮಾಹಿತಿ ನೀಡಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

‘ಹೈಕೋರ್ಟ್ ಆದೇಶದ ಹೊರತಾಗಿಯೂ ನನಗೆ ಪ್ರತಿ ಚದರ ಅಡಿ ₹2,100 ದರದಲ್ಲಿ ನಿವೇಶನ ಮಂಜೂರು ಮಾಡಲು ಬಿಡಿಎ ಹಾಗೂ ಸರ್ಕಾರ ವಿಫಲವಾಗಿದೆ’ ಎಂದು ಆರೋಪಿಸಿ ನಿವೃತ್ತ ಕಮಾಂಡೆಂಟ್ ಮೈಸೂರಿನ ರಾಮದಾಸ್ ಗೌಡ ಮತ್ತು ನಿವೃತ್ತ ಸಹಾಯಕ ಆಡಳಿತಾಧಿಕಾರಿ ವೈ.ವೈ.ಬಗಲಿ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ‘ಬಗಲಿ ಅವರು ವೀರಪ್ಪನ್ ಕಾರ್ಯಾಚರಣೆಯಲ್ಲಿ ಭಾಗಿಯಾಗಿಲ್ಲ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಇದನ್ನು ಆಕ್ಷೇಪಿಸಿದ ಬಗಲಿ ಪರ ವಕೀಲರು, ‘ನಮ್ಮ ಕಕ್ಷಿದಾರರು ವೀರಪ್ಪನ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾರೆ’ ಎಂದು ಸ್ಪಷ್ಟಪಡಿಸಿದರು.

ಕೆಲಕಾಲ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಬಗಲಿ ಅವರು ವೀರಪ್ಪನ್ ಕಾರ್ಯಾಚರಣೆಯಲ್ಲಿ ಭಾಗವಹಿಸಿ-ದ್ದರೇ ಹೇಗೆ ಎಂಬುದನ್ನು ಪರಿಶೀಲಿಸಿ ನ್ಯಾಯಾಲಯಕ್ಕೆ ಸ್ಪಷ್ಟ ಮಾಹಿತಿ ನೀಡಿ’ ಎಂದು ಸರ್ಕಾರದ ಪರ ವಕೀಲರಿಗೆ ಸೂಚಿಸಿ ವಿಚಾರಣೆ ಮುಂದೂಡಿತು.

‘ಒಂದೊಮ್ಮೆ ವೀರಪ್ಪನ್ ಕಾರ್ಯಾಚರಣೆಯಲ್ಲಿ ಭಾಗವಹಿಸಿಲ್ಲ ಎಂಬುದು ದೃಢಪಟ್ಟರೆ, ಬಗಲಿ ಅವರು ತಕ್ಕ ಪರಿಣಾಮ ಎದುರಿಸಬೇಕಾಗುತ್ತದೆ. ಅವರಿಗೆ ಮಂಜೂರು ಮಾಡಿರುವ ನಿವೇಶನವನ್ನು ಹಿಂಪಡೆಯುವಂತೆ ಸರ್ಕಾರಕ್ಕೆ ಸೂಚಿಸಬೇಕಾಗುತ್ತದೆ’ ಎಂದೂ ಇದೇ ವೇಳೆ ಎಚ್ಚರಿಸಿತು.

ಪ್ರಕರಣವೇನು?: ಕೆಂಪೇಗೌಡ ಬಡಾವಣೆಯಲ್ಲಿ, ರಾಮದಾಸ್ ಗೌಡ ಅವರಿಗೆ 60X40ರ ಮತ್ತು ವೈ.ವೈ. ಬಗಲಿ ಅವರಿಗೆ 30X40 ಚದರ ಮೀಟರ್ ವಿಸ್ತೀರ್ಣದ ನಿವೇಶನ ಮಂಜೂರು ಮಾಡಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) 2017ರಲ್ಲಿ ಪತ್ರ ನೀಡಿತ್ತು.

ಇದಕ್ಕೆ ಪ್ರಶ್ನಿಸಿ ರಾಮದಾಸ್ ಗೌಡ ಮತ್ತು ಬಗಲಿ ಅವರು 2018ರಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ‘ಸರ್ಕಾರ 2010ರ ಡಿಸೆಂಬರ್ 18ರಂದು ಹೊರಡಿಸಿದ್ದ ಆದೇಶದಂತೆ; ವೀರಪ್ಪನ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಪೊಲೀಸ್ ಅಧಿಕಾರಿಗಳು ಪ್ರತಿ ಚದರ ಮೀಟರ್‌ಗೆ ₹2,100 ದರ ಪಾವತಿ ಮಾಡಿ ನಿವೇಶನ ಪಡೆಯಲು ಅರ್ಹರು ಎಂದಿದೆ. ಆದರೆ, ನಮಗೆ ಮಂಜೂರು ಮಾಡಲಾದ ನಿವೇಶನದ ಪ್ರತಿ ಚದರ ಮೀಟರ್‌ಗೆ ಕ್ರಮವಾಗಿ ₹24,219 ಮತ್ತು ₹21,258 ದರ ನಿಗದಿಪಡಿಸಿ ಅದನ್ನು ಪಾವತಿಸಿ ನಿವೇಶನ ಪಡೆಯುವಂತೆ ಬಿಡಿಎ ಆದೇಶಿಸಿದೆ’ ಎಂದು ಆಕ್ಷೇಪಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ, ‘ರಾಜ್ಯ ಸರ್ಕಾರ ಹೊರಡಿಸಿದ ಆದೇಶದಂತೆ ಪ್ರತಿ ಚದರ ಮೀಟರ್‌ಗೆ ₹2,100ರ ದರದಲ್ಲಿ ನಿವೇಶನ ಮಂಜೂರು ಮಾಡಬೇಕೆಂಬ ಅರ್ಜಿದಾರರ ಮನವಿ ಪರಿಗಣಿಸಿ ಸೂಕ್ತ ಆದೇಶ ಹೊರಡಿಸಬೇಕು’ ಎಂದು ರಾಜ್ಯ ಸರ್ಕಾರ ಹಾಗೂ ಬಿಡಿಎಗೆ ನಿರ್ದೇಶಿಸಿತ್ತು.

ಇದೀಗ ನ್ಯಾಯಾಂಗ ನಿಂದನೆ ಸಲ್ಲಿಸಿರುವ ಅರ್ಜಿದಾರರು, ‘ಬಿಡಿಎ ಹಾಗೂ ರಾಜ್ಯ ಸರ್ಕಾರ, ಹೈಕೋರ್ಟ್ ಆದೇಶವನ್ನು ಉದ್ದೇಶಪೂರ್ವಕವಾಗಿ ಪಾಲನೆ ಮಾಡಿಲ್ಲ. ಹಾಗಾಗಿ, ಬಿಡಿಎ ಆಯುಕ್ತ ಮತ್ತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಿರುದ್ಧ ನ್ಯಾಯಾಂಗ ನಿಂದನೆ ಆರೋಪದಡಿ ಕ್ರಮ ಜರುಗಿಸಬೇಕು’ ಎಂದು ಕೋರಿದ್ದಾರೆ.

ಮುಖ್ಯಾಂಶಗಳು

- ವೀರಪ್ಪನ್ ವಿರುದ್ಧದ ಕಾರ್ಯಾಚರಣೆ
- ನಿವೇಶನ ಹಂಚಿಕೆ ದರ ನಿಗದಿಗೆ ತಕರಾರು




ಮರ ಕತ್ತರಿಸುವ ಬಿಬಿಎಂಪಿ ಅನುಮತಿಗೆ ಹೈಕೋರ್ಟ್ ತಡೆ

ಬೆಂಗಳೂರು: ನಗರದ ಹಳೆಯ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಕಮಾಂಡೊ ಆಸ್ಪತ್ರೆಯ ವಿಸ್ತರಣೆಯ ಉದ್ದೇಶಕ್ಕಾಗಿ 530 ಮರಗಳನ್ನು ಕತ್ತರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ನೀಡಿರುವ ಅನುಮತಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

‘ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ-1976‘ ಅನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ನಿರ್ದೇಶಿಸಬೇಕು’ ಎಂದು ಕೋರಿ ದತ್ತಾತ್ರೇಯ ಟಿ.ದೇವರೆ ಹಾಗೂ ‘ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್’ 2018ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಪ್ರದೀಪ್ ನಾಯಕ್, ‘ಕಮಾಂಡೊ ಆಸ್ಪತ್ರೆ ವಿಸ್ತರಣೆಗಾಗಿ ಬಿಬಿಎಂಪಿಯ ಮರ ಅಧಿಕಾರಿ 530 ಮರಗಳನ್ನು ಕತ್ತರಿಸಲು ಅನುಮತಿ ನೀಡಿದ್ದಾರೆ. ಆದರೆ, ಅದಕ್ಕೆ ಪರ್ಯಾಯವಾಗಿ ಎಷ್ಟು ಮರಗಳನ್ನು ನೆಡಲಾಗುತ್ತಿದೆ ಎಂಬ ವಿವರಗಳನ್ನು ಉಲ್ಲೇಖಿಸಿಲ್ಲ. ಅಂತೆಯೇ, ಇದೇ ನ್ಯಾಯಪೀಠ ಈ ಹಿಂದೆ ನೀಡಿರುವ ಆದೇಶದಂತೆ ಮರಗಳನ್ನು ಕತ್ತರಿಸುವ ಬಗ್ಗೆ ನ್ಯಾಯಾಲಯ ನೇಮಕ ಮಾಡಿರುವ ತಜ್ಞರ ಸಮಿತಿಯು ಅದನ್ನೂ ಪರಿಶೀಲಿಸಿಲ್ಲ’ ಎಂದು ಆಕ್ಷೇಪಿಸಿದರು.

‘ಪರ್ಯಾಯ ಅರಣ್ಯ ಬೆಳೆಸುವುದನ್ನು ಬಿಬಿಎಂಪಿ ವ್ಯಾಪ್ತಿಯಿಂದ 45 ಕಿ.ಮೀ. ದೂರದಲ್ಲಿ ಅಂದರೆ, ನೆಲಮಂಗಲದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ನಗರದ ಹೃದಯ ಭಾಗದಲ್ಲಿ ಅಷ್ಟೊಂದು ಮರಗಳನ್ನು ಕಡಿದು, ಅವುಗಳಿಗೆ ಪರ್ಯಾಯವಾಗಿ ದೂರದಲ್ಲಿ ಸಸಿಗಳನ್ನು ನೆಟ್ಟರೆ ಏನು ಪ್ರಯೋಜನ? ಮರಗಳನ್ನು ಕಡಿಯಲು ಅನುಮತಿ ನೀಡುವಾಗ ನಿಯಮಗಳನ್ನು ಪಾಲನೆ ಮಾಡಿಲ್ಲ. ಹಾಗಾಗಿ, ಸದ್ಯಕ್ಕೆ ಮರಗಳನ್ನು ಕತ್ತರಿಸಲು ಅನುಮತಿ ನೀಡಬಾರದು’ ಎಂದು ಕೋರಿದರು. ಇದನ್ನು ಆಲಿಸಿದ ನ್ಯಾಯಪೀಠ, ‘ಮುಂದಿನ ಆದೇಶದವರೆಗೆ ಮರಗಳನ್ನು ಕತ್ತರಿಸಬಾರದು’ ಎಂದು ಮಧ್ಯಂತರ ಆದೇಶ ನೀಡಿತು.



ಮೆಟ್ರೊ ಮಾರ್ಗ: ಫೆ.4ರಂದು ವಿಚಾರಣೆ



ಇದೇ ಪ್ರಕರಣದಲ್ಲಿ ವಿಚಾರಣೆ ವೇಳೆ ನ್ಯಾಯಪೀಠ, ‘ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಗೆ ಸಂಪರ್ಕ ಕಲ್ಪಿಸುವ ಮೆಟ್ರೊ ರೈಲು ಮಾರ್ಗಕ್ಕಾಗಿ 75 ಮರಗಳನ್ನು ಕಡಿಯಲು ಅನುಮತಿ ನೀಡಬೇಕೆಂಬ ಕೋರಿಕೆ ಬಗ್ಗೆ ಫೆಬ್ರುವರಿ 4ರಂದು ವಾದ–ಪ್ರತಿವಾದ ಆಲಿಸಲಾಗುವುದು’ ಎಂದು ತಿಳಿಸಿದೆ.

ಇದಕ್ಕೂ ಮುನ್ನ ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ, ‘ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಗೆ ಸಂಪರ್ಕ ಕಲ್ಪಿಸುವ ಎತ್ತರಿಸಿದ ಮೆಟ್ರೊ ರೈಲು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಅದಕ್ಕಾಗಿ 75 ಮರಗಳನ್ನು ಕಡಿಯಬೇಕಾಗಿದೆ. ತಜ್ಞರ ಸಮಿತಿ ಪರಿಶೀಲನೆ ನಡೆಸಿ 75 ಮರಗಳ ಪೈಕಿ 15 ಮರಗಳನ್ನು ಉಳಿಸಿಕೊಳ್ಳಬಹುದು. 5 ಮರಗಳನ್ನು ಸ್ಥಳಾಂತರಿಸಬಹುದು ಮತ್ತು 55 ಮರಗಳನ್ನು ತೆರವು ಮಾಡಬೇಕು ಎಂದು ವರದಿ ನೀಡಿದೆ. ಅದರಂತೆ 55 ಮರಗಳನ್ನು ಕತ್ತರಿಸಲು ತುರ್ತಾಗಿ ಅನುವು ಮಾಡಿಕೊಡಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ಪ್ರದೀಪ್ ನಾಯಕ್ ಆಕ್ಷೇಪ ವ್ಯಕ್ತಪಡಿಸಿದರಲ್ಲದೆ, ‘ಬಿಎಂಆರ್‌ಸಿಎಲ್ ಪ್ರತಿ ಬಾರಿಯೂ ಮರಗಳನ್ನು ಕಡಿಯುವ ತುರ್ತು ಇದೆ. ಅನುಮತಿ ನೀಡದಿದ್ದರೆ ಯೋಜನಾ ವೆಚ್ಚ ಹೆಚ್ಚಲಿದೆ ಎಂಬ ನೆಪ ಹೇಳಿ ಮರ ಕತ್ತರಿಸಲು ಅನುಮತಿ ಪಡೆಯುತ್ತಿದೆ. ಆದರೆ, ಬಿಎಂಆರ್‌ಸಿಎಲ್ ಸಲ್ಲಿಸಿರುವ ಪ್ರಮಾಣ ಪತ್ರ ಗಮನಿಸಿದರೆ; ಈವರೆಗೆ ಕತ್ತರಿಸಿರುವ ಮರಗಳಿಗೆ ಪರ್ಯಾಯವಾಗಿ 4 ಸಾವಿರ ಸಸಿಗಳನ್ನು ನೆಡಬೇಕಾಗಿತ್ತು. ಆದರೆ, ಈವರೆಗೂ ನೆಟ್ಟಿಲ್ಲ. ನಿಗಮವು ನ್ಯಾಯಾಲಯದ ಆದೇಶಗಳನ್ನು ಪಾಲನೆ ಮಾಡುತ್ತಿಲ್ಲ. ಆದ್ದರಿಂದ, ಅನುಮತಿ ನೀಡಬಾರದು’ ಎಂದರು.


ಸುದ್ದಿ 2 ನಿಮಿಷ

ಇಂದು ನಗರದ ಹಲವೆಡೆ ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ಜಲಮಂಡಳಿಯು ತುರ್ತು ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವ ಕಾರಣ, ಗುರುವಾರ ಬೆಳಿಗ್ಗೆ 5 ರಿಂದ ಶುಕ್ರವಾರ ಬೆಳಿಗ್ಗೆ 5ರವರೆಗೆ ಕಾವೇರಿ ನೀರು ಸರಬರಾಜು ಯೋಜನೆಯ 4ನೇ ಹಂತದ 2ನೇ ಘಟ್ಟವನ್ನು ಸಂಪೂರ್ಣ ಸ್ಥಗಿತಗೊಳಿಸಲಾಗುತ್ತಿದೆ. ಇದರಿಂದಾಗಿ ನಗರದ ಕೆಲವು ಪ್ರದೇಶಗಳಲ್ಲಿ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹರಿಸುವಂತೆ ಜಲಮಂಡಳಿ ಪ್ರಕಟಣೆ ತಿಳಿಸಿದೆ.

ನೀರು ಪೂರೈಕೆ ವ್ಯತ್ಯಯವಾಗುವ ಸ್ಥಳಗಳು: ಆರ್.ಆರ್. ನಗರ, ಐಡಿಯಲ್ ಹೋಮ್ಸ್, ಕೆಂಚೇನಹಳ್ಳಿ, ಹಲಗೆ ವಡೇರನಹಳ್ಳಿ, ಕೋಡಿಪಾಳ್ಯ, ಚನ್ನಸಂದ್ರ, ಕೆಂಗೇರಿ, ಕೆಂಗೇರಿ ಉಪನಗರ, ನಾಗದೇವನಹಳ್ಳಿ, ಮರಿಯಪ್ಪನಪಾಳ್ಯ, ನಾಗರಭಾವಿ, ಎಸ್.ಎಂ.ವಿ ಲೇಔಟ್ – 1 ರಿಂದ 9 ನೇ ಬ್ಲಾಕ್, ಮಲ್ಲತಹಳ್ಳಿ, ಕೊಟ್ಟಿಗೆಪಾಳ್ಯ, ಹೇರೋಹಳ್ಳಿ, ಹೆಗ್ಗನಹಳ್ಳಿ, ಸುಂಕದಕಟ್ಟೆ, ರಾಜಗೋಪಾಲನಗರ, ಲಕ್ಷ್ಮಿದೇವಿನಗರ, ಲಗ್ಗೆರೆ, ಪೀಣ್ಯ ಕೈಗಾರಿಕಾ ಪ್ರದೇಶ, ಪೀಣ್ಯ, ಟಿ.ದಾಸರಹಳ್ಳಿ, ನೆಲಗದರನಹಳ್ಳಿ, ಹೆಚ್.ಎಂ.ಟಿ ಲೇಔಟ್, ಬಾಗಲಗುಂಟೆ, ಎಂ.ಇ.ಐ ಲೇಔಟ್, ಅಬ್ಬಿಗೆರೆ ಭಾಗದಲ್ಲಿ ನೀರು ಪೂರೈಕೆಯಾಗುವುದಿಲ್ಲ.

ಬ್ಯಾಟರಾಯನಪುರ, ಅಮೃತಹಳ್ಳಿ, ಜಕ್ಕೂರು, ಕಾಫಿ ಬೋರ್ಡ್ ಲೇಔಟ್, ಕೆಂಪಾಪುರ, ಯಲಹಂಕ ಓಲ್ಡ್ ಮತ್ತು ನ್ಯೂ ಟೌನ್, ಕೋಗಿಲು, ವಿದ್ಯಾರಣ್ಯಪುರ, ಸಿಂಗಾಪುರ, ಜಾಲಹಳ್ಳಿ, ಬಿ.ಇ.ಎಲ್ ರಸ್ತೆ, ಮುತ್ಯಾಲನಗರ, ಜೆ.,ಪಿ ಪಾರ್ಕ್, ದಾಸರಹಳ್ಳಿ, ರಾಚೇನಹಳ್ಳಿ, ಮಹಾಲಕ್ಷ್ಮಿ ಲೇಔಟ್, ಸುಬ್ರಹ್ಮಣ್ಯ ನಗರ, ಗಾಯತ್ರಿನಗರ, ಜೆ.ಸಿ. ನಗರ, ಕುರುಬರಹಳ್ಳಿ, ನಂದಿನಿ ಲೇಔಟ್, ಪ್ರಕಾಶನಗರ, ಗೊರುಗುಂಟೆಪಾಳ್ಯ, ಕಾಮಾಕ್ಷಿಪಾಳ್ಯ, ಬಸವೇಶ್ವನಗರ, ಶಿವನಹಳ್ಳಿ, ಮಂಜುನಾಥನಗರ, ಶಂಕರಮಠ, ಮಹಾಲಕ್ಷ್ಮಿಪುರ, ಶಂಕರನಗರ, ಕಮಲಾನಗರ, ಶಕ್ತಿಗಣಪತಿನಗರ, ವಿಜಯನಗರ, ಆರ್.ಪಿ.ಸಿ ಲೇಔಟ್, ಚೋಳರಪಾಳ್ಯ, ಹಂಪಿನಗರ, ಸಣ್ಣಕ್ಕಿಬಯಲು, ಅಗ್ರಹಾರ ದಾಸರಹಳ್ಳಿ, ರಾಜಾಜಿನಗರ 6ನೇ ಬ್ಲಾಕ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಡೀ ದಿನ ನೀರು ಪೂರೈಕೆ ಇರುವುದಿಲ್ಲ.



ಜಲಮಂಡಳಿ: ‘ಫೋನ್ ಇನ್’ ನಾಳೆ

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ವಿ. ರಾಮ್‌ಪ್ರಸಾತ್ ಮನೋಹರ್ ಅವರು ಇದೇ 24ರಂದು(ಶುಕ್ರವಾರ) ಬೆಳಿಗ್ಗೆ 9.30ರಿಂದ 10.30ರವರೆಗೆ ಫೋನ್–ಇನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಸಾರ್ವಜನಿಕರು ವಲಯ/ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ, ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್‌ಗೆ ಸಂಬಂಧಿಸಿದ ಸಮಸ್ಯೆಯ ಬಗ್ಗೆ ಮಾತನಾಡಿ ಪರಿಹಾರ ಪಡೆದುಕೊಳ್ಳಬಹುದು.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಿ ದೂರು ನೀಡಬಹುದು ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ. ದೂರವಾಣಿ ಸಂಖ್ಯೆ: 080-22945119 ಮತ್ತು 080-22229639.

ಎಪಿಎಸ್: ಹಳೆ ವಿದ್ಯಾರ್ಥಿಗಳ ಸಮ್ಮಿಲನ 26ಕ್ಕೆ

ಬೆಂಗಳೂರು: ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್ ಇದೇ 26ರಂದು ಸಂಜೆ 4 ಗಂಟೆಗೆ ಎಪಿಎಸ್ ಮೈದಾನದಲ್ಲಿ ಹಳೆ ವಿದ್ಯಾರ್ಥಿಗಳ ಬೃಹತ್ ಸಮ್ಮಿಲನ ಕಾರ್ಯಕ್ರಮ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್‌ನ ಅಧ್ಯಕ್ಷ ವಿಷ್ಣು ಭರತ್ ಅಲಂಪಲ್ಲಿ, ‘ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆಯು 90 ವರ್ಷಗಳನ್ನು ಪೂರೈಸಿದ ಪ್ರಯುಕ್ತ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವ್ಯಾಸರಾಜ ಮಠದ (ಸೋಸಲೆ) ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಅವರು ಆಶೀರ್ವಚನ ನೀಡಲಿದ್ದಾರೆ’ ಎಂದರು.

‘ಸಂಸ್ಥೆಯು ಕೈಗೆಟುಕುವ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣವನ್ನು ಒದಗಿಸುತ್ತ ಬಂದಿದೆ. ಸದ್ಯ 14 ಸಮೂಹ ಸಂಸ್ಥೆಗಳನ್ನು ಹೊಂದಲಾಗಿದೆ. ಚಲನಚಿತ್ರ ನಟ ರಜನಿಕಾಂತ್, ವಿಜ್ಞಾನಿ ಸಿ.ಎನ್.ಆರ್. ರಾವ್ ಸೇರಿ ಹಲವು ಸಾಧಕರು ಇದೇ ಸಂಸ್ಥೆಯ ಹಳೆ ವಿದ್ಯಾರ್ಥಿಗಳಾಗಿದ್ದಾರೆ. ಕಾರ್ಯಕ್ರಮದಲ್ಲಿ ಭಾಗವಹಿಸಲು 4 ಸಾವಿರಕ್ಕೂ ಅಧಿಕ ಹಳೆ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ’ ಎಂದು ಹೇಳಿದರು.

ಮುನಿರತ್ನ ಗಡಿಪಾರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಪೀಣ್ಯ ಬಳಿ ಸರ್ಕಾರಿ ಜಾಗದಲ್ಲಿ 15ರಿಂದ 18 ವರ್ಷಗಳಿಂದ ಗುಡಿಸಲುಗಳಲ್ಲಿ ಜೀವನ ಸಾಗಿಸುತ್ತಿದ್ದ, 60ಕ್ಕೂ ಹೆಚ್ಚು ಕೂಲಿಕಾರ್ಮಿಕರ ಜೀವನವನ್ನು ಬೀದಿಪಾಲು ಮಾಡಿದ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಗಡಿಪಾರು ಮಾಡಬೇಕು’ ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ರಾಜ್ಯ ಆದಿಜಾಂಬವ ಸಂಘ, ಕರ್ನಾಟಕ ಅಂಬೇಡ್ಕರ್ ಸೇನೆ, ನಮ್ಮ ಕರ್ನಾಟಕ ಸೇನೆ ಸೇರಿದಂತೆ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಗುಡಿಸಲು ಕಳೆದುಕೊಂಡ ಬಡ ಕೂಲಿಕಾರ್ಮಿಕರು ಸತ್ಯಾಗ್ರಹ ನಡೆಸುತ್ತಿದ್ದಾರೆ.

ಮುಖಂಡ ಲಗ್ಗೆರೆ ನಾರಾಯಣಸ್ವಾಮಿ ಮಾತನಾಡಿ, ‘ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಸರ್ಕಾರಿ ಜಾಗವನ್ನು ಕಬಳಿಸಲಾಗಿದೆ. ಬಡವರು, ಕೂಲಿಕಾರ್ಮಿಕರು, ವಸತಿ ರಹಿತರ ಸೇವೆ ಮಾಡಬೇಕಾದ ಶಾಸಕ ಮುನಿರತ್ನ, ತನ್ನ ದರ್ಪ, ದಬ್ಬಾಳಿಕೆಯಿಂದ ದಲಿತರನ್ನು ಬೀದಿಪಾಲು ಮಾಡಿದ್ದಾರೆ. ಒಕ್ಕಲಿಗ, ದಲಿತ ವಿರೋಧಿಯಾದ ಅವರನ್ನು ಗಡಿಪಾರು ಮಾಡುವವರೆಗೂ, ಹೋರಾಟ ನಡೆಸಲಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.



ಶಾಸಕ ರಾಜಾವೇಣುಗೋಪಾಲ ನಾಯಕ ಅವರು ಗುಡಿಸಲು ಕಳೆದುಕೊಂಡ ಕೂಲಿ ಕಾರ್ಮಿಕರ ದೂರನ್ನು ಆಲಿಸಿದರು

‘ಬಡವರ ಬದುಕನ್ನು ಬೀದಿ ಪಾಲು ಮಾಡಿರುವ ಶಾಸಕ ಮುನಿರತ್ನ ಅವರನ್ನು ಬಂಧಿಸಬೇಕು. ಮುಂದೆ ಬಡವರು, ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ, ಹಲ್ಲೆ ಮಾಡದಂತೆ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಬಿಬಿಎಂಪಿ ಮಾಜಿ ಸದಸ್ಯ ವೇಲು ನಾಯ್ಕರ್ ಆಗ್ರಹಿಸಿದರು.

ಸುರಪುರ ಶಾಸಕ ರಾಜಾವೇಣು ಗೋಪಾಲ ನಾಯಕ ನೆಲಸಮವಾಗಿರುವ ಸ್ಥಳಕ್ಕೆ ಭೇಟಿನೀಡಿ ಪರಿಶೀಲನೆ ನಡೆಸಿ, ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸಿದರು.

ಅಂಬೇಡ್ಕರ್ ರಾಜ್ಯ ಘಟಕದ ಮುಖಂಡ ಮದುರೆ ಅಂಬೇಡ್ಕರ್ ಸೇನೆ ರಾಜಾಧ್ಯಕ್ಷ ಪಿ.ಮೂರ್ತಿ, ಪಾಲಿಕೆ ಮಾಜಿ ಸದಸ್ಯರಾದ ಆಶಾ ಸುರೇಶ್, ಜಿ.ಮೋಹನ್ ಕುಮಾರ್, ಸಿದ್ದೇಗೌಡ, ಕಾಂಗ್ರೆಸ್ ಮುಖಂಡ ಯದೀಶ್ವರರಾಮು, ಕೆಪಿಸಿಸಿ ಪ್ರಧಾನಕಾರ್ಯದರ್ಶಿ ವಿಠಲ್ ಯಾದವ್, ನಮ್ಮ ಕರ್ನಾಟಕ ಸೇನೆ ಬಸವರಾಜು ಪಡುಕೋಟಿ ಭಾಗವಹಿಸಿದ್ದರು.

ಸುಧಾ ಸಹಕಾರ ಬ್ಯಾಂಕ್‌ಗೆ ನಿರ್ದೇಶಕರ ಆಯ್ಕೆ

ಬೆಂಗಳೂರು: ನಗರದ ಶ್ರೀಸುಧಾ ಕೋ–ಆಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಳಿಗೆ ನೂತನ ನಿರ್ದೇಶಕರು ಆಯ್ಕೆಯಾಗಿದ್ದಾರೆ.

ಎಂ. ತಿಮ್ಮೇಗೌಡ, ಜಿ.ಒ. ಕೃಷ್ಣ, ಕೆ.ಎಸ್. ದುಷ್ಯಂತ್, ಎನ್. ಜಯರಾಮ್, ಮುರಳೀಧರ, ಶಿವಕುಮಾರ ಟಿ., ವಾಸನ್ ಟಿ., ವಿಜಯಲಕ್ಷ್ಮೀ ಮುರಳೀಧರ್, ಅಮಿತ ಆನಂದ್ ಮಂತ, ಜೋತಿಲಿಂಗಂ ಜಿ., ಸಂಜೀವಯ್ಯ ಕೆ., ಹರಿಚರಣ್ ಎಂ.ಪಿ ಮತ್ತು ಸತ್ಯನಾರಾಯಣಯ್ಯ ಎನ್. ಆಯ್ಕೆ ಆಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಹೊಸದಾಗಿ ಆಯ್ಕೆಯಾಗಿರುವ ನಿರ್ದೇಶಕರ ಅಧಿಕಾರಾವಧಿಯು ಮುಂದಿನ 5 ವರ್ಷದವರೆಗೆ ಇರಲಿದೆ ಎಂದು ಚುನಾವಣಾಧಿಕಾರಿ ವೈ.ಪಿ. ವೆಂಕಟೇಶ್ ತಿಳಿಸಿದ್ದಾರೆ.



ಕೆಎಎಸ್ ಮರು ಪರೀಕ್ಷೆಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ನೇತೃತ್ವದಲ್ಲಿ ಅಭ್ಯರ್ಥಿಗಳು ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಮರು ಪರೀಕ್ಷೆಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪೂರ್ವಭಾವಿ ಪರೀಕ್ಷೆಯಲ್ಲಿ ಭಾಷಾಂತರ ಲೋಪವಾಗಿದ್ದು, ಮರು ಪರೀಕ್ಷೆ ನಡೆಸುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ನೇತೃತ್ವದಲ್ಲಿ ಬುಧವಾರದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಭ್ಯರ್ಥಿಗಳು ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

ಮರು ಪರೀಕ್ಷೆ ನಡೆಸದಿದ್ದರೆ ಪೂರ್ವಭಾವಿ ಪರೀಕ್ಷೆ ಎದುರಿಸಿದ ಎಲ್ಲ ಅಭ್ಯರ್ಥಿಗಳಿಗೂ ಮುಖ್ಯ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಬೇಕು ಎಂದೂ ಅಭ್ಯರ್ಥಿಗಳು ಆಗ್ರಹಿಸಿದರು. ಬೇಡಿಕೆ ಈಡೇರಿಸುವ ತನಕ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪ್ರತಿಭಟನಕಾರರು ಎಚ್ಚರಿಸಿದರು.

‘ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ನಡೆಸುವ ಪರೀಕ್ಷೆಯಲ್ಲಿ ಪದೇ ಪದೇ ತಪ್ಪು ಎಸಗುತ್ತಿರುವ ಆಯೋಗದ ಪರೀಕ್ಷಾ ನಿಯಂತ್ರಕ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಹಾಗೂ ಸಿಬ್ಬಂದಿಯನ್ನು ಅಮಾನತು ಮಾಡಬೇಕು. ಮುಂದಿನ ಎಲ್ಲ ನೇಮಕಾತಿಗಳ ಪ್ರಕ್ರಿಯೆಗಳನ್ನು ಅಧಿಸೂಚನೆ ಹೊರಡಿಸಿದ ಒಂದು ವರ್ಷದ ಒಳಗೆ ಪೂರ್ಣಗೊಳಿಸಿ ಅಂತಿಮ ಆಯ್ಕೆಪಟ್ಟಿ ಬಿಡುಗಡೆ ಮಾಡಬೇಕು’ ಎಂದೂ ಆಗ್ರಹಿಸಿದರು.

ಆಯೋಗವು ನಡೆಸುವ ಎಲ್ಲ ಪರೀಕ್ಷೆಗಳಲ್ಲಿಯೂ ಕನ್ನಡದಲ್ಲಿ ಮೊದಲು ಪ್ರಶ್ನೆ ಪತ್ರಿಕೆ ಸಿದ್ಧಗೊಳಿಸಬೇಕು. ನಂತರ, ಇಂಗ್ಲಿಷ್‌ಗೆ ಭಾಷಾಂತರ ಮಾಡಬೇಕು ಎಂದು ಆಗ್ರಹಿಸಿದರು.

ನೇಮಕಾತಿ ಪ್ರಕ್ರಿಯೆಗಳು ಪೂರ್ಣಗೊಂಡಿರುವ ವಿವಿಧ ಹುದ್ದೆಗಳ ಹೆಚ್ಚುವರಿ ಆಯ್ಕೆಪಟ್ಟಿಯನ್ನು ತಕ್ಷಣವೇ ಪ್ರಕಟಿಸಬೇಕು. ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಪ್ರಶ್ನೆ ಪತ್ರಿಕೆ ಸೋರಿಕೆ ಆಗದಂತೆ ಬಿಗಿ ಕ್ರಮ ಕೈಗೊಳ್ಳಬೇಕು ಎಂದು ಅಭ್ಯರ್ಥಿಗಳು ಆಗ್ರಹಿಸಿದರು.

‘ಸಿಂಧನೂರಿನ ಪರೀಕ್ಷಾ ಕೇಂದ್ರದಲ್ಲಿ ಪಿಡಿಒ ಪರೀಕ್ಷೆಯ ಪ್ರಶ್ನೆ ಪತ್ರಿಕೆಯನ್ನು ವಿಳಂಬವಾಗಿ ನೀಡಲಾಗಿತ್ತು. ಆಕ್ಷೇಪ ವ್ಯಕ್ತಪಡಿಸಿದ್ದ ಅಭ್ಯರ್ಥಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಎಫ್‌ಐಆರ್ ಅನ್ನು ರದ್ದು ಪಡಿಸಬೇಕು. ಕೆಪಿಎಸ್‌ಸಿಯಲ್ಲಿ ದಕ್ಷತೆ ಹಾಗೂ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದ್ದ ಸುರಳಕ್ಕರ್ ವಿಕಾಸ್ ಕಿಶೋರ್ ಹಾಗೂ ಲತಾ ಕುಮಾರಿ ಅವರ ಪೈಕಿ ಒಬ್ಬರನ್ನು ಮತ್ತೆ ಕಾರ್ಯದರ್ಶಿಯಾಗಿ ನೇಮಕ ಮಾಡಬೇಕು’ ಎಂದು ಅಭ್ಯರ್ಥಿಗಳು ಆಗ್ರಹಿಸಿದರು.

ಚಲಿಸುತ್ತಿದ್ದ ರೈಲಿನಿಂದ ಜಿಗಿದ ವ್ಯಕ್ತಿ

ಬೆಂಗಳೂರು: ಚಲಿಸುತ್ತಿದ್ದ ರೈಲಿನಿಂದ ವ್ಯಕ್ತಿಯೊಬ್ಬರು ಜಿಗಿದು ಗಾಯಗೊಂಡಿದ್ದಾರೆ. ಮೆಜೆಸ್ಟಿಕ್‌ನಿಂದ ಮಲ್ಲೇಶ್ವರ ಕಡೆ ತೆರಳುವ ಮಾರ್ಗದಲ್ಲಿ ಬುಧವಾರ ಬೆಳಿಗ್ಗೆ ಈ ಘಟನೆ ಸಂಭವಿಸಿದೆ.

ಮೇಲ್ಸೇತುವೆಯಲ್ಲಿ ರೈಲು ಚಲಿಸುತ್ತಿದ್ದ ವೇಳೆ ಅವರು ಏಕಾಏಕಿ ಜಿಗಿದಿದ್ದಾರೆ. ಸುಮಾರು 30 ಅಡಿಯಿಂದ ಕೆಳಕ್ಕೆ ಜಿಗಿದ ಪರಿಣಾಮ ವ್ಯಕ್ತಿಯ ಸೊಂಟ, ಬಲಭಾಗದ ಕಾಲಿಗೆ ಗಾಯವಾಗಿದೆ. ಮದ್ಯದ ಅಮಲಿನಲ್ಲಿದ್ದ ವ್ಯಕ್ತಿ ಚಲಿಸುತ್ತಿದ್ದ ರೈಲಿನಿಂದ ಕೆಳಕ್ಕೆ ಜಿಗಿದಿರುವ ಶಂಕೆ ವ್ಯಕ್ತವಾಗಿದೆ. ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಧಿಕಾರಿಗಳಿಗೆ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ

‘ಸಮಗ್ರ ದತ್ತಾಂಶ ಸಂಗ್ರಹಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಗ್ರ ದತ್ತಾಂಶ ಸಂಗ್ರಹಿಸಿ ಕಲ್ಯಾಣ ಕರ್ನಾಟಕದ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಪೂರಕವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ’ ಎಂದು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸಲಹೆ ನೀಡಿದರು.

ಪ್ರಾದೇಶಿಕ ಅಸಮತೋಲನ ನಿವಾರಣಾ ಆಯೋಗದ ಅಧ್ಯಕ್ಷ ಪ್ರೊ. ಗೋವಿಂದರಾವ್ ಮತ್ತು ಸದಸ್ಯರ ಜೊತೆ ಅವರು ತಮ್ಮ ಕಚೇರಿಯಲ್ಲಿ ಬುಧವಾರ ಚರ್ಚೆ ನಡೆಸಿದರು.

ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿವಿಧ ಇಲಾಖೆಗಳ ಸೂಕ್ಷ್ಮ ಕಾರ್ಯಕ್ರಮಗಳ ಸಮಗ್ರ ದತ್ತಾಂಶ ಗಳನ್ನು ಸಂಗ್ರಹಿಸುವ ಕುರಿತಂತೆ ಸಚಿವರು ಸಮಾಲೋಚನೆ ನಡೆಸಿದರು.

‘ಕಲ್ಯಾಣ ಕರ್ನಾಟಕ ಭಾಗದಲ್ಲಿ 371ಜೆ ಜಾರಿಗೆ ಬಂದು ಒಂದು ದಶಕದ ಅವಧಿಯಲ್ಲಿ ಶಿಕ್ಷಣ ಕೇತ್ರದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ. ಎಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳಲ್ಲಿ ಕಲ್ಯಾಣ ಕರ್ನಾಟಕದ ಬಹುತೇಕ ವಿದ್ಯಾರ್ಥಿಗಳು ಪ್ರವೇಶಾವಕಾಶ ಪಡೆದಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಈ ಭಾಗದ ಜನರು ತೇರ್ಗಡೆಯಾಗಿ ಉದ್ಯೋಗಾವಕಾಶ ಹೊಂದಿದ್ದಾರೆ. ಆದರೂ ಬೇರೆ ಬೇರೆ ಕ್ಷೇತ್ರಗಳಲ್ಲಿನ ಅಸಮತೋಲನ ಸರಿತೂಗಿಸುವ ಅನಿವಾರ್ಯ ಇದೆ’ ಎಂದು ಆಯೋಗಕ್ಕೆ ಸಚಿವರು ತಿಳಿಸಿದರು.

ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದರಿಂದ ಹಲವಾರು ಪೂರಕ ವ್ಯಾಪಾರಗಳ ಮೂಲಕ ಬದುಕು ಕಟ್ಟಿಕೊಳ್ಳುವ ಅವಕಾಶಗಳಿವೆ. ಜೊತೆಗೆ, ಕೃಷಿ, ತೋಟಗಾರಿಕೆ, ರೇಷ್ಮೆಯಂತಹ ಕ್ಷೇತ್ರಗಳಲ್ಲಿ ಪೂರಕ ಉದ್ಯಮಗಳಲ್ಲಿ ತೊಡಗಿಸಿಕೊಳ್ಳುವ ಮೂಲಕವೂ ಜೀವನಮಟ್ಟ ಸುಧಾರಣೆ ಸಾಧ್ಯವಾಗಲಿದೆ. ಆಯೋಗವು ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದೂ ಸಚಿವರು ಅಭಿಪ್ರಾಯಪಟ್ಟರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಇದ್ದರು.



ಪ್ರಾದೇಶಿಕ ಅಸಮತೋಲನ ನಿವಾರಣಾ ಆಯೋಗದ ಅಧ್ಯಕ್ಷ ಪ್ರೊ. ಗೋವಿಂದರಾವ್‌ಮತ್ತು ಸದಸ್ಯರ ಜೊತೆ ಸಚಿವ ಪ್ರಿಯಾಂಕ್ ಚರ್ಚಿಸಿದರು

ಸಮನ್ವಯಕ್ಕಾಗಿ ಸಭೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷದಲ್ಲಿ ಸಂಘಟನಾ ಹಾಗೂ ಚುನಾವಣಾ ಪರ್ವ ನಡೆಯುತ್ತಿದೆ. ಅವೆರಡನ್ನು ಸಮನ್ವಯಗೊಳಿಸಿ ಯಶಸ್ವಿಯಾಗಿಸುವ ಬಗ್ಗೆ ಜಿಲ್ಲಾ ನಾಯಕರ ಜೊತೆ ಚರ್ಚೆ ನಡೆಸುವ ಕುರಿತು ನಾವು ಸೇರಿದ್ದೆವು’ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಮನೆಯಲ್ಲಿ ಬುಧವಾರ ನಡೆದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮಂಡಳ ಹಾಗೂ ಜಿಲ್ಲಾಮಟ್ಟದ ಅಧ್ಯಕ್ಷರ ನೇಮಕ ಕುರಿತು ಈಗಾಗಲೇ ಜಿಲ್ಲಾ ಮಟ್ಟದ ನಾಯಕರ ಒಂದು ಹಂತದ ಚರ್ಚೆ ನಡೆದಿದೆ. ಅದರ ಮುಂದುವರೆದ ಭಾಗವಾಗಿ ಪಕ್ಷವನ್ನು ಸಂಘಟಿಸುವ ಕುರಿತು ಚರ್ಚಿಸಲು ಸಭೆ ನಡೆಸಿದ್ದೇವೆ’ ಎಂದು ತಿಳಿಸಿದರು.

‘ರಾಜ್ಯದಲ್ಲಿ ಬಿಜೆಪಿಯನ್ನು ಶಕ್ತಿಯುತವಾಗಿ ಕಟ್ಟಲು ನಾವು ಬದ್ಧರಾಗಿದ್ದೇವೆ. ಬಿಜೆಪಿ ಪರವಾಗಿರುವ ನಾವು, ಎಲ್ಲರನ್ನ ವಿಶ್ವಾಸಕ್ಕೆ ತೆಗೆದುಕೊಂಡು ಒಗ್ಗಟ್ಟಿನಿಂದ ಸಾಗುತ್ತೇವೆ’ ಎಂದು ಹೇಳಿದರು.

‘ದೌರ್ಜನ್ಯ ತಡೆಯಲು ಹೋರಾಡಬೇಕು’

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ‘ಮಹಿಳೆಯರ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಯುತ್ತಿದೆ. ಅತ್ಯಾಚಾರ, ಕೊಲೆಯಂತಹ ಅಮಾನವೀಯ ಕೃತ್ಯಗಳು ನಡೆಯುತ್ತಿವೆ. ಅದು ತಡೆಗಟ್ಟಲು ಇಡೀ ಸಮಾಜ ಹೋರಾಡಬೇಕು’ ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಮಾಂಜಿನಯ್ಯ ಹೇಳಿದರು.

ನರಸೀಪುರ ಗ್ರಾಮ ಪಂಚಾಯಿತಿ ಮತ್ತು ವಿಕಾಸ ಸಾಮಾಜಿಕ ಮತ್ತು ಶೈಕ್ಷಣಾಭಿವೃದ್ಧಿ ಸಂಸ್ಥೆ ಸಹಯೋಗದಲ್ಲಿ ನಡೆದ ‘ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯ’ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಕ್ಕಳಲ್ಲಿ ಶಿಕ್ಷಕರು ಮತ್ತು ಪೋಷಕರು ಮೌಲ್ಯಯುತ ಶಿಕ್ಷಣ ಕಲಿಸಿ ಪ್ರಜ್ಞಾವಂತರಾಗಿಸಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಸುಜಾತ ಮಾತನಾಡಿ, ‘ಮಹಿಳೆಯರ ಹಾಗೂ ಮಕ್ಕಳ ಕಳ್ಳ ಸಾಗಾಣಿಕೆ ತಡೆಯಲು ಶಾಲೆ ಮತ್ತು ಅಂಗನವಾಡಿಗಳಲ್ಲಿ ಅರಿವು ಮೂಡಿಸಬೇಕು. ಬಾಲ್ಯವಿವಾಹ, ಲೈಂಗಿಕ ದೌರ್ಜನ್ಯದಂತಹ ಘಟನೆಗಳು ಕಂಡುಬಂದಾಗ ಸಂಬಂಧಿಸಿದವರಿಗೆ ಮಾಹಿತಿ ನೀಡಬೇಕು’ ಎಂದರು.

ಗ್ರಾಮಸಭೆಗೆ ನೋಡಲ್ ಅಧಿಕಾರಿಯಾಗಿದ್ದ ನೆಲಮಂಗಲ ತಾಲ್ಲೂಕು ಗ್ರಾಮೀಣ ಕುಡಿಯುವ ನೀರು ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಹನುಮಂತರಾಯಪ್ಪ ಗೈರು ಹಾಜರಾಗಿದ್ದರು. ಸಾರ್ವಜನಿಕರು ಈ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ವಿಕಾಸ ಸಂಸ್ಥೆಯ ಅಧ್ಯಕ್ಷ ನಾಗರಾಜು, ಪಿಡಿಒ ಉಮಾಶಂಕರ್, ಕಾರ್ಯದರ್ಶಿ, ಪಂಚಾಯಿತಿ ಸದಸ್ಯರು, ವಿವಿಧ ಇಲಾಖೆ ಅಧಿಕಾರಿಗಳು, ಪಂಚಾಯಿತಿ ವ್ಯಾಪ್ತಿಯ ಶಾಲೆಗಳ ಶಿಕ್ಷಕರು, ಮಕ್ಕಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ವರ್ತೂರು: ಸಂಭ್ರಮದ ಸಂಕ್ರಾಂತಿ ಉತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ನಮ್ಮ ಪರಂಪರೆಯ ಸಂಕೇತಗಳಾದ ಹಬ್ಬಗಳು, ಜಾತ್ರೆ, ಉತ್ಸವಗಳನ್ನು ಆಚರಿಸುವುದರಿಂದ ದೇಶದ ಸಂಸ್ಕೃತಿ ಮತ್ತು ಭಾಷೆ ಉಳಿಯುತ್ತದೆ’ ಎಂದು ನಟ ಡಾಲಿ ಧನಂಜಯ್ ಹೇಳಿದರು.

ಕೆ.ಆರ್.ಪುರ ಸಮೀಪದ ವರ್ತೂರಿನಲ್ಲಿ ವರ್ತೂರು ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ವತಿಯಿಂದ ಏರ್ಪಡಿಸಿದ್ದ ವರ್ತೂರು ಸಂಕ್ರಾಂತಿ ಉತ್ಸವ-2025 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ನಮ್ಮ ಪೂರ್ವಜರ ಆಚರಣೆಗಳಿಗೆ ತನ್ನದೆಯಾದ ಅರ್ಥ ಮಹತ್ವ, ಹಿನ್ನೆಲೆಯಿದೆ. ಆಚರಣೆಗಳು ನಮ್ಮ ಶಿಸ್ತುಬದ್ಧಜೀವನಕ್ಕೆದಾರಿದೀಪಗಳಾಗಿವೆ. ಸಂಕ್ರಾಂತಿ ಉತ್ಸವದಂತಹ ಕಾರ್ಯಕ್ರಮಗಳು ಹೆಚ್ಚಾಗಬೇಕು. ಮುಂದಿನ ಪೀಳಿಗೆಗೆ ತಿಳಿಸುವ ಕೆಲಸವಾಗಬೇಕು. ಹೆಚ್ಚಾಗಿ ಕನ್ನಡ ಸಿನಿಮಾವನ್ನು ಚಿತ್ರಮಂದಿರಗಳಲ್ಲಿಯೇ ನೋಡಿ ಪ್ರೋತ್ಸಾಹ ನೀಡಬೇಕು’ ಎಂದರು.

ವರ್ತೂರು ಕ್ರೀಡಾ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಮಹೇಂದ್ರ ಮೋದಿ ಮಾತನಾಡಿ, ನಶಿಸಿ ಹೋಗುತ್ತಿರುವ ಗೋವು ಉಳಿಸುವ ಉದ್ದೇಶದಿಂದ ಸತತವಾಗಿ ಹದಿನಾಲ್ಕು ವರ್ಷಗಳಿಂದ ಸಂಕ್ರಾಂತಿ ಉತ್ಸವ ಕಾರ್ಯಕ್ರಮ ಹಮ್ಮಿಕೊಂಡು ಬರಲಾಗುತ್ತಿದೆ ಎಂದರು.

ಉತ್ಸವದಲ್ಲಿ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, ವಿವಿಧ ನೃತ್ಯ, ಭರತನಾಟ್ಯ, ನಗೆಹಬ್ಬ ಹಾಗೂ ಸಾಧಕರಿಗೆ ವರ್ತೂರು ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶಾಸಕಿ ಮಂಜುಳಾ ಲಿಂಬಾವಳಿ, ಮಾಜಿ ಶಾಸಕ ಅರವಿಂದ ಲಿಂಬಾವಳಿ, ಬಿಜೆಪಿ ನಗರ ಮಂಡಲ ಅಧ್ಯಕ್ಷ ಎನ್. ಆರ್.ಶ್ರೀಧರ್ ರೆಡ್ಡಿ, ಮುಖಂಡರಾದ ಮನೋಹರ್ ರೆಡ್ಡಿ, ಎಲ್.ರಾಜೇಶ್ ಉಪಸ್ಥಿತರಿದ್ದರು.



‘ವರ್ತೂರು ಸಂಕ್ರಾಂತಿ ಉತ್ಸವ’ದಲ್ಲಿ ನಟ ಡಾಲಿ ಧನಂಜಯ್ ಅವರನ್ನು ಸನ್ಮಾನಿಸಲಾಯಿತು. ಶಾಸಕಿ ಮಂಜುಳಾ ಲಿಂಬಾವಳಿ, ಮಾಜಿ ಶಾಸಕ ಅರವಿಂದ ಲಿಂಬಾವಳಿ, ಸಂಘದ ಅಧ್ಯಕ್ಷ ಮಹೇಂದ್ರ ಮೋದಿ ಉಪಸ್ಥಿತರಿದ್ದರು

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಬೇಸರ

‘ಲಿಂಗಾಯತ ಮಠಗಳಲ್ಲಿ ವೇದ–ಮಂತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘12ನೇ ಶತಮಾನದ ಶರಣರು ವೇದ, ಶಾಸ್ತ್ರ, ಪುರಾಣಗಳನ್ನು ಲೇವಡಿ ಮಾಡಿದ್ದರು. ಆದರೆ, ಇಂದು ಶರಣ ಪರಂಪರೆ, ಲಿಂಗಾಯತ ಸೇರಿದಂತೆ ಹಲವಾರು ಮಠಗಳ ಸಭೆ ಸಮಾರಂಭಗಳು ವಚನಗಳ ಬದಲಾಗಿ ವೇದ–ಮಂತ್ರ ಘೋಷಣೆ ಮೂಲಕ ಪ್ರಾರಂಭವಾಗುತ್ತಿವೆ’ ಎಂದು ತರಳಬಾಳು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಕದಳಿ ಮಹಿಳಾ ವೇದಿಕೆ ಹಾಗೂ ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಬುಧವಾರ ಆಯೋಜಿಸಿದ್ದ ‘ಕದಳಿ ಮಹಿಳಾ ಸಮಾವೇಶ ಹಾಗೂ ಕದಳಿ ಪ್ರಶಸ್ತಿ ಪ್ರದಾನ ಸಮಾರಂಭ’ದಲ್ಲಿ ಅವರು ಮಾತನಾಡಿದರು.

ನಮ್ಮಲ್ಲಿ ಗೃಹ ಪ್ರವೇಶ ಮಾಡುವ ಸಂದರ್ಭದಲ್ಲಿ ಅನೇಕರು ಹೋಮ–ಹವನಗಳನ್ನು ಮಾಡುತ್ತಿದ್ದಾರೆ. ಇದನ್ನು ಬಸವಾದಿ ಶರಣರು ಒಪ್ಪುತ್ತಾರೆಯೇ? ಆದರೂ ಸಹ ಇಂದಿನ ಸಭೆ–ಸಮಾರಂಭಗಳಲ್ಲಿ ವಚನಗಳನ್ನು ಹೇಳುತ್ತಿಲ್ಲ. ಅದರ ಬದಲಾಗಿ ವೇದ–ಮಂತ್ರಗಳನ್ನು ಪಠಿಸುವುದರ ಮೂಲಕ ಶರಣ ತತ್ವಗಳಿಂದ ಎಷ್ಟು ದೂರು ಸರಿಯುತ್ತಿದ್ದೇವೆ ಎನ್ನುವುದನ್ನು ಯೋಚಿಸಬೇಕು’ ಎಂದು ಹೇಳಿದರು.

‘ನಮ್ಮ ತಾಯಂದಿರು ಎಲ್ಲ ರೀತಿಯ ಮೌಢ್ಯಗಳಿಂದ ಹೊರಬರಬೇಕು. ಅಂಗದ ಮೇಲೆ ಲಿಂಗವನ್ನು ಧರಿಸಿಕೊಳ್ಳಬೇಕು. ಲಿಂಗವನ್ನು ಮಾತ್ರ ಪೂಜೆ ಮಾಡುತ್ತೇವೆ ಎಂಬ ಸಂಕಲ್ಪ ಮಾಡಿಕೊಂಡರೆ ನಮ್ಮ ಕುಟುಂಬ ಮತ್ತು ಸುತ್ತಮುತ್ತಲಿನಲ್ಲಿ ಪರಿವರ್ತನೆ ತರಲು ಸಾಧ್ಯವಾಗುತ್ತದೆ’ ಎಂದರು.

‘ಶರಣ ತತ್ವವೆಂದರೆ ಅರಿವು ಮತ್ತು ಆಚರಣೆಯನ್ನು ಒಂದಾಗಿಸಿಕೊಳ್ಳುವುದು, ಅರಿವಿದ್ದು ಆಚಾರವಿಲ್ಲದಿದ್ದರೆ ನೀವು ಶರಣ ತತ್ವದಿಂದ ಬಹಳ ದೂರ ಸರಿಯುತ್ತಿದ್ದೀರಿ ಎಂದರ್ಥ. ನಮ್ಮ ಪರಂಪರೆಯನ್ನು ಉಳಿಸಿಕೊಳ್ಳಬೇಕು ಎಂದರೆ ಶರಣರ ಆಚಾರ–ವಿಚಾರಗಳನ್ನು ಅರಿತು ನಮ್ಮ ಬದುಕನ್ನು ಬದಲಾವಣೆ ಮಾಡಿಕೊಳ್ಳಬೇಕು’ ಎಂದರು.

ಕಾರ್ಯಕ್ರಮದಲ್ಲಿ ಪತ್ರಕರ್ತೆ ಎಸ್.ಜಿ. ತುಂಗರೇಣುಕ ಅವರಿಗೆ ಕದಳಿ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಕದಳಿ ಮಹಿಳಾ ಸಮಾವೇಶದಲ್ಲಿ ಪತ್ರಕರ್ತೆ ಎಸ್‌ಜಿ. ತುಂಗರೇಣುಕ ಅವರಿಗೆ ಕದಳಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಬೆಂಗಳೂರು ನಗರ ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ಪ್ರಮೀಳಾ ಗರಡಿ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಗದಗ–ಡಂಬಳ ತೋಂಟದಾರ್ಯ ಸಂಸ್ಥಾನ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ, ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಆಯೇಷಾ ಖಾನಂ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ನಗರ ಪುನರ್ವಸತಿ ಕಾರ್ಯಕರ್ತರನ್ನು ನೇಮಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಎಲ್ಲ ಎಂಟು ವಲಯಗಳ ವಾರ್ಡ್‌ಗಳಲ್ಲಿ ನಗರ ಪುನರ್ವಸತಿ ಕಾರ್ಯಕರ್ತರನ್ನು (ವಿಆರ್‌ಡಬ್ಲ್ಯು) ನೇಮಕ ಮಾಡಿಕೊಳ್ಳಬೇಕು. ಅಂಗವಿಕಲರನ್ನು ಸರ್ವೆ ಮಾಡಿ, ಕಲ್ಯಾಣ ಕಾರ್ಯಕ್ರಮಗಳ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು ಎಂದು ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅಧಿಕಾರಿಗಳಿಗೆ ಸೂಚಿಸಿದರು.

ಪಾಲಿಕೆಯ ವತಿಯಿಂದ ಅಂಗವಿಕಲರ ಸಬಲೀಕರಣಕ್ಕಾಗಿ ರೂಪಿಸಲಾಗಿರುವ ಕಾರ್ಯಕ್ರಮಗಳ ಅನುಷ್ಠಾನ, ನಗರ ಪುನರ್ವಸತಿ ಕಾರ್ಯಕರ್ತರ ನಿಯೋಜನೆಗೆ ಸಂಬಂಧಿಸಿದಂತೆ ನಡೆದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.



ಅಂಗವಿಕಲ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ನಗರ ಪುನರ್ವಸತಿ ಕಾರ್ಯಕರ್ತರನ್ನು ಮಾಸಿಕ ಗೌರವಧನದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಅವರನ್ನು ಪಾಲಿಕೆಯ ವಾರ್ಡ್ ಗಳಲ್ಲಿ ನಿಯೋಜಿಸಿ, ಅವರಿಂದ ಅರ್ಹ ಫಲಾನುಭವಿಗಳನ್ನು ಗುರುತಿಸಿ ಕಲ್ಯಾಣ ವಿಭಾಗದಿಂದ ಸಿಗುವ ಸೌಲಭ್ಯಗಳಿಗೆ ಅರ್ಜಿ ಸಲ್ಲಿಸಿ ಅವುಗಳು ಸಿಗುವಂತೆ ಮಾಡಲಿದ್ದಾರೆ ಎಂದರು.

ಪಾಲಿಕೆ ವ್ಯಾಪ್ತಿಯಲ್ಲಿ ವಾಸವಿರುವ ಅಂಗವಿಕಲರು ಸೌಲಭ್ಯ ಪಡೆಯಲು ಫೆಬ್ರುವರಿ 4ರೊಳಗೆ ಅರ್ಜಿ (https://site.bbmp.gov.in/departmentwebsites/welfare/welfareactivities.html) ಸಲ್ಲಿಸಬಹುದು. ಒಂಟಿ ಮನೆ ನಿರ್ಮಾಣ, ವಿಮೆ, ಕೃತಕ ಅಂಗ ಜೋಡಣೆ, ಶಸ್ತ್ರಚಿಕಿತ್ಸೆ ಸೇರಿದಂತೆ ಆರೋಗ್ಯ ಕಾರ್ಯಕ್ರಮ, ಶೈಕ್ಷಣಿಕ ಕಾರ್ಯಕ್ರಮ, ಆರ್ಥಿಕ ಪ್ರೋತ್ಸಾಹ, ಸಂಗೀತ ಸಾಧನಗಳ ಖರೀದಿಗೆ ಸಹಾಯಧನ, ಔಷಧ ಮಳಿಗೆ ಪ್ರಾರಂಭಿಸಲು ಸಹಾಯಧನ, ಕ್ರೀಡಾಪಟುಗಳಿಗೆ ಆರ್ಥಿಕ ಸಹಾಯ ಸೇರಿದಂತೆ ಹಲವು ಸೌಲಭ್ಯಗಳನ್ನು ಪಡೆಯಬಹುದು ಎಂದು ತಿಳಿಸಿದರು.

ಕಲ್ಯಾಣ ವಿಭಾಗದ ಸಹಾಯಕ ಆಯುಕ್ತ ನಾಗಭೂಷಣ್, ಬೆಂಗಳೂರು ನಗರ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ, ಪಾಲಿಕೆಯ ಎಲ್ಲಾ ವಲಯಗಳ ಕಲ್ಯಾಣ ವಿಭಾಗದ ಸಹಾಯಕ ಕಂದಾಯ ಅಧಿಕಾರಿಗಳು, ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು ಹಾಜರಿದ್ದರು.

ನಕಲಿ ಚಿನ್ನಾಭರಣ ಅಡಮಾನ ಇರಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಹತ್ಯೆ

ಮೃತದೇಹ ಸುಟ್ಟಿದ್ದ ರೌಡಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಚಿನ್ನಾಭರಣ ಅಡಮಾನ ಇರಿಸಿದನ್ನು ಪ್ರಶ್ನಿಸಿದ್ದ ರೌಡಿಶೀಟರ್ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿ ಮೃತದೇಹವನ್ನು ಸುಟ್ಟುಹಾಕಿದ್ದ ಆರೋಪದಡಿ ರೌಡಿಯೊಬ್ಬನನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಾಗಲೂರು ನಿವಾಸಿ ಬ್ರಿಜೇಶ್(36) ಬಂಧಿತ ರೌಡಿ. ಮೃತದೇಹ ಸಾಗಿಸಿ ಸುಟ್ಟು ಹಾಕಲು ನೆರವು ನೀಡಿದ್ದ ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದು ಆತನ ಪತ್ತೆಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಜೋಸ್ಪಿನ್ ಅವರು ಪತಿ ಗುಣಶೇಖರ್ (30) ನಾಪತ್ತೆ ಆಗಿದ್ದಾರೆ ಎಂದು ದೂರು ನೀಡಿದ್ದರು. ಆ ದೂರು ಆಧರಿಸಿ ಪ್ರಕರಣದ ತನಿಖೆ ನಡೆಸಿದಾಗ ಗುಣಶೇಖರ್ ಕೊಲೆ ಆಗಿರುವ ಮಾಹಿತಿ ಸಿಕ್ಕಿತ್ತು. ಬಳಿಕ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ, ತಮಿಳುನಾಡಿನ ಪೆನ್ನಾಗರಂ ಪೊಲೀಸ್ ಠಾಣೆ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಗುಣಶೇಖರನ ಮೃತದೇಹ ಸುಟ್ಟಸ್ಥಿತಿಯಲ್ಲಿ ಪತ್ತೆಯಾಗಿತ್ತು. ಸ್ಥಳೀಯ ಠಾಣೆಯಲ್ಲಿ ಪ್ರಕರಣ ಸಹ ದಾಖಲಾಗಿತ್ತು. ಬಳಿಕ ಕಾನೂನು ಪ್ರಕ್ರಿಯೆ ನಡೆಸಿ ಮೃತದೇಹವನ್ನು ಕುಟುಂಬ ಸದಸ್ಯರಿಗೆ ಹಸ್ತಾಂತರ ಮಾಡಲಾಗಿತ್ತು ಎಂದು ಪೊಲೀಸರು ಹೇಳಿದರು.



ಬ್ರಿಜೇಶ್



ಗುಣಶೇಖರ್

‘ಕೊಲೆಯಾದ ಗುಣಶೇಖರ್ ಹಾಗೂ ಆರೋಪಿ ಬ್ರಿಜೇಶ್ ಪರಿಚಯಸ್ಥರು. ಬ್ರಿಜೇಶ್, ಭಾರತೀನಗರ ಠಾಣೆಯ ರೌಡಿಶೀಟರ್ ಆಗಿದ್ದ. ಪಂಜಾಬ್‌ನಿಂದ ನಕಲಿ ಚಿನ್ನವನ್ನು ತಂದು ಬಾಗಲೂರು ಠಾಣೆಯ ರೌಡಿಶೀಟರ್ ಗುಣಶೇಖರನ ಮೂಲಕ ನಗರದಲ್ಲಿ ಮಾರಾಟ ಮಾಡುತ್ತಿದ್ದ. ತಂದ ನಕಲಿ ಚಿನ್ನವನ್ನು ಆರೋಪಿ ಬ್ರಿಜೇಶ್, ಗುಣಶೇಖರನ ಸಂಬಂಧಿಯೊಬ್ಬರ ಮೂಲಕ ಫೈನಾನ್ಸ್ ಕಂಪನಿಯಲ್ಲಿ ಅಡಮಾನ ಇರಿಸಿ ಹಣ ಪಡೆದುಕೊಂಡಿದ್ದ. ಕೆಲವು ದಿನಗಳು ಕಳೆದ ಬಳಿಕ ಫೈನಾನ್ಸ್‌ನವರು ಚಿನ್ನಾಭರಣ ಪರಿಶೀಲನೆ ನಡೆಸಿದ್ದರು. ಆಗ ನಕಲಿ ಚಿನ್ನಾಭರಣ ಎಂಬುದು ಗೊತ್ತಾಗಿತ್ತು. ಹಣ ಪಾವತಿಸಿ ಚಿನ್ನಾಭರಣ ಬಿಡಿಸಿಕೊಂಡು ಹೋಗುವಂತೆ ಗುಣಶೇಖರ್‌ಗೆ ಫೈನಾನ್ಸ್‌ನವರು ಎಚ್ಚರಿಕೆ ನೀಡಿದ್ದರು. ಚಿನ್ನಾಭರಣ ಕೊಂಡೊಯ್ಯದಿದ್ದರೆ ಪೊಲೀಸರಿಗೆ ಮಾಹಿತಿ ನೀಡುವುದಾಗಿಯೂ ಎಚ್ಚರಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಗುಣಶೇಖರ್, ಬ್ರಿಜೇಶ್‌ಗೆ ಕರೆ ಮಾಡಿ ತಕ್ಷಣವೇ ಚಿನ್ನಾಭರಣ ಬಿಡಿಸುವಂತೆ ಸೂಚಿಸಿದ್ದ. ಆರೋಪಿ ನಡೆಸುತ್ತಿದ್ದ ನಕಲಿ ಚಿನ್ನಾಭರಣ ಮಾರಾಟ ದಂಧೆಯ ಕುರಿತೂ ಇತರರ ಬಳಿ ಗುಣಶೇಖರ್ ಹೇಳಿಕೊಂಡಿದ್ದ ಎನ್ನಲಾಗಿದೆ. ಇದರಿಂದ ಆರೋಪಿ, ಗುಣಶೇಖರ್ ಮೇಲೆ ಕೋಪಗೊಂಡು ಕೃತ್ಯ ಎಸಗಲು ಸಂಚು ರೂಪಿಸಿದ್ದ’ ಎಂದು ಮೂಲಗಳು ತಿಳಿಸಿವೆ.

ಪೆಟ್ರೋಲ್ ಸುರಿದು ಸುಟ್ಟಿದ್ದರು

‘ಕೊಲೆ ಮಾಡಿದ ಬಳಿಕ ಮೃತದೇಹ ಕೊಂಡೊಯ್ಯಲು ತನ್ನ ಸಹಚರನನ್ನು ಆರೋಪಿ ಕರೆಸಿಕೊಂಡಿದ್ದ. ಕಾರಿನಲ್ಲಿ ಮೃತದೇಹವನ್ನು ಕೊಂಡೊಯ್ಯಲಾಗಿತ್ತು. ತಮಿಳುನಾಡಿನ ನಿರ್ಜನ ಪ್ರದೇಶದಲ್ಲಿ ಪೆಟ್ರೋಲ್ ಸುರಿದು ಮೃತದೇಹವನ್ನು ಸುಟ್ಟು ಹಾಕಿದ್ದರು.

ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ತಮಿಳುನಾಡು ಪೊಲೀಸರು, ಕರ್ನಾಟಕ ಪೊಲೀಸರಿಗೂ ಮಾಹಿತಿ ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ. ಕೃತ್ಯದ ಎಸಗಿದ ಬಳಿಕ ಆರೋಪಿ ಅಮೃತಸರಕ್ಕೆ ತೆರಳಿ ತಲೆಮರೆಸಿಕೊಂಡಿದ್ದ. ಖಚಿತ ಮಾಹಿತಿ ಮೇರೆಗೆ ಅಮೃತಸರಕ್ಕೆ ತೆರಳಿ ಕಾರ್ಯಾಚರಣೆ ನಡೆಸಿ ಬ್ರಿಜೇಶ್‌ನನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ ಎಂದು ಪೊಲೀಸರು ಹೇಳಿದರು.

ಅಪಾರ್ಟ್‌ಮೆಂಟ್‌ಗೆ ಕರೆಸಿ ಕೊಲೆ

ಜ.10ರಂದು ಹಣ ಕೊಡುವುದಾಗಿ ಬಾಗಲೂರು ವ್ಯಾಪ್ತಿಯ ಅಪಾರ್ಟ್‌ಮೆಂಟ್‌ಗೆ ಗುಣಶೇಖರನನ್ನು ಆರೋಪಿ ಕರೆಸಿಕೊಂಡಿದ್ದ. ಅಲ್ಲಿ ಇಬ್ಬರು ನಡುವೆ ವಾಗ್ವಾದ ನಡೆದಿತ್ತು. ಅದು ವಿಕೋಪಕ್ಕೆ ಹೋದಾಗ ಗುಣಶೇಖರ್ ಮೇಲೆ ಆರೋಪಿ ಎರಡು ಸುತ್ತು ಗುಂಡು ಹಾರಿಸಿ ಕೊಲೆ ಮಾಡಿದ್ದ’ ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಸುದ್ದಿ 2 ನಿಮಿಷ

ಅಮೃತಹಳ್ಳಿ: ಹಣಕ್ಕಾಗಿ ಹಸು ಕದ್ದಿದ್ದ ಆರೋಪಿ ಬಂಧನ

ಬೆಂಗಳೂರು: ಹಣಕ್ಕಾಗಿ ಹಸುಗಳನ್ನು ಕದ್ದು ಮಾರಾಟ ಮಾಡಿದ್ದ ಆರೋಪಿಯನ್ನು ಅಮೃತಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಂಡ್ಯದ ಸೋಮಶೇಖರ್ (42) ಬಂಧಿತ ಆರೋಪಿ.

ಆರೋಪಿ ಕದ್ದಿದ್ದ ಹಸುಗಳನ್ನು ವಶಕ್ಕೆ ಪಡೆದುಕೊಂಡು ಮಾಲೀಕರಿಗೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಅಮೃತಹಳ್ಳಿಯಲ್ಲಿರುವ ಕಂಪನಿಯೊಂದರಲ್ಲಿ ಸೋಮಶೇಖರ್ ಕೆಲಸ ಮಾಡುತ್ತಿದ್ದ. ಪ್ರತಿನಿತ್ಯ ಮಂಡ್ಯದಿಂದ ಕೆಲಸಕ್ಕೆಂದು ನಗರಕ್ಕೆ ಬರುತ್ತಿದ್ದ. ಸರ್ಕಾರಿ ಶಾಲಾ ಸಮೀಪದ ಖಾಲಿ ಪ್ರದೇಶದಲ್ಲಿ ನಾಲ್ಕು ಹಸುಗಳನ್ನು ಕಟ್ಟಿರುವುದನ್ನು ಆರೋಪಿ ಗಮನಿಸಿದ್ದ. ನಂತರ, ಹಸುಗಳನ್ನು ಕಳ್ಳತನ ಮಾಡಿ ಮಾರಾಟ ಮಾಡಿದ್ದ’ ಎಂದು ಪೊಲೀಸರು ತಿಳಿಸಿದರು.

‘ಹಸುಗಳ ಮಾಲೀಕ ವಿವಿಧೆಡೆ ಹುಡುಕಾಟ ನಡೆಸಿದ್ದರು. ಹಸುಗಳು ಸಿಕ್ಕಿರಲಿಲ್ಲ. ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು’ ಎಂದರು.

‘ವಿವಿಧ ಮಾರ್ಗದಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಿದಾಗ ಆರೋಪಿಯ ಸುಳಿವು ಲಭಿಸಿತ್ತು. ನಂತರ, ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಹಣಕ್ಕಾಗಿ ಹಸುಗಳನ್ನು ಕದ್ದು ಮಾರಾಟ ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ತರಗತಿ ಬಹಿಷ್ಕರಿಸಿ ಪ್ರತಿಭಟನೆ



ಬೆಂಗಳೂರು: ತೋಟಗಾರಿಕಾ ಇಲಾಖೆಯಲ್ಲಿ ವೃತ್ತಿಪರ ಪದವಿ ಅರ್ಹತೆ ಪರಿಗಣಿಸಬೇಕು ಹಾಗೂ ತೋಟಗಾರಿಕಾ ಸಹಾಯಕರಿಗೆ ಸಹಾಯಕ ತೋಟಗಾರಿಕಾ ಅಧಿಕಾರಿಗಳಾಗಿ(ಎಎಚ್‌ಒ) ಬಡ್ತಿ ನೀಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿ ಬೆಂಗಳೂರು ತೋಟಗಾರಿಕೆ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

‘ರಾಜ್ಯದಲ್ಲಿ 11 ತೋಟಗಾರಿಕೆ ಕಾಲೇಜುಗಳಿದ್ದು, 4 ವರ್ಷಗಳ ವೃತ್ತಿಪರ ಪದವಿ ಮೂಲಕ ತರಬೇತಿ ನೀಡುತ್ತಿವೆ. ಎಎಚ್‌ಒ ಹುದ್ದೆಗೆ ವಿಶೇಷ ಜ್ಞಾನ ಮತ್ತು ತರಬೇತಿ ಹೊಂದಿದ್ದ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಬೇಕು. ಅರ್ಹತೆ ಕಡೆಗಣಿಸುವುದರಿಂದ ಈ ಪದವಿಯ ಪ್ರಾಮುಖ್ಯತೆ ಕಡಿಮೆ ಆಗುತ್ತದೆ’ ಎಂದು ವಿದ್ಯಾರ್ಥಿಗಳು ಹೇಳಿದರು.

ಬೇಡಿಕೆ ಈಡೇರಿಸಲು ಆಗ್ರಹಿಸಿ ಕಾಲೇಜಿನ ಡೀನ್ ಅವರಿಗೆ ಮನವಿ ಸಲ್ಲಿಸಿದರು.

ಚಿತ್ರಾವಳಿ





ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪತ್ರಾಂಕಿತ ಅಧಿಕಾರಿಗಳ ಸಂಘ ಹೊರತಂದ 2025ನೇ ಸಾಲಿನ ಡೈರಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಬುಧವಾರ ಬಿಡುಗಡೆ ಮಾಡಿದರು. ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಸಂಘದ ಗೌರವಾಧ್ಯಕ್ಷ ಎಂ.ಆರ್. ಏಕಾಂತಪ್ಪ, ರಾಜ್ಯ ಘಟಕದ ಅಧ್ಯಕ್ಷ ಡಿ.ಒ. ರಮೇಶ್ ಮತ್ತು ಪದಾಧಿಕಾರಿಗಳು ಇದ್ದರು.



1. ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾಲಯ ಆರಂಭಿಸಲು ಅನುಮೋದನೆ ನೀಡಿದ ಮತ್ತು ಮೈಸೂರು ಸಕ್ಕರೆ ಕಾರ್ಖಾನೆ ಬಾಕಿ ಉಳಿಸಿಕೊಂಡಿದ್ದ ವಿದ್ಯುತ್ ಬಿಲ್ ₹52 ಕೋಟಿ ಮನ್ನಾ ಮಾಡಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರ ನೇತೃತ್ವದಲ್ಲಿ ಮಂಡ್ಯ ಜಿಲ್ಲೆಯ ಶಾಸಕರು ಬುಧವಾರ ಅಭಿನಂದನೆ ಸಲ್ಲಿಸಿದರು. ಶಾಸಕರಾದ ರಮೇಶ ಬಂಡಿಸಿದ್ದೇಗೌಡ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮತ್ತಿತರರು ಇದ್ದರು
2. ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದುರ್ಬಲ ಸಂದರ್ಭಗಳಲ್ಲಿ ಮತ್ತು ತೊಂದರೆಯಲ್ಲಿರುವ ಮಕ್ಕಳಿಗೆ ಬೆಂಬಲ, ವಕಾಲತ್ತು ಮತ್ತು ಮಾನಸಿಕ ಆರೋಗ್ಯ ಮಧ್ಯಸ್ಥಿಕೆಗಳು (ಎಸ್‌ಎ.ಎಂ.ವಿ.ಎ.ಡಿ) ಸಲಹೆಗಾರ ಪ್ರೊ. ಶೇಖರ್ ಪಿ. ಶೇಷಾದ್ರಿ ‘ನನ್ನ ಸುರಕ್ಷತೆ ನನ್ನ ಹಕ್ಕು’ ಮಕ್ಕಳ ಸುರಕ್ಷತಾ ಚಲನಚಿತ್ರ ಬಿಡುಗಡೆ ಮಾಡಿದರು. ನಿಮ್ಹಾನ್ಸ್ ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಕೆ. ಜಾನ್ ವಿಜಯಸಾಗರ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತ ಕೆ. ವಿ. ತ್ರಿಲೋಕ್ ಚಂದ್ರ, ನಿಮ್ಹಾನ್ಸ್ ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ಈಶಾ ಶರ್ಮಾ ಇದ್ದಾರೆ — ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಬಿವೈವಿ ಬದಲಾವಣೆ ಅಸಾಧ್ಯ: ಶಾಸಕ ಸೋಮಶೇಖರ್

ಬೆಳಗಾವಿ: ‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಹುದ್ದೆಗೆ ವಿಜಯೇಂದ್ರ ಅವರನ್ನು ನೇಮಿಸಿದ್ದು ರಾಷ್ಟ್ರೀಯ ನಾಯಕರು. ಅವರ ನಿರ್ಧಾರಕ್ಕೆ ವಿರುದ್ಧವಾಗಿ ಬದಲಾವಣೆ ಮಕ್ಕಳಾಟವೇ’ ಎಂದು ಶಾಸಕ ಎಸ್.ಟಿ.ಸೋಮಶೇಖರ್ ಪ್ರಶ್ನಿಸಿದರು.

ನಗರದ ಸುವರ್ಣ ವಿಧಾನಸೌಧದ ಆವರಣದಲ್ಲಿ ಮಂಗಳವಾರ ಮಹಾತ್ಮ ಗಾಂಧಿ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ ಸುದ್ದಿಗಾರರ ಜೊತೆ ಮಾತನಾಡಿ, ‘ಯಾವುದೇ ಕಾರಣಕ್ಕೂ ವಿಜಯೇಂದ್ರ ಬದಲಾವಣೆ ಆಗುವುದಿಲ್ಲ. ಶೇ 90ರಷ್ಟು ಜನ ಅವರ ಬೆನ್ನಿಗೆ ಇದ್ದಾರೆ’ ಎಂದರು.

‘ಗಾಂಧಿ ಪ್ರತಿಮೆ ಅನಾವರಣ ರಾಜ್ಯ ಸರ್ಕಾರದ ಕಾರ್ಯಕ್ರಮವಾಗಿದ್ದರಿಂದ ನನ್ನನ್ನೂ ಕರೆದಿದ್ದಾರೆ. ನಾನು ಗಾಂಧೀಜಿ ಅಭಿಮಾನಿ. ಹೀಗಾಗಿ, ಕಾರ್ಯಕ್ರಮದಲ್ಲಿ ಪಾಲ್ಗೊಂಡೆ’ ಎಂದರು. ಬಿಜೆಪಿಯ ಬೇರೆ ಯಾವ ನಾಯಕರೂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿಲ್ಲ.

ಇಬ್ಬರಿಗೆ ಮಂಗನ ಕಾಯಿಲೆ ದೃಢ

ಕೊಪ್ಪ/ಬಾಳೆಹೊನ್ನೂರು: ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ಕೆಸವೆಯ ಒಬ್ಬರಿಗೆ ಮತ್ತು ನರಸಿಂಹರಾಜಪುರ ತಾಲ್ಲೂಕಿನ ಬಾಳೆಹೊನ್ನೂರಿನ ವ್ಯಕ್ತಿಯೊಬ್ಬರಿಗೆ ಕೆಎಫ್‌ಡಿ (ಕ್ಯಾಸನೂರು ಫಾರೆಸ್ಟ್ ಡಿಸೀಸ್/ ಮಂಗನ ಕಾಯಿಲೆ) ಇರುವುದು ಮಂಗಳವಾರ ದೃಢಪಟ್ಟಿದೆ.

ಟಿಂಬರ್ ಕಾರ್ಮಿಕ: ಬಾಳೆಹೊನ್ನೂರು ಪಟ್ಟಣದ ಮಸೀದಿಕೆರೆಯಲ್ಲಿ ಕೆಎಫ್‌ಡಿ ಕಾಣಿಸಿಕೊಂಡಿರುವ ವ್ಯಕ್ತಿ 40 ವರ್ಷ ವಯಸ್ಸಿನ ಟಿಂಬರ್ ಕಾರ್ಮಿಕ ಎಂದು ತಿಳಿದುಬಂದಿದೆ. ಜ.4ರಿಂದ ತೀವ್ರ ಜ್ವರ, ಮೈ–ಕೈ ನೋವು, ಸುಸ್ತಿನಿಂದ ಬಳಲುತ್ತಿದ್ದ ಅವರು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಜ.20ರಂದು ಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿದಾಗ ಕಾಯಿಲೆ ದೃಢಪಟ್ಟಿದೆ.

ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಮಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಆರೋಗ್ಯ ಸ್ಥಿರವಾಗಿದೆ ಎಂದು ಸರ್ಕಾರಿ ಆಸ್ಪತ್ರೆ ಮೂಲಗಳು ತಿಳಿಸಿವೆ.

ಅಪಘಾತ: ಸ್ಕೂಟರ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಂಡಹಳ್ಳಿಯ ರೈಲ್ವೆ ಕೆಳಸೇತುವೆಯಲ್ಲಿ ಸಂಭವಿಸಿದ ಅಪಘಾತದಲ್ಲಿ ಗಾಯಗೊಂಡಿದ್ದ ಸ್ಕೂಟರ್ ಸವಾರ ಮೃತಪಟ್ಟಿದ್ದಾರೆ.

ಶಿವಶಕ್ತಿ ನಗರದ ನಿವಾಸಿ ವಿ.ಹರೀಶ್(34) ಮೃತ ಸವಾರ.

‘ಮಂಗಳವಾರ ರಾತ್ರಿ 10.30ರ ಸುಮಾರಿಗೆ ಹರೀಶ್ ಅವರು ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ನಾಗರಭಾವಿ ಕಡೆಯಿಂದ ನಾಯಂಡಹಳ್ಳಿ ಕಡೆಗೆ ತೆರಳುತ್ತಿದ್ದರು. ಸ್ಕೂಟರ್ ಅನ್ನು ವೇಗವಾಗಿ ಓಡಿಸುತ್ತಿದ್ದರಿಂದ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅವರು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ವ್ಯಕ್ತಿಯ ಸಮಗ್ರ ಬೆಳವಣಿಗೆಗೆ ಶಿಕ್ಷಣ ಅತ್ಯಗತ್ಯ’

‘ಶ್ರೀ ಶ್ರೀ ಶೈಕ್ಷಣಿಕ ಪ್ರಶಸ್ತಿ’ ಪ್ರದಾನ ಸಮಾರಂಭದಲ್ಲಿ ಕೇಂದ್ರ ಆಯುಷ್ ಸಚಿವ ಪ್ರತಾಪ್‌ರಾವ್ ಜಾಧವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿಕ್ಷಣ, ಜ್ಞಾನ ಪಡೆಯುವುದಕ್ಕೆ ಸೀಮಿತವಲ್ಲ. ಅದು ವ್ಯಕ್ತಿಯ ಸಮಗ್ರ ಬೆಳವಣಿಗೆಗೆ ಅಗತ್ಯವೂ ಹೌದು’ ಎಂದು ಕೇಂದ್ರ ಆಯುಷ್ ಸಚಿವ ಪ್ರತಾಪ್‌ರಾವ್ ಜಾಧವ್ ಹೇಳಿದರು.

ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ವಿದ್ಯಾಮಂದಿರ ಟ್ರಸ್ಟ್ ವತಿಯಿಂದ ‘ಶ್ರೀ ಶ್ರೀ ಶೈಕ್ಷಣಿಕ ಪ್ರಶಸ್ತಿ’ ಪ್ರದಾನ ಸಮಾರಂಭದಲ್ಲಿ ಅವರು ಮಂಗಳವಾರ ಮಾತನಾಡಿದರು.

‘ವಿದ್ಯಾರ್ಥಿಗಳಲ್ಲಿ ಒತ್ತಡ ಹೆಚ್ಚಿದೆ. ಇದರಿಂದ ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ. ಇಂಥ ಸಂದರ್ಭದಲ್ಲಿ ಒತ್ತಡರಹಿತ ಶಿಕ್ಷಣದ ಮೇಲೆ ಗುರೂಜಿ ಗಮನಕೇಂದ್ರೀಕರಿಸಿರುವುದು ಶ್ಲಾಘನೀಯ’ ಎಂದರು.



ಕೇಂದ್ರ ಸಚಿವ ಪ್ರತಾಪ್‌ರಾವ್ ಜಾಧವ್, ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಅವರೊಂದಿಗೆ ‘ಶ್ರೀ ಶ್ರೀ ಶೈಕ್ಷಣಿಕ ಪ್ರಶಸ್ತಿ’ ಪುರಸ್ಕೃತರು

‘ಶಿಕ್ಷಣ ಎಂದರೆ ಕೇವಲ ಮಾಹಿತಿ ನೀಡುವುದಲ್ಲ; ಮಾನವತ್ವದ ಪೋಷಣೆ, ಮೌಲ್ಯಗಳಲ್ಲಿ ನೆಲೆಗೊಂಡಿರುವ, ನವೀನತೆಯ ಸ್ಫೂರ್ತಿಯನ್ನು ಹೊಂದಿರುವಂತಹ ಭವಿಷ್ಯದ ನಾಯಕರನ್ನು ರೂಪಿಸುವುದು’ ಎಂದು ಶ್ರೀ ಶ್ರೀ ರವಿಶಂಕರ್ ಅಭಿಪ್ರಾಯಪಟ್ಟರು.

‘ಕಲಿಕೆಗೆ ಬುನಾದಿಯಾಗಿ ಮಾನಸಿಕ ಆರೋಗ್ಯ: ಇದೇಕೆ ಮುಖ್ಯ?’ ಎಂಬ ವಿಷಯದ ಬಗೆಗಿನ ಚರ್ಚೆಯಲ್ಲಿ, ಬೆಂಗಳೂರಿನ ಐಐಎಸ್‌ಸಿ ವೈದ್ಯಕೀಯ ಶಾಲೆಯ ನರರೋಗಶಸ್ತ್ರ ಚಿಕಿತ್ಸಕರಾದ ಡಾ.ಉಮಾ ನಂಬಿಯಾರ್, ಮಾನಸಿಕರೋಗ ತಜ್ಞ ಡಾ. ಶೇಖರ್ ಶೇಷಾದ್ರಿ ಮತ್ತು ಬೆಂಗಳೂರಿನ ಚಾಣಕ್ಯ ವಿಶ್ವವಿದ್ಯಾಲಯದ ಆಡಳಿತದ ಡೀನ್ ಡಾ. ಚೇತನ್ ಸಿಂಗಲ್ ಭಾಗವಹಿಸಿದ್ದರು.

ಆರ್ಟ್ ಆಫ್ ಲಿವಿಂಗ್‌ನ ಮಹಿಳಾ ಅಭಿವೃದ್ಧಿ ಮತ್ತು ಮಕ್ಕಳ ಆರೈಕೆಯ ಕಾರ್ಯಕ್ರಮಗಳ ಅಧ್ಯಕ್ಷೆ ಭಾನುಮತಿ ನರಸಿಂಹನ್ ಮಾತನಾಡಿ, ‘ಶಿಕ್ಷಣದಿಂದ ಮಾನವತೆಗೆ ನೀಡಲಾಗುತ್ತಿರುವ ಅಮೂಲ್ಯವಾದ ಸೇವೆಯನ್ನು ಗುರುತಿಸುವ ಸಲುವಾಗಿ ಈ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ’ ಎಂದರು.

ಪ್ರಶಸ್ತಿ ಪಡೆದವರು: ಬೆಂಗಳೂರು ಪಶ್ಚಿಮದ ಡೆಲ್ಲಿ ಪಬ್ಲಿಕ್ ಶಾಲೆ, ಆಯುರ್ವೇದ ವೈದ್ಯ ಪ್ರಸನ್ನ ನರಸಿಂಹ ರಾವ್, ತಿರುನೆಲ್ವೇಲಿಯ ಪುಷ್ಪಲತ ವಿದ್ಯಾಮಂದಿರ, ಶುಶ್ರೂಷಕಿ ಶಿಕ್ಷಕಿ ಡಾ. ಜಾಸ್ಮಿನ್ ಜೋಸೆಫ್, ಗುಲ್ ಮೊಹರ್ ಪ್ರೌಢಶಾಲೆಯ ಪ್ರಾಚಾರ್ಯೆ ಪ್ರೀತಿ ಸಿನ್ಹಾ, ದಕ್ಷಿಣ ವಲಯದ ಚಂದ್ರಚೂಡೇಶ್ವರನ್.

ಸ್ಥಾವರ ಸ್ಥಾಪನೆ ಇಲ್ಲ; ಆತಂಕ ಬೇಡ ಸಚಿವ ತಂಗಡಗಿ

ಪ್ರಜಾವಾಣಿ ವಾರ್ತೆ



ಶಿವರಾಜ ತಂಗಡಗಿ

ಕೊಪ್ಪಳ: ‘ಜಿಲ್ಲೆಯಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆ ಮಾಡಲಾಗುತ್ತಿದೆ ಎಂದು ಜನರನ್ನು ದಾರಿ ತಪ್ಪಿಸುವ ಕೆಲಸ ನಡೆಯುತ್ತಿದ್ದು, ಇದರಿಂದ ಯಾರೂ ಆತಂಕಕ್ಕೆ ಒಳಗಾಗುವುದು ಬೇಕಿಲ್ಲ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ನಗರದಲ್ಲಿ ಮಾತನಾಡಿದ ಅವರು, ‘ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಮೇಲಿಂದ ಮೇಲೆ ಭೂಮಿಯಲ್ಲಿರುವ ಖನಿಜದ ಬಗ್ಗೆ ಮಾಹಿತಿ ಸಂಗ್ರಹಿಸುವ ಸಾಮಾನ್ಯ ಪ್ರಕ್ರಿಯೆ ನಡೆಸುತ್ತಿದ್ದಾರೆ. ಪರಮಾಣು ಸ್ಥಾವರ ಸ್ಥಾಪನೆ ಅಂತಿಮವೇ ಆಗಿಲ್ಲ. ಒಂದು ವೇಳೆ ಅಂತಿಮವಾದರೂ ನಿಮ್ಮೆಲ್ಲರ ಜೊತೆ ನಾವಿರುತ್ತೇವೆ’ ಎಂದು ತಿಳಿಸಿದರು.

ಇದಕ್ಕೂ ಮೊದಲು ಮಾತನಾಡಿದ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು, ‘ಕೊಪ್ಪಳ ತಾಲ್ಲೂಕಿನ ಅರಸನಕೇರಿಯಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪಿಸಲಾಗುತ್ತಿದ್ದು, ಎಲ್ಲ ಲೇಖಕರು ಇದನ್ನು ವಿರೋಧಿಸಿ ಧ್ವನಿ ಎತ್ತಬೇಕು’ ಎಂದು ಆಗ್ರಹಿಸಿದ್ದರು. ಹೀಗಾಗಿ ಸಚಿವರು ಈ ಸ್ಪಷ್ಟನೆ ನೀಡಿದರು.

ಪ್ರಾಂಶುಪಾಲರ ವಿಚಾರ ಸಂಕಿರಣದಲ್ಲಿ ಪೊಲೀಸ್ ಅಧಿಕಾರಿ, ವೈದ್ಯರ ಕಳವಳ

ಸೈಬರ್ ವಂಚನೆ, ಡಿಜಿಟಲ್ ವ್ಯಸನ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ನಾನಾ ರೀತಿಯ ಆನ್‌ಲೈನ್ ವಂಚನೆಗಳು ನಡೆಯುತ್ತಿದ್ದು, ವಂಚಕರ ಬಲೆಗೆ ಬೀಳದಿರಲು ಎಚ್ಚರಿಕೆಯಿಂದ ವ್ಯವಹರಿಸಬೇಕಿದೆ. ಇದೇ ಅವಧಿಯಲ್ಲಿ ಡಿಜಿಟಲ್ ವ್ಯಸನಿಗಳ ಸಂಖ್ಯೆಯೂ ಹೆಚ್ಚುತ್ತಿದ್ದು, ಮಕ್ಕಳು ಸೇರಿ ವಿವಿಧ ವಯೋಮಾನದವರು ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ಒಳಗಾಗುವ ಸಾಧ್ಯತೆಗಳಿರುತ್ತವೆ’ ಎಂದು ವಿಷಯ ತಜ್ಞರು ಕಳವಳ ವ್ಯಕ್ತಪಡಿಸಿದರು.

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪ್ರಾಂಶುಪಾಲರ ವಿಚಾರ ಸಂಕಿರಣದಲ್ಲಿ ಆನ್‌ಲೈನ್ ಸುರಕ್ಷತೆ ಬಗ್ಗೆ ತಜ್ಞರು ವಿಚಾರ ಮಂಡಿಸಿದರು.

ಸೈಬರ್ ಸುರಕ್ಷತೆ ಬಗ್ಗೆ ಮಾತನಾಡಿದ ಸಿಐಡಿ ಸೈಬರ್ ಕ್ರೈಂ ವಿಭಾಗದ ಡಿವೈಎಸ್‌ಪಿ ಕೆ.ಎನ್. ಯಶವಂತ ಕುಮಾರ್, ‘ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಬಳಕೆ ಹೆಚ್ಚಾಗುತ್ತಿರುವ ಈ ಅವಧಿಯಲ್ಲಿ ಆನ್‌ಲೈನ್ ವಂಚನೆಗೆ ತುತ್ತಾಗುತ್ತಿರುವವರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ವೈಯಕ್ತಿಕ ದತ್ತಾಂಶಗಳನ್ನು ಸಂಗ್ರಹಿಸಿ, ಮಾರಾಟ ಮಾಡಲಾಗುತ್ತಿದೆ. ಡೀಪ್ ಫೇಕ್ ತಂತ್ರಜ್ಞಾನವನ್ನು ಬಳಸಿಕೊಂಡು, ಧ್ವನಿಗಳನ್ನೂ ನಕಲು ಮಾಡಲಾಗುತ್ತಿದೆ. ಈ ಮೂಲಕ ಹಣಕ್ಕೆ ಬೇಡಿಕೆ ಇಡಲಾಗುತ್ತಿದೆ. ಲಾಟರಿ, ಕ್ರೆಡಿಟ್ ಕಾರ್ಡ್, ಬಹುಮಾನ, ನಕಲಿ ಆ್ಯಪ್ ಮತ್ತು ವೆಬ್‌ಸೈಟ್ ಸೇರಿ ವಿವಿಧ ಮಾರ್ಗಗಳಲ್ಲಿ ವಂಚನೆ ನಡೆಯುತ್ತಿದೆ. ಆದ್ದರಿಂದ ಆನ್‌ಲೈನ್ ವ್ಯವಸ್ಥೆಯಡಿ ಎಚ್ಚರದಿಂದ ಕಾರ್ಯನಿರ್ವಹಿಸಬೇಕು. ಯೋಚಿಸದೆ ಯಾವುದೇ ನಿರ್ಧಾರಕ್ಕೆ ಬರಬಾರದು’ ಎಂದರು.

‘ಬಲವಾದ ಪಾಸ್‌ವರ್ಡ್‌ಗಳನ್ನು ಇಟ್ಟುಕೊಳ್ಳಬೇಕು. ಅನಗತ್ಯ ಆ್ಯಪ್‌ಗಳನ್ನು ಮೊಬೈಲ್‌ನಲ್ಲಿ ಇರಿಸಿಕೊಳ್ಳಬಾರದು. ಸೈಬರ್ ವಂಚನೆಗಳು ನಡೆದಲ್ಲಿ ಕೂಡಲೇ 1930ಕ್ಕೆ ಕರೆ ಮಾಡಿ, ದೂರು ನೀಡಬೇಕು. ಇದರಿಂದ ಹಣ ಮರಳಿ ಪಡೆಯುವ ಅವಕಾಶಗಳು ಇರಲಿವೆ. ಪೂರ್ವಾಪರ ಪರಿಶೀಲಿಸದೆ ಮಾಹಿತಿ, ಹಣವನ್ನು ನೀಡಬಾರದು’ ಎಂದು ಕಿವಿಮಾತುಗಳನ್ನು ಹೇಳಿದರು.



ಪ್ರಾಂಶುಪಾಲರಿಗೆ ಸಿಪಿಆರ್ ತರಬೇತಿ ನೀಡಲಾಯಿತು — ಪ್ರಜಾವಾಣಿ ಚಿತ್ರ

ಸಿಪಿಆರ್ ಪ್ರಾತ್ಯಕ್ಷಿಕೆ ನೀಡಿದ ವೈದ್ಯರು

ಕಾರ್ಯಕ್ರಮದಲ್ಲಿ ಹೃದಯ, ಶ್ವಾಸಕೋಶ ಕಾಯಿಲೆಯ ಪ್ರಾಥಮಿಕ ಚಿಕಿತ್ಸೆಯ (ಸಿಪಿಆರ್) ಪ್ರಾತ್ಯಕ್ಷಿಕೆಯನ್ನು ಮಣಿಪಾಲ್ ಆಸ್ಪತ್ರೆಯ ವೈದ್ಯರನ್ನೊಳಗೊಂಡ ತಂಡ ನೀಡಿತು. ಸಿಪಿಆರ್ ಮಹತ್ವದ ಬಗ್ಗೆಯೂ ವಿವರಿಸಿ, ವಿವಿಧ ಪ್ರಾಂಶುಪಾಲರಿಗೂ ಮಾನವಾಕೃತಿಯ ಮಾದರಿಗಳನ್ನು ಬಳಸಿಕೊಂಡು ಈ ಬಗ್ಗೆ ತರಬೇತಿ ನೀಡಲಾಯಿತು.

‘ಹಠಾತ್ ಹೃದಯಾಘಾತದ ಸಂದರ್ಭದಲ್ಲಿ ವ್ಯಕ್ತಿಯನ್ನು ಪ್ರಾಣಾಪಾಯದಿಂದ ಪಾರು ಮಾಡಲು ಸಿಪಿಆರ್ ಸಹಾಯಕ. ನಿಂತಿರುವ ಹೃದಯದ ಬಡಿತವನ್ನು ಪುನಃ ಪ್ರಾರಂಭವಾಗುವಂತೆ ಮಾಡುವ ಪ್ರಕ್ರಿಯೆಯೇ ಸಿಪಿಆರ್. ಹೃದಯಾಘಾತ ಅಥವಾ ಹೃದಯ ಸ್ತಂಭನ ಉಂಟಾದಾಗ ತಕ್ಷಣ ತುರ್ತು ಚಿಕಿತ್ಸೆ ಒದಗಿಸದಿದ್ದಲ್ಲಿ ಜೀವಕ್ಕೆ ಅಪಾಯ ಆಗಲಿದೆ. ಆದ್ದರಿಂದ ಸಿಪಿಆರ್ ಬಗ್ಗೆ ಎಲ್ಲರೂ ತಿಳಿದುಕೊಳ್ಳಬೇಕು’ ಎಂದು ಮಣಿಪಾಲ್ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದ ಡಾ. ಮೆಬಲ್ ವಾಸ್‌ನಾಯಕ್ ಹೇಳಿದರು.

‘ಮೊಬೈಲ್ ಅತಿ ಬಳಕೆ ಬೇಡ’

ಯುವಜನರಲ್ಲಿ ಡಿಜಿಟಲ್ ವ್ಯಸನದ ಬಗ್ಗೆ ಮಾತನಾಡಿದ ನಿಮ್ಹಾನ್ಸ್ ಪ್ರಾಧ್ಯಾಪಕ ಡಾ. ಮನೋಜ್ ಕುಮಾರ್ ಶರ್ಮಾ, ‘ಕೋವಿಡ್ ಬಳಿಕ ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ಬಳಕೆಯ ಅವಧಿ ಹೆಚ್ಚಿದೆ. ಮಕ್ಕಳು ಹಾಗೂ ವಯಸ್ಕರು ತಡರಾತ್ರಿವರೆಗೂ ಡಿಜಿಟಲ್ ಸಾಧನಗಳನ್ನು ಬಳಸುವುದರಿಂದ ನಿದ್ದೆಯಲ್ಲಿ ವ್ಯತ್ಯಯವಾಗಿ, ಮಾನಸಿಕ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಂಭವ ಇರಲಿದೆ. ಮಕ್ಕಳು ಓದಿನಲ್ಲಿ ಏಕಾಗ್ರತೆ ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಡಿಜಿಟಲ್ ಸಾಧನಗಳ ಅತಿಯಾದ ಬಳಕೆಗೆ ಕಡಿವಾಣ ಹಾಕಬೇಕಿದೆ’ ಎಂದರು.

‘ಮಕ್ಕಳ ನಡವಳಿಕೆ ಆಧರಿಸಿ, ಅವರು ಎದುರಿಸುತ್ತಿರುವ ಮಾನಸಿಕ ಅನಾರೋಗ್ಯಗಳನ್ನು ಗುರುತಿಸಬೇಕು. ಉತ್ತಮ ಆಹಾರ ಸೇವನೆ, ನಿಗದಿತ ಸಮಯದ ನಿದ್ದೆ, ದೈಹಿಕ ಚಟುವಟಿಕೆ ಹಾಗೂ ಕುಟುಂಬದ ಜತೆಗೆ ಸಮಯ ಕಳೆಯುವ ಮೂಲಕ ಮಕ್ಕಳು ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳಬೇಕು. ಇದಕ್ಕೆ ಸಂಬಂಧಿಸಿದಂತೆ ಸಹಾಯವಾಣಿ ಸಂಖ್ಯೆ 9480829675ಕ್ಕೆ ಸಂಪರ್ಕಿಸಬಹುದು’ ಎಂದರು.

ಸುಪ್ರೀಂ ಕೋರ್ಟ್ ಆದೇಶದ ಇಕ್ಕಟ್ಟಿನಿಂದ ಪಾರಾಗಲು ಮುಂದಾದ ರಾಜ್ಯ ಸರ್ಕಾರ

ಅರಮನೆ ರಸ್ತೆ ವಿಸ್ತರಣೆ ಕೈಬಿಡಲು ತೀರ್ಮಾನ

• ಮಂಜುನಾಥ ಹೆಬ್ಬಾರ್

ನವದೆಹಲಿ: ಸಾವಿರಾರು ಕೋಟಿಯ ಆರ್ಥಿಕ ಹೊರೆಯ ಕಾರಣಕ್ಕೆ ಬೆಂಗಳೂರಿನ ಜಯಮಹಲ್ ಹಾಗೂ ಬಳ್ಳಾರಿ ರಸ್ತೆ ವಿಸ್ತರಣೆ ಯೋಜನೆಯನ್ನು ಕೈಬಿಡಲು ಕರ್ನಾಟಕದ ಕಾಂಗ್ರೆಸ್ ಸರ್ಕಾರ ತೀರ್ಮಾನಿಸಿದೆ.

ಜಯಮಹಲ್ ಹಾಗೂ ಬಳ್ಳಾರಿ ರಸ್ತೆ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಅರಮನೆ ಮೈದಾನದ ಭೂಮಿಗೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ವಾರಸುದಾರರಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ ಪ್ರಕಾರ ಅಭಿವೃದ್ಧಿ ಹಕ್ಕುಗಳ ವರ್ಗಾವಣೆ (ಟಿಡಿಆರ್) ನೀಡುವಂತೆ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ಸುಪ್ರೀಂ ಕೋರ್ಟ್ 2024ರ ಡಿಸೆಂಬರ್ 12ರಂದು ನಿರ್ದೇಶನ ನೀಡಿತ್ತು. ಅರಮನೆಯನ್ನು ವಶಪಡಿಸಿಕೊಂಡಿರುವ 1997ರ ಕಾಯ್ದೆಯ ಸಿಂಧುತ್ವವನ್ನು ಎತ್ತಿ ಹಿಡಿಯಲು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ತುರ್ತು ವಿಚಾರಣೆ ನಡೆಸಿ, ಪ್ರಕರಣವನ್ನು ಬೇಗನೆ ಇತ್ಯರ್ಥಪಡಿಸಬೇಕು ಎಂದು ಮನವಿ ಸಲ್ಲಿಸಲು ಸಚಿವ ಸಂಪುಟ ಸಭೆ ಇದೇ 16ರಂದು ತೀರ್ಮಾನಿಸಿತ್ತು. ನ್ಯಾಯಾಂಗ ನಿಂದನಾ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಬುಧವಾರ ನಡೆಯಿತು. ರಾಜ್ಯ ಸಚಿವ ಸಂಪುಟ ತೆಗೆದುಕೊಂಡಿರುವ ತೀರ್ಮಾನವನ್ನು ರಾಜ್ಯದ ವಕೀಲರು ನ್ಯಾಯಪೀಠದ ಗಮನಕ್ಕೆ ತಂದರು. ಹೊಸ ಪೀಠದಲ್ಲಿ ಪ್ರಕರಣದ ಮುಂದಿನ ವಿಚಾರಣೆ ನಡೆಯಲಿದೆ.



ಸಚಿವ ಸಂಪುಟದ ಮೂರು ತೀರ್ಮಾನಗಳು

1 ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಬಳ್ಳಾರಿ ರಸ್ತೆಯ ಬದಿಯಲ್ಲಿ ಪ್ರತಿ ಚದರ ಮೀಟರ್‌ಗೆ ₹2,83,500 ಮತ್ತು ಜಯಮಹಲ್ ರಸ್ತೆಯ ಕಡೆ ಪ್ರತಿ ಚದರ ಮೀಟರ್‌ಗೆ ₹2,04,000ರಂತೆ ಒಟ್ಟು ₹3,011 ಕೋಟಿ ಟಿಡಿಆರ್ ಪಾವತಿಸಬೇಕು. ಇಷ್ಟೊಂದು ಬೃಹತ್ ಪ್ರಮಾಣದ ಟಿಡಿಆರ್ ನೀಡುವುದು ಆರ್ಥಿಕವಾಗಿ ಕಾರ್ಯಸಾಧು ಅಲ್ಲ. ಅಲ್ಲದೇ,ಸಾರ್ವಜನಿಕ ಹಿತಾಸಕ್ತಿ ಹಾಗೂ ಸಾರ್ವಜನಿಕ ನೀತಿಗೆ ವಿರುದ್ಧವಾಗಿದೆ. ಇದರಿಂದಾಗಿ, ಬೆಂಗಳೂರು ನಗರ ಯೋಜನೆಗೆ ಕಠಿಣ ಸವಾಲು ಎದುರಾಗಲಿದೆ. ಹೀಗಾಗಿ, ರಸ್ತೆ ವಿಸ್ತರಣೆ ಯೋಜನೆ ಕೈಬಿಡಲು ಸಂಪುಟ ತೀರ್ಮಾನಿಸಿದೆ. ಸಚಿವ ಸಂಪುಟ ತೀರ್ಮಾನದ ನಡಾವಳಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

2 ಜಯಮಹಲ್ ರಸ್ತೆಯ ಅಂಡರ್‌ಪಾಸ್‌ಗಾಗಿ ಬಳಸಿಕೊಂಡಿರುವ 1,217 ಚದರ ಮೀಟರ್ ಜಾಗವನ್ನು ಹಿಂತಿರುಗಿಸಲು ಸಾಧ್ಯವಿಲ್ಲ. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಈ ಜಾಗಕ್ಕೆ ಮಾತ್ರ ಟಿಡಿಆರ್ ಪಾವತಿಸಬೇಕಾಗುತ್ತದೆ. ಯೋಜನೆಗೆ ಉಪಯೋಗಿಸದ ಜಮೀನನ್ನು ಹಿಂತಿರುಗಿಸಲು ಹಾಗೂ ಬಿಬಿಎಂಪಿ ವೆಚ್ಚದಲ್ಲಿ ಹಿಂದಿನ ಯಥಾಸ್ಥಿತಿಯನ್ನು ಪುನಃ ಸ್ಥಾಪಿಸಲು ಸಂಪುಟ ನಿರ್ಧರಿಸಿದೆ.

3 ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ದೂರುದಾರರಿಗೆ ನೀಡಬೇಕಾದ ವೆಚ್ಚವನ್ನು ಬಿಬಿಎಂಪಿಯಿಂದ ಪಾವತಿಸಲು ಸಂಪುಟ ತೀರ್ಮಾನಿಸಿದೆ.

ಪ್ರಕರಣವೇನು: ರಸ್ತೆ ವಿಸ್ತರಣೆ ಕಾಮಗಾರಿಗಾಗಿ ಸ್ವಾಧೀನಪಡಿಸಿಕೊಳ್ಳುವ ಜಾಗಕ್ಕೆ ಬದಲಿಯಾಗಿ ಟಿಡಿಆರ್ ನೀಡುವ ಪ್ರಸ್ತಾವವನ್ನು ಬಿಬಿಎಂಪಿಯ ಹಿಂದಿನ ಆಯುಕ್ತರೊಬ್ಬರು ಮೈಸೂರು ರಾಜವಂಶಸ್ಥರ ಮುಂದಿಟ್ಟಿದ್ದರು. ಎರಡೂ ಕಡೆಯವರು ಒಪ್ಪಿದ್ದರಿಂದ ರಸ್ತೆ ವಿಸ್ತರಣೆಗೆ ಬೇಕಾದ ಜಾಗವನ್ನು ಟಿಡಿಆರ್ ನೀಡಿ ಸ್ವಾಧೀನಪಡಿಸಿಕೊಳ್ಳಲು ಸುಪ್ರೀಂ ಕೋರ್ಟ್ ಸಮ್ಮತಿ ನೀಡಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಈ ಹಿಂದಿನ ಆದೇಶಗಳನ್ನು ಮೂರು ಬಾರಿ ಮಾರ್ಪಾಡು ಮಾಡಿದೆ. ರಸ್ತೆ ವಿಸ್ತರಣೆಗಾಗಿ ಅರಮನೆಗೆ ಸೇರಿದ 15.39 ಎಕರೆ ಭೂಮಿಯನ್ನು ಬಳಕೆ ಮಾಡಿಕೊಳ್ಳಲು ಮತ್ತು ಅದಕ್ಕೆ ಟಿಡಿಆರ್ ನೀಡಲು ಸಚಿವ ಸಂಪುಟವು 2024ರ ಮಾರ್ಚ್‌ನಲ್ಲಿ ತೀರ್ಮಾನ ತೆಗೆದುಕೊಂಡಿತ್ತು.

2019ರಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ರಸ್ತೆ ವಿಸ್ತರಣೆಗಾಗಿ ಅರಮನೆ ಭೂಮಿ ವಶಪಡಿಸಿಕೊಳ್ಳಲು ತೀರ್ಮಾನ ತೆಗೆದುಕೊಂಡಿತ್ತು. ಬಿಜೆಪಿ ಸರ್ಕಾರ 2022ರ ಸೆಪ್ಟೆಂಬರ್‌ನಲ್ಲಿ ಆದೇಶ ಹೊರಡಿಸಿ ರಸ್ತೆ ವಿಸ್ತರಣೆ ಯೋಜನೆಯನ್ನು ಕೈಬಿಟ್ಟಿತ್ತು. ವಶಪಡಿಸಿಕೊಳ್ಳುವ ಭೂಮಿಗೆ ಪರಿಹಾರಾರ್ಥವಾಗಿ ದೊಡ್ಡ ಮೊತ್ತದ ಟಿಡಿಆರ್ ನೀಡಬೇಕಾಗುತ್ತದೆ ಎಂಬ ಕಾರಣ ನೀಡಿತ್ತು.



ಬಳ್ಳಾರಿ ರಸ್ತೆ ವಿಸ್ತರಣೆಗಾಗಿ ಸರ್ವೆ ನಡೆಸಿದ್ದ ಸಂದರ್ಭ

ಮುಖ್ಯಾಂಶಗಳು

- ಬಳ್ಳಾರಿ ರಸ್ತೆ (ಪ್ರತಿ ಚದರ ಮೀಟರ್‌ಗೆ); ₹2,83,500
- ಜಯಮಹಲ್ ರಸ್ತೆ (ಪ್ರತಿ ಚದರ ಮೀಟರ್‌ಗೆ); ₹2,04,000
- 62,475 ಚದರ ಮೀಟರ್‌ಗೆ ಒಟ್ಟು ಡಿಟಿಆರ್; ₹3,011 ಕೋಟಿ

ಸರ್ಕಾರದ ನಿಲುವು

- 15 ಎಕರೆಯ ಟಿಡಿಆರ್ ಅನ್ನು ಬೆಂಗಳೂರು ನಗರದ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ ಬಳಸಿಕೊಳ್ಳಬಹುದು. ಇದು ನಗರ ಯೋಜನೆಯ ಉದ್ದೇಶವನ್ನು ನಿರರ್ಥಕಗೊಳಿಸುತ್ತದೆ. ಸಂಚಾರ ಹಾಗೂ ಜನವಸತಿ ಸಮಸ್ಯೆ ಉಂಟಾಗಿ ದೊಡ್ಡ ಸಮಸ್ಯೆಗಳಿಗೆ ಕಾರಣವಾಗುತ್ತದೆ ಎಂಬುದು ರಾಜ್ಯ ಸರ್ಕಾರದ ನಿಲುವು.
- ಸುಪ್ರೀಂ ಕೋರ್ಟ್‌ನಲ್ಲಿನ ಮೇಲ್ಮನವಿಯಲ್ಲಿ ರಾಜ್ಯದ ಪರವಾಗಿ ಆದೇಶವಾದರೆ ಮಾರಾಟ ಅಥವಾ ಇನ್ಯಾವುದೇ ರೀತಿಯಲ್ಲಿ ಬಳಕೆಯಾದ ಟಿಡಿಆರ್ ಅನ್ನು ವಾಪಸ್ ಪಡೆಯಲು ಆಗುವುದಿಲ್ಲ. ಇದರಿಂದ ರಾಜ್ಯದ ಹಿತಾಸಕ್ತಿ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬುದು ಸಂಪುಟದ ತೀರ್ಮಾನ.



ವೀರಶೈವ ಲಿಂಗಾಯತ ಕ್ಷೇಮಾಭಿವೃದ್ಧಿ ವೇದಿಕೆ ವತಿಯಿಂದ ಸಿದ್ದಗಂಗಾ ಶ್ರೀಗಳ ಆರನೇ ವರ್ಷದ ಪುಣ್ಯ ಸ್ಮರಣೆ ಮತ್ತು ದಾಸೋಹ ದಿನ ಆಚರಿಸಲಾಯಿತು

ಸಿದ್ದಗಂಗಾಶ್ರೀ ಪುಣ್ಯಸ್ಮರಣೆ ದಾಸೋಹ ದಿನ ಆಚರಣೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಸಿದ್ದಗಂಗಾಶ್ರೀ ಶಿವಕುಮಾರ ಸ್ವಾಮೀಜಿ ಅವರ ಆರನೇ ವರ್ಷದ ಪುಣ್ಯಸ್ಮರಣೆ, ಮಹಾತ್ಮರ ಚರಿತಾಮೃತ ಗ್ರಂಥದ ಹತ್ತನೇ ಮುದ್ರಣ ಲೋಕಾರ್ಪಣೆ ಹಾಗೂ ದಾಸೋಹ ದಿನವನ್ನು ಸಮೀಪದ ನೆಲೆ ಮಹೇಶ್ವರಮ್ಮ ದೇವಸ್ಥಾನದ ಆವರಣದಲ್ಲಿ ಆಚರಿಸಲಾಯಿತು.

ವೀರಶೈವ- ಲಿಂಗಾಯತ ಕ್ಷೇಮಾಭಿವೃದ್ಧಿ ವೇದಿಕೆ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ದಾಸರಹಳ್ಳಿ ಘಟಕ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ದಾಸರಹಳ್ಳಿ ಘಟಕ, ಅಕ್ಕಮಹಾದೇವಿ ಮಹಿಳಾ ಸಮಾಜ ಮತ್ತು ಕಾಯಕಯೋಗಿ ಸಹಕಾರ ಸಂಘದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಶಿವಗಂಗೆಯ ಮೇಲಣ ಗವಿಮಠದ ಮಲಯಶಾಂತಮುನಿ ದೇಸಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಮತ್ತು ಅಥಣಿಯ ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ ಸಾವಿರಾರು ಜನರಿಗೆ ಆಶೀರ್ವಚನ ನೀಡಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಬಿದರಿ ಮತ್ತು ಶಾಸಕ ಎಸ್. ಮುನಿರಾಜು ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ವೇದಿಕೆಯ ಅಧ್ಯಕ್ಷ ಬಸವರಾಜಣ್ಣ ಅವರು ಸಾವಿರಕ್ಕೂ ಹೆಚ್ಚು ಜನರಿಗೆ ಹೋಳಿಗೆ ದಾಸೋಹ ಪ್ರಸಾದ ನೀಡಿದರು. ವಿದ್ಯಾರ್ಥಿಗಳಿಂದ ಭರತನಾಟ್ಯ, ಭಕ್ತಿ ಗೀತೆಗಳು ಮತ್ತು ವಚನ ಗೀತೆಗಳ ಗಾಯನ ಜರುಗಿತು.

ಕಸಾಪ ಮಾಜಿ ಅಧ್ಯಕ್ಷ ಡಾ. ಮನು ಬಳಿಗಾರ್, ಬೆಂಗಳೂರು ನಗರ ಜಿ.ಪಂ. ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ, ಸಾಹಿತಿ ವೈ.ಬಿ.ಎಚ್. ಜಯದೇವ್, ಕನ್ನಡ ಪರ ಚಿಂತಕ ಪಾಲನೇತ್ರ, ಸೋಲಾರ್ ಸುಬ್ಬಣ್ಣ ಉಪಸ್ಥಿತರಿದ್ದರು.

ಜಾಗತಿಕ ಹೂಡಿಕೆದಾರರ ಸಮಾವೇಶದ ಪ್ರಯುಕ್ತ ರೋಡ್‌ಷೋ

₹10 ಲಕ್ಷ ಕೋಟಿ ಹೂಡಿಕೆ: ಪಾಟೀಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ಫೆಬ್ರುವರಿ 11ರಿಂದ 14ರವರೆಗೆ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ₹10 ಲಕ್ಷ ಕೋಟಿ ಹೂಡಿಕೆ ಆಗುವ ವಿಶ್ವಾಸ ಇದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಹೂಡಿಕೆದಾರರ ಸಮಾವೇಶದ ಪೂರ್ವಸಿದ್ಧತೆಗಳ ಅಂಗವಾಗಿ ರಾಜ್ಯ ಸರ್ಕಾರವು ಬುಧವಾರ ಇಲ್ಲಿ ರೋಡ್‌ಷೋ ನಡೆಸಿತು. ರಾಜ್ಯದಲ್ಲಿ ಹೂಡಿಕೆಯ ಅವಕಾಶಗಳ ಬಗ್ಗೆ ಸಚಿವರು ಉದ್ಯಮಿಗಳಿಗೆ ಮನವರಿಕೆ ಮಾಡಿಕೊಟ್ಟು ಸಮಾವೇಶದಲ್ಲಿ ಭಾಗಿಯಾಗಲು ಆಹ್ವಾನ ನೀಡಿದರು. ಹೂಡಿಕೆದಾರರ ಸಮಾವೇಶದಲ್ಲಿ ರಾಜ್ಯ ಸರ್ಕಾರವು ಹೊಸ ಕೈಗಾರಿಕಾ ನೀತಿ ಪ್ರಕಟಿಸಲಿದೆ ಎಂದೂ ಸಚಿವರು ಘೋಷಿಸಿದರು. ಹೊಸ ಇ.ವಿ. ನೀತಿಯನ್ನೂ ಘೋಷಿಸಲಾಗುತ್ತದೆ ಎಂದು ಅವರು ತಿಳಿಸಿದರು.



ಉದ್ಯಮಿಗಳ ಜತೆಗೆ ಕೈಗಾರಿಕಾ ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ, ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಸಚಿವ ಎಂ.ಬಿ.ಪಾಟೀಲ ಇದ್ದರು

ರಾಜ್ಯದ ಆಹಾರ ಸಂಸ್ಕರಣಾ ವಲಯಕ್ಕೆ ಕೊಡುಗೆ ನೀಡುತ್ತಿರುವ ಐಟಿಸಿ ಲಿಮಿಟೆಡ್, ಈ ಕ್ಷೇತ್ರಗಳಲ್ಲಿ ತನ್ನ ವಹಿವಾಟು ವಿಸ್ತರಿಸುವುದಾಗಿ ವಾಗ್ದಾನ ಮಾಡಿದೆ. 'ಐಟಿಸಿ ಲಿಮಿಟೆಡ್‌ನ ಈ ಹೂಡಿಕೆ ಪ್ರಸ್ತಾವಗಳು ರಾಜ್ಯದಲ್ಲಿ ಮೂಲಸೌಲಭ್ಯಗಳಿಗೆ ಉತ್ತೇಜನ ನೀಡಲಿವೆ. ಉದ್ಯೋಗ ಅವಕಾಶಗಳು ಹೆಚ್ಚಿಸಲಿವೆ' ಎಂದು ಪಾಟೀಲ ತಿಳಿಸಿದರು.

ರಿನ್ಯೂ ಪವರ್ ಕಂಪನಿಯು ಕರ್ನಾಟಕದಲ್ಲಿನ ತನ್ನ ಹೂಡಿಕೆಯ ನೀಲನಕ್ಷೆಯನ್ನು ಸಚಿವರ ಜೊತೆಗೆ ಹಂಚಿಕೊಂಡಿತು. 3 ರಿಂದ 4 ಗಿಗಾವಾಟ್ ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಯೋಜನೆ, ಬ್ಯಾಟರಿ ತಯಾರಿಕೆ ಮತ್ತು ಮರುಬಳಕೆ ಸೌಲಭ್ಯ ಹಾಗೂ ಸ್ಥಳೀಯ ಉದ್ಯೋಗಿಗಳ ಕೌಶಲ ವರ್ಧನೆಗೆ ಕೌಶಲ ಕೇಂದ್ರ ಸ್ಥಾಪಿಸುವುದಾಗಿ ತಿಳಿಸಿತು.

ವಿದ್ಯುತ್ ಸಲಕರಣೆ ಮತ್ತು ಗೃಹೋಪಯೋಗಿ ಉಪಕರಣಗಳ ತಯಾರಿಕಾ ಕಂಪನಿ ಹ್ಯಾವೆಲ್ಸ್, ರಾಜ್ಯದಲ್ಲಿನ ತನ್ನ ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರವನ್ನು ವಿಸ್ತರಿಸಲು ಒಲವು ವ್ಯಕ್ತಪಡಿಸಿತು. ಕೇಬಲ್ ತಯಾರಿಕೆಯ ಹೊಸ ಘಟಕವನ್ನು ಆರಂಭಿಸುವುದಾಗಿ ಕೆಇಐ ಇಂಡಸ್ಟ್ರೀಸ್ ಆಸಕ್ತಿ ತೋರಿಸಿತು.

ಮಾವಳ್ಳಿಪುರದಲ್ಲಿ ಚಿರತೆ: ನಾಯಿಗಳ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಶಿವಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾವಳ್ಳಿಪುರ ಮಧುಗಿರಿಹಳ್ಳಿ ಕಾಳೇನಹಳ್ಳಿ, ಶಿವಕೋಟೆ, ಲಿಂಗನಹಳ್ಳಿ ಗ್ರಾಮಗಳಲ್ಲಿ ಚಿರತೆ ಕಾಣಿಸಿಕೊಂಡು, ನಾಯಿಯನ್ನು ಕೊಂದು ಹಾಕಿದೆ.

ಮಾವಳ್ಳಿಪುರ ಗ್ರಾಮದ ಕೆರೆ ಅಂಗಳದಲ್ಲಿ ಚಿರತೆಯು ಬೀದಿ ನಾಯಿಯನ್ನು ಕೊಂದು ಹಾಕಿದೆ. ಬುಧವಾರ ಬೆಳಗಿನ ಜಾವ ಕಾಳೇನಹಳ್ಳಿ ಗ್ರಾಮದ ಚೇತನ್ ರೆಡ್ಡಿ ಅವರ ಸಾಕು ನಾಯಿಯ ಮೇಲೂ ಚಿರತೆ ದಾಳಿ ಮಾಡಿದ ಸಂದರ್ಭದಲ್ಲಿ, ಸದ್ದು ಕೇಳಿಸಿಕೊಂಡು ಮಾಲೀಕರು ಹೊರಬಂದಾಗ ಗಾಬರಿಗೊಂಡ ಚಿರತೆ ಓಡಿಹೋಗಿದೆ.

'ಚಿರತೆ ಸೆರೆ ಹಿಡಿಯಲು ಬೋನು ಇರಿಸಲಾಗುವುದು' ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

'ಸುಸ್ಥಿರ ಮತ್ತು ಡಿಜಿಟಲ್ ಕನ್‌ಸ್ಟ್ರಕ್ಷನ್‌ನಲ್ಲಿ ನಾವೀನ್ಯತೆ' ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಮೈಕಲ್ ಚು.ಸಿ. ರಾಜಶೇಖರಮೂರ್ತಿ, ಅಜುಂ ಪರ್ವೇಜ್, ಅಧ್ಯಕ್ಷತೆ: ಗಾಳಿಸ್ವಾಮಿ, ಆಯೋಜನೆ ಮತ್ತು ಸ್ಥಳ: ದಯಾನಂದಸಾಗರ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಳಿಗ್ಗೆ 10

ನೇತಾಜಿ ಸಭಾಷ್‌ಚಂದ್ರ ಬೋಸ್ ಅವರ ಜನ್ಮದಿನಾಚರಣೆ: ಆಯೋಜನೆ: ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಸ್ಥಳ: ಎಸ್.ಜೆ.ಪಿ. ಕಾಲೇಜಿನ ಆವರಣ, ಕೆ.ಆರ್. ವೃತ್ತ, ಬೆಳಿಗ್ಗೆ 10.30

ಸಾವಯವ ಮತ್ತು ಸಿರಿಧಾನ್ಯ ಅಂತರರಾಷ್ಟ್ರೀಯ ವಾಣಿಜ್ಯ ಮೇಳದ ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಎನ್. ಚಲುವರಾಯಸ್ವಾಮಿ, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಕೃಷಿ ಇಲಾಖೆ, ಸ್ಥಳ: ತ್ರಿಪುರವಾಸಿನಿ ಅರಮನೆ ಮೈದಾನ, ಬೆಳಿಗ್ಗೆ 11

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಸನ್ಮಾನ ಸಮಾರಂಭ, ರಂಗ ಸಂಭ್ರಮ–2025: ಅಧ್ಯಕ್ಷತೆ: ಎಂ. ಜಗದೀಶ್‌ಗೌಡ, ಉದ್ಘಾಟನೆ: ಎಚ್. ಜಯಣ್ಣ, ಆಯೋಜನೆ: ರಾಜೇಶ್ವರಿ ಕಲಾನಿಕೇತನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಜಾತಿ–ಆದಾಯ ಪ್ರಮಾಣಪತ್ರ ಪಡೆಯಲು ಆಗುತ್ತಿರುವ ತೊಂದರೆಗಳು ಹಾಗೂ ಪರಿಹಾರಗಳ ಕುರಿತು ಸಮಾಲೋಚನಾ ಸಭೆ: ಭಾಗವಹಿಸುವವರು: ಎಲ್. ಹನುಮಂತಯ್ಯ, ಎಂ.ಪಿ. ನರೇಂದ್ರ ಸ್ವಾಮಿ, ಮಣಿವಣ್ಣನ್ ಪಿ., ರಾಜೇಂದ್ರ ಕುಮಾರ್ ಕಟಾರಿಯಾ, ರಾಕೇಶ್ ಕುಮಾರ್ ಕೆ., ದಾಸನೂರು ಕೂಸಣ್ಣ, ಆಯೋಜನೆ: ಎಸ್.ಸಿ.ಎಸ್.ಎ/ಟಿ.ಎಸ್.ಎ. ಜಾಗೃತಿ ವೇದಿಕೆ, ಸ್ಥಳ: ಶಾಸಕರ ಭವನ–2, ವಿಧಾನಸೌಧ ಹಿಂಭಾಗ, ಮಧ್ಯಾಹ್ನ 2

'ಭಾವ ಧ್ಯಾನ' ಸಾಂಸ್ಕೃತಿಕ ಕಾರ್ಯಕ್ರಮ: ಅಂಜಲಿ ಭಾವ: ಎನ್. ರವಿಕುಮಾರ್, ಕಾವ್ಯ ಮುರಳೀಧರನ್, ನೃತ್ಯಧಾರ ಭಾವ: ಮನೀಶಾ ಸಾಠೆ, ಆಯೋಜನೆ ಮತ್ತು ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಸಂಜೆ 4ರಿಂದ

ಪುರಂದರದಾಸರ ಆರಾಧನಾ ಮಹೋತ್ಸವ: ವೀಣಾ ವಾದನ: ಅಹಿಕಾ ನಾಗದೀಪ್ ಮತ್ತು ತಂಡ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 6.30

'ಅಕ್ಕಮಹಾದೇವಿಯ ವಚನಗಳು' ಉಪನ್ಯಾಸ: ಸುಜಾ ಲಕ್ಷ್ಮೀಪುರ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಸ್ಪರ್ಧಾ ವಾಣಿ



ಬಾಹ್ಯಾಕಾಶ ತ್ಯಾಜ್ಯದ ಫಲ 'ಕೆಸ್ಲರ್ ಸಿಂಡ್ರೋಮ್'!

ಚನ್ನಬಸಪ್ಪ ರೊಟ್ಟಿ

2024ರ ನವೆಂಬರ್‌ನಲ್ಲಿ ಶಿಲಾಖಂಡದ ಒಂದು ತುಣುಕು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ISS)ಡಿಕ್ಕಿಯಾಗಿ ಘರ್ಷಣೆಯೊಂದಿಗೆ ಬೆಂಕಿಕಿಡಿಗಳನ್ನು ಉಂಟು ಮಾಡಿದೆ. ಇದರಿಂದ ISS ಪಥವನ್ನು ಬದಲಿಸುವ ನಿಟ್ಟಿನಲ್ಲಿ ತಂತ್ರಜ್ಞರು ಯೋಚಿಸುವಂತೆ ಮಾಡಿದೆ. ಈ ಘಟನೆ ಭಾರತೀಯ ಮೂಲದ ಸುನಿತಾ ವಿಲಿಯಮ್ಸ್ ಸೇರಿದಂತೆ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಇರುವ ಇತರ ಗಗನಯಾತ್ರಿಗಳ ಕಳವಳ ಹೆಚ್ಚಿಸಿದೆ. ಬಾಹ್ಯಾಕಾಶ ಅವಶೇಷಗಳ ಘರ್ಷಣೆಗೆ ಸಂಬಂಧಿಸಿದ ಈ ಘಟನೆಗೆ 'ಕೆಸ್ಲರ್ ಸಿಂಡ್ರೋಮ್' ಎನ್ನುತ್ತಾರೆ.

'ಕೆಸ್ಲರ್ ಸಿಂಡ್ರೋಮ್' ಪರಿಕಲ್ಪನೆಯನ್ನು 1978ರಲ್ಲಿ ನಾಸಾ (NASA) ವಿಜ್ಞಾನಿಗಳಾದ ಡೊನಾಲ್ಡ್ ಜೆ. ಕೆಸ್ಲರ್ ಮತ್ತು ಬರ್ಟನ್ ಜಿ. ಕೋರ್-ಪಲೈಸ್ ಮೊದಲ ಬಾರಿ ಪ್ರಸ್ತಾಪಿಸಿದರು. ಬಾಹ್ಯಾಕಾಶದಲ್ಲಿರುವ ಶಿಲಾಖಂಡರಾಶಿಗಳು ನಿಷ್ಕ್ರಿಯ ಉಪಗ್ರಹಗಳು, ರಾಕೆಟ್ ಬಿಡಿಭಾಗಗಳೊಂದಿಗೆ ಘರ್ಷಣೆಗೆ ಈಡಾಗುವುದನ್ನು 'ಕೆಸ್ಲರ್ ಸಿಂಡ್ರೋಮ್' ಎನ್ನುತ್ತಾರೆ. ಇದನ್ನು 'ಕ್ಯಾಸ್ಕೇಡಿಂಗ್' ಅಥವಾ 'ಅಬ್ಲೇಶನ್ ಕ್ಯಾಸ್ಕೇಡ್' ಎನ್ನಲಾಗುತ್ತದೆ. ಈ ಮಾದರಿಯ ಘಟನೆಗಳಲ್ಲಿ ಬಾಹ್ಯಾಕಾಶ ತ್ಯಾಜ್ಯ ISSಗೆ ಮಾತ್ರವಲ್ಲದೇ, GPS, ಇಂಟರ್‌ನೆಟ್, ದೂರದರ್ಶನ ಸೇವೆಗಳಿಗೆ ಸಂಬಂಧಿಸಿದ ವಸ್ತುಗಳಿಗೂ ಹಾನಿ ಉಂಟುಮಾಡಬಲ್ಲದು.

ಈಗಾಗಲೇ ಬಾಹ್ಯಾಕಾಶ ತ್ಯಾಜ್ಯದ ಲಕ್ಷಾಂತರ ಶಿಲಾಖಂಡರಾಶಿಗಳು ಭೂಕಕ್ಷೆಯಲ್ಲಿ ಅನಿಯಂತ್ರಿತ ವೇಗದಲ್ಲಿ ಸುತ್ತುತ್ತಿದ್ದು, ಈ ಶಿಲಾಖಂಡರಾಶಿಗಳು ಮಾನವ ಬಾಹ್ಯಾಕಾಶ ಹಾರಾಟ ಮತ್ತು ಉಪಗ್ರಹ ಕಾರ್ಯಾಚರಣೆಗಳಿಗೆ ಬೆದರಿಕೆ ಒಡ್ಡಿವೆ. 1957ರಲ್ಲಿ ಬಾಹ್ಯಾಕಾಶ ಪರಿಶೋಧನೆ ಪ್ರಾರಂಭವಾದಾಗಿನಿಂದ, ವಿವಿಧ ದೇಶಗಳು ಪೈಪೋಟಿಗೆ ಬಿದ್ದಂತೆ ಬಾಹ್ಯಾಕಾಶ ಕಾರ್ಯಾಚರಣೆಗಳನ್ನು ನಡೆಸಿದ್ದು, ಬಾಹ್ಯಾಕಾಶ ಅವಶೇಷಗಳ (ತ್ಯಾಜ್ಯ) ಪ್ರಮಾಣ ನಿರಂತರವಾಗಿ ಹೆಚ್ಚಿದೆ. ಭೂ ಹೊರಕಕ್ಷೆಗಿಂತ ಭೂ ಕೆಳಕಕ್ಷೆಯಲ್ಲಿಯೇ (LEO: Low Earth Orbit) ಮಾನವ ನಿರ್ಮಿತ ಉಪಗ್ರಹಗಳು, ಗಗನನೌಕೆಗಳ ಸಂಖ್ಯೆ ಹಾಗೂ ಅವಶೇಷಗಳ ಪ್ರಮಾಣ ಹೆಚ್ಚಿನ ಸಂಖ್ಯೆಯಲ್ಲಿವೆ. ಹೀಗಾಗಿ, ಇಲ್ಲಿ ಘರ್ಷಣೆಯ ಸಾಧ್ಯತೆ ಹೆಚ್ಚಿದೆ.

1957ರಲ್ಲಿ ಅಮೆರಿಕ 'ಸ್ಪುಟ್ನಿಕ್ 1' ಉಪಗ್ರಹ ಉಡಾವಣೆ ಮಾಡಿದ ನಂತರ, 'NORAD' (North American Aerospace Defense Command) ರಾಕೆಟ್ ಉಡಾವಣೆ ಮತ್ತು ಭೂಕಕ್ಷೆ ತಲುಪುವ ವಸ್ತುಗಳ ಮಾಹಿತಿ ಕಲೆಹಾಕುತ್ತಿದ್ದು, 'NORAD' ಉದ್ಯೋಗಿ ಜಾನ್ ಗಬ್ಬಾರ್ಡ್ ಈ ಉತ್ಪನ್ನಗಳ ಕಕ್ಷೀಯ ಮಾರ್ಗ ಗುರುತಿಸುವ ತಂತ್ರವನ್ನು ಅಭಿವೃದ್ಧಿಪಡಿಸಿದರು.

ಈಗಲೂ ಬಾಹ್ಯಾಕಾಶ ಕಾರ್ಯಾಚರಣೆಯ ಸಾಧನಗಳು ಸಾಗುವ ಮಾರ್ಗವನ್ನು ಗುರುತಿಸಲು 'ಗಬ್ಬಾರ್ಡ್ ರೇಖಾಚಿತ್ರ'ಗಳನ್ನೇ ವ್ಯಾಪಕವಾಗಿ ಬಳಸಲಾಗುತ್ತಿದೆ. ಬಾಹ್ಯಾಕಾಶ ಅವಶೇಷಗಳನ್ನು ಅಭ್ಯಸಿಸಲು 'ಬೇಕರ್-ನನ್' ಕ್ಯಾಮೆರಾಗಳು, ಆಪ್ಟಿಕಲ್ ದೂರದರ್ಶಕಗಳು, ಕಡಿಮೆ ತರಂಗಾಂತರದ ರೇಡಾರ್ ಉಪಕರಣಗಳನ್ನು ಬಳಸಲಾಗುತ್ತದೆ. ಇದರಿಂದ 20 ಸೆಂ.ಮೀ.ಗಿಂತ ಕಡಿಮೆ ಗಾತ್ರದ ವಸ್ತುಗಳನ್ನೂ ಗುರುತಿಸಬಹುದಾಗಿದೆ.

2024ರ ದತ್ತಾಂಶಗಳನ್ವಯ ಇಲ್ಲಿಯವರೆಗೆ ಉಡಾವಣೆ ಮಾಡಿರುವ ಸುಮಾರು 59,000 ಕೃತಕ ಉಪಗ್ರಹಗಳ ಪೈಕಿ 28,300 ಕೃತಕ ಉಪಗ್ರಹಗಳು ಭೂಕಕ್ಷೆಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. ಬಾಕಿ ಉಳಿದ 30,700 ಕೃತಕ ಉಪಗ್ರಹಗಳು ನಿಷ್ಕ್ರಿಯವಾಗಿವೆ. ಭೂಕಕ್ಷೆಯಲ್ಲಿ 1 ರಿಂದ 10 ಸೆಂ.ಮೀ. ಗಾತ್ರದ 6 ಲಕ್ಷಕ್ಕೂ ಹೆಚ್ಚು ಬಾಹ್ಯಾಕಾಶ ತ್ಯಾಜ್ಯದ ತುಣುಕುಗಳು ಹಾಗೂ 10 ಸೆಂ.ಮೀ.ಗಿಂತ ಹೆಚ್ಚಿನ ಗಾತ್ರದ 23,000 ಬಾಹ್ಯಾಕಾಶ ತ್ಯಾಜ್ಯದ ಘಟಕಗಳು ಉತ್ಪತ್ತಿಯಾಗಿವೆ. 2026ರ ಹೊತ್ತಿಗೆ 8,211 ಕೆ.ಜಿ. ತೂಕದ 'ಎನ್ವಿಸ್ಯಾಟ್' ಉಪಗ್ರಹ ಹಾಗೂ ಸ್ಪೇಸ್‌ಎಕ್ಸ್‌ನ ಬಹುತೇಕ 'ಸ್ಟಾರ್‌ಲಿಂಕ್' ಉಪಗ್ರಹಗಳು ನಿಷ್ಕ್ರಿಯಗೊಳ್ಳಲಿವೆ. ❖

1,000 ಕೆ.ಜಿ. ತೂಕದ ಬಾಹ್ಯಾಕಾಶ ನೌಕೆ ಸ್ಫೋಟಿಸಬಲ್ಲ 1 ಕೆ.ಜಿ. ತ್ಯಾಜ್ಯ!

1980ರ ದಶಕದಲ್ಲಿ, ಅಮೆರಿಕದ ವಾಯುಪಡೆ (USAF) ಮಾನವನಿರ್ಮಿತ ಉಪಗ್ರಹಗಳು ಅಥವಾ ಇತರ ಬಾಹ್ಯಾಕಾಶ ಘಟಕಗಳೊಂದಿಗೆ ಶಿಲಾಖಂಡರಾಶಿಗಳು ಡಿಕ್ಕಿ ಹೊಡೆದರೆ ಏನಾಗುತ್ತದೆ ಎಂಬ ಪ್ರಾತ್ಯಕ್ಷಿಕೆ ನಡೆಸಿತು. ಈ ಪ್ರಯೋಗದಲ್ಲಿ ಬಹುತೇಕ ಶಿಲಾಖಂಡರಾಶಿಗಳು ಹಗುರವಾಗಿದ್ದರೂ, ಹೆಚ್ಚಿನ ದ್ರವ್ಯರಾಶಿ ಮತ್ತು ವೇಗದ ಕಾರಣ ಅವು ಮಾನವನಿರ್ಮಿತ ಬಾಹ್ಯಾಕಾಶ ನೌಕೆ ಹಾಗೂ ಉಪಗ್ರಹಗಳನ್ನು ನಾಶಪಡಿಸುವ ಸಾಮರ್ಥ್ಯ ಹೊಂದಿವೆ ಎಂಬುದು ಸಾಬೀತಾಯಿತು. ಉದಾಹರಣೆಗೆ: ಪ್ರತಿ ಸೆಕೆಂಡಿಗೆ 10 ಕಿ.ಮೀ. ವೇಗದಲ್ಲಿ ಸಂಚರಿಸುವ, ಹೆಚ್ಚಿನ ಸಾಂದ್ರತೆ ಹೊಂದಿದ 1 ಕೆ.ಜಿ. ತೂಕದ ಬಾಹ್ಯಾಕಾಶ ಅವಶೇಷವೊಂದು 1000 ಕೆ.ಜಿ. ತೂಕದ ಬಾಹ್ಯಾಕಾಶ ನೌಕೆಗೆ ಡಿಕ್ಕಿ ಹೊಡೆದರೆ ಆ ಬಾಹ್ಯಾಕಾಶ ನೌಕೆ ಛಿದ್ರಗೊಳ್ಳುತ್ತದೆ ಎಂದು ಕಂಡುಕೊಳ್ಳಲಾಯಿತು. ಈ ಮಾದರಿಯಲ್ಲಿ ಪ್ರತಿ ವರ್ಷ ಒಂದು ಸಕ್ರಿಯ ಉಪಗ್ರಹ ಬಾಹ್ಯಾಕಾಶ ತ್ಯಾಜ್ಯ ಡಿಕ್ಕಿಯಿಂದ ನಾಶವಾಗುತ್ತಿದೆ!

ಸಂಭವನೀಯ ಪರಿಹಾರಗಳು

- ಭೂ ವಾತಾವರಣಕ್ಕೆ ಮರುಪ್ರವೇಶಿಸಬಲ್ಲ ಉಪಗ್ರಹ ಹಾಗೂ ರಾಕೆಟ್‌ಗಳ ಅಭಿವೃದ್ಧಿ.
- ಶೇಖರಣಾ ಕಕ್ಷೆಗೆ ಚಲಿಸಲು ಸಮರ್ಥವಾಗಿರುವ, ಅಥವಾ ಮರುಬಳಕೆಯ ಉಪಗ್ರಹ ಹಾಗೂ ರಾಕೆಟ್‌ಗಳ ಅಭಿವೃದ್ಧಿ.
- ಭೂ ಕಕ್ಷೆಯಲ್ಲಿರುವ ಬಾಹ್ಯಾಕಾಶ ತ್ಯಾಜ್ಯವನ್ನು ಸೂರ್ಯ ಅಥವಾ ಚಂದ್ರನ ಕಕ್ಷೆಗೆ ವರ್ಗಾಯಿಸುವುದು.
- 'ಲೇಸರ್ ಬ್ರೂಮ್' ಮೂಲಕ ಬಾಹ್ಯಾಕಾಶ ತ್ಯಾಜ್ಯವನ್ನು ಸಂಪೂರ್ಣ ನಾಶಗೊಳಿಸುವುದು. (ಯುರೋಪಿಯನ್ ಸ್ಪೇಸ್ ಏಜೆನ್ಸಿ ಮತ್ತು ಸ್ವಿಸ್ ಸಹಯೋಗದ ಸ್ಟಾರ್ಟ್‌ಅಪ್ 'ಕ್ಲಿಯರ್‌ಸ್ಪೇಸ್' ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ)

ಮಾನವನಿರ್ಮಿತ ಬಾಹ್ಯಾಕಾಶ ತ್ಯಾಜ್ಯ!

- 1978ರಲ್ಲಿ ಅಮೆರಿಕ ಉಡಾವಣೆ ಮಾಡಿದ 'ಡೆಲ್ಟಾ' ರಾಕೆಟ್‌ಗಳು ಅನಿರೀಕ್ಷಿತವಾಗಿ ಬಾಹ್ಯಾಕಾಶದಲ್ಲಿ ಸ್ಫೋಟಿಸಿದ್ದರಿಂದ 420ಕ್ಕೂ ಹೆಚ್ಚು ಶಿಲಾಖಂಡರಾಶಿಗಳು ಉತ್ಪನ್ನಗೊಂಡಿವೆ.
- 1985ರಲ್ಲಿ, ಅಮೆರಿಕ ಮೊದಲ ಬಾರಿ 'ಉಪಗ್ರಹ ವಿರೋಧಿ ಕ್ಷಿಪಣಿ' (ASM) ಉತ್ಪಾದಿಸಿತು. ಇದರ ಪರೀಕ್ಷೆಗಾಗಿ, 1985ರಲ್ಲಿ 'ASM-135' ಉಪಗ್ರಹ ವಿರೋಧಿ ಕ್ಷಿಪಣಿಯನ್ನು ಗಂಟೆಗೆ 24,000 ಕಿ.ಮೀ. ವೇಗದಲ್ಲಿ 14 ಕೆ.ಜಿ. ಸ್ಫೋಟಕವನ್ನು ಬಳಸಿಕೊಂಡು ಭೂಮೇಲ್ಮೈಯಿಂದ 555 ಕಿ.ಮೀ. ಎತ್ತರದಲ್ಲಿ ಸಂಚರಿಸುತ್ತಿದ್ದ 'Solwind P78-1' ಉಪಗ್ರಹಕ್ಕೆ ಡಿಕ್ಕಿ ಹೊಡೆಸಲಾಯಿತು. ಇದು 1000ಕ್ಕೂ ಹೆಚ್ಚು ಶಿಲಾಖಂಡಗಳ ರಾಶಿಯನ್ನು ಸೃಷ್ಟಿಸಿತು.
- 11 ಮಾರ್ಚ್ 2000ರಂದು ಚೈನೀಸ್ 'ಲಾಂಗ್ ಮಾರ್ಚ್ 4' ಬೂಸ್ಟರ್‌ನ ಮೂರನೇ ಹಂತದ ವಿಘಟನೆಯಿಂದ ಸುಮಾರು 300 ಶಿಲಾಖಂಡರಾಶಿಗಳು ಉತ್ಪನ್ನಗೊಂಡಿವೆ.
- ಜನವರಿ 11, 2007ರಂದು, ಚೀನಾ ಕೂಡ ಉಪಗ್ರಹ ವಿರೋಧಿ ಕ್ಷಿಪಣಿ ಪರೀಕ್ಷೆ ನಡೆಸಿತು. ಇದರಲ್ಲಿ ಭೂಮೇಲ್ಮೈಯಿಂದ 865 ಕಿ.ಮೀ. ಎತ್ತರದಲ್ಲಿದ್ದ 750 ಕೆ.ಜಿ. ತೂಕದ 'FY-1C' ಉಪಗ್ರಹವನ್ನು ಛಿದ್ರಗೊಳಿಸಲಾಯಿತು. ಇದರಿಂದ 1000ಕ್ಕೂ ಹೆಚ್ಚು ಪ್ರಮಾಣದ ಶಿಲಾಖಂಡರಾಶಿಗಳು ಉತ್ಪತ್ತಿಯಾಗಿವೆ.
- 2009ರಲ್ಲಿ ನಿಷ್ಕ್ರಿಯಗೊಂಡ ರಷ್ಯಾದ ಉಪಗ್ರಹ ಮತ್ತು ಸಕ್ರಿಯ ಸಂವಹನ ಉಪಗ್ರಹದ ನಡುವೆ ನಡೆದ ಘರ್ಷಣೆ, 2,000ಕ್ಕೂ ಹೆಚ್ಚು ಬಾಹ್ಯಾಕಾಶ ತ್ಯಾಜ್ಯದ ತುಣುಕುಗಳನ್ನು ಉತ್ಪಾದಿಸಿದೆ.
- ನವೆಂಬರ್ 15, 2021 ರಷ್ಯಾ ಕೂಡ ಉಪಗ್ರಹ ವಿರೋಧಿ ಕ್ಷಿಪಣಿ ಪರೀಕ್ಷೆ ನಡೆಸಿತು. ಈ ಪ್ರಯೋಗದಲ್ಲಿ 'Kosmos 1408' ಹೆಸರಿನ ಉಪಗ್ರಹ ಛಿದ್ರಗೊಂಡು 1500ಕ್ಕೂ ಹೆಚ್ಚು ಶಿಲಾಖಂಡರಾಶಿಗಳನ್ನು ಸೃಷ್ಟಿಸಿದೆ.
- ಆಗಸ್ಟ್ 9, 2024ರಂದು ಚೀನಾದ 'ಲಾಂಗ್ ಮಾರ್ಚ್ 6A' ರಾಕೆಟ್ ಕೆಳ ಭೂಕಕ್ಷೆಯಲ್ಲಿ ಆಕಸ್ಮಿಕವಾಗಿ ಸ್ಫೋಟಗೊಂಡು 700ಕ್ಕೂ ಹೆಚ್ಚು ಶಿಲಾಖಂಡರಾಶಿಗಳನ್ನು ಸೃಷ್ಟಿಸಿದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಒಪೆಕ್ ಸಂಘಟನೆ ಯಾವ ವರದಿಗಳನ್ನು ಬಿಡುಗಡೆ ಮಾಡುತ್ತದೆ?
1. ಮಾಸಿಕ ತೈಲ ಮಾರುಕಟ್ಟೆ ವರದಿ.
2. ಅನ್ಯುವಲ್ ಸ್ಟಾಟಿಸ್ಟಿಕಲ್ ಬುಲೆಟಿನ್.
3. ವರ್ಲ್ಡ್ ಆಯಿಲ್ ಔಟ್ ಲುಕ್.
4. ವರ್ಲ್ಡ್ ಪೆಟ್ರೋಲಿಯಂ ರಿಪೋರ್ಟ್.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 2 ಮತ್ತು 3
ಸಿ. 3 ಮತ್ತು 4 ಡಿ. 1 ಮತ್ತು 4
ಉತ್ತರ : ಎ

2. ಒಪೆಕ್ + ಒಕ್ಕೂಟದಲ್ಲಿ ಕೆಳಗಿನ ಯಾವ ರಾಷ್ಟ್ರಗಳು ಸದಸ್ಯತ್ವವನ್ನು ಪಡೆದಿವೆ?
1. ಮೆಕ್ಸಿಕೊ 2. ಓಮನ್
3. ದಕ್ಷಿಣ ಸುಡಾನ್ 4. ನೈಜೀರಿಯಾ

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1, 2 ಮತ್ತು 3 ಡಿ. 2 ಮತ್ತು 4
ಉತ್ತರ : ಸಿ

3. ಭಾರತದಲ್ಲಿ ಕೆಳಗಿನ ಯಾವ ರಾಸಾಯನಿಕದ ಬಳಕೆಯನ್ನು ಸಂಪೂರ್ಣವಾಗಿ 2010ರಿಂದ ನಿಲ್ಲಿಸಲಾಗಿದೆ ?
ಎ. ಕಾರ್ಬನ್ ಟೆಟ್ರಾ ಕ್ಲೋರೈಡ್.
ಬಿ. ಸಲ್ಫ್ಯೂರಿಕ್ ಆ್ಯಸಿಡ್.
ಸಿ. ನೈಟ್ರಿಕ್ ಆ್ಯಸಿಡ್.
ಡಿ. ಕಾಸ್ಟಿಕ್ ಸೋಡಾ.
ಉತ್ತರ : ಎ

4. ಓಝೋನ್ ಪದರದ ಸಂರಕ್ಷಣೆಗಾಗಿ ಜಾರಿಗೆ ಬಂದಿರುವ ವಿಯೆನ್ನಾ ಒಪ್ಪಂದಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ ?
1. ಓಝೋನ್ ಒಪ್ಪಂದ 1988ರಲ್ಲಿ ಜಾರಿಗೆ ಬಂದಿತು.
2. ಓಝೋನ್ ಒಪ್ಪಂದ ಜಾರಿಗೆ ಬಂದ ಸಂದರ್ಭದಲ್ಲಿ 28 ರಾಷ್ಟ್ರಗಳು ಒಪ್ಪಂದಕ್ಕೆ ಸಹಿ ಹಾಕಿದವು.
3. 2008ರಲ್ಲಿ ಓಝೋನ್ ಒಪ್ಪಂದ ಸಾರ್ವತ್ರಿಕವಾಗಿ ಅಂಗೀಕರಿಸಿರುವ ಎರಡು ಒಪ್ಪಂದಗಳಲ್ಲಿ ಒಂದಾಗಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1, 2 ಮತ್ತು 3 ಡಿ. 1 ಮತ್ತು 2
ಉತ್ತರ : ಡಿ

5. ಕೆಳಗಿನ ಯಾವ ರಾಷ್ಟ್ರಗಳನ್ನು ಅಸಿಯಾನ್ ಪ್ಲಸ್ ಒಕ್ಕೂಟದ ಸದಸ್ಯತ್ವ ಹೊಂದಿರುವ ರಾಷ್ಟ್ರಗಳು ಎಂದು ಪರಿಗಣಿಸಬಹುದು?
1. ಉತ್ತರ ಕೊರಿಯಾ. 2. ದಕ್ಷಿಣ ಕೊರಿಯಾ.
3. ಆಸ್ಟ್ರೇಲಿಯಾ. 4. ಅಮೆರಿಕ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 2, 3 ಮತ್ತು 4
ಸಿ. 3 ಮತ್ತು 4 ಡಿ. 2 ಮತ್ತು 4
ಉತ್ತರ : ಬಿ

6. ಅಸಿಯಾನ್ ಒಕ್ಕೂಟವನ್ನು ಕೆಳಗಿನ ಯಾವ ಘೋಷಣೆಯ ನಂತರ ಸ್ಥಾಪಿಸಲಾಯಿತು?
ಎ. ಬ್ಯಾಂಕಾಕ್ ಘೋಷಣೆ.
ಬಿ. ಜಕಾರ್ತ ಘೋಷಣೆ.
ಸಿ. ಬೀಜಿಂಗ್ ಘೋಷಣೆ.
ಡಿ. ಟೋಕಿಯೋ ಘೋಷಣೆ.
ಉತ್ತರ : ಎ

7. ಆಸ್ಟ್ರೇಲಿಯಾ ಗುಂಪಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ ?
1. ಆಸ್ಟ್ರೇಲಿಯಾ ಗುಂಪಿನ ಸಂಸ್ಥಾಪಕ ಸದಸ್ಯ ರಾಷ್ಟ್ರಗಳು ಮೊಟ್ಟಮೊದಲ ಸಭೆಯನ್ನು ಬೆಲ್ಜಿಯಂನಲ್ಲಿ ಆಯೋಜಿಸಿದ್ದವು.
2. ಮೊಟ್ಟಮೊದಲ ಸಭೆಯಲ್ಲಿ 15 ರಾಷ್ಟ್ರಗಳು ಭಾಗವಹಿಸಿದ್ದವು.
3. ಪ್ರಸ್ತುತ ಈ ಗುಂಪಿನಲ್ಲಿ43 ಸದಸ್ಯ ರಾಷ್ಟ್ರಗಳು ಕಾರ್ಯನಿರ್ವಹಿಸುತ್ತಿವೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 1, 2 ಮತ್ತು 3
ಸಿ. 2 ಮತ್ತು 3 ಡಿ. 3 ಮಾತ್ರ
ಉತ್ತರ : ಬಿ

8. ಕೆಳಗಿನ ಯಾವ ಒಕ್ಕೂಟಗಳು ಆಸ್ಟ್ರೇಲಿಯಾ ಗುಂಪಿನ ಸದಸ್ಯತ್ವವನ್ನು ಹೊಂದಿವೆ?
1. ಐರೋಪ್ಯ ಆಯೋಗದ ಎಲ್ಲಾ ಸದಸ್ಯ ರಾಷ್ಟ್ರಗಳು.
2. ಐರೋಪ್ಯ ಒಕ್ಕೂಟದ ಸದಸ್ಯರು ಮಾತ್ರ.
3. ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ.
4. ಅಂತರರಾಷ್ಟ್ರೀಯ ಹಣಕಾಸು ನಿಧಿ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮತ್ತು 3 ಬಿ. 2 ಮತ್ತು 4
ಸಿ. 2 ಮತ್ತು 3 ಡಿ. 1, 2, 3 ಮತ್ತು 4
ಉತ್ತರ : ಎ

9. ಭಾರತೀಯ ರಿಸರ್ವ್ ಬ್ಯಾಂಕ್ ಕೆಳಗಿನ ಯಾವ ಸಮೀಕ್ಷೆಗಳನ್ನು ಬಿಡುಗಡೆ ಮಾಡುತ್ತದೆ ?
1. ಗ್ರಾಹಕರ ಆತ್ಮವಿಶ್ವಾಸ ಸಮೀಕ್ಷೆ.
2. ಹಣದುಬ್ಬರ ನಿರೀಕ್ಷೆಯ ಸಮೀಕ್ಷೆ.
3. ಸೇವೆಗಳ ಮತ್ತು ಮೂಲಸೌಕರ್ಯಗಳ ಹೊರನೋಟ ಸಮೀಕ್ಷೆ.
4. ತಯಾರಿಕಾ ವಲಯದ ಸಮೀಕ್ಷೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 1, 2, 3 ಮತ್ತು 4
ಸಿ. 2 ಮತ್ತು 4 ಡಿ. 3 ಮಾತ್ರ
ಉತ್ತರ : ಎ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

35. 'I've-I've.......... always wanted to hear him and see him ..... '

a. Who is 'I' here?
Ans:- Here 'I' refer to sick boy Anant.
b. Who does 'him' refer to
Ans:- 'him' refers to Pandit Ravishankar.
c. Why did he want to hear him and see him?
Ans:- He wanted to hear Pandit Ravishankar's sitar playing and see him in the musical concert.

36. 'They are simple men and must have their relaxation.'

a. Who is the speaker here?
Ans:- Here the speaker was Don Pedro.
b. Who are 'simple men' according to the speaker?
Ans:- According to the speaker the Sailers (seamen) are simple men.
c. Why did the speaker say so?
Ans:- When Columbus told to Don Pedro the seamen were drink too much, so they were singing, that singing irritated him. So the speaker wanted to balance the situation on both the side the said he above words.

37. 'So we shuddered there in silence, -For the stoutest held his breath,'

a. Who does 'we' refer to?
Ans:- We refer to all the Sailors in the wrecked ship.
b. What does 'stoutest' mean in the context?
Ans:- In this context the stoutest means the strongest brave sailor.
c. Why did he hold his breath?
Ans:- He hold his breath out of fear because the sea was roaring like a hungry lion.

VIII.Given below is a profile, write a paragraph using the clues given below:

38. Sarojini Naidu : Date of Birth: 13th February 1879, Hyderabad.
Parents: Barada Sundari Devi, Aghornath, Chattopadhyaya.
Education: University of Madras; King's college, London.
Notable works: In the Bazaars of Hyderabad, The Golden Threshold.
Associations: Indian National Congress.
Ans:- Sarojini Naidu was born on 13th February 1879 in Hyderabad. Her Parents were Varada Sundari Devi and Aghornath Chattopadhyaya. She studied in University of Madras (now Chennai) and later in Kings College in London. She was a well known Poetress. Her notable works are "In the Bazaars of Hyderabad and The Golden Threshold. She was a patriotic woman worked under Indian National Congress.

IX. Develop the story using the clues given below:

39. Three friends - two geese, a tortoise - decide to migrate - food, water - geese fly - tortoise can't - devise a way - carry tortoise - hold stick with their beaks - tortoise not to speak – hold the middle of the stick - children. Clap - tortoise angry - bursts out - fell - moral.

<u>The geese and a tortoise</u>

Once upon a time the three friends were live in the forest. They were two geese and a tortoise. Because of the shortage of Rain, it was very difficult to find food and water in their place. They thought and decided to migrate to the place. The geese were ready to fly but tortoise cannot fly. So they make a plan. They brought a strong stick and the two geese hold that stick two ends and the tortoise was hold the stick in the middle with its mouth. The geese were instructed to tortoise during their flying. It should not talk. The tortoise agreed. They started their journey, middle of the journey, the naughty Children seeing the rare view of their flying, they clapped loudly. Their clap made the tortoise insult and it became angry. So it starts to scold them. Whenever it opens its mouth, it fell down and died.

Moral: We should not anger on others. It will harm us and Think twice before you talk.

X. (40)

(1) Combine the word in **Column-A** with its collocative word in **Column-B** :

'A'	'B'
Swimming	[light, cloth, pool, care]

Ans:- Swimming pool

(2) Fill in the blank using the correct article :
India is .... rich country.
Ans. : a

(3) Fill in the blank using suitable linker :
Nandan scored more marks in the exam........ he had studied well.
Ans : because

(4) Fill in the blank with appropriate preposition :
You should take care .... your health.
Ans. : of

(5) Fill in the blank with appropriate tense form of the verb given in brackets :
Jayanth .... (narrate) the story in the class yesterday.
Ans. : narrated

(6) Identify the part of speech of the underlined word :
We are watching an <u>*important*</u> match.
Ans. : Adjective

(7) Write the correct form of the word given in brackets :
Cricket is a .... (*glory*) game.
Ans. : glorious

(8) Change into comparative degree :
Vande Bharat Express is the fastest train in India.
Ans. : Vande Bharat Express is faster than any other train in India.

(9) Change into passive voice :
Scientists launched a satellite.
Ans. :. A satellite was launched by Scientists

(Contd)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC -BIOLOGY

REVISION:MODEL QUESTIONS

41. One of the applications of biotechnology is the production of insect resistant crop plants, Justify the statement with reference to Bt. Cotton.

Ans (......Contd)

d) This causes swelling and lysis of cells leading to the death of the insects.

e) The gene (cry genes) encoding this protein are isolated from the bacterium and incorporated into several crop plants like cotton, tomato, corn, rice, soyabean etc.

f) The proteins encoded by the following cry genes control the pest given against them.
i) Cry IAC and cry II Ab it controls cotton bollworms
ii) Cry IAb controls corn borer.

42. Name the cells that secrete androgens?
Ans:- Leydig cells.

43. Name the causative agent of Elephantisas.
Ans:- Wuchereria bancrafti and Wuchereria malayi.

44. Mention the bacterium responsible for the large holes seen in Swiss Cheese.
Ans:- Propionibacterium sharmanii

45. Distinguish between homogametes and heterogametes.
Ans:-

Homogametes	*Heterogametes*
When both alleles of a gene are similar, then the individual is called homogamete.	When both alleles of a gene are dissimilar, then the individual is called heterogamete.
They are true breeding leading to purelines.	They are not true breeding.

46. What are homologous organs? Mention any 2 examples.
Ans:- The organs with same structural design and developmental origin but differing in their functions are called homologous organs. Forelimb of human being is homologous to forelimbs of whales and bats.

47. Introduction of some alien species causes biodiversity loss. Justify the statement with an example.
Ans:-(i) The alien species become invasive and cause extinction or decline of indigenous species. *Eg:* The Nile perch introduced into Lale Victoria in east Africa led to the extinction of more than 200 species of cichlid fish in the lake.
ii) Loss of Habitat and fragmentation drive animals and plants to extinction. *Eg:* as the Amazon forest is cut and cleared for cultivating soya beans of for conversion of grasslands for raising forest is cut and cleared for cultivating soya beans or for conversion of grasslands for raising beef cattle, many species are affected.

48. a) What are hermaphrodites? Mention one example.
Ans:- The animals bearing both male and female sex organs are called hermaphrodites.
b) Off springs of asexual reproduction are called clones. Why?
Ans:- In asexual reproduction, the off spring is morphologically and genetically identical to the parent and to each other. Hence, it is called clone.

49. Briefly explain the structure of pollen grains.
Ans:- a) Pollen grains are the mature microscope. The wall of the pollen grain is made up outer exine and an inner intine.
b) The exine is outer hard coat due to the presence of sporollenin.
c) The intine is made up of cellulose and pectin.
d) The pollen grain has germ pore through which the pollen tube germinate.
e) Enclosed within the wall are two unequal cells. The larger one is called the vegetative cell and the smaller one is called the generative cell.
f) The generative cells produce two male gametes or sperms, which takes part in double fertilization.

50. Mention the causes and effects of Phenylketonuria.
Ans:- The affected individuals lack an enzyme that catalyses the conversion of the amino acid phenylalanine is metabolised into phenyl pyruvic and other derivatives, accumulation of these chemicals in the brain results in mental retardation, these are also excreted in the urine as they are not absorbed by the kidney.

51. List the period, brain capacity and probable food of homoerectus stage of human evolution.
Ans:- Homoerectus were called Javaman, their period was 1.5 million years ago, these fossils were found in Java, their brain capacity is 900 cc, they eat meat.

52. Mention the different steps of process of recombinant DNA technology.
Ans:- The different steps of process of recombinant DNA technology are -
a) Isolation of DNA
b) Fragmentation DNA by restriction endonucleases.
c) Isolation of a desired DNA fragment.
d) Amplification of gene of interest using PCR.
e) Insertion of recombinant DNA into the host.
f) Culturing the host cells on a suitable medium at a large scale.
g) Extraction of the desired gene product.
h) Downstream processing of the products as finished product, ready for marketing.

ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸಲು ಸಿದ್ಧಗೊಂಡ ಸ್ತಬ್ಧಚಿತ್ರ

ಲಕ್ಕುಂಡಿ: ಶಿಲ್ಪಕಲೆ ಅನಾವರಣ

ಪ್ರಜಾವಾಣಿ ವಾರ್ತೆ



ನವದೆಹಲಿ: ‘ಸರ್ವಜನಾಂಗದ ಶಾಂತಿಯ ತೋಟದಂತೆ ಕಂಗೊಳಿಸುತ್ತಿರುವ ‘ಲಕ್ಕುಂಡಿ: ಶಿಲ್ಪಕಲೆಯ ತೊಟ್ಟಿಲು ಸ್ತಬ್ಧಚಿತ್ರವು ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸಲು ಸಂಪೂರ್ಣವಾಗಿ ಸಿದ್ಧಗೊಂಡಿದೆ. ರಾಜಧಾನಿಯ ಕರ್ತವ್ಯಪಥದಲ್ಲಿ ಇದೇ 26ರಂದು ಸಾಗುವುದರೊಂದಿಗೆ ಕರ್ನಾಟಕ ರಾಜ್ಯದ ಹಿರಿಮೆ, ಸರ್ವ ಧರ್ಮ ಸಮನ್ವಯ, ಶಾಂತಿ, ಸಹಬಾಳ್ವೆಯನ್ನು ಪ್ರತಿಪಾದಿಸಲಿದೆ’ ಎಂದು ವಾರ್ತಾ ಇಲಾಖೆ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದ ಪರವಾಗಿ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಪಾಲ್ಗೊಳ್ಳುವ ಇಲಾಖೆಯು ಪ್ರತಿ ವರ್ಷ ತನ್ನ ವೈಶಿಷ್ಟಪೂರ್ಣ ಸ್ತಬ್ಧಚಿತ್ರಗಳ ಮೂಲಕವೇ ದೇಶದ ಗಮನ ಸೆಳೆಯುತ್ತಿದೆ. ಈ ಬಾರಿ ಲಕ್ಕುಂಡಿಯ ಶಿಲ್ಪಕಲೆಯಿಂದ ಕೂಡಿರುವ ಐತಿಹಾಸಿಕ ದೇವಾಲಯಗಳು ಎಲ್ಲರನ್ನು ಮಂತ್ರಮುಗ್ಧರನ್ನಾಗಿಸಲು ಹೊರಟಿದೆ’ ಎಂದರು.

‘ಲಕ್ಕುಂಡಿಯು ಅಹಿಂಸಾವಾದಿಯ ನೆಲೆಬೀಡು. ಶಿಲ್ಪಕಲೆಯ ತೊಟ್ಟಿಲಾದ ಲಕ್ಕುಂಡಿಯಲ್ಲಿ ಶೈವ, ಜೈನ ಮತ್ತು ವೈಷ್ಣವ ದೇವಾಲಯಗಳಿವೆ. ಕಲಾತ್ಮಕತೆಯಿಂದ ಕಂಗೊಳಿಸುವ ಇಲ್ಲಿನ ದೇವಾಲಯಗಳು ಈ ಬಾರಿಯ ಸ್ತಬ್ಧಚಿತ್ರದಲ್ಲಿ ಅವುಗಳ ಪಡಿಯಚ್ಚಿನಂತೆ ಮೂಡಿಬಂದಿವೆ’ ಎಂದರು.

ಲಕ್ಕುಂಡಿಯ ಶಿಲ್ಪಕಲೆಯ ವೈಭವವನ್ನು ಅದರ ಪ್ರತಿರೂಪದಂತೆ ‘ಕೆತ್ತುವ’ ಭಾರಿ ಸವಾಲು ಎದುರಾಗಿತ್ತು. ಆರಂಭದಲ್ಲಿ ದೆಹಲಿಯಲ್ಲಿ ಕವಿದಿದ್ದ ದಟ್ಟ ಮಂಜು, ಹೊಂಜು ಮತ್ತು ಮಳೆ ಎಲ್ಲವೂ ಸವಾಲುಗಳಾಗಿ ಕಂಡಿದ್ದವು. ಕಡಿಮೆ ಅವಧಿಯಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಸ್ತಬ್ಧಚಿತ್ರ ಕಣ್ಣಿಗೆ ಕಟ್ಟುವಂತೆ ಮೂಡಿಬಂದಿದೆ. ಅಂತರರಾಷ್ಟ್ರೀಯ ಖ್ಯಾತಿಯ ಕಲಾ ನಿರ್ದೇಶಕ ಶಶಿಧರ ಅಡಪ ಅವರು ವಿನ್ಯಾಸ ಮಾಡಿದ ಮಾದರಿಗೆ ಆಯ್ಕೆ ಸಮಿತಿ ಮೊದಲ ಹಂತದಲ್ಲೇ ಅನುಮೋದನೆ ನೀಡಿತ್ತು. ಮೈಸೂರು, ಬೆಂಗಳೂರು, ಗದಗ ಮತ್ತು ಧಾರವಾಡದ 18 ಕಲಾವಿದರ ತಂಡವನ್ನು ಜಗ್ಗಲಿಗೆ ಕಲಾವಿದ ಲಿಂಗಯ್ಯ ಮುನ್ನಡೆಸುತ್ತಾರೆ. ಸ್ತಬ್ಧಚಿತ್ರದ ಇಕ್ಕೆಲಗಳಲ್ಲಿ ತಲಾ ನಾಲ್ವರು ಮಹಿಳೆಯರು ಮತ್ತು ಪುರುಷರು ಜಗ್ಗಲಿಗೆ ಬಾರಿಸುತ್ತಾ ಮುನ್ನಡೆಯಲಿದ್ದಾರೆ’ ಎಂದರು.

ಶರಾವತಿ ಯೋಜನೆಯಿಂದ ಪ್ರತಿಕೂಲ ಪರಿಣಾಮ ಇಲ್ಲ: ಕೆಪಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯಿಂದ ಪಶ್ಚಿಮ ಘಟ್ಟದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವುದಿಲ್ಲ ಎಂದು ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿ) ಹೇಳಿದೆ.

‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿರುವ ‘ಶರಾವತಿ ಯೋಜನೆಯಿಂದ ಪಶ್ಚಿಮ ಘಟ್ಟಕ್ಕೆ ಆಪತ್ತು’ ವರದಿಗೆ ಸ್ಪಷ್ಟನೆ ನೀಡಿರುವ ನಿಗಮವು, ‘ಡಿಸಿಎಫ್‌ಗಳು ಯೋಜನೆ ಜಾರಿಗೆ ಸಂಬಂಧಿಸಿದಂತೆ ಕೆಲವು ಷರತ್ತುಗಳನ್ನು ವಿಧಿಸಿದ್ದಾರೆ. ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ಸೇರಿದಂತೆ ವಿವಿಧ ಇಲಾಖೆಗಳ ನಿಯಮಗಳ ಅನ್ವಯ ಕಾರ್ಯಾಚರಣೆ ಮಾಡಬೇಕು ಎಂದು ಹೇಳಿದ್ದಾರೆ. ನಿಯಮಗಳನ್ನು ಅನುಸರಿಸಿದರೆ ಮಾತ್ರ ಯೋಜನೆಗೆ ಇಲಾಖೆಗಳು ಅನುಮತಿ ನೀಡುತ್ತವೆ’ ಎಂದು ತಿಳಿಸಿದೆ.

‘ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಜಲವಿದ್ಯುತ್ ಯೋಜನೆ ಕೈಗೆತ್ತಿಕೊಳ್ಳುವಂತಿಲ್ಲ ಎಂದು ಕೇಂದ್ರ ಪರಿಸರ ಸಚಿವಾಲಯ 2011ರಲ್ಲಿ ಸುತ್ತೋಲೆ ಹೊರಡಿಸಿರುವುದು ಮತ್ತು ಈ ಯೋಜನೆಯು ಶರಾವತಿ ವನ್ಯಜೀವಿಧಾಮದ ಪರಿಸರ ಸೂಕ್ಷ್ಮ ಪ್ರದೇಶದಲ್ಲೇ ಕಾರ್ಯಗತಗೊಳ್ಳುತ್ತಿದೆ ಎಂಬುದು ಹೌದಾದರೂ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಜಲ ವಿದ್ಯುತ್ ಯೋಜನೆಯೊಂದಿಗೆ ಸಮೀಕರಿಸುವುದು ಸರಿಯಲ್ಲ. ಏಕೆಂದರೆ, ಜಲ ವಿದ್ಯುತ್ ಯೋಜನೆ ಎಂಬುದು ಪಂಪ್ಡ್ ಸ್ಟೋರೇಜ್ ಯೋಜನೆಗಿಂತ ವಿಭಿನ್ನವಾಗಿದ್ದು, ಈ ಯೋಜನೆಯಡಿ ಜಲಾಶಯಗಳನ್ನು ನಿರ್ಮಿಸುವ ಅಗತ್ಯ ಇರುವುದಿಲ್ಲ. ಈಗಿರುವ ಜಲಾಶಯಗಳನ್ನೇ ಬಳಸಿಕೊಂಡು ವಿದ್ಯುತ್ ಉತ್ಪಾದನೆ ಮತ್ತು ಶೇಖರಣೆ ಮಾಡುವುದರಿಂದ ಈ ಸ್ಥಳ ಪಂಪ್ಡ್ ಸ್ಟೋರೇಜ್ ಯೋಜನೆಗೆ ಸೂಕ್ತವಾದ ಪ್ರದೇಶ. ಇಲ್ಲಿ ಯಾವುದೇ ಹೊಸ ಜಲಾಶಯಗಳ ನಿರ್ಮಾಣ ಮಾಡದೇ ಇರುವುದರಿಂದ ಪ್ರಸ್ತುತ ಇರುವ ನದಿಯ ಹರಿವಿನಲ್ಲಿ ಯಾವುದೇ ಮಾರ್ಪಾಡು ಆಗುವುದಿಲ್ಲ’ ಎಂದು ನಿಗಮ ಸ್ಪಷ್ಟಪಡಿಸಿದೆ.

ಹಸಿರು ಬಣ್ಣಕ್ಕೆ ತಿರುಗಿದ ನದಿ ನೀರು ಸಕ್ಕರೆ ಕಾರ್ಖಾನೆಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಗದಗ: ‘ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಕೊರ್ಲಹಳ್ಳಿ ಗಂಗಾಪುರ ನಡುವೆ ಹರಿದಿರುವ ತುಂಗಭದ್ರಾ ನದಿ ನೀರು ಹಸಿರುಬಣ್ಣಕ್ಕೆ ತಿರುಗಿದ್ದು, ಈ ಸಂಬಂಧ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ವಿಜಯನಗರ ಶುಗರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ನೋಟಿಸ್ ಜಾರಿ ಮಾಡಿದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

‘ಸಕ್ಕರೆ ಕಾರ್ಖಾನೆಯವರು ಅಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಂಸ್ಕರಣೆ ಮಾಡದೇ ನದಿ, ಕಾಲುವೆ, ಕೆರೆ ಅಥವಾ ಬಯಲು ಪ್ರದೇಶಕ್ಕೆ ಅವೈಜ್ಞಾನಿಕ ರೀತಿ ಹೊರಬಿಡದಂತೆ ಆದೇಶದಲ್ಲಿ ಸೂಚಿಸಲಾಗಿದೆ. ಕಾರ್ಖಾನೆಯವರು ಸರ್ಕಾರದ ಆದೇಶ ಪಾಲಿಸುತ್ತಿದೆಯೋ ಇಲ್ಲವೋ ಎಂಬುದರ ಬಗ್ಗೆ ಜಿಲ್ಲಾಧಿಕಾರಿ ನೇತೃತ್ವದ ಉನ್ನತ ಸಮಿತಿ ನಿಗಾ ವಹಿಸಲಿದೆ’ ಎಂದು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

‘ಮೈಕ್ರೋ ಫೈನಾನ್ಸ್ ಸಂಸ್ಥೆಗಳ ದಂಧೆ ಹಾಗೂ ಮೀಟರ್ ಬಡ್ಡಿ ಮಾಫಿಯಾಕ್ಕೆ ಕಡಿವಾಣ ಹಾಕಲು ನೂತನ ಕಾಯ್ದೆ ಜಾರಿ ತರಲು ಸರ್ಕಾರ ನಿರ್ಧರಿಸಿದೆ. ಮುಂದಿನ ಅಧಿವೇಶನದಲ್ಲಿ ವಿಧೇಯಕ ಮಂಡಿಸಲಾಗುವುದು. ಬಡವರು, ಮಧ್ಯಮ ವರ್ಗದವರ ಶೋಷಣೆ ತಡೆಗಟ್ಟುವುದು ಹಾಗೂ ಅವರನ್ನು ರಕ್ಷಿಸುವುದು ಸರ್ಕಾರದ ಉದ್ದೇಶ’ ಎಂದರು.

ಜೇನು ಹುಳುಗಳು ಕಚ್ಚಿ ರೈತ ಸಾವು

ಪ್ರಜಾವಾಣಿ ವಾರ್ತೆ

ಕುಂದಗೋಳ (ಧಾರವಾಡ ಜಿಲ್ಲೆ): ಜೇನು ಹುಳುಗಳು ಕಚ್ಚಿ ಪಟ್ಟಣದ ರೈತ ಗಂಗಪ್ಪ ಚನ್ನಬಸಪ್ಪ ಕುಂದಗೋಳ (65) ಬುಧವಾರ ಮೃತಪಟ್ಟಿದ್ದಾರೆ. ಸ್ಥಳದಲ್ಲಿದ್ದ ಸುಭಾಸ ಬಸಪ್ಪ ಹೋಳಿ ಎಂಬುವರಿಗೂ ಕಚ್ಚಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಬೆನಕನಹಳ್ಳಿ ಮಾರ್ಗದಲ್ಲಿನ ಹೊಲದಲ್ಲಿ ಎತ್ತುಗಳನ್ನು ಕಟ್ಟುವ ಸಂದರ್ಭದಲ್ಲಿ ಜೇನು ಹುಳುಗಳು ಕಚ್ಚಿವೆ ಎಂದು ಕುಂದಗೋಳ ಠಾಣೆ ಪೊಲೀಸರು ತಿಳಿಸಿದ್ದಾರೆ.

ಜೆಇಇ ಪರೀಕ್ಷೆಗೆ ತಾಂತ್ರಿಕ ಅಡಚಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಬೆಂಗಳೂರಿನ ವಿವಿಧ ಕೇಂದ್ರಗಳಲ್ಲಿ ಬುಧವಾರ ನಡೆಸಿದ ಜಂಟಿ ಪ್ರವೇಶ ಪರೀಕ್ಷೆ (ಜೆಇಇ-ಮುಖ್ಯ-2025) ಅವ್ಯವಸ್ಥೆಯ ಆಗರವಾಗಿತ್ತು ಎಂದು ಹಲವು ಪೋಷಕರು ದೂರಿದರು.

ಬಿ.ಇ ಹಾಗೂ ಬಿ.ಟೆಕ್‌ನ ಪತ್ರಿಕೆ-1 ಬೆಳಿಗ್ಗೆ 9ರಿಂದ 12 ಹಾಗೂ ವಾಸ್ತುಶಿಲ್ಪಶಾಸ್ತ್ರ, ಯೋಜನಾ ವಿಷಯಗಳ ಪರೀಕ್ಷೆ ಮಧ್ಯಾಹ್ನ 3ರಿಂದ ಸಂಜೆ 6ರವರೆಗೆ ಇತ್ತು. ಆನ್‌ಲೈನ್ ಪರೀಕ್ಷೆ ವೇಳೆ ಕೆಲ ಕೇಂದ್ರಗಳಲ್ಲಿ ಕಂಪ್ಯೂಟರ್‌ಗಳಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದೆ. ಕಂಪ್ಯೂಟರ್‌ಗಳು ಆಫ್ ಆಗುವುದು, ಸ್ವಲ್ಪ ಸಮಯದ ನಂತರ ಮತ್ತೆ ಆರಂಭವಾಗುವುದು, ಬರೆದದ್ದು ಅಳಿಸಿಹೋಗುವುದು ಮತ್ತಿತರ ಸಮಸ್ಯೆಗಳಿಂದ ವಿದ್ಯಾರ್ಥಿಗಳು ವಿಚಲಿತರಾಗಿದ್ದಾರೆ.

‘ಆರ್.ಟಿ ನಗರದ ಕೇಂದ್ರವೊಂದರಲ್ಲಿ ಮಕ್ಕಳು ಹಲವು ಸಮಸ್ಯೆ ಎದುರಿಸಿದರು. ಇದರಿಂದ ಸಾಕಷ್ಟು ಸಮಯ ವ್ಯರ್ಥವಾಯಿತು. ಸಮಸ್ಯೆಗಳಿಂದಾಗಿ ಮಕ್ಕಳ ಏಕಾಗ್ರತೆಗೆ ಧಕ್ಕೆಯಾಯಿತು. ಸಾಕಷ್ಟು ಸಮಯ ವ್ಯರ್ಥವಾಯಿತು’ ಎಂದು ಪೋಷಕರಾದ ಶ್ಯಾಮಲಾ ದೂರಿದರು.

ಪುರುಷ–ಮಹಿಳೆ ಎಂಬ ಭಿನ್ನತೆ ತೋರದ ತಟಸ್ಥ ಮನೋಭಾವದ ಸಮಾಜ ಇಂದಿನ ತುರ್ತು

ಗಂಡೂ ಕ್ರೌರ್ಯಕ್ಕೆ ಈಡು: ಹೈಕೋರ್ಟ್

ಪ್ರಜಾವಾಣಿ ವಾರ್ತೆ



ಹೈಕೋರ್ಟ್

ಬೆಂಗಳೂರು: ‘ಕೌಟುಂಬಿಕ ಕಲಹದ ಪರಿಣಾಮ ಪತಿ-ಪತ್ನಿಯವರ ಮಧ್ಯೆ ಉಂಟಾಗುವ ವ್ಯಾಜ್ಯಗಳಲ್ಲಿ ಬಹಳಷ್ಟು ಬಾರಿ ಮಹಿಳೆಯರೇ ನೊಂದವರು ಎಂಬ ಭಾವನೆ ಸಾಮಾನ್ಯವಾಗಿರುತ್ತದೆ. ಅಂದರೆ, ಅದರರ್ಥ ಗಂಡಸರು ತೊಂದರೆಗೆ ಒಳಗಾಗುವುದೇ ಇಲ್ಲ ಎಂದು ಹೇಳಲು ಆಗದು. ಎಷ್ಟೋ ಬಾರಿ ಪುರುಷರೂ ಕೌಟುಂಬಿಕ ಕಲಹಗಳಲ್ಲಿ ಕ್ರೌರ್ಯ ಅನುಭವಿಸಿರುತ್ತಾರೆ. ಹಾಗಾಗಿ, ಪುರುಷ-ಮಹಿಳೆ ಎಂಬ ಭಿನ್ನತೆ ತೋರದ ತಟಸ್ಥ ಮನೋಭಾವದ ಸಮಾಜ ಇಂದಿನ ಜರೂರತ್ತಾಗಿದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ಕೌಟುಂಬಿಕ ಕಲಹದ ಪರಿಣಾಮ ವಿವಾಹ ವಿಚ್ಛೇದನ ಕೋರಿರುವ ನಮ್ಮ ಮಧ್ಯದ ದಾವೆಯನ್ನು ನಾನು ವಾಸಿಸುತ್ತಿರುವ ಊರಿಗೆ ಸಮೀಪದ ಕೋರ್ಟ್‌ಗೆ ಸ್ಥಳಾಂತರಿಸಲು ಆದೇಶಿಸಬೇಕು’ ಎಂದು ಕೋರಿ ಮಹಿಳೆಯೊಬ್ಬರು ಸಲ್ಲಿಸಿದ್ದ ಸಿವಿಲ್ ದಾವೆ ವಜಾಗೊಳಿಸಿರುವ ನ್ಯಾಯಮೂರ್ತಿ ಚಿಲ್ಲಕೂರು ಸುಮಲತಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ತನ್ನ ಆದೇಶದಲ್ಲಿ ವಿವರಿಸಿದೆ.

‘ನನ್ನ ಪತ್ನಿಯ ಮನವಿಯನ್ನು ತಿರಸ್ಕರಿಸಬೇಕು’ ಎಂದು ಪ್ರತಿಪಾದಿಸಿದ್ದ ಪತಿಯ ಮನವಿಯನ್ನು ಎತ್ತಿ ಹಿಡಿದಿರುವ ನ್ಯಾಯಪೀಠ, ‘ಪ್ರತಿವಾದಿಯಾಗಿರುವ ಗಂಡ ಅರ್ಜಿದಾರ ಪತ್ನಿಗೆ ಜನಿಸಿರುವ ಇಬ್ಬರು ಮಕ್ಕಳನ್ನು ನೋಡಿಕೊಳ್ಳುತ್ತಿದ್ದಾರೆ. ಅವರಿಬ್ಬರಿಗೂ ಈಗ ಕ್ರಮವಾಗಿ ಒಂಬತ್ತು ಮತ್ತು ಏಳು ವರ್ಷವಾಗಿದೆ. ಬೆಳಿಗ್ಗೆ ಎದ್ದ ತಕ್ಷಣ ಅವರಿಬ್ಬರನ್ನೂ ಶಾಲೆಗೆ ಕಳುಹಿಸಲು ತಯಾರುಗೊಳಿಸಬೇಕು. ತಿಂಡಿ-ಊಟ ಸಿದ್ಧಪಡಿಸಿಕೊಡಬೇಕು ಎಂಬ ಅವರ ವಾದ ಸರಿಯಾಗಿಯೇ ಇದೆ’ ಎಂದು ನ್ಯಾಯಪೀಠ ಹೇಳಿದೆ.

‘ಸಾಂವಿಧಾನಿಕವಾಗಿ ಪುರುಷರಷ್ಟೇ ಸಮಾನ ಹಕ್ಕುಗಳು ಮಹಿಳೆಯರಿಗೂ ಇವೆ ನಿಜ. ವಾಸ್ತವವಾಗಿ ಹೆಚ್ಚಿನ ಸಂದರ್ಭಗಳಲ್ಲಿ ಮಹಿಳೆಯರೇ ಪ್ರಾಥಮಿಕ ಬಲಿಪಶುಗಳಾಗಿರುತ್ತಾರೆ. ಅದರರ್ಥ ಮಹಿಳೆಯರಿಂದ ಪುರುಷರ ಮೇಲೆ ಕ್ರೌರ್ಯವೇ ನಡೆಯುವುದಿಲ್ಲ ಎಂದಲ್ಲ’ ಎಂದು ನ್ಯಾಯಪೀಠ ಹೇಳಿದೆ.

‘ಲಿಂಗ ತಟಸ್ಥ ಸಮಾಜ ಇಂದಿನ ಅಗತ್ಯ. ಅಂತಹ ಸಮಾಜವು ಹೆಣ್ಣು-ಗಂಡು ಎಂಬ ಪ್ರತ್ಯೇಕತೆಯನ್ನು ತಡೆಗಟ್ಟುವ ಗುರಿ ಹೊಂದಿರಬೇಕು. ಈ ನಿಜಾರ್ಥದಲ್ಲಿ ಹೆಣ್ಣು-ಗಂಡಿನ ಸಮಾನತೆ ಕೇವಲ ಮನೆ ಮಾತ್ರವಲ್ಲದೆ ಕೆಲಸ ನಿರ್ವಹಿಸುವ ಸ್ಥಳಗಳಲ್ಲೂ ಪ್ರತಿಬಿಂಬಿತವಾಗಬೇಕು. ಆದಾಗ್ಯೂ, ಇಂದಿನ ದಿನಮಾನಗಳಲ್ಲಿ ಪುರುಷರು ಎದುರಿಸುತ್ತಿರುವ ಸವಾಲುಗಳನ್ನು ಸಮಾಜ ಸುಲಭವಾಗಿ ಕಡೆಗಣಿಸಲು ಆಗದು’ ಎಂದು ನ್ಯಾಯಪೀಠ ತಿಳಿಸಿದೆ.

ಅರ್ಜಿ ಏನಿತ್ತು?: ‘ವಿಚ್ಛೇದನ ಕೋರಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸುತ್ತಿರುವ ನ್ಯಾಯಾಲಯ ನನ್ನ ಮನೆಯಿಂದ 130 ಕಿ.ಮೀ. ದೂರದಲ್ಲಿದೆ. ವಿಚಾರಣೆಗೆ ಹೋಗಿಬರಲು ಕಷ್ಟವಾಗುತ್ತದೆ. ಆದ್ದರಿಂದ, ಪ್ರಕರಣವನ್ನು ಸಮೀಪದ ಕೋರ್ಟ್‌ಗೆ ವರ್ಗಾವಣೆ ಮಾಡಬೇಕು’ ಎಂದು ಪತ್ನಿ ಕೋರಿದ್ದರು. ಇದನ್ನು ಒಪ್ಪದ ನ್ಯಾಯಪೀಠ, ‘ಪತ್ನಿಯ ಮನವಿಯನ್ನು ಪುರಸ್ಕರಿಸಿದರೆ ಪತಿಗೆ ಇನ್ನಷ್ಟು ತೊಂದರೆ ಉಂಟಾಗುತ್ತದೆ’ ಎಂದು ಅರ್ಜಿಯನ್ನು ವಜಾಗೊಳಿಸಿದೆ. ಪತಿಯ ಪರವಾಗಿ ಹೈಕೋರ್ಟ್ ವಕೀಲ ಕೆ.ನಾಗಲಿಂಗಪ್ಪ ವಾದ ಮಂಡಿಸಿದ್ದರು.

ಕರ್ನಾಟಕದಲ್ಲಿ ಮಹಾರಾಷ್ಟ್ರವೇ–ಕೋರ್ಟ್ ಪ್ರಶ್ನೆ


ಬೆಂಗಳೂರು: ‘ಬೆಳಗಾವಿಯಲ್ಲಿ ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವ ವಿರೋಧಿಸಿ ಕರಾಳ ದಿನ ಆಚರಿಸುವುದಕ್ಕೆ ಸಂಬಂಧಿಸಿದಂತೆ ನಿಮ್ಮ ನಿಲುವು ಏನೆಂಬುದನ್ನು ಸ್ಪಷ್ಟಪಡಿಸಿ’ ಎಂದು ಹೈಕೋರ್ಟ್, ಮಹಾರಾಷ್ಟ್ರ ಏಕೀಕರಣ ಸಮಿತಿಗೆ (ಎಂಇಎಸ್) ನಿರ್ದೇಶಿಸಿದೆ.

ಈ ಸಂಬಂಧ ಬೆಳಗಾವಿ ಜಿಲ್ಲೆ ಹುಕ್ಕೇರಿಯ ಎಂ.ವಡಗಾಂವ್‌ನ ಮಲ್ಲಪ್ಪ ಛಾಯಪ್ಪ ಅಕ್ಷರದ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎನ್.ಪಿ.ಅಮೃತೇಶ್, ‘ರಾಜ್ಯದಲ್ಲಿ ಪ್ರತಿವರ್ಷ ನವೆಂಬರ್ 1ರಂದು ಆಚರಿಸಲಾಗುವ ಕನ್ನಡ ರಾಜ್ಯೋತ್ಸವ, ಕರ್ನಾಟಕ ಹಾಗೂ ಕನ್ನಡಿಗರ ಹೃದಯದೊಂದಿಗೆ ಬೆಸೆದುಕೊಂಡಿದೆ. ಆದರೆ, ಗಡಿ ವಿವಾದ ಇರುವ ಬೆಳಗಾವಿ ಜಿಲ್ಲೆಯಲ್ಲಿ ಮಾತ್ರ ಎಂಇಎಸ್ ರಾಜ್ಯೋತ್ಸವದ ದಿನದಂದೇ ಕರಾಳ ದಿನ ಆಚರಿಸಿಕೊಂಡು ಬರುತ್ತಿದೆ. ಮೇಲಾಗಿ, ಕರಾಳ ದಿನ ಆಚರಿಸಲು ರಾಜ್ಯದ ಪೊಲೀಸರೇ ಭದ್ರತೆ ಒದಗಿಸುತ್ತಿದ್ದಾರೆ ಎಂದು ಆಕ್ಷೇಪಿಸಿದರು.

‘ಕರಾಳ ದಿನ ಆಚರಣೆ ನಿರ್ಬಂಧಿಸಬೇಕು ಎಂದು ಕೋರಲಾಗಿರುವ ಈ ಪಿಐಎಲ್‌ಗೆ ಸಂಬಂಧಿಸಿದಂತೆ ಹೈಕೋರ್ಟ್, ಅಕ್ಟೋಬರ್ 30ರಂದು ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ಆದರೆ, ಅದಾದ ನಂತರವೂ 2024ರ ನವೆಂಬರ್ 1ರಂದು ಪುನಃ ಕರಾಳ ದಿನ ಆಚರಿಸಿ, ಮೆರವಣಿಗೆ ನಡೆಸಲಾಗಿದೆ. ಇದಕ್ಕೆ ಸಂಬಂಧಿಸಿದ ಫೋಟೊಗಳು ಹಾಗೂ ಮರಾಠಿ ದಿನಪತ್ರಿಕೆಗಳ ವರದಿಗಳನ್ನು ಒಳಗೊಂಡ ಜ್ಞಾಪನಾ ಪತ್ರವನ್ನು (ಮೆಮೊ) ನವೆಂಬರ್ 5ರಂದು ಕೋರ್ಟ್‌ಗೆ ಸಲ್ಲಿಸಲಾಗಿದೆ’ ಎಂಬುದನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಎಂಇಎಸ್ ಪರವಾಗಿ ಯಾರು ಹಾಜರಾಗುತ್ತಿದ್ದಾರೆ’ ಎಂದು ಪ್ರಶ್ನಿಸಿತಲ್ಲದೆ, ‘ಕರ್ನಾಟಕದಲ್ಲಿ ಮಹಾರಾಷ್ಟ್ರವೇ? ಎಂದು ಲಘುಧಾಟಿಯಲ್ಲಿ ಅವರ ಪರ ವಕೀಲರನ್ನು ಪ್ರಶ್ನಿಸಿತು. ಅಂತೆಯೇ, ‘ಪ್ರಕರಣದಲ್ಲಿ ನಿಮ್ಮ ನಿಲುವೇನು ಎಂಬುದನ್ನು ಮುಂದಿನ ವಿಚಾರಣೆಯೊಳಗೆ ಸ್ಪಷ್ಟಪಡಿಸಿ’ ಎಂದು ಎಂಇಎಸ್ ಪರ ವಕೀಲರಿಗೆ ತಾಕೀತು ಮಾಡಿ ವಿಚಾರಣೆಯನ್ನು ಫೆಬ್ರುವರಿ 18ಕ್ಕೆ ಮುಂದೂಡಿತು.



ಮಹಾಮಸ್ತಕಾಭಿಷೇಕ...

ಹುಬ್ಬಳ್ಳಿ ಸಮೀಪದ ವರೂರಿನ ನವಗ್ರಹ ತೀರ್ಥಕ್ಷೇತ್ರದಲ್ಲಿ ಬುಧವಾರ ಪಂಚಕಲ್ಯಾಣಕ ಪ್ರತಿಷ್ಠಾ ಮಹೋತ್ಸವದ ಪ್ರಯುಕ್ತ ಪಾರ್ಶ್ವನಾಥರ 61 ಅಡಿ ಎತ್ತರದ ಬೃಹತ್ ಮೂರ್ತಿಗೆ ಮಹಾಮಸ್ತಕಾಭಿಷೇಕ ಸಂಭ್ರಮದಿಂದ ನೆರವೇರಿತು ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಸಂಗೀತ ವಿವಿ: ನಾಗೇಶ್ ಮುಂದುವರಿಕೆ

ಪ್ರಜಾವಾಣಿ ವಾರ್ತೆ



ಪ್ರೊ.ನಾಗೇಶ್ ವಿ.ಬೆಟ್ಟಕೋಟೆ

ಮೈಸೂರು: ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅವರನ್ನು ಇಲ್ಲಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಕುಲಪತಿಯಾಗಿ 6 ತಿಂಗಳ ಅವಧಿವರೆಗೆ ಮುಂದುವರಿಸಲಾಗಿದೆ.

ನಾಗೇಶ್ ಅವರ ಅಧಿಕಾರದ ಅವಧಿಯು ಬುಧವಾರ ಪೂರ್ಣಗೊಂಡಿತ್ತು. ಹೊಸ ಕುಲಪತಿ ನೇಮಕಕ್ಕೆ ಶೋಧನಾ ಸಮಿತಿಯನ್ನು ರಾಜ್ಯ ಸರ್ಕಾರ ರಚಿಸದ ಕಾರಣ ಹಾಗೂ ವಿಶ್ವವಿದ್ಯಾಲಯದ ಆಡಳಿತವು ಸುಗಮವಾಗಿ ನಡೆಯಲು ಪ್ರಭಾರ ಕುಲಪತಿಯಾಗಿ ನಾಗೇಶ್ ಅವರನ್ನು ಜ.23ರಿಂದ ನಿಯೋಜಿಸಿ ರಾಜ್ಯಪಾಲರು ಬುಧವಾರ ಆದೇಶ ಹೊರಡಿಸಿದ್ದಾರೆ. ನೂತನ ಕುಲಪತಿ ನೇಮಕವಾಗುವವರೆಗೂ ಆದೇಶ ಜಾರಿಯಲ್ಲಿರುತ್ತದೆ ಎಂದು ತಿಳಿಸಲಾಗಿದೆ.

ಮನೆಗೆ ಬಂದವರನ್ನೂ ಅನುಮಾನಿಸುವ ಸ್ಥಿತಿ

ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪ್ರದಾನ; ಸಾಹಿತಿ ಅಲ್ಲಮಪ್ರಭು ಕಳವಳ

ಪ್ರಜಾವಾಣಿ ವಾರ್ತೆ

ಕೊಪ್ಪಳ: ‘ಸಾಹಿತ್ಯದ ಮೂಲಕ ತಮ್ಮ ವಿಚಾರಗಳನ್ನು ಮುಕ್ತವಾಗಿ ಹೇಳಿದವರನ್ನು ಕೊಲ್ಲಿಸಲಾಗುತ್ತಿದೆ. ಹಿಂದಿನ ಹಲವು ವರ್ಷಗಳಿಂದ ಲೇಖಕರು ತೊಂದರೆ ಎದುರಿಸುತ್ತಿದ್ದು, ಮನೆಗೆ ಬಂದವರನ್ನೂ ಅನುಮಾನದಿಂದ ನೋಡುವ ಸ್ಥಿತಿ ಎದುರಾಗಿದೆ’ ಎಂದು ಬಂಡಾಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಬುಧವಾರ ನಡೆದ ಕರ್ನಾಟಕ ಸಾಹಿತ್ಯ ಅಕಾಡೆಮಿಯ 2021ನೇ ಸಾಲಿನ ಪುಸ್ತಕ ಬಹುಮಾನ, ದತ್ತಿ ಪುಸ್ತಕ ಬಹುಮಾನ, 2022ನೇ ಸಾಲಿನ ಗೌರವ ಪ್ರಶಸ್ತಿ ಮತ್ತು ಸಾಹಿತ್ಯ ಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅಭಿನಂದನಾ ನುಡಿಗಳನ್ನಾಡಿದ ಅವರು ‘ಮೌಢ್ಯ ನಿರಾಕರಿಸಿ ವೈಜ್ಞಾನಿಕ ವಿಚಾರದಿಂದ ಬರೆಯುವುದು ತಪ್ಪೇ’ ಎಂದು ಪ್ರಶ್ನಿಸಿದರು.

‘ಕರ್ನಾಟಕದಲ್ಲಿ ಕನ್ನಡವೇ ಕಲಿಕಾ ಭಾಷೆಯಾಗಬೇಕು. ಆಡಳಿತದಲ್ಲಿ ಕಡ್ಡಾಯವಾಗಿ ಕನ್ನಡ ಜಾರಿಗೊಳ್ಳಬೇಕು. ಹಿಂದಿ ರಾಷ್ಟ್ರಭಾಷೆ ಎಂದು ಹೇರುವ ಪ್ರಯತ್ನ ನಡೆಯುತ್ತಿದ್ದು, ಭಾರತ ಬಹುಸಂಸ್ಕೃತಿ, ಬಹು ಆಯಾಮಗಳನ್ನು ಹೊಂದಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿ.ಆರ್. ಅಂಬೇಡ್ಕರ್ ಬದಲು ದೇವರನ್ನು ಸ್ಮರಿಸಿ ಎನ್ನುತ್ತಿದ್ದಾರೆ. ಇಂಥ ಸರ್ಕಾರದಿಂದ ಲೇಖಕರು ಏನು ತಾನೆ ನಿರೀಕ್ಷೆ ಮಾಡಲು ಸಾಧ್ಯ’ ಎಂದು ಪ್ರಶ್ನಿಸಿದರು.

ಪ್ರಶಸ್ತಿ ಪ್ರದಾನ ಮಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆ ಸಚಿವ ಶಿವರಾಜ ತಂಗಡಗಿ, ‘ಹಿಂದಿನ ಸರ್ಕಾರ ಅಕಾಡೆಮಿ ಹಾಗೂ ಪ್ರಾಧಿಕಾರಗಳ ಬಲ ಕುಗ್ಗಿಸಿತ್ತು. ನಮ್ಮ ಸರ್ಕಾರ ಪ್ರತಿ ಅಕಾಡೆಮಿಗೂ ವಾರ್ಷಿಕ ₹80 ಲಕ್ಷ ಅನುದಾನ ನೀಡಿದೆ. ಬೆಂಗಳೂರು, ಮೈಸೂರು ಭಾಗಕ್ಕೆ ಸೀಮಿತವಾಗಿದ್ದ ಇವುಗಳ ಕಾರ್ಯಚಟುವಟಿಕೆಗಳನ್ನು ಉತ್ತರ ಕರ್ನಾಟಕಕ್ಕೂ ವಿಸ್ತರಿಸಲಾಗುತ್ತಿದೆ’ ಎಂದು ತಿಳಿಸಿದರು.

ನಾಲ್ಕು ಜನರಿಗೆ ಗೌರವ ಪ್ರಶಸ್ತಿ, 10 ಜನರಿಗೆ ಸಾಹಿತ್ಯ ಶ್ರೀ, 17 ಬರಹಗಾರರಿಗೆ ಪುಸ್ತಕ ಬಹುಮಾನ ಮತ್ತು ಎಂಟು ಜನ ಲೇಖಕರಿಗೆ ಅಕಾಡೆಮಿಯ ಪುಸ್ತಕ ದತ್ತಿ ಬಹುಮಾನ ನೀಡಲಾಯಿತು.

ಇತ್ತೀಚೆಗೆ ನಿಧನರಾದ ಮುಜಾಫರ್ ಅಸ್ಸಾದಿ ಅವರಿಗೆ ಪುಸ್ತಕ ಬಹುಮಾನ ಲಭಿಸಿದ್ದು, ಅವರ ಪುತ್ರಿ ಪ್ರಶಸ್ತಿ ಸ್ವೀಕರಿಸಿದರು.



ಕೊಪ್ಪಳದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿವಿಧ ಪ್ರಶಸ್ತಿಗಳನ್ನು ಸಾಧಕರಿಗೆ ಪ್ರದಾನ ಮಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ, ಅಧಿಕಾರಿಗಳು, ಸಾಹಿತಿಗಳು ಪಾಲ್ಗೊಂಡಿದ್ದರು

ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ಜ. 27ರಂದು ಅದ್ದೂರಿ ಸಮಾರಂಭ ನಡೆಸಿ ಭುವನೇಶ್ವರಿ ದೇವಿ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗುವುದು
ಶಿವರಾಜ ತಂಗಡಗಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ

ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಸಾಹಿತಿಗಳಿಂದಲೇ ಪ್ರಶಸ್ತಿ ಕೊಡಿಸಿದ್ದರೆ ಚೆನ್ನಾಗಿತ್ತು. ಇನ್ನಷ್ಟು ಕೆಲಸ ಮಾಡಲು ಪ್ರೇರಣೆಯಾಗಿದೆ
ಅಗ್ರಹಾರ ಕೃಷ್ಣಮೂರ್ತಿ
ಪ್ರಶಸ್ತಿ ಪುರಸ್ಕೃತರು

ಮಾನವೀಯ ಮೌಲ್ಯಗಳನ್ನು ಜನರಲ್ಲಿ ಬಿತ್ತುವ ಕೆಲಸವನ್ನು ನಾವೆಲ್ಲರೂ ಮಾಡಬೇಕಿದೆ. ನನಗೆ ಲಭಿಸಿದ ಸಾಹಿತ್ಯಶ್ರೀ ಪ್ರಶಸ್ತಿ ಶೋಷಿತರ ಧ್ವನಿಯಾದ ಎಲ್ಲರಿಗೂ ಅರ್ಪಣೆ
ಅನಸೂಯ ಕಾಂಬಳೆ
ಪ್ರಶಸ್ತಿ ಪುರಸ್ಕೃತೆ

‘ಹೈಕಮಾಂಡ್ ಬಳಿ ಕುಣಿದಾಡಲು ಆಗದು’

ಪ್ರಜಾವಾಣಿ ವಾರ್ತೆ

ಅಥಣಿ (ಬೆಳಗಾವಿ ಜಿಲ್ಲೆ): ‘ವರಿಷ್ಠರ ತೀರ್ಮಾನದ ಹಿನ್ನೆಲೆಯಲ್ಲಿ ಪಕ್ಷದಲ್ಲಿ ಎಲ್ಲವೂ ಶಾಂತವಾಗಿದೆ. ಹೈಕಮಾಂಡ್ ಆದೇಶದ ಮುಂದೆ ನನಗೆ ಕುಣಿದಾಡಲು ಆಗದು. ಈಗ ಪಕ್ಷ ಸಂಘಟನೆಯಷ್ಟೇ ನನ್ನ ಗುರಿ’ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಅಥಣಿಯಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಈಗ ನಮ್ಮ ಎದುರು ಯಾವುದೇ ಹುದ್ದೆ ಬದಲಾವಣೆ ಪ್ರಸ್ತಾಪ ಇಲ್ಲ. ನಾನು ವರಿಷ್ಠರ ನಿರ್ಧಾರಕ್ಕೆ ಬದ್ಧನಾಗಿ ಕೆಲಸ ಮಾಡುವೆ. 2028ರಲ್ಲಿ ಕಾಂಗ್ರೆಸ್ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ತರುವುದೇ ನನ್ನ ಮುಂದಿನ ಗುರಿ’ ಎಂದರು.

‘ಮುಖ್ಯಮಂತ್ರಿ ಹುದ್ದೆಗಾಗಿ ಅಭಿಮಾನಿಗಳು ಪೂಜಿಸುವುದು ಹೊಸದಲ್ಲ. ಮೊದಲಿನಿಂದಲೂ ಪೂಜೆ ಮಾಡುವುದು ಅವರ ಅಭಿಮಾನ. ಮುಖ್ಯಮಂತ್ರಿ ಆಗಲು ಇನ್ನೂ ಕಾಲಾವಕಾಶ ಇದೆ. ಆದರೆ ತಾಳ್ಮೆಯಿಂದ ಕಾಯಬೇಕು’ ಎಂದರು.

‘ಡಿಕೆಶಿ ಸಿ.ಎಂ ಆಗುವುದನ್ನು ತಪ್ಪಿಸಲಾಗದು’

ಬೆಂಗಳೂರು: ವಿಧಾನಪರಿಷತ್ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್ ಅವರು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬುಧವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ಬಳಿಕ ಮಾತನಾಡಿದ ವಿಶ್ವನಾಥ್, ‘ಶಿವಕುಮಾರ್ ಮುಖ್ಯಮಂತ್ರಿ ಆಗುವುದನ್ನು ಯಾರೂ ತಪ್ಪಿಸಲು ಆಗುವುದಿಲ್ಲ’ ಎಂದರು. ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಮುಖ್ಯಮಂತ್ರಿ ಆಪ್ತರು ಒತ್ತಾಯಿಸುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಇದು ಅನವಶ್ಯಕವಾಗಿ ಮುಖ್ಯಮಂತ್ರಿ ಹಬ್ಬಿಸುತ್ತಿರುವ ಗೋಜಲು. ಕಾಂಗ್ರೆಸ್ ಪಕ್ಷದ ಹೆಸರು ಮತ್ತು ವರ್ಚಸ್ಸು ಹಾಳು ಮಾಡುತ್ತಿದ್ದಾರೆ. ಇವರೇನು ಕಾಂಗ್ರೆಸ್ ಕಟ್ಟಿದವರಲ್ಲವಲ್ಲ. ಅವರದ್ದು ಮುಗಿಯಿತಲ್ಲ. ಅವರಿಗೆ ಇನ್ನೇನಾಗಬೇಕು’ ಎಂದರು.

ಫೆ.15ರವರೆಗೆ ಅಟಲ್ ಸ್ಮೃತಿ ಸಂಕಲನ ಅಭಿಯಾನ

ಬೆಂಗಳೂರು: ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಜನ್ಮಶತಮಾನೋತ್ಸವದ ಅಂಗವಾಗಿ ಅವರನ್ನು ಸ್ಮರಿಸುವ ಸ್ಮೃತಿ ಸಂಕಲನ ಅಭಿಯಾನವು ಫೆ.15 ರವರೆಗೆ ನಡೆಯಲಿದೆ ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಈ ಅಭಿಯಾನದ ಭಾಗವಾಗಿ ವಾಜಪೇಯಿ ಅವರು ರಾಜ್ಯದಲ್ಲಿ ಭೇಟಿ ನೀಡಿದ್ದ ಸಂದರ್ಭದಲ್ಲಿ ಸೆರೆ ಹಿಡಿದ ಛಾಯಾ ಚಿತ್ರಗಳು, ಅವರ ಭಾಷಣಗಳು ಮತ್ತು ವಿವಿಧ ಜನರೊಂದಿಗೆ ನಡೆಸಿದ ಸಂವಾದದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಜನ್ಮ ಶತಮಾನೋತ್ಸವ ವರ್ಷದ ಆಚರಣೆಗಾಗಿ ಒಂದು ತಂಡವನ್ನು ರಚಿಸಲಾಗಿದೆ. ಫೆಬ್ರುವರಿ 15 ರಿಂದ ಮಾರ್ಚ್ 15 ರವರೆಗೆ ಜಿಲ್ಲಾ ಮಟ್ಟದಲ್ಲಿ ‘ಅಟಲ್ ವಿರಾಸತ್ ಸಮ್ಮೇಳನ’ ಆಯೋಜಿಸಲಾಗುವುದು. ಅಲ್ಲಿ ಅಟಲ್ ಅವರ ಕುರಿತ ಪುಸ್ತಕಗಳ ಪ್ರದರ್ಶನ, ಅಟಲ್ ಅವರ ಹೋರಾಟದ ಹಾದಿಯಲ್ಲಿ ಬೆಳೆದು ಬಂದ ವ್ಯಕ್ತಿಗಳಿಗೆ ಗೌರವ ಸಲ್ಲಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಅಟಲ್ ಅವರು ದೇಶದ ಅಪರೂಪದ ನಾಯಕ. ಯುವಪೀಳಿಗೆ ಮತ್ತು ನಾಗರಿಕರಿಗೆ ಅವರ ಕೊಡುಗೆ ಸಾಧನೆಯನ್ನು ಪರಿಚಯಿಸುವ ಪ್ರಯತ್ನ ಇದಾಗಿದೆ. ಇದಕ್ಕೆ ಎಲ್ಲ ರೀತಿಯ ತಯಾರಿಗಳನ್ನು ನಡೆಸಲಾಗುತ್ತಿದೆ ಎಂದರು.

ವಿಧಾನಪರಿಷತ್‌ನ ಮಾಜಿ ಸದಸ್ಯ ಡಾ.ಎ.ಎಚ್. ಶಿವಯೋಗಿಸ್ವಾಮಿ ಮಾತನಾಡಿ, ‘ಜಿಲ್ಲೆ, ಮಂಡಲಗಳಲ್ಲೂ ಈ ಉದ್ದೇಶಕ್ಕಾಗಿ ತಂಡಗಳನ್ನು ರಚಿಸಲಾಗಿದೆ. ವಾಜಪೇಯಿ ಅವರ ರಾಜ್ಯ ಪ್ರವಾಸಗಳ ಕುರಿತ ಮಾಹಿತಿಗಳನ್ನೂ ಸಂಗ್ರಹಿಸುತ್ತಿದ್ದೇವೆ. ಫೋಟೊಗಳು, ಸ್ಮರಣಫಲಕಗಳನ್ನು ಸಂಗ್ರಹಿಸುವ ಯೋಜನೆಯೂ ಇದೆ. ಫೆ. 14 ರಂದು ಸಂಗ್ರಹಿತ ಮಾಹಿತಿಯ ಪ್ರದರ್ಶನವೂ ನಡೆಯಲಿದೆ’ ಎಂದರು.

ಬಾಲಕಿ ರಕ್ಷಣೆ: ಯುವಕನ ಬಂಧನ

ಇನ್‌ಸ್ಟಾದಲ್ಲಿ ಪರಿಚಯ, ಜಾರ್ಖಂಡ್‌ನಿಂದ ಬಂದಿದ್ದ ಬಾಲಕಿ

● ಟಿ.ನಾಗೇಂದ್ರ

ಶಹಾಪುರ (ಯಾದಗಿರಿ ಜಿಲ್ಲೆ): ಸಾಮಾಜಿಕ ಜಾಲತಾಣವಾದ ಇನ್‌ಸ್ಟಾಗ್ರಾಮ್ ಮೂಲಕ ‘ಪ್ರೇಮಪಾಶ’ದಲ್ಲಿ ಬಂಧಿಯಾಗಿದ್ದ ಜೋಡಿಯನ್ನು ಮೊಬೈಲ್ ಲೊಕೇಶನ್ ಸುಳಿವಿನ ಮೇರೆಗೆ ಪತ್ತೆ ಹಚ್ಚಿದ ಪೊಲೀಸರು, ಯುವಕನನ್ನು ಮಂಗಳವಾರ ಬಂಧಿಸಿ, ಬಾಲಕಿಯನ್ನು ಜಾರ್ಖಂಡ್ ರಾಜ್ಯಕ್ಕೆ ಕರೆದುಕೊಂಡು ಹೋಗಿದ್ದಾರೆ.

ಶಹಾಪುರದ ಆಸಾರ್ ಮೊಹಲ್ಲಾ ನಿವಾಸಿ ಮಹ್ಮದ್ ತಕಿ ಸಿರಾಜುದ್ದೀನ್ ದರವೇಶಿ (21) ಬಂಧಿತ ಯುವಕ.

ಜಾರ್ಖಂಡ್ ರಾಜ್ಯದಿಂದ ಶಹಾಪುರ ನಗರಕ್ಕೆ ಮಂಗಳವಾರ ಬಂದ ಅಲ್ಲಿನ ಪೊಲೀಸ್ ತಂಡವು, ಸ್ಥಳೀಯ ಠಾಣೆಯ ನೆರವು ಪಡೆದು ಮಹ್ಮದ ತಕಿಯನ್ನು ಬಂಧಿಸಿ, 17 ವರ್ಷದ ಬಾಲಕಿಯನ್ನು ವಶಕ್ಕೆ ಪಡೆದಿದೆ. ನಂತರ ಶಹಾಪುರ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿ, ಜಾರ್ಖಂಡ್ ರಾಜ್ಯಕ್ಕೆ ಕರೆದುಕೊಂಡು ಹೋಗಿದ್ದಾರೆ ಎಂದು ಪೊಲೀಸ್ ಠಾಣೆಯ ಅಧಿಕಾರಿಗಳು ತಿಳಿಸಿದ್ದಾರೆ.

‘ನನ್ನ ಮಗಳು ನಾಪತ್ತೆಯಾಗಿದ್ದಾಳೆ. ಯಾರೋ ಆಮಿಷವೊಡ್ಡಿ ಆಕೆಯನ್ನು ಕರೆದುಕೊಂಡು ಹೋಗಿದ್ದಾರೆ’ ಎಂದು ಆರೋಪಿಸಿ ಬಾಲಕಿಯ ತಂದೆಯು ಜಾರ್ಖಂಡ್ ರಾಜ್ಯದ ಬರ್ಸೈತಾ ಪೊಲೀಸ್ ಠಾಣೆಯಲ್ಲಿ ಸೆಪ್ಟೆಂಬರ್ 30ರಂದು (ಕ್ರೈಮ್ ನಂಬರ್ 117/2024) ದೂರು ದಾಖಲಿಸಿದ್ದರು. ಅದರ ಆಧಾರದ ಮೇಲೆ ಮಹ್ಮದ್ ತಕಿ ಅವರನ್ನು ಬಂಧಿಸಿದ್ದಾರೆ ಎಂದು ಠಾಣೆಯ ಪ್ಯಾನಲ್ ವಕೀಲೆ ಸತ್ಯಮ್ಮ ಹೊಸಮನಿ ಮಾಹಿತಿ ನೀಡಿದರು.

ಏನಿದು ಪ್ರಕರಣ?: ಹಿಂದೂ ಧರ್ಮದ ಬಾಲಕಿ ಹಾಗೂ ಮುಸ್ಲಿಂ ಸಮುದಾಯದ ಯುವಕನ ನಡುವೆ ಇನ್‌ಸ್ಟಾಗ್ರಾಮ್ ಪ್ರೇಮದ ಕೊಂಡಿಯಾಗಿ ಬೆಸೆದುಕೊಂಡ ಕಥೆ ಇದಾಗಿದೆ. ನಗರದ ಮಹ್ಮದ್ ತಕಿ ಚಹಾ ಅಂಗಡಿಯನ್ನು ಇಟ್ಟುಕೊಂಡು ಉಪ ಜೀವನ ನಡೆಸುತ್ತಿದ್ದ. ಇನ್‌ಸ್ಟಾಗ್ರಾಮ್ ಉಪಯೋಗಿಸುತ್ತಿದ್ದ. ಆಗ ಜಾರ್ಖಂಡ್‌ನ ಬಾಲಕಿ ಫಾಲೋವರ್ ಆಗಿದ್ದರು. ಇಬ್ಬರ ನಡುವೆ ಪ್ರೇಮಾಂಕುರಗೊಂಡಿತ್ತು. ಕೊನೆಗೆ ಜಾರ್ಖಂಡ್ ರಾಜ್ಯದಿಂದ ಸೆಪ್ಟೆಂಬರ್ 25ರಂದು ಮನೆ ತೊರೆದು ಹೈದರಾಬಾದ್ ಮೂಲಕ ಶಹಾಪರ ನಗರದ ಮಹ್ಮದ್ ತಕಿ ಅವರ ಮನೆಗೆ ಬಂದು ನೆಲಸಿದ್ದಳು.

ಜಾರ್ಖಂಡ್‌ದಲ್ಲಿ ದೂರು ದಾಖಲಾಗಿದ್ದರಿಂದ ಯುವಕನ ಬಂಧಿಸಲು ಬಂದಿದ್ದ ಅಲ್ಲಿನ ಪೊಲೀಸರ ತಂಡಕ್ಕೆ ಅಗತ್ಯ ನೆರವು ನೀಡಿದ್ದೇವೆ
ಶ್ಯಾಮಸುಂದರ ನಾಯಕ,
ಪಿ.ಐ ಶಹಾಪುರ ಠಾಣೆ

ಬಾಲಕಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ದಸ್ತಗಿರಿ ನಿಯಮ ಪಾಲಿಸಿ ಯುವಕನನ್ನು ಬಂಧಿಸಿ, ವಿಚಾರಣೆಗಾಗಿ ಜಾರ್ಖಂಡ್ ರಾಜ್ಯಕ್ಕೆ ಕರೆದುಕೊಂಡು ಹೋಗಿದ್ದಾರೆ
ಸತ್ಯಮ್ಮ ಹೊಸಮನಿ,
ಪ್ಯಾನಲ್ ವಕೀಲರು, ಶಹಾಪುರ

‘ಆರೋಗ್ಯ ಮಿಷನ್’ ಮುಂದುವರಿಕೆ

ನವದೆಹಲಿ (ಪಿಟಿಐ): ‘ರಾಷ್ಟ್ರೀಯ ಆರೋಗ್ಯ ಮಿಷನ್’ (ಎನ್‌ಎಚ್‌ಎಂ) ಕಾರ್ಯಕ್ರಮವನ್ನು ಇನ್ನೂ ಐದು ವರ್ಷಗಳಿಗೆ ಮುಂದುವರಿಸಲು ಕೇಂದ್ರ ಸಂಪುಟ ಸಭೆ ಬುಧವಾರ ಒಪ್ಪಿಗೆ ನೀಡಿದೆ.

ಸಭೆಯ ಬಳಿಕ ಪತ್ರಕರ್ತರಿಗೆ ಮಾಹಿತಿ ನೀಡಿದ ಕೇಂದ್ರ ಸಚಿವ ಪೀಯೂಷ್ ಘೋಯಲ್, ‘ಕಳೆದ 10 ವರ್ಷಗಳಲ್ಲಿ ಈ ಕಾರ್ಯಕ್ರಮವು ತನ್ನ ಗುರಿಗಳನ್ನು ಸಾಧಿಸಿ ಇತಿಹಾಸ ನಿರ್ಮಿಸಿದೆ’ ಎಂದು ಅಭಿಪ್ರಾಯಪಟ್ಟರು.

‘2021ರಿಂದ 2022ರಲ್ಲಿ ಸುಮಾರು 12 ಲಕ್ಷ ಆರೋಗ್ಯ ಕಾರ್ಯಕರ್ತರು ಈ ಕಾರ್ಯಕ್ರಮದೊಂದಿಗೆ ಕೈ ಜೋಡಿಸಿದ್ದರು. ಇದೇ ಮಿಷನ್ ಅಡಿಯಲ್ಲಿಯೇ ನಾವು ಕೋವಿಡ್ ಸೋಂಕನ್ನೂ ಎದುರಿಸಿದ್ದೇವೆ’ ಎಂದರು.

ವರದಕ್ಷಿಣೆ ಕಿರುಕುಳದಿಂದಾಗಿ ಮಹಿಳೆ ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರಕರಣ

ಬೀದರ್: ಪತಿ, ಮಾವನಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೀದರ್: ಗಂಡ ಹಾಗೂ ಮಾವ ನೀಡಿದ ವರದಕ್ಷಿಣೆ ಕಿರುಕುಳದಿಂದ ಬೇಸತ್ತು ಮಹಿಳೆ ಆತ್ಮಹತ್ಯೆ ಮಾಡಿಕೊಂಡಿರುವುದು ಸಾಬೀತಾಗಿದ್ದರಿಂದ ಇಬ್ಬರಿಗೂ ಕಠಿಣ ಜೀವಾವಧಿ ಕಾರಾಗೃಹ ಶಿಕ್ಷೆಯನ್ನು ನಗರದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಬುಧವಾರ ವಿಧಿಸಿದೆ.

ತಂದೆ-ಮಗನಿಗೆ ತಲಾ ₹25 ಸಾವಿರ ದಂಡ, ದಂಡ ಕೊಡಲು ತಪ್ಪಿದಲ್ಲಿ ಆರು ತಿಂಗಳು ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಜಿಲ್ಲೆಯ ಕಮಲನಗರದ ನಿವಾಸಿಗಳಾದ ಶ್ರಾವಣ ಹಾಗೂ ಅವರ ತಂದೆ ಮಚ್ಚೇಂದ್ರ ಹರಿಭಾ ಶಿಕ್ಷೆಗೆ ಒಳಗಾದವರು. ಮಹಾರಾಷ್ಟ್ರದ ಸೊಲ್ಲಾಪುರದ ಅಚ್ಚಗಾಂವ್ ಗ್ರಾಮದ ರೇಷ್ಮಾ ಅವರೊಂದಿಗೆ 2018ರ ಏಪ್ರಿಲ್ 20ರಂದು ಶ್ರಾವಣ ವಿವಾಹವಾಗಿದ್ದ. ₹5 ಸಾವಿರ ನಗದು, ಒಂದು ತೊಲ ಬಂಗಾರ ವರದಕ್ಷಿಣೆ ರೂಪದಲ್ಲಿ ಕೊಡಬೇಕು ಎನ್ನುವುದರ ಬಗ್ಗೆ ಮಾತುಕತೆ ಆಗಿತ್ತು. ಈ ವಿಷಯವಾಗಿ ಶ್ರಾವಣ ಮತ್ತು ಮಚ್ಚೇಂದ್ರ ಅವರು ಪದೇ ಪದೇ ರೇಷ್ಮಾ ಅವರಿಗೆ ಕಿರುಕುಳ ನೀಡುತ್ತಿದ್ದರು. ಇದರಿಂದ ಬೇಸತ್ತು ರೇಷ್ಮಾ, 2018ರ ಮೇ 24ರಂದು ಕ್ರಿಮಿನಾಶಕ ಸೇವಿಸಿದ್ದರು. ಆಸ್ಪತ್ರೆಗೆ ದಾಖಲಾಗಿದ್ದ ಅವರು ಮೇ 25ರಂದು ಮೃತಪಟ್ಟಿದ್ದರು.

ಈ ಬಗ್ಗೆ ರೇಷ್ಮಾ ಅವರ ತಾಯಿ ಸುರೇಖಾ ರಾಮಚಂದ್ರ ಕಮಲನಗರ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು. ತನಿಖೆ ನಡೆಸಿ, ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಧೀಶ ಸಚಿನ್ ಕೌಶಿಕ್ ಆರ್.ಎನ್. ಅವರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ. ಸರ್ಕಾರಿ ಅಭಿಯೋಜಕರಾಗಿ ಶರಣಗೌಡ ವಾದ ಮಂಡಿಸಿದರು.

ಸಿಂಧನೂರು: 4,500 ಚೀಲ ಭತ್ತ ಖರೀದಿಸಿ ರೈತರಿಗೆ ವಂಚನೆ

₹ 60 ಲಕ್ಷ ಕೊಡದೆ ವ್ಯಾಪಾರಿ ಪರಾರಿ

ಪ್ರಜಾವಾಣಿ ವಾರ್ತೆ



ಸಿಂಧನೂರಿನ ಶಹರ ಪೊಲೀಸ್ ಠಾಣೆಯ ಆವರಣದಲ್ಲಿ ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್‌ಐ ಮಹ್ಮದ್ ಇಸಾಕ್ ಎದುರು ರೈತರು ತಮ್ಮ ಅಳಲು ತೋಡಿಕೊಂಡರು

ಸಿಂಧನೂರು (ರಾಯಚೂರು ಜಿಲ್ಲೆ): ಸಿಂಧನೂರು ತಾಲ್ಲೂಕಿನ ಉಪ್ಪಳ ಮತ್ತು ದಢೇಸುಗೂರು ಗ್ರಾಮದ ರೈತರಿಂದ 4,500 ಚೀಲ ಭತ್ತ ಖರೀದಿಸಿದ ವ್ಯಾಪಾರಿಯೊಬ್ಬರು ರೈತರಿಗೆ ₹60 ಲಕ್ಷ ಪಾವತಿಸದೆ ಪರಾರಿಯಾಗಿದ್ದಾರೆ.

ಕಾರಟಗಿಯಲ್ಲಿ ‘ಮಹಾಮಲ್ಲೇಶ್ವರ ಟ್ರೇಡಿಂಗ್’ ಹೆಸರಿನಲ್ಲಿ ಕಮಿಷನ್ ಏಜೆಂಟ್‌ರಾಗಿ ವ್ಯವಹಾರ ಮಾಡುತ್ತಿದ್ದ ಮಲ್ಲೇಶ ಅವರಿಗೆ ಉಪ್ಪಳ ಗ್ರಾಮದ ಸೂರ್ಯಬಾಬು 460 ಚೀಲ, ಕೆ.ಎಂ. ಬಸವರಾಜ 170 ಚೀಲ, ಬಸವರಾಜ ಸಂಗಟಿಯಿಂದ 200, ರಾಮರಾವ್ 1,800 ಚೀಲ, ಜಿ.ಗೋವಿಂದ 250 ಚೀಲ ಸೇರಿ ಸುಮಾರು 30 ರೈತರು ಡಿಸೆಂಬರ್ ಮೊದಲ ವಾರದಲ್ಲಿ ಆರ್‌ಎನ್‌ಆರ್ ತಳಿಯ ಭತ್ತವನ್ನು ಮಾರಾಟ ಮಾಡಿದ್ದರು.

75 ಕೆಜಿ ಭತ್ತಕ್ಕೆ ₹1800, ಪ್ರತಿ ಕ್ವಿಂಟಲ್‌ಗೆ ₹2400 ಬೆಲೆ ನಿಗದಿಪಡಿಸಿ 15 ದಿನಗಳಲ್ಲಿ ಹಣ ಪಾವತಿಸುವುದಾಗಿ ಮಲ್ಲೇಶ ಭರವಸೆ ನೀಡಿದ್ದರು. ಅವಧಿ ಮುಗಿದ ನಂತರ ರೈತರು ಅಂಗಡಿಗೆ ಬಂದಾಗ ಬೀಗ ಹಾಕಲಾಗಿತ್ತು. ಎರಡು ಮೂರು ದಿನಗಳಿಂದ ಅಲೆದಾಡಿದರೂ ಅಂಗಡಿ ಮಾಲೀಕರು ಪತ್ತೆಯಾಗಿಲ್ಲ.

‘ಉಪ್ಪಳದ ಭೀಮಯ್ಯ ಅವರ ಜೊತೆಯಲ್ಲಿ ಪಾಲುದಾರನಾಗಿ ಮೂರು ವರ್ಷಗಳಿಂದ ಕಾರಟಗಿಯ ಮಲ್ಲೇಶ ವ್ಯಾಪಾರ ಮಾಡುತ್ತಿದ್ದರಿಂದ ರೈತರಿಗೆ ಪರಿಚಯವಾಗಿದ್ದ. ಮಲ್ಲೇಶ ಕಳೆದ ವರ್ಷ ಇದೇ ರೀತಿ ಉದ್ರಿ ಪಡೆದು ಹೇಳಿದ ಮಾತಿನಂತೆ ಹಣ ಕೊಟ್ಟಿದ್ದನು. ಆದರೆ, ಈಗ ಓಡಿ ಹೋಗಿದ್ದಾನೆ’ ಎಂದು ಉಪ್ಪಳದ ರೈತರಾದ ರಾಮರಾವ್, ಸೂರ್ಯಬಾಬು ಅಳಲು ತೋಡಿಕೊಂಡಿದ್ದಾರೆ.

‘ಕಾರಟಗಿಯಲ್ಲಿನ ಮನೆ ಖಾಲಿ ಮಾಡಿರುವ ವ್ಯಾಪಾರಿ ಮಲ್ಲೇಶ ಕುಷ್ಟಗಿಯಲ್ಲಿರುವ ತಮ್ಮ ಸಂಬಂಧಿ ಪರಸಪ್ಪ ಮನೆಯಲ್ಲಿರುವ ಮಾಹಿತಿ ಲಭಿಸಿತ್ತು. ಮಂಗಳವಾರ ಅಲ್ಲಿ ಹೋದಾಗಲೂ ಅವನ ಸುಳಿವು ಸಿಕ್ಕಿಲ್ಲ. ಬೆಳೆದ ಭತ್ತವನ್ನೆಲ್ಲ ಆತನಿಗೆ ಮಾರಿದ್ದೇವೆ. ರಸಗೊಬ್ಬರದ ಅಂಗಡಿಯವರ ಹಣ ಮತ್ತು ಕೈಸಾಲ ಕಟ್ಟಲಾಗದೆ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದೇವೆ’ ಎಂದು ಹೇಳಿದರು.

‘ರೈತರಿಂದ ಭತ್ತ ಖರೀದಿಸಿ ಪರಾರಿಯಾಗಿರುವ ವ್ಯಾಪಾರಿ ಮಲ್ಲೇಶ ವಿರುದ್ಧ ಕ್ರಮ ಕೈಗೊಂಡು ನಮ್ಮ ಹಣ ಕೊಡಿಸಬೇಕು ಎಂದು ಕೋರಿ ರೈತರು ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್‌ಐ ಮಹ್ಮದ್ ಇಸಾಕ್ ಅವರಿಗೆ ದೂರು ನೀಡಿದ್ದೇವೆ’ ಎಂದು ರೈತ ಮುದಿಯಪ್ಪ ಹರಿಜನ ತಿಳಿಸಿದರು.

‘ರೈತರಿಂದ ಭತ್ತ ಖರೀದಿಸಿರುವ ವ್ಯಕ್ತಿಯ ಶೋಧ ಕಾರ್ಯ ಆರಂಭಿಸಲಾಗಿದೆ. ರೈತರಿಂದ ಇನ್ನಷ್ಟು ಮಾಹಿತಿ ಕಲೆ ಹಾಕಲಾಗುತ್ತಿದೆ. ದಾಖಲೆಗಳನ್ನು ಪರಿಶೀಲಿಸಿ ಪ್ರಕರಣ ದಾಖಲಿಸಿಕೊಳ್ಳುತ್ತೇವೆ. ವ್ಯಾಪಾರಿ ವಿರುದ್ಧ ಕಾನೂನು ಕ್ರಮ ಜರುಗಿಸುತ್ತೇವೆ’ ಎಂದು ಸಿಂಧನೂರ ಪಿಎಸ್‌ಐ ಮಹ್ಮದ್ ಇಸಾಕ್ ಹೇಳಿದರು.

ಪಿಡಿಒ, ಎಸ್‌ಡಿಎ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ



ಶೇಖರ್ ಜಿ.



ಉಮಾಶಂಕರ್

ಉಡುಪಿ: ಜಾಗದ ದಾಖಲೆಗೆ 9/11 ಮಾಡಿ ಕೊಡಲು ₹22 ಸಾವಿರ ಲಂಚ ಪಡೆಯುತ್ತಿದ್ದಾಗ ಗಂಗೊಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಉಮಾಶಂಕರ್ ಮತ್ತು ದ್ವಿತೀಯ ದರ್ಜೆ ಸಹಾಯಕ ಶೇಖರ್ ಜಿ. ಬುಧವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಮಹಮ್ಮದ್ ಹನೀಫ್ ಎಂಬುವರು 9/11ಗಾಗಿ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ಪಿಡಿಒ ಮತ್ತು ದ್ವಿತೀಯ ದರ್ಜೆ ಸಹಾಯಕನನ್ನು ಭೇಟಿ ಮಾಡಿ ವಿಚಾರಿಸಿದಾಗ ₹22 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ಮಹಮ್ಮದ್ ಹನೀಫ್ ಅವರು ಉಡುಪಿ ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಪ್ರಭಾರ ಲೋಕಾಯುಕ್ತ ಡಿವೈಎಸ್‌ಪಿ ಮಂಜುನಾಥ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ.

ನಕಲಿ ನೋಟು ಮುದ್ರಿಸುತ್ತಿದ್ದ ತಂದೆ–ಮಗನ ಬಂಧನ

ತಿ.ನರಸೀಪುರ (ಮೈಸೂರು ಜಿಲ್ಲೆ): ತಾಲ್ಲೂಕಿನ ಮಾದಾಪುರದ ಜಮೀನಿನ ದನದ ಕೊಟ್ಟಿಗೆಯಲ್ಲಿ ನಕಲಿ ನೋಟು ಮುದ್ರಿಸುತ್ತಿದ್ದ ಇಬ್ಬರನ್ನು ತಿ.ನರಸೀಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.


ಹಿರಿಯೂರು ಗ್ರಾಮದ ನಾಗೇಶ್ (25) ಹಾಗೂ ಅವರ ತಂದೆ ಶಿವಪ್ರಸಾದ್ (48) ಆರೋಪಿಗಳು.

ಜಮೀನಿನ ಶೆಡ್‌ನಲ್ಲಿ ನೋಟು ಮುದ್ರಣಕ್ಕೆ ಬಳಸಿದ್ದ ಪ್ರಿಂಟರ್, ಪೆನ್‌ಡ್ರೈವ್, ಬಣ್ಣದ ಬಾಟಲ್‌ಗಳು, ಗಾಂಧೀಜಿ ಭಾವಚಿತ್ರದ ವಾಟರ್ ಮಾರ್ಕ್, ಎ-4 ಕಾಗದಗಳು, ₹ 500 ಬೆಲೆಯ ಒಂದು ಕಡೆ ಪ್ರಿಂಟ್ ಆದ ನೋಟು ಹಾಗೂ ₹ 25,500 ಮೌಲ್ಯದ ₹ 500 ಬೆಲೆಯ 51 ನಕಲಿ ನೋಟುಗಳು ಹಾಗೂ ಮೊಬೈಲ್‌ಫೋನ್‌ಗಳನ್ನು ವಶ ಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಇನ್‌ಸ್ಪೆಕ್ಟರ್ ಧನಂಜಯ, ಪಿಎಸ್‌ಐ ಜಗದೀಶ್ ಧೂಳಶೆಟ್ಟಿ, ಎಎಸ್‌ಐ ಚಲವರಾಜು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಪ್ರಕರಣ ದಾಖಲಾಗಿದೆ.

ಸಮಾವೇಶಕ್ಕೆ ಬಂದಿದ್ದ ಕಾಂಗ್ರೆಸ್ ಕಾರ್ಯಕರ್ತ ಸಾವು

ಪ್ರಜಾವಾಣಿ ವಾರ್ತೆ



ಬಸಪ್ಪ ಕೆಂಚಪ್ಪ ಪಾಮೆನಹಳ್ಳಿ

ಬೆಳಗಾವಿ: ‘ಗಾಂಧಿ ಭಾರತ’ ಪ್ರಯುಕ್ತ ಎಐಸಿಸಿ ವತಿಯಿಂದ ನಗರದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ‘ಜೈ ಬಾಪು, ಜೈ ಭೀಮ್, ಜೈ ಸಂವಿಧಾನ’ ಸಮಾವೇಶಕ್ಕೆ ಬಂದಿದ್ದ ಕಾಂಗ್ರೆಸ್ ಕಾರ್ಯಕರ್ತ ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ನದಿಹರಳ್ಳಿ ಗ್ರಾಮದ ನಿವಾಸಿ ಬಸಪ್ಪ ಕೆಂಚಪ್ಪ ಪಾಮೆನಹಳ್ಳಿ (60) ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಬಸಪ್ಪ ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. 40 ವರ್ಷಗಳಿಂದ ಅವರು ಕಾಂಗ್ರೆಸ್ ಕಾರ್ಯಕರ್ತರಾಗಿ ಗ್ರಾಮ ಮಟ್ಟದಲ್ಲಿ ಕೆಲಸ ಮಾಡುತ್ತಿದ್ದರು. ಅವರ ಕುಟುಂಬಕ್ಕೆ ಕೆಪಿಸಿಸಿಯಿಂದ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

2 ಹಸುಗೂಸುಗಳ ಮೂಳೆ ಮುರಿತ

ಪ್ರಜಾವಾಣಿ ವಾರ್ತೆ

ಬೀದರ್: ನಗರದ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಬ್ರಿಮ್ಸ್) ವೈದ್ಯರು ಹಾಗೂ ಟ್ರೈನಿ ನರ್ಸ್‌ಗಳ ನಿರ್ಲಕ್ಷ್ಯದಿಂದ ಎರಡು ಹಸುಗೂಸುಗಳ ಕಾಲಿನ ಮೂಳೆ ಮುರಿದಿದೆ ಎಂದು ಪೋಷಕರು ದೂರಿದ್ದಾರೆ.

ಬೀದರ್ ತಾಲ್ಲೂಕಿನ ಚಿಲ್ಲರ್ಗಿ ಗ್ರಾಮದ ಶ್ರೀದೇವಿ ರಾಜು ಅವರ ಗಂಡು ಮಗುವಿನ ಬಲಗಾಲಿನ ತೊಡೆಯ ಮೂಳೆ ಮುರಿದಿದೆ. ಬೀದರ್‌ನ ಮಂಗಲಪೇಟ್ ನಿವಾಸಿ ರೂಪಾರಾಣಿ ನಾಗೇಂದ್ರ ಮಹಿಮಾ ಅವರ ಗಂಡು ಮಗುವಿನ ಎಡಗಾಲಿನ ಮೂಳೆ ಮುರಿದಿರುವುದು ಎಕ್ಸ್‌ರೇ ಪರೀಕ್ಷೆಯಿಂದ ದೃಢಪಟ್ಟಿದೆ.

ಡಿಸೆಂಬರ್ 14ರಂದು ರೂಪಾರಾಣಿ ಹಾಗೂ ಡಿಸೆಂಬರ್ 28ರಂದು ಶ್ರೀದೇವಿ ಅವರ ಹೆರಿಗೆ ಆಗಿತ್ತು. ಕೂಸುಗಳೆರಡೂ ಸತತ ಅಳುತ್ತಿದ್ದವು. ಎಕ್ಸ್‌ರೇ ಮಾಡಿಸಿದಾಗ ಎರಡೂ ಕಂದಮ್ಮಗಳ ಕಾಲಿನ ಮೂಳೆ ಮುರಿದಿರುವುದು ಗೊತ್ತಾಗಿದೆ. ನಿರ್ಲಕ್ಷ್ಯ ತೋರಿದವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಎರಡೂ ಕುಟುಂಬದವರು ಆಗ್ರಹಿಸಿದ್ದಾರೆ.

ಶ್ರೀದೇವಿ ಅವರ ಮೈದುನ ಸ್ವಾಮಿದಾಸ ಕಂಟಪ್ಪ ಅವರು ಬ್ರಿಮ್ಸ್‌ನ ಡಾ.ಸುಮಯ್ಯ ಹಾಗೂ ನರ್ಸ್‌ಗಳ ವಿರುದ್ಧ ನ್ಯೂ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಜಿಲ್ಲಾಧಿಕಾರಿಗೂ ದೂರು ಸಲ್ಲಿಸಿದ್ದಾರೆ.

'ಹಸುಗೂಸುಗಳ ತಾಯಂದಿರು ಬೇರೆ ಬೇರೆ ಆಸ್ಪತ್ರೆಗಳಿಗೆ ಸುತ್ತಾಡಿ, ಕೊನೆ ಕ್ಷಣದಲ್ಲಿ ಬಂದು ದಾಖಲಾಗಿದ್ದರು. ಮಕ್ಕಳ ಮೂಳೆ ಮುರಿದಿದ್ದು ತಾಯಂದಿರ ಹೊಟ್ಟೆಯಲ್ಲಿಯೇ ಹೊರತು ಹೆರಿಗೆ ನಂತರ ಆದದ್ದಲ್ಲ. ಕಠಿಣ ಪರಿಸ್ಥಿತಿಯಲ್ಲಿ ತಾಯಿ ಮತ್ತು ಮಕ್ಕಳಿಬ್ಬರ ಜೀವ ಉಳಿಸಿದ್ದೇವೆ' ಎಂದು ಬ್ರಿಮ್ಸ್ ಸೂಪರಿಟೆಂಡೆಂಟ್ ಡಾ.ಶಿವಯೋಗಿ ಬಾಳಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

'ನರಹರಿತೀರ್ಥರ ಬೃಂದಾವನ: ವಿವಾದ ಇತ್ಯರ್ಥಕ್ಕೆ ಒಲವು'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ತಾಲ್ಲೂಕಿನ ಹಂಪಿ ಸಮೀಪದ ನರಹರಿ ತೀರ್ಥರ ಬೃಂದಾವನದ ಆರಾಧನೆ ವಿವಾದವನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಲು ಮಂತ್ರಾಲಯ ಮಠ ಸಿದ್ಧವಿದೆ' ಎಂದು ಮಂತ್ರಾಲಯದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಹೇಳಿದರು.

ಹೈಕೋರ್ಟ್ ಆದೇಶದ ಮೇರೆಗೆ ಬುಧವಾರ ಇಲ್ಲಿ ನರಹರಿತೀರ್ಥರ ಉತ್ತರಾರಾಧನೆಯಲ್ಲಿ ಪಾಲ್ಗೊಂಡು ಸುದ್ದಿಗಾರರ ಜೊತೆ ಮಾತನಾಡಿದ ಅವರು,'ಉತ್ತರಾದಿ ಮಠದ ಜೊತೆ ನಮಗೆ ದ್ವೇಷವಿಲ್ಲ. ಎರಡೂ ಮಠಗಳು ಕೂಡಿ ವ್ಯಾಜ್ಯ ಪರಿಹರಿಸಿಕೊಳ್ಳಲು ಮುಂದಾಗಬೇಕು. ಅದಕ್ಕೆ ನಾವು ಸಿದ್ಧ. ಜತೆಗೂಡಿ ಪೂಜೆ ಮಾಡಲು ನಮ್ಮ ಸಮ್ಮತಿ ಇದೆ' ಎಂದರು.



ಸುಬುಧೇಂದ್ರ ತೀರ್ಥ ಸ್ವಾಮೀಜಿ

'ನಾವು ದಾವೆ ಹೂಡಿಲ್ಲ. ದಾವೆಗೆ ಉತ್ತರ ಕೊಟ್ಟಿದ್ದೇವೆ ಅಷ್ಟೇ' ಎಂದರು.

ದಂತ ಸಾಗಣೆ: ವಾಚರ್ ಬಂಧನ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ಕರ್ನಾಟಕದಲ್ಲಿರುವಾಗಲೇ, ಇಲ್ಲಿನ ಉಡುತೊರೆ ಹಳ್ಳ ಜಲಾಶಯ ಸಮೀಪದ ರಿಂಗ್ ರೋಡ್‌ನಲ್ಲಿ ಅಕ್ರಮವಾಗಿ 13.5 ಕೆ.ಜಿ. ತೂಕದ ಎರಡು ಆನೆ ದಂತಗಳನ್ನು ಸಾಗಿಸುತ್ತಿದ್ದ ಆರೋಪದ ಮೇರೆಗೆ ಫಾರೆಸ್ಟ್ ವಾಚರ್ ಸೇರಿ ಇಬ್ಬರನ್ನು ನಗರದ ಅರಣ್ಯ ಸಂಚಾರಿ ದಳದ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬಡಾವಣೆ ನಿವಾಸಿ ಮತ್ತು ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಜಾಗೇರಿಯ ದೊಡ್ಡ ಮಾಕಳಿ ಕ್ಯಾಂಪ್ ವಾಚರ್ ಚಂದ್ರಶೇಖರ (27) ಮತ್ತು ಎಸ್.ಬಸವರಾಜು (36) ಬಂಧಿತರು, ಮತ್ತೊಬ್ಬ ಆರೋಪಿ ಪುಟ್ಟಸ್ವಾಮಿ(55) ಪರಾರಿಯಾಗಿದ್ದಾನೆ.

ದಂತ ಸಾಗಣೆಗೆ ಬಳಸಿದ್ದ ಪಲ್ಸರ್ ಬೈಕ್ ಜಪ್ತಿ ಮಾಡಲಾಗಿದೆ.

ಕಾಡಾನೆ ದಾಳಿ: ವೃದ್ಧ ಸಾವು

ಹಾಸನ: ಜಿಲ್ಲೆಯ ಆಲೂರು ತಾಲ್ಲೂಕಿನ ಅಡಿಬೈಲು ಗ್ರಾಮದಲ್ಲಿ ಮಂಗಳವಾರ ಸಂಜೆ ಕಾಡಾನೆ ದಾಳಿಯಿಂದ ಪುಟ್ಟಯ್ಯ (78) ಸ್ಥಳದಲ್ಲಿಯೇ ಮೃತಪಟ್ಟರು. ಅವರು ದಿನಸಿ ತರಲು ಮಗ್ಗೆ ಗ್ರಾಮಕ್ಕೆ ಹೋಗಿ ಬರುವಾಗ ಘಟನೆ ನಡೆದಿದೆ.

ಪೋಷಕರ ಪತ್ತೆಗಾಗಿ ಪ್ರಕಟಣೆ



ಈ ಭಾವಚಿತ್ರದಲ್ಲಿರುವ ಒಂದು ದಿನದ ನವಜಾತ ಗಂಡು ಮಗುವನ್ನು ದಿನಾಂಕ:18–01–2025ರಂದು ಜಿಲ್ಲಾ ಆಸ್ಪತ್ರೆ, ತುಮಕೂರು ಇಲ್ಲಿ ಅಳವಡಿಸಿರುವ ಮಮತೆಯ ತೊಟ್ಟಿಲಿನಲ್ಲಿ ಬಿಟ್ಟು ಹೋಗಿರುತ್ತಾರೆ. ಸದರಿ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿದ್ದು, ಸದರಿ ಮಗುವಿನ ಪೋಷಕರು ಎಲ್ಲಿದ್ದಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ **ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೊದಲನೇ ಮಹಡಿ, ಮಹಾತ್ಮಾ ಗಾಂಧಿ ಕ್ರೀಡಾಂಗಣ, ಕುವೆಂಪುನಗರ, ತುಮಕೂರು ದೂರವಾಣಿ ಸಂಖ್ಯೆ: 0816–2956699** ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ: ತುಮಕೂರು
ದಿನಾಂಕ: 21–01–2025

ಸಹಿ/–
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/RO-157/24-25/Oysters

ತರಕಾರಿ– ಹಣ್ಣು ಮಾರಾಟಕ್ಕೆ ಅಲೆದಾಟ ● ಸವಣೂರಿನಲ್ಲಿ ಮಡುಗಟ್ಟಿದ ದುಃಖ ● ಸಾಮೂಹಿಕ ಅಂತ್ಯಸಂಸ್ಕಾರ

ತರಕಾರಿ ಒಯ್ದವರು ಉಸಿರು ಚೆಲ್ಲಿದರು

● ಸಂತೋಷ ಜಿಗಳಿಕೊಪ್ಪ

ಸವಣೂರು (ಹಾವೇರಿ ಜಿಲ್ಲೆ): ಜಿಲ್ಲೆಯ ಸವಣೂರು ಪಟ್ಟಣದ ಪ್ರತಿ ಓಣಿಯಲ್ಲೂ ಮೌನ ಆವರಿಸಿತ್ತು. ಯಲ್ಲಾಪುರ ಬಳಿ ಬುಧವಾರ ಸಂಭವಿಸಿದ್ದ ಅಪಘಾತದಲ್ಲಿ ಮೃತಪಟ್ಟವರ ಮನೆಗಳ ಎದುರು ಕುಟುಂಬಸ್ಥರು ಹಾಗೂ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಸಂತೆಗೆ ಹೋಗಿದ್ದ 10 ವ್ಯಾಪಾರಿಗಳು, ಊರಿಗೆ ಮರಳಲಿಲ್ಲ. 'ಜೀವನಕ್ಕೆ ಆಧಾರವಾಗಿದ್ದ ಸಂತೆಯೇ ಮಕ್ಕಳ ಜೀವ ಕಸಿದುಕೊಂಡಿತು' ಎಂದು ಪೋಷಕರು ಕಣ್ಣೀರಿಟ್ಟರು.

'ಹುಬ್ಬಳ್ಳಿ, ಸವಣೂರು ಸುತ್ತಲಿನ ಎಪಿಎಂಸಿಯಲ್ಲಿ ರೈತರಿಂದ ಹಣ್ಣು–ತರಕಾರಿ ಖರೀದಿಸಿ, ಲಾರಿಯಲ್ಲಿ ಹಣ್ಣು–ತರಕಾರಿಯನ್ನು ಕುಮಟಾ ಸಂತೆಗೆ ಒಯ್ಯುತ್ತಿದ್ದರು. ಮಾರ್ಗಮಧ್ಯೆಯೇ ಅಪಘಾತವಾಗಿ, ಕುಟುಂಬಕ್ಕೆ ಆಧಾರವಾಗಿದ್ದವರು ಅಗಲಿದರು' ಎಂದು ಅಳಲು ತೋಡಿಕೊಂಡರು.

4 ತಿಂಗಳ ಹಿಂದಷ್ಟೇ ಮದುವೆ: ಮೃತ ಅಸ್ಲಂ ಉರುಫ್ ಮುಜರರಾಜ್ ಬೆಣ್ಣಿ ಅವರಿಗೆ 2024ರ ಸೆ.18ರಂದು ಮದುವೆಯಾಗಿದ್ದರು. ಸಾಲವಿತ್ತು. ಕುಟುಂಬ ನಿರ್ವಹಣೆ ಜವಾಬ್ದಾರಿ ಇತ್ತು. ಹೀಗಾಗಿ, ನಿತ್ಯವೂ ಸಂತೆ ವ್ಯಾಪಾರಕ್ಕೆ ಹೋಗುತ್ತಿದ್ದರು.

'ಮಂಗಳವಾರ ರಾತ್ರಿ 10.30ಕ್ಕೆ ಕರೆ ಮಾಡಿದ್ದೆ. ಕುಮಟಾ ತಲುಪಿದ ಕೂಡಲೇ ವಾಪಸು ಕರೆ ಮಾಡುತ್ತೇನೆ ಎಂದಿದ್ದರು. ಬೆಳಿಗ್ಗೆ ಸಾವಿನ ಸುದ್ದಿ ಬಂತು' ಎಂದು ಪತ್ನಿ ತಸ್ಲೀಮಾ ಕಣ್ಣೀರಾದರು. ಅಸ್ಲಂ ಅವರ ತಂದೆ– ತಾಯಿ, ಪತ್ನಿ ಹಾಗೂ ಸಂಬಂಧಿಕರ ದುಃಖ ಮಡುಗಟ್ಟಿತ್ತು.

ಹೆರಿಗೆಗೆ ಹೋಗಿದ್ದ ಪತ್ನಿ: ಹುಸೇನಮೀಯ್ಯಾ ರಮಣಿದ ಒಂದೂವರೆ ವರ್ಷದ ಹಿಂದೆ ವಿವಾಹ ಆಗಿತ್ತು. ಪತ್ನಿ, ಹೆರಿಗೆಗೆ ತವರಿಗೆ ಹೋಗಿದ್ದರು. ಮುಂದಿನ ವಾರ ಹೆರಿಗೆಗೆ ದಿನವಿತ್ತು.

'ಹೊಸ ಮನೆ ಕಟ್ಟಿಸಿದ್ದರು. ಮನೆ ಹಾಗೂ ಮದುವೆ ಸಾಲ ತೀರಿಸಲು ಹುಸೇನಮೀಯ್ಯಾ, ಸಂತೆಗೆ ಹೋಗುತ್ತಿದ್ದರು. ಇವರ ಪತ್ನಿಯ ಸ್ಥಿತಿ ನೋಡಿ ಕರುಳು ಕಿವುಚುತ್ತಿದೆ. ಗರ್ಭಿಣಿ-ಆಗಿರುವ ಆಕೆಗೆ ನಿಧಾನವಾಗಿ ವಿಷಯ ಮುಟ್ಟಿಸಲಾಗಿದೆ' ಎಂದು ಸಂಬಂಧಿಕರು ತಿಳಿಸಿದರು.

ಶಿಥಿಲ ಮನೆಯಲ್ಲಿ ವಾಸ: ಮೃತ ಇಜಾಜ್ ಮುಲ್ಲಾ ಅವರದ್ದು ಕಡುಬಡತನ. ಶಿಥಿಲ ಮನೆಯಲ್ಲಿ ಪೋಷಕರಿದ್ದಾರೆ. ಮನೆಗೆ ಆಸರೆಯಾಗಲು ಇಜಾಜ್, ಹಣ್ಣು-ತರಕಾರಿ ಮಾರಾಟ ಮಾಡುತ್ತಿದ್ದರು.



ಸವಣೂರಿನಲ್ಲಿರುವ ಮುಜರರಾಜಾ ಬೆಣ್ಣಿ ಮನೆಯಲ್ಲಿ ಪತಿ ನೆನೆದು ಕಣ್ಣೀರಿಡುತ್ತಿದ್ದ ಪತ್ನಿ ತಸ್ಲೀಮಾ ಅವರನ್ನು ಸಂಬಂಧಿಕರು ಸಮಾಧಾನಪಡಿಸಿದರು

ಸಾಮೂಹಿಕ ಅಂತ್ಯಕ್ರಿಯೆ

ಶಿಗ್ಗಾವಿ ಕ್ಷೇತ್ರದ ಶಾಸಕ ಯಾಸೀರ ಅಹಮ್ಮದ್ ಖಾನ್ ಪಠಾಣ ಯಲ್ಲಾಪುರ ಆಸ್ಪತ್ರೆಯಲ್ಲಿ ಮೊಕ್ಕಾಂ ಹೂಡಿದ್ದರು. ಶವಪರೀಕ್ಷೆ ಬಳಿಕ 9 ಮಂದಿಯ ಮೃತದೇಹಗಳನ್ನು ಸವಣೂರಿಗೆ ತರಲಾಯಿತು. ಅಂಜುಮನ್ ಸಂಸ್ಥೆ ಸದಸ್ಯರು, ಸ್ಥಳೀಯರ ಸಮ್ಮುಖದಲ್ಲಿ ಈದ್ಗಾ ಬಳಿಯ ಖಬರಸ್ತಾನ್‌ದಲ್ಲಿ ಸಾಮೂಹಿಕ ಅಂತ್ಯಕ್ರಿಯೆ ನಡೆಯಿತು. ಒಬ್ಬರ ಅಂತ್ಯಕ್ರಿಯೆ ಹುಬ್ಬಳ್ಳಿಯಲ್ಲಿ ಮಾಡಲಾಯಿತು.

'ಉಸಿರು ಕೊಟ್ಟಿದ್ ಹಣ್ಣು, ತರಕಾರಿ ಜೀವ ತಗೀತು'

● ಗಣಪತಿ ಹೆಗಡೆ

ಯಲ್ಲಾಪುರ(ಕಾರವಾರ): 'ಹೊತ್ತಿನ ಊಟಕ್ಕ ಸಂತೇಲಿ ವ್ಯಾಪಾರ ಮಾಡು ಜನ ನಾವು ರೀ... ನಮ್ ಜನ್ರಿಗೆ ಉಸಿರು ಕೊಟ್ಟಿದ್ ಹಣ್ಣು, ತರಕಾರಿನೇ ಅವರ ಪ್ರಾಣಾನೂ ತೆಗೆದ್‌ಬಿಟ್ತ್ರೀ...'

-ಹೀಗೆ ಕಣ್ಣೀರು ಸುರಿಸುತ್ತ, ಏದುಸಿರು ಬಿಡುತ್ತ ನೋವು ತೋಡಿಕೊಂಡವರು ಹಾವೇರಿ ಜಿಲ್ಲೆ ಸವಣೂರಿನ ಮೊಹಮ್ಮದ್ ಗೌಸ್. ಗುಳ್ಳಾಪುರದ ಬಳಿ ಬುಧವಾರ ನಸುಕಿನ ಜಾವ ನಡೆದ ಅಪಘಾತದ ಲಾರಿಯ ಮುಂಭಾಗದ ಕ್ಯಾಬಿನ್‌ನಲ್ಲೇ ಅವರೂ ಕೂತಿದ್ದರು.

'ಹುಬ್ಬಳ್ಳಿಯಿಂದ ತರಕಾರಿ ಮೂಟೆ ಹೇರಿಕೊಂಡು ಬಂದಿದ್ದ ಲಾರಿಯನ್ನು ಸವಣೂರಿನಲ್ಲಿ 28 ಮಂದಿ ಏರಿದ್ದೆವು. ರಾತ್ರಿ ಎಲ್ಲರೂ ಗಾಢ ನಿದ್ದೆಗೆ ಜಾರಿದ್ದೆವು. ಒಮ್ಮೆಲೇ ಮಗುಚಿ ಬಿದ್ದಂತಾಯ್ತು. ಕನಸಿನಲ್ಲಿ ಬಿದ್ದಿರಬಹುದು ಅಂದುಕೊಂಡೆವು. ಒಡೆದ ಗಾಜಿನ ಚೂರುಗಳು ಮೈಕೈಗೆ ಚುಚ್ಚಿದವು. ನಮ್ಮವರ ಚೀರಾಟ ಕೇಳ್ತು' ಎನ್ನುತ್ತ ಮೊಹಮ್ಮದ್ ಗೌಸ್ ಗದ್ಗದಿತರಾದರು.

'ನನ್ನೊಂದಿಗೆ ಕ್ಯಾಬಿನ್‌ನಲ್ಲಿದ್ದವರ ಪೈಕಿ ಐದಾರು ಮಂದಿಯ ಮುಖ, ದೇಹ ರಕ್ತಸಿಕ್ತವಾಗಿತ್ತು. ನನ್ನ ದೇಹದಿಂದ ರಕ್ತ ಸುರಿಯುತ್ತಿತ್ತು. ಅದನ್ನು ಲೆಕ್ಕಿಸದೆ ಕ್ಯಾಬಿನ್‌ನಿಂದ ಕಷ್ಟಪಟ್ಟು ಹೊರಬಂದೆವು. ಅಲ್ಲಲ್ಲಿ ಬಿದ್ದಿದ್ದ ಜನರನ್ನು ಮೇಲಕ್ಕೆತ್ತಲು ಯತ್ನಿಸಿದೆವು. ಕೆಲವರು ಕುಡಿಯಲು ನೀರು ಕೇಳುತ್ತಿದ್ದರು. ಸಮೀಪದಲ್ಲೇ ಇದ್ದ ಬಾಟಲಿ ಕೊಡಲು ಆಗದ ಸ್ಥಿತಿ ಇತ್ತು' ಎಂದು ವಿವರಿಸಿದರು.

'ಮಗುಚಿದ ರಭಸಕ್ಕೆ ಲಾರಿಯ ಹಿಂಭಾಗದಲ್ಲಿ ಮಲಗಿದ್ದವರು ನೆಲಕ್ಕೆ ಬಿದ್ದರು. ಅವರ ಮೇಲೆ ತರಕಾರಿ, ಹಣ್ಣಿನ ದಾಸ್ತಾನು ಬಿದ್ದಿದ್ದವು. ಅವರನ್ನು ಬದುಕಿಸಲು ಸಾಕಷ್ಟು ಪ್ರಯತ್ನಿಸಿದೆವು. ಮೈಮೇಲೆ ಬಿದ್ದಿದ್ದ ಮೂಟೆ ಎತ್ತಿಡಲು ನಮ್ಮ ಕೈಗಳಲ್ಲಿ ಸಾಧ್ಯವಾಗಲಿಲ್ಲ. ಹೆದ್ದಾರಿಯಲ್ಲಿ ಸಾಗುತ್ತಿದ್ದ ವಾಹನ ಸವಾರರು ನಿಂತು ನಮ್ಮನ್ನೇ ನೋಡುತ್ತಿದ್ದರು. ಅಪಘಾತದ ಭೀಕರತೆಗೆ, ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಜನರನ್ನು ಕಂಡು ಕೆಲವರು ಭಯದಿಂದ ಓಡಿದರು. ಕೆಲವರು ಸಹಾಯಕ್ಕೆ ಧಾವಿಸಿದರು. ಪೊಲೀಸರು, ಸ್ಥಳೀಯರೂ ನೆರವಿಗೆ ಬಂದರು' ಎಂದು ಅವರು ಅಪಘಾತದ ಸಂದರ್ಭವನ್ನು ಸ್ಮರಿಸಿದರು.



ಯಲ್ಲಾಪುರ ತಾಲ್ಲೂಕಿನ ಗುಳ್ಳಾಪುರದ ಸಮೀಪ ಲಾರಿ ಅಪಘಾತ ನಡೆದ ಸ್ಥಳದಲ್ಲಿ ಚೆಲ್ಲಾಪಿಲ್ಲಿಯಾಗಿದ್ದ ಬಿದ್ದಿದ್ದ ತರಕಾರಿ ವ್ಯಾಪಾರಿಗಳ ಬ್ಯಾಗ್‌ಗಳನ್ನು ಅವರ ಸ್ನೇಹಿತರು ಪರಿಶೀಲಿಸಿದರು

ಸುದ್ದಿ 2 ನಿಮಿಷ

ಬಿಬಿಎ ವಿದ್ಯಾರ್ಥಿನಿ ಪುತ್ತೂರು ಪಿಎಲ್‌ಡಿ ಬ್ಯಾಂಕ್ ನಿರ್ದೇಶಕಿ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಇಲ್ಲಿನ ಕೆಎಸ್‌ಎಸ್ ಕಾಲೇಜಿನಲ್ಲಿ ಅಂತಿಮ ಬಿಬಿಎ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿ ಸ್ವಾತಿ ರೈ ಆರ್ತಿಲ (21), ಪುತ್ತೂರು ಭೂ ಅಭಿವೃದ್ಧಿ ಬ್ಯಾಂಕ್ (ಪಿಎಲ್‌ಡಿ) ನಿರ್ದೇಶಕಿಯಾಗಿ ಮಹಿಳಾ ಮೀಸಲು ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇವರು ಕಡಬ ತಾಲ್ಲೂಕಿನ ಆರ್ತಿಲದ ದಿ.ಆನಂದ ರೈ ಮತ್ತು ತಾರಾ ರೈ ಅವರ ಪುತ್ರಿ.



ಸಹಕಾರ ಭಾರತಿ ಸಂಘಟನೆಯವರು ತಮ್ಮ ಗುಂಪಿನಿಂದ ಸ್ಪರ್ಧಿಸುವಂತೆ ಸ್ವಾತಿ ರೈ ಅವರ ತಾಯಿ ತಾರಾ ರೈ ಅವರಿಗೆ ತಿಳಿಸಿದ್ದರು. ಆದರೆ, ಅವರು ವೈಯಕ್ತಿಕ ಕಾರಣಗಳಿಂದ ಅದನ್ನು ತಿರಸ್ಕರಿಸಿದ್ದರು.

ಕಡಬ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಪ್ರಕಾಶ್ ಎನ್. ಮತ್ತಿತರರು ವಿದ್ಯಾರ್ಥಿನಿಗೆ ಧೈರ್ಯ ತುಂಬಿದರು. ಆರಂಭದಲ್ಲಿ ಕಾಲೇಜಿನ ಓದಿಗೆ ತೊಂದರೆ ಆಗುತ್ತದೆ ಎಂದಿದ್ದ ಸ್ವಾತಿ ರೈ, ನಂತರ ಬಂದ ಅವಕಾಶವನ್ನು ಬಳಸಿಕೊಳ್ಳುವ ಗಟ್ಟಿ ನಿರ್ಧಾರ ಮಾಡಿ ನಾಮಪತ್ರ ಸಲ್ಲಿಸಿದ್ದರು.

'ಬೇಸಿಗೆ: ಲೋಡ್ ಶೆಡ್ಡಿಂಗ್ ಇಲ್ಲ'

ಬಾಗಲಕೋಟೆ: 'ಈ ವರ್ಷ ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಮಾಡುವುದಿಲ್ಲ. ಕಳೆದ ವರ್ಷ ಬರಗಾಲ ಇದ್ದಾಗಲೇ ಲೋಡ್ ಶೆಡ್ಡಿಂಗ್ ಮಾಡಿರಲಿಲ್ಲ. ಈ ವರ್ಷ ಜಲಾಶಯಗಳಲ್ಲೂ ನೀರಿನ ಸಂಗ್ರಹ ಚೆನ್ನಾಗಿದೆ. ಲೋಡ್ ಶೆಡ್ಡಿಂಗ್ ಮಾಡುವ ಪರಿಸ್ಥಿತಿಯೇ ಉದ್ಭವಿಸುವುದಿಲ್ಲ' ಎಂದು ಇಂಧನ ಸಚಿವ ಕೆ.ಜೆ ಜಾರ್ಜ್ ಹೇಳಿದರು.

'ಒಂದು ವೇಳೆ ವಿದ್ಯುತ್ ಕೊರತೆ ಎದುರಾದರೆ ಬೇರೆ ರಾಜ್ಯಗಳಿಂದ ವಿದ್ಯುತ್ ಖರೀದಿಸಿ, ಪೂರೈಸಲಾಗುವುದು. ರಾಜ್ಯದ ವಿವಿಧೆಡೆ ಸೌರಶಕ್ತಿ ಸೇರಿದಂತೆ ವಿವಿಧ ವಿದ್ಯುತ್ ಉತ್ಪಾದನೆ ಹೆಚ್ಚಿಸಲಾಗಿದೆ. ಎರಡು ವರ್ಷಗಳ ನಂತರ ವಿದ್ಯುತ್ ಸಮಸ್ಯೆ ಇರುವುದಿಲ್ಲ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲ ಇಲ್ಲ. ಇದನ್ನು ಮಾಧ್ಯಮಗಳು ಸೃಷ್ಟಿಸುತ್ತಿವೆ' ಎಂದರು.

ಬಾಣಂತಿಯರ ಸಾವು ಕಡಿವಾಣಕ್ಕೆ ಸುರಕ್ಷಾ ಅಭಿಯಾನ: ಸಚಿವ

ಪ್ರಜಾವಾಣಿ ವಾರ್ತೆ

ಮಾನ್ವಿ (ರಾಯಚೂರು ಜಿಲ್ಲೆ): 'ರಾಜ್ಯದಲ್ಲಿ ಬಾಣಂತಿಯರ ಸಾವು ಪ್ರಕರಣಗಳ ನಿಯಂತ್ರಣಕ್ಕಾಗಿ ಆರೋಗ್ಯ ಇಲಾಖೆ ವತಿಯಿಂದ ಸುರಕ್ಷಾ ಅಭಿಯಾನ ಹಮ್ಮಿಕೊಳ್ಳಲಾಗುವುದು' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.



ದಿನೇಶ್ ಗುಂಡೂರಾವ್

ಬುಧವಾರ ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿದ ವೇಳೆ ಸುದ್ದಿಗಾರರ ಜತೆ ಅವರು ಮಾತನಾಡಿದರು.



'ಪ್ರಸ್ತುತ ಬಾಣಂತಿಯರ ಸಾವಿನ ಪ್ರಮಾಣ 1 ಲಕ್ಷಕ್ಕೆ 60 ಇದೆ. ಈ ಪ್ರಮಾಣವನ್ನು ತಡೆಗಟ್ಟಲು ಅಥವಾ ಕಡಿಮೆ ಮಾಡಲು ಬಾಣಂತಿಯರ ಆರೋಗ್ಯ ತಪಾಸಣೆ, ಚಿಕಿತ್ಸೆ ಮತ್ತು ಸುರಕ್ಷಾ ಅಭಿಯಾನ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳು ಸೇರಿದಂತೆ ಎಲ್ಲ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಖಾಲಿ ಇರುವ ಮುಖ್ಯ ವೈದ್ಯಾಧಿಕಾರಿ, ತಜ್ಞರು ಹಾಗೂ ಶುಶ್ರೂಷಕ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.


ರಾಣೆಬೆನ್ನೂರು ತಾಲ್ಲೂಕು: ಮನೆಗೆ ಬೀಗ, ನಿವಾಸಿಗಳ ಗುಳೆ

ಫೈನಾನ್ಸ್ ಕಿರುಕುಳಕ್ಕೆ ಊರು ಬಿಟ್ಟರು

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ತಾಲ್ಲೂಕಿನಲ್ಲಿ ದಿನದಿಂದ ದಿನಕ್ಕೆ ಮೈಕ್ರೊ ಫೈನಾನ್ಸ್‌ನವರ ಕಿರುಕುಳ ಹೆಚ್ಚುತ್ತಿದ್ದು, ಜನರು ಬೇಸತ್ತು ಗ್ರಾಮ ತೊರೆಯುವುದು ಮುಂದುವರೆದಿದೆ. ಮನೆಗಳಿಗೆ ಬೀಗ ಹಾಕಿ, ಬೇರೆ ಊರುಗಳಿಗೆ ಹೋಗುತ್ತಿದ್ದಾರೆ.

'ನಗರದ ಅಡವಿ ಆಂಜನೇಯ ಬಡಾವಣೆ ಅಶೋಕನಗರ ಮತ್ತು ತಾಲ್ಲೂಕಿನ ಯರೇಕುಪ್ಪಿ, ಗುಡ್ಡದಹೊಸಳ್ಳಿ, ಹೆಡಿಯಾಲ, ಕುಸಗೂರ ಸೇರಿ ವಿವಿಧ ಗ್ರಾಮಗಳಲ್ಲಿ ಮನೆ ಖರ್ಚು ವೆಚ್ಚಗಳಿಗೆ ಹಲವರು ಸಾಲ ಪಡೆದಿದ್ದಾರೆ. ಆದರೆ, ಈಗ ಅವರಿಗೆ ಮೈಕ್ರೊ ಫೈನಾನ್ಸ್ ಕಂಪನಿಯವರು ಹಗಲು, ರಾತ್ರಿಯೆನ್ನದೇ ಕೊಡುತ್ತಿರುವ ಕಿರುಕುಳ ತಾಳಲು ಆಗುತ್ತಿಲ್ಲ' ಎಂದು ಜನರು ಆರೋಪಿಸಿದರು.



ಅಡವಿ ಅಂಜನೇಯ ಬಡಾವಣೆಯಲ್ಲಿ ಬಡವರು, ಅಲ್ಪ ಸಂಖ್ಯಾತರು, ಕೂಲಿ ಕಾರ್ಮಿಕರು, ಆಟೊ ಚಾಲಕರು, ಕೂದಲು, ಪಿನ್ ಮತ್ತು ಸ್ಟೇಷನರಿ ವ್ಯಾಪಾರ ಮಾಡುತ್ತ ಜೀವನ ನಡೆಸುವವರೇ ಹೆಚ್ಚು ವಾಸವಿದ್ದಾರೆ.ಅಡವಿ ಆಂಜನೇಯ ಬಡಾವಣೆಯ ನಿವಾಸಿ ಅಮೀದಾ (ಆರಿಭಾ) ಶಿಡೇನೂರು 'ಪ್ರಜಾವಾಣಿ' ಯೊಂದಿಗೆ ಮಾತನಾಡಿ, 'ಮನೆಯಲ್ಲಿ ಕಷ್ಟ ಇದೆ ಎಂದು ಸಾಲ ಪಡೆದಿದ್ದೆ. ಒಂದು ವಾರವೂ ಬಡ್ಡಿ ಕಟ್ಟುವುದು ತಪ್ಪಿಸಿಲ್ಲ. ನಾನು ಕೆಲಸಕ್ಕೆಂದು ಪೇಟೆಗೆ ಹೋಗಿದ್ದೆ, ಆಗ ಫೈನಾನ್ಸ್‌ನವರು ಮನೆ ಮುಂದೆ ಬಂದು ಹಣ ಕಟ್ಟಬೇಕೆಂದು ಒತ್ತಾಯಿಸಿದ್ದಾರೆ. ಅಮ್ಮ ಬರುವವರೆಗೆ ಕಾಯಿರಿ. ಗಲಾಟೆ ಮಾಡಬೇಡಿ ಎಂದು ಮನೆಯಲ್ಲಿದ್ದ ಮಗಳು ಕೋರಿದರೂ ಫೈನಾನ್ಸ್ ಕಂಪನಿಯವರು ಸುಮ್ಮನಾಗಿಲ್ಲ. ಮನೆಯಿಂದ ಕದಲುವುದಿಲ್ಲವೆಂದು ಎಚ್ಚರಿಕೆ ನೀಡುತ್ತಾರೆ' ಎಂದು ಅಡವಿ ಆಂಜನೇಯ ಬಡಾವಣೆಯ ನಿವಾಸಿ ಅಮೀದಾ (ಆರಿಭಾ) ತಿಳಿಸಿದರು.

'ಮನೆಯಲ್ಲಿ ಗಂಡು ಮಕ್ಕಳು ಕೆಲಸಕ್ಕೆ ಹೋಗಿರುತ್ತಾರೆ. ಮನೆಯಲ್ಲಿದ್ದ ವಿಧವೆಯವರ ಗೋಳು ಹೇಳತೀರದು. ಮಂಗಳವಾರ ಸಂಜೆ ಫೈನಾನ್ಸ್ ಕಂಪನಿ ಸಿಬ್ಬಂದಿ ನಮ್ಮ ಮನೆಗೆ ಬಂದು ಗಲಾಟೆ ಮಾಡಿದ್ದಾರೆ. ನನಗೆ ತೊಂದರೆ ಇದೆ, ಕಾಲಾವಕಾಶ ಕೊಡಿ ಎಂದು ಅಂಗಲಾಚಿದರೂ ಜೋರು ಮಾಡಿದರು. ಕೂಡಲೇ ಗ್ರಾಮೀಣ ಠಾಣೆ ಪಿಎಸ್‌ಐ ಹಿರೇಮಠ ಅವರು ಬಂದು ಪರಿಶೀಲಿಸಿದರು. ಆಗ, ಫೈನಾನ್ಸ್ ಕಂಪನಿ ಸಿಬ್ಬಂದಿ ಇನ್ನು ತೊಂದರೆ ಮಾಡುವುದಿಲ್ಲ ಎಂದು ತಪ್ಪೊಪ್ಪಿಗೆ ಪತ್ರ ಬರೆದು ಕೊಟ್ಟಿದ್ದಾರೆ' ಎಂದರು.

ದೇವದಾರಿ ಗಣಿ ಗುತ್ತಿಗೆ ನವೀಕರಣ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಸಂಡೂರು ತಾಲ್ಲೂಕಿನ ಸ್ವಾಮಿ ಮಲೈ ಬ್ಲಾಕ್‌ನ ದೇವದಾರಿ ಶ್ರೇಣಿಯಲ್ಲಿ ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ (ಕೆಐಒಸಿಎಲ್) ಮಂಜೂರಾದ ಗಣಿ ಗುತ್ತಿಗೆಯನ್ನು ರಾಜ್ಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಒಂದು ವರ್ಷದ ಅವಧಿಗೆ ನವೀಕರಿಸಿದೆ.

ಗುತ್ತಿಗೆ ನವೀಕರಿಸುವಂತೆ ಸಂಸ್ಥೆಯು 2024ರ ಸೆ. 19ರಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಪತ್ರ ಬರೆದಿತ್ತು. ಇದನ್ನು ಪರಿಗಣಿಸಿರುವ ಇಲಾಖೆ, 'ಗಣಿ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) (ಎಂಎಂಡಿಆರ್) ಕಾಯ್ದೆ-1957'ರ ಸೆಕ್ಷನ್ 4, 4(ಎ)ರಡಿ ಗುತ್ತಿಗೆಯನ್ನು ನವೀಕರಣ ಮಾಡಿದೆ.

ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕರು 2024ರ ಡಿ. 30ರಂದು ಕೆಐಒಸಿಎಲ್‌ಗೆ ಈ ಬಗ್ಗೆ ಪತ್ರ ಬರೆದಿದ್ದಾರೆ.

ಕೆಐಒಸಿಎಲ್ ಸಂಸ್ಥೆ 50 ವರ್ಷಗಳ ಅವಧಿಗೆ ದೇವದಾರಿ ಗಣಿಯನ್ನು ಗುತ್ತಿಗೆಗೆ ಪಡೆದಿದೆ. ಆದರೆ, ಗುತ್ತಿಗೆ ಕರಾರು ನೋಂದಣಿಯಾದ 2 ವರ್ಷಗಳಲ್ಲಿ ಕಂಪನಿ ನಿರ್ದಿಷ್ಟ ಪ್ರದೇಶದಲ್ಲಿ ಗಣಿಗಾರಿಕೆ ಆರಂಭಿಸಿ, ಅದಿರು ಉತ್ಪಾದಿಸಿ ಸಾಗಣೆ ಮಾಡಬೇಕಿತ್ತು. ಆದರೆ, ಅರಣ್ಯ ಭೂಮಿ ಹಸ್ತಾಂತರವಾಗದೇ ಕೆಐಒಸಿಎಲ್ ಈವರೆಗೆ ಗಣಿಗಾರಿಕೆ ಆರಂಭಿಸಿಲ್ಲ. ಹೀಗಾಗಿ ಎಂಎಂಡಿಆರ್ ಕಾಯ್ದೆ ಪ್ರಕಾರ ಗಣಿ ಗುತ್ತಿಗೆ ಜ. 17ಕ್ಕೆ ಅಂತ್ಯವಾಗಬೇಕಾಗಿತ್ತು. ಈ ಮಧ್ಯೆ ಕಂಪನಿ ತನ್ನ ಗುತ್ತಿಗೆ ನವೀಕರಿಸಿ-ಕೊಳ್ಳುವಲ್ಲಿ ಯಶಸ್ವಿಯಾಗಿದೆ.



ಪ್ರಸ್ತಾವಿತ ದೇವದಾರಿ ಗಣಿಗಾರಿಕೆ ಸ್ಥಳ

ಸಂಡೂರಿನ ಸ್ವಾಮಿ ಮಲೈ ಅರಣ್ಯದ 338 ಹೆಕ್ಟೆರ್ ಪ್ರದೇಶದಲ್ಲಿ ಅದಿರು ಉತ್ಪಾದಿಸಲು ಕೆಐಒಸಿಎಲ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯೊಂದಿಗೆ 2023ರ ಜ. 2ರಂದು ಗುತ್ತಿಗೆ ಕರಾರು ಒಪ್ಪಂದ ಮಾಡಿಕೊಂಡಿದೆ. ಇದನ್ನು 2023ರ ಜನವರಿ 18ರಂದು ಸಂಡೂರು ತಾಲೂಕಿನ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಲಾಗಿದೆ.

ಇಬ್ಬರು ನದಿ ಪಾಲು

ಸವದತ್ತಿ (ಬೆಳಗಾವಿ ಜಿಲ್ಲೆ): ಇಲ್ಲಿನ ಜಾಕ್ವೆಲ್ ಹತ್ತಿರ ಮಲಪ್ರಭಾ ನದಿಯಲ್ಲಿ ಸ್ನಾನಕ್ಕೆಂದು ತೆರಳಿದ್ದ ಗದಗನ ವೀರೇಶ ಮರೆಪ್ಪ ಕಟ್ಟಿಮನಿ (13) ಮತ್ತು ಸಚಿನ್ ಗೋಪಾಳ ಕಟ್ಟಿಮನಿ (14) ನೀರು ಪಾಲಾಗಿದ್ದಾರೆ. ಸಚಿನ್ ಶವ ಪತ್ತೆಯಾಗಿದ್ದು, ವೀರೇಶನ ಪತ್ತೆಗೆ ಶೋಧ ಮುಂದುವರೆದಿದೆ.

ಉನ್ನತ ಶಿಕ್ಷಣ ಸಚಿವರ ಸಮಾವೇಶಕ್ಕೆ ಸಿದ್ಧತೆ

ಕುಲಪತಿಗಳ ನೇಮಕದ ಸಂಪೂರ್ಣ ಅಧಿಕಾರವನ್ನು ರಾಜ್ಯಪಾಲರಿಗೆ ನೀಡುವುದು ಸೇರಿದಂತೆ ಹಲವು ಆಕ್ಷೇಪಗಳನ್ನು ಎತ್ತಿರುವ ಉನ್ನತ ಶಿಕ್ಷಣ ಸಚಿವ ಸುಧಾಕರ್, ಕರಡು ಹಿಂಪಡೆಯಲು ಯುಜಿಸಿಗೆ ನಿರ್ದೇಶನ ನೀಡುವಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಪತ್ರ ಬರೆದಿದ್ದಾರೆ

ಯುಜಿಸಿ ಧೋರಣೆ ವಿರುದ್ಧ 'ಬಹು ರಾಜ್ಯಗಳ ಮೈತ್ರಿ'

ಬೆಂಗಳೂರು: ವಿಶ್ವವಿದ್ಯಾಲಯಗಳ ಕುಲಪತಿ ನೇಮಕಾತಿಯೂ ಒಳಗೊಂಡಂತೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಬಿಡುಗಡೆ ಮಾಡಿರುವ ಕರಡು ನಿಯಮಗಳ ಕುರಿತು ಅಭಿಪ್ರಾಯ ಸಂಗ್ರಹಿಸಲು 'ಬಹು ರಾಜ್ಯಗಳ ಮೈತ್ರಿ'ಗೆ ಕರ್ನಾಟಕ ಮುಂದಾಗಿದೆ.

ಕರಡು ನಿಯಮಗಳ ಕುರಿತು ಚರ್ಚಿಸಲು ಬೆಂಗಳೂರಿನಲ್ಲಿ ಎಲ್ಲ ರಾಜ್ಯಗಳ ಉನ್ನತ ಶಿಕ್ಷಣ ಸಚಿವರ ರಾಷ್ಟ್ರೀಯ ಸಮಾವೇಶ ಆಯೋಜಿಸಲು ನಿರ್ಧರಿಸಿದೆ. ಉನ್ನತ ಶಿಕ್ಷಣ ಇಲಾಖೆ ಸಿದ್ಧಪಡಿಸಿರುವ ಟಿಪ್ಪಣಿಯಂತೆ ಫೆ. 5ರಂದು ಸಮ್ಮೇಳನ ನಡೆಸಲು ಯೋಜಿಸಲಾಗಿದೆ. ಈ ಕುರಿತು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಎಲ್ಲಾ ರಾಜ್ಯಗಳ ಸಚಿವರಿಗೆ ಪತ್ರ ಬರೆಯಲಿದ್ದಾರೆ.



ಡಾ.ಎಂ.ಸಿ. ಸುಧಾಕರ್

ರಾಜ್ಯದ ವಿಶ್ವವಿದ್ಯಾಲಯ ಕುಲಪತಿಗಳ ನೇಮಕಾತಿ ಅಧಿಕಾರವನ್ನು ರಾಜ್ಯಪಾಲರಿಗೆ ನೀಡಲು ನಿಯಮಗಳಿಗೆ ತಿದ್ದುಪಡಿ ತರುವ ಉದ್ದೇಶವನ್ನು ಕರಡು ನಿಯಮಾವಳಿ ಒಳಗೊಂಡಿದೆ. ಪ್ರಸ್ತುತ ಕುಲಪತಿಗಳ ನೇಮಕಾತಿಗೆ ರಾಜ್ಯ ಸರ್ಕಾರ ಶೋಧನಾ ಸಮಿತಿ ರಚಿಸುತ್ತಿತ್ತು. ಕುಲಾಧಿಪತಿಯೂ ಆದ ರಾಜ್ಯಪಾಲರು ಸಮಿತಿಯ ಸದಸ್ಯರನ್ನೂ ಶಿಫಾರಸು ಮಾಡುವ ಅಧಿಕಾರ ಹೊಂದಿದ್ದರು. ಹೊಸ ನಿಯಮಗಳ ಪ್ರಕಾರ ರಾಜ್ಯಪಾಲರು ಸೂಚಿಸುವ ವ್ಯಕ್ತಿಯೇ ಶೋಧನಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

ಕರಡು ನಿಯಮಕ್ಕೆ ಅಂತಿಮ ಸಮ್ಮತಿ ದೊರೆತರೆ ಇಲ್ಲಿಯವರೆಗೂ ಆಯಾ ರಾಜ್ಯಗಳ ವಿದ್ವಾಂಸರಿಗಷ್ಟೇ ಸೀಮಿತವಾಗಿದ್ದ ಹುದ್ದೆಗಳಲ್ಲಿ ಬೇರೆ ರಾಜ್ಯದವರಿಗೂ ಅವಕಾಶ ಮಾಡಿಕೊಡಬಹುದು. ಕೇವಲ ಬೋಧನಾ ವಲಯದಿಂದ ಮಾತ್ರ ನೇಮಿಸಿಕೊಳ್ಳದೆ, ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರದ ಉದ್ಯಮಿಗಳು, ಸಾರ್ವಜನಿಕ ಆಡಳಿತದ ನೀತಿ, ನಿರೂಪಕರು ಸೇರಿದಂತೆ ಬೇರೆ ಕ್ಷೇತ್ರದಲ್ಲಿರುವ ತಜ್ಞರನ್ನು ಕುಲಪತಿಯಾಗಿ ನೇಮಿಸಬಹುದು. ಅದಕ್ಕಾಗಿ ರಾಷ್ಟ್ರ-ಮಟ್ಟದ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ, ಅರ್ಜಿಗಳನ್ನು ಆಹ್ವಾನಿಸಬೇಕು.

ಯುಜಿಸಿ ಬಿಡುಗಡೆ ಮಾಡಿರುವ ಕರಡು ನಿಯಮಗಳ ಈಗಾಗಲೇ ಕೇರಳ, ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳು ಆಕ್ಷೇಪ ವ್ಯಕ್ತಪಡಿಸಿವೆ. ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಖಂಡಿಸಿದ್ದಾರೆ.



ಮಹಾರಥೋತ್ಸವ

ದಕ್ಷಿಣ ಕನ್ನಡ ಜಿಲ್ಲೆ ವಿಟ್ಲದ ಐತಿಹಾಸಿಕ ಪಂಚಲಿಂಗೇಶ್ವರ ದೇವಸ್ಥಾನದ ಮಹಾರಥೋತ್ಸವ ಮಂಗಳವಾರ ರಾತ್ರಿ ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ನಡೆಯಿತು

ಗಗನಯಾನ: 'ಕ್ರ್ಯೂ ಮಾಡ್ಯೂಲ್' ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಗನಯಾನ ಯೋಜನೆ ಪೂರ್ವಭಾವಿ ಪರೀಕ್ಷೆಯ ಭಾಗವಾಗಿ ಮಾನವರಹಿತ ಗಗನಯಾನದ ಉಡಾವಣೆಗೆ ಕ್ರ್ಯೂ ಮಾಡ್ಯೂಲ್ (ಗಗನಯಾನಿಗಳು ಕುಳಿತು ಪ್ರಯಾಣಿಸುವ ಕೋಶ) ಅನ್ನು ದ್ರವ ನೋದನ ವ್ಯವಸ್ಥೆಗೆ (ಲಿಕ್ವಿಡ್ ಪ್ರೊಪೆಲ್ಷನ್ ಸಿಸ್ಟಮ್) ಜೋಡಿಸಲಾಗಿದೆ.

ಲಿಕ್ವಿಡ್ ಪ್ರೊಪೆಲ್ಷನ್ ಸಿಸ್ಟಮ್‌ಗೆ ಜೋಡಣೆಗೊಂಡಿರುವ ಕ್ರ್ಯೂ ಮಾಡ್ಯೂಲ್‌ಅನ್ನು ಕೇರಳದ ತಿರುವನಂತಪುರದ ವಿಕ್ರಮ್ ಸಾರಾಭಾಯಿ ಕೇಂದ್ರದಿಂದ ಬೆಂಗಳೂರಿನ ಯು.ಆರ್. ರಾವ್ ಉಪಗ್ರಹಕೇಂದ್ರಕ್ಕೆ ಕಳುಹಿಸಲು ಸಿದ್ಧತೆ ನಡೆಸಲಾಗಿದೆ. ಅದಕ್ಕೂ ಮುನ್ನ, ಇನ್ನಷ್ಟು ಉಪಕರಣಗಳ ಜೋಡಣೆ ಕಾರ್ಯ ನಡೆಯಲಿದೆ ಎಂದು ಇಸ್ರೊ ಪ್ರಕಟಣೆ ತಿಳಿಸಿದೆ.



ಕ್ರ್ಯೂ ಮಾಡ್ಯೂಲ್

ಮಾನವ ಸಹಿತ ಗಗನಯಾನಕ್ಕೂ ಮೊದಲು ಮಾನವರಹಿತ ಕ್ರ್ಯೂ ಮಾಡ್ಯೂಲ್ ಅನ್ನು ಪರೀಕ್ಷಾರ್ಥವಾಗಿ ಉಡಾವಣೆ ಮಾಡಲಾಗುವುದು. ಈ ಉಡಾವಣೆ ಯಶಸ್ವಿಯಾದರೆ ಗಗನ-ಯಾನಿಗಳನ್ನು ನಭಕ್ಕೆ ಕಳುಹಿಸಲಾಗು-ವುದು. ಈ ಕ್ರ್ಯೂ ಮಾಡ್ಯೂಲ್ ಮೂರು ಬಗೆಯ ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆ. ಗಗನಯಾನಿಗಳನ್ನು ಹೊತ್ತು ಭೂಮಿಯನ್ನು ಪ್ರವೇಶಿಸುವಾಗ ಕ್ರ್ಯೂ ಮಾಡ್ಯೂಲ್ ನೌಕೆಯಿಂದ ಪ್ರತ್ಯೇಕಗೊಳಿಸಲು ಮೂರು ಹಂತಗಳಲ್ಲಿ ನಿಯಂತ್ರಿಸಲಾಗುವುದು. ಆ ಬಳಿಕ ಪ್ಯಾರಾಚೂಟ್ ಬಳಸಿ ಕ್ರ್ಯೂ ಮಾಡ್ಯೂಲ್ ಅನ್ನು ನಿಧಾನಗೊಳಿಸಲಾಗುವುದು ಎಂದು ಇಸ್ರೊ ತಿಳಿಸಿದೆ.

ಬೆಂಗಳೂರಿನ ಯು.ಆರ್.ರಾವ್ ಉಪಗ್ರಹ ಕೇಂದ್ರಕ್ಕೆ ಕ್ರ್ಯೂ ಮಾಡ್ಯೂಲ್ ಕಳಿಸುವುದಕ್ಕೂ ಮುನ್ನ ಏವಿಯಾನಿಕ್ಸ್ ಪ್ಯಾಕೇಜ್, ಎಲೆಕ್ಟ್ರಿಕಲ್ ಉಪಕರ-ಣಗಳನ್ನು ಜೋಡಿಸಲಾಗುವುದು. ಯು.ಆರ್.ರಾವ್ ಕೇಂದ್ರದಲ್ಲಿ ಕಕ್ಷೆಯನ್ನು ಪರಿಭ್ರಮಣ ನಡೆಸುವ ಆರ್ಬಿಟಲ್ ಮಾಡ್ಯೂಲ್ ಅನ್ನು ಜೋಡಿಸಲಾ ಗುವುದು ಎಂದು ಹೇಳಿದೆ.

ಸುದೀಪ್ ಅತ್ಯುತ್ತಮ ನಟ, 'ಮೋಹನ ದಾಸ' ಅತ್ಯುತ್ತಮ ಚಿತ್ರ

ಒಂದನೇ ಪುಟದಿಂದ...

ಪಿ.ಶೇಷಾದ್ರಿ ನಿರ್ದೇಶನದ 'ಮೋಹನ ದಾಸ' ಮೊದಲನೇ ಅತ್ಯುತ್ತಮ ಚಿತ್ರವಾಗಿ, ಡಾರ್ಲಿಂಗ್ ಕೃಷ್ಣ ಅವರ 'ಲವ್ ಮಾಕ್‌ಟೇಲ್', 'ಅರ್ಘ್ಯಂ' ಚಿತ್ರಗಳು ಕ್ರಮವಾಗಿ ಎರಡನೇ ಮತ್ತು ಮೂರನೇ ಅತ್ಯುತ್ತಮ ಚಿತ್ರಗಳಾಗಿ ಹೊರಹೊಮ್ಮಿವೆ. 'ಕನ್ನೇರಿ' ಅತ್ಯುತ್ತಮ ಸಾಮಾಜಿಕ ಕಾಳಜಿ ಚಿತ್ರವಾದರೆ, ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಇಂಡಿಯಾ vs ಇಂಗ್ಲೆಂಡ್' ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರವಾಗಿದೆ.

ಜಯಂತ ಕಾಯ್ಕಿಣಿ 'ಅತ್ಯುತ್ತಮ ಕಥೆ', ಬರಗೂರು ರಾಮಚಂದ್ರಪ್ಪ 'ಅತ್ಯುತ್ತಮ ಸಂಭಾಷಣೆ', ವಿ.ಹರಿಕೃಷ್ಣ 'ಅತ್ಯುತ್ತಮ ಸಂಗೀತ', ಜಿ.ಎಸ್.ಭಾಸ್ಕರ್ 'ಅತ್ಯುತ್ತಮ ಛಾಯಾಗ್ರಹಣ'ಕ್ಕಾಗಿ ಪ್ರಶಸ್ತಿಗೆ ಆಯ್ಕೆಗೊಂಡಿದ್ದಾರೆ.

ಅತ್ಯುತ್ತಮ ಚಿತ್ರ ಮತ್ತು ನಿರ್ದೇಶನ ಪ್ರಶಸ್ತಿಯು ₹1 ಲಕ್ಷ ನಗದು ಹಾಗೂ 50 ಗ್ರಾಂ ಚಿನ್ನದ ಪದಕವನ್ನು ಒಳಗೊಂಡಿದೆ. ಅತ್ಯುತ್ತಮ ಎರಡನೇ ಚಿತ್ರ ₹75,000 ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ, ಅತ್ಯುತ್ತಮ ಮೂರನೇ ಚಿತ್ರ ₹50,000 ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ ಹೊಂದಿದೆ. ಅತ್ಯುತ್ತಮ ಸಾಮಾಜಿಕ ಕಾಳಜಿ ಪ್ರಶಸ್ತಿ ₹75,000 ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ ಹೊಂದಿವೆ.

ನಿರ್ದೇಶಕ, ನಿರ್ಮಾಪಕ ನಂಜುಡೇಗೌಡ ಅವರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಲಹಾ ಸಮಿತಿ ಈ ಪ್ರಶಸ್ತಿಗಳನ್ನು ಆಯ್ಕೆ ಮಾಡಿದ್ದು, 172 ಚಿತ್ರಗಳನ್ನು ಆಯ್ಕೆ ಸುತ್ತಿಗೆ ಪರಿಗಣಿಸಲಾಗಿತ್ತು.

2019ನೇ ಸಾಲಿನ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಳ ವಿವರ

ಮೊದಲನೇ ಅತ್ಯುತ್ತಮ ಚಿತ್ರ: ಮೋಹನದಾಸ **ನಿರ್ಮಾಪಕ:** ಮಿತ್ರಚಿತ್ರ **ನಿರ್ದೇಶಕ:** ಪಿ. ಶೇಷಾದ್ರಿ	**ಎರಡನೇ ಅತ್ಯುತ್ತಮ ಚಿತ್ರ:** ಲವ್ ಮಾಕ್‌ಟೈಲ್ **ನಿರ್ಮಾಪಕ:** ಕೃಷ್ಣ ಟಾಕೀಸ್, ಎ.ನಾಗಪ್ಪ **ನಿರ್ದೇಶಕ:** ಡಾರ್ಲಿಂಗ್ ಕೃಷ್ಣ	**ಮೂರನೇ ಅತ್ಯುತ್ತಮ ಚಿತ್ರ:** ಅರ್ಘ್ಯಂ **ನಿರ್ಮಾಪಕ:** ಪರಮೇಶ್ವರಿ ಆರ್ಟ್ಸ್, ವೈ.ಶ್ರೀನಿವಾಸ್ **ನಿರ್ದೇಶಕ:** ವೈ. ಶ್ರೀನಿವಾಸ್
ವಿಶೇಷ ಸಾಮಾಜಿಕ ಕಾಳಜಿಯ ಚಿತ್ರ: ಕನ್ನೇರಿ **ನಿರ್ಮಾಪಕ:** ಬುದ್ದಿದೀಪ ಸಿನಿಮಾ ಹೌಸ್, ಮಂಜುನಾಥ್ ಎನ್. **ನಿರ್ದೇಶಕ:** ಮಂಜುನಾಥ್ ಎಸ್.	**ಅತ್ಯುತ್ತಮ ನಟಿ:** ಅನುಪಮಾ ಗೌಡ **ಚಿತ್ರ:** ತ್ರಯಂಬಕಂ	**ಅತ್ಯುತ್ತಮ ಬಾಲ ನಟಿ:** ಬೇಬಿ ವೈಷ್ಣವಿ ಅಡಿಗ **ಚಿತ್ರ:** ಸುಗಂಧಿ
ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ: ಇಂಡಿಯಾ v/s ಇಂಗ್ಲೆಂಡ್ **ನಿರ್ಮಾಪಕ:** ನಾಗತಿಹಳ್ಳಿ ಸಿನಿ ಕಂಬೈನ್ಸ್, ಶ್ರೀ ವೈ.ಎನ್.ಶಂಕರೇಗೌಡ **ನಿರ್ದೇಶಕ:** ನಾಗತಿಹಳ್ಳಿ ಚಂದ್ರಶೇಖರ್	**ಅತ್ಯುತ್ತಮ ಪೋಷಕ ನಟ:** ತಬಲ ನಾಣಿ **ಚಿತ್ರ:** ಕೆಮಿಸ್ಟ್ರಿ ಆಫ್ ಕರಿಯಪ್ಪ	**ಅತ್ಯುತ್ತಮ ಕಲಾ ನಿರ್ದೇಶನ:** ಹೊಸ್ಮನೆ ಮೂರ್ತಿ **ಚಿತ್ರ:** ಮೋಹನದಾಸ
ಅತ್ಯುತ್ತಮ ಮಕ್ಕಳ ಚಿತ್ರ: ಎಲ್ಲಿ ಆಡೋದು ನಾವು ಎಲ್ಲಿ ಆಡೋದು **ನಿರ್ಮಾಪಕ:** ಎಸ್.ಆರ್. ಎಂಟರ್‌ಪ್ರೈಸಸ್, ಶ್ರೀನಿವಾಸ್ ಡಿ. **ನಿರ್ದೇಶಕ:** ಜಿ. ಅರುಣ್ ಕುಮಾರ್	**ಅತ್ಯುತ್ತಮ ಪೋಷಕ ನಟಿ:** ಅನೂಷಾ ಕೃಷ್ಣ **ಚಿತ್ರ:** ಬ್ರಾಹ್ಮಿ	**ಅತ್ಯುತ್ತಮ ಗೀತ ರಚನೆ:** ರಯಾಕ್ ಪುತ್ತೂರು **ಚಿತ್ರ:** ಪೆನ್ಸಿಲ್ ಬಾಕ್ಸ್
ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಿತ್ರ: ಗೋಪಾಲಗಾಂಧಿ **ನಿರ್ಮಾಪಕ:** ರೇವಣ ಸಿದ್ದೇಶ್ವರ ಮೂವೀಸ್, ಎಸ್.ಅಶೋಕ್ ರಾವ್ **ನಿರ್ದೇಶಕ:** ನಾಗೇಶ್ ಎನ್.	**ಅತ್ಯುತ್ತಮ ಕತೆ:** ಜಯಂತ್ ಕಾಯ್ಕಿಣಿ **ಚಿತ್ರ :** ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ	**ಅತ್ಯುತ್ತಮ ಹಿನ್ನೆಲೆ ಗಾಯಕ:** ರಘು ದೀಕ್ಷಿತ್ **ಚಿತ್ರ :** ಲವ್ ಮಾಕ್‌ಟೇಲ್
ಅತ್ಯುತ್ತಮ ಕರ್ನಾಟಕ ಪ್ರಾದೇಶಿಕ ಭಾಷಾ ಚಿತ್ರ: ಟ್ರಿಪಲ್ ತಲಾಕ್ (ಬ್ಯಾರಿ ಭಾಷೆ) **ನಿರ್ಮಾಪಕ:** ಗುಲ್ವಾಡಿ ಟಾಕೀಸ್, ಯಾಕೂಬ್ ಖಾದರ್ ಗುಲ್ವಾಡಿ **ನಿರ್ದೇಶಕ:** ಯಾಕೂಬ್ ಖಾದರ್ ಗುಲ್ವಾಡಿ	**ಅತ್ಯುತ್ತಮ ಚಿತ್ರಕತೆ:** ಡಾರ್ಲಿಂಗ್ ಕೃಷ್ಣ **ಚಿತ್ರ:** ಲವ್ ಮಾಕ್‌ಟೇಲ್	**ಅತ್ಯುತ್ತಮ ಹಿನ್ನೆಲೆ ಗಾಯಕಿ:** ಜಯದೇವಿ ಜಿಂಗಮ ಶೆಟ್ಟಿ **ಚಿತ್ರ :** ರಾಗಭೈರವಿ
ಅತ್ಯುತ್ತಮ ನಟ: ಕಿಚ್ಚ ಸುದೀಪ್ **ಚಿತ್ರ:** ಪೈಲ್ವಾನ್	**ಅತ್ಯುತ್ತಮ ಸಂಭಾಷಣೆ:** ಬರಗೂರು ರಾಮಚಂದ್ರಪ್ಪ **ಚಿತ್ರ:** ಅಮೃತಮತಿ	**ತೀರ್ಪುಗಾರರ ವಿಶೇಷ ಪ್ರಶಸ್ತಿ** **ನಿರ್ಮಾಪಕರು:** ಪುಟ್ಟಣ್ಣ **ನಿರ್ಮಾಣ ಸಂಸ್ಥೆ:** ಇಂಚರ ಪುಟ್ಟಣ್ಣ ಪ್ರೊಡಕ್ಷನ್ **ಚಿತ್ರ:** ಅಮೃತಮತಿ
	ಅತ್ಯುತ್ತಮ ಛಾಯಾಗ್ರಹಣ: ಜಿ.ಎಸ್. ಭಾಸ್ಕರ್ **ಚಿತ್ರ:** ಮೋಹನದಾಸ	**ನಿರ್ಮಾಪಕರು:** ಬಿ.ಎನ್.ಜಿ. ರಾಜ್ **ನಿರ್ಮಾಣ ಸಂಸ್ಥೆ:** ಬಾಲಾಜಿ ಚಿತ್ರ **ಚಿತ್ರ:** ತಮಟೆ ನರಸಿಂಹಯ್ಯ
	ಅತ್ಯುತ್ತಮ ಸಂಗೀತ ನಿರ್ದೇಶನ: ವಿ. ಹರಿಕೃಷ್ಣ **ಚಿತ್ರ:** ಯಜಮಾನ	**ಅತ್ಯುತ್ತಮ ನಿರ್ಮಾಣ ನಿರ್ವಾಹಕ:** ಆರ್.ಗಂಗಾಧರ್ **ಚಿತ್ರ:** ಮಕ್ಕಡ್ ಮನಸ್
	ಅತ್ಯುತ್ತಮ ಸಂಕಲನ: ಜಿ.ಬಸವರಾಜ್ ಅರಸ್ (ಶಿವು) **ಚಿತ್ರ:** ಝಾನ್ಸಿ ಐ.ಪಿ.ಎಸ್	
	ಅತ್ಯುತ್ತಮ ಬಾಲ ನಟ: ಮಾಸ್ಟರ್ ಪ್ರೀತಂ **ಚಿತ್ರ:** ಮಿಂಚುಹುಳ	

ಹಿಂದೂ ಮಹಿಳೆ ಅಂತ್ಯಕ್ರಿಯೆಗೆ ಕೈಜೋಡಿಸಿದ ಮುಸ್ಲಿಮರು

ಅಂತ್ಯಸಂಸ್ಕಾರದಲ್ಲಿ ಗ್ರಾಮಸ್ಥರ ಸೌಹಾರ್ದ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ರಫೀಕ್ ಮನೆಯಲ್ಲಿ ವಾಸವಾಗಿದ್ದ ಜಾನಕಿ
- ಹಿಂದೂ ಸಂಪ್ರದಾಯದಂತೆ ಜಾನಕಿ ಅಂತ್ಯಕ್ರಿಯೆ

ಪಡುಬಿದ್ರಿ (ಉಡುಪಿ): ಮುಸ್ಲಿಮರ ಮನೆಯಲ್ಲಿ ಕುಟುಂಬದ ಸದಸ್ಯೆಯಂತೆ ವಾಸವಾಗಿದ್ದು ಸಾವಿಗೀಡಾದ ಹಿಂದೂ ಮಹಿಳೆಯ ಅಂತ್ಯಸಂಸ್ಕಾರವನ್ನು ಹಿಂದೂ ಸಂಪ್ರದಾಯದಂತೆ ನೆರವೇರಿಸಿದ ಕಾಪು ಮಲ್ಲಾರು ಗ್ರಾಮಸ್ಥರು ಸೌಹಾರ್ದ ಮೆರೆದರು.

75 ವರ್ಷಗಳಿಂದ ಉದ್ಯಾವರ ಮೂಲದ ಜಾನಕಿ ಪೂಜಾರಿ ಅವರು ರಫೀಕ್ ಮನೆಯಲ್ಲಿ ವಾಸವಾಗಿದ್ದರು. ಜಾನಕಿ ಅವರ ಪತಿ ಹಾಗೂ ಅವರನ್ನು ನೋಡಿಕೊಳ್ಳುತ್ತಿದ್ದ ರಫೀಕ್ ಅವರ ತಂದೆ ಗೆಳೆಯರಾಗಿದ್ದರು. ಮಗ ಇದ್ದರೂ ಪತಿಯ ಅಗಲಿಕೆಯ ನಂತರ ಜಾನಕಿ ಅವರು ರಫೀಕ್ ತಾಯಿ ಜೊತೆ ಮುಂಬೈನಲ್ಲಿ ಅಡುಗೆ ಕೆಲಸ ಮಾಡಿಕೊಂಡು ವಾಸವಾಗಿದ್ದರು.

'1980ರಲ್ಲಿ ಮುಂಬೈ ಬಿಟ್ಟು ಉಡುಪಿಯ ಕುಕ್ಕಿಕಟ್ಟೆಯಲ್ಲಿ ಮನೆ ಮಾಡಿಕೊಂಡು ವಾಸವಾದ ನಂತರವೂ ಜಾನಕಿ ಅವರು ನಮ್ಮೊಂದಿಗೇ ಇದ್ದರು. 10 ವರ್ಷಗಳ ಹಿಂದೆ ಮಲ್ಲಾರು ಗರಡಿ ವಾರ್ಡ್‌ನಲ್ಲಿ ಮನೆ ಖರೀದಿಸಿದ ಬಳಿಕವೂ ನಮ್ಮ ಮನೆಯಲ್ಲಿ ಇರಲು ನಿರ್ಧರಿಸಿದ್ದರು.



ಜಾನಕಿ

ಬಾಲ್ಯದಲ್ಲಿ ನನ್ನನ್ನು ಮಗನಂತೆ ನೋಡಿಕೊಂಡಿದ್ದರು' ಎಂದು ನೆನಪಿಸಿಕೊಳ್ಳುತ್ತಾರೆ ರಫೀಕ್.

ವೃದ್ಧಾಪ್ಯದಲ್ಲಿ ರಫೀಕ್ ಕುಟುಂಬ ಜಾನಕಿ ಅವರನ್ನು ಚೆನ್ನಾಗಿ ನೋಡಿಕೊಂಡಿತ್ತು. ಜಾನಕಿ 90ನೇ ವಯಸ್ಸಿನಲ್ಲಿ ಮಂಗಳವಾರ ಮೃತಪಟ್ಟಿದ್ದು, ಅವರ ಅಂತಿಮ ದರ್ಶನಕ್ಕೆ ಪುತ್ರ ಮತ್ತು ಮೊಮ್ಮಗಳು ಬಂದಿದ್ದರು. ರಫೀಕ್ ಮತ್ತು ಸಹೋದರ ಅಬ್ದುಲ್ ಖಾದರ್ ಇಚ್ಛೆಯಂತೆ ಹಿಂದೂ ಸಂಪ್ರದಾಯದ ಪ್ರಕಾರ ಅಂತಿಮ ವಿಧಿಗಳನ್ನು ಪೂರೈಸಿ ಕಾಪು ರುದ್ರ ಭೂಮಿಯಲ್ಲಿ ಸೂರಿ ಶೆಟ್ಟಿ ನೇತೃತ್ವ ಮತ್ತು ರಮೇಶ್ ಪೂಜಾರಿ ಮಲ್ಲಾರು ಮುಂದಾಳತ್ವದಲ್ಲಿ ಅಂತ್ಯಸಂಸ್ಕಾರ ನಡೆಯಿತು.



ಪುತ್ರ ಶೇಖರ ವಿಠಲ ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ಹರಿಣಾಕ್ಷಿ ದೇವಾಡಿಗ, ಪುರಸಭೆ ಸದಸ್ಯ ಶೈಲೇಶ್ ಅಮೀನ್, ರಫೀಕ್, ಅಬ್ದುಲ್ ಖಾದರ್, ರವಿ ಆಚಾರಿ, ನಾರಾಯಣ, ಸುಕುಮಾರ್, ಸಂದೇಶ್, ಪಾದೂರು ಬಾಬು ಕುಂದರ್, ಶಕೀಲ್, ಖಾಸಿಂ ಸಾಹೇಬ್, ನೂರ್ ಭಾಗವಹಿಸಿದ್ದರು.

'1,600 ವೈದ್ಯಕೀಯ ಸೀಟು ಹೆಚ್ಚಳ'

ಬೆಂಗಳೂರು: ಖಾಸಗಿ ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 1,600 ಸೀಟು ಹೆಚ್ಚಳಕ್ಕೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸಮ್ಮತಿ ನೀಡಿದ್ದು, ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೂ ಪ್ರಸ್ತಾವ ಸಲ್ಲಿಸಿದೆ.

ರಾಜ್ಯದ ಎಂಟು ಖಾಸಗಿ ಮತ್ತು 16 ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ಹೆಚ್ಚಿಸಲು ಸ್ಥಳೀಯ ತಪಾಸಣಾ ಸಮಿತಿಗಳು (ಎಲ್‌ಐಸಿ) ಶಿಫಾರಸು ಮಾಡಿದ್ದವು. ಈ ಶಿಫಾರಸಿನಲ್ಲಿ ರಾಮನಗರ, ಹುಣಸೂರು ಹಾಗೂ ಕನಕಪುರ ಹೊಸ ಕಾಲೇಜುಗಳೂ ಸೇರಿವೆ. ಪ್ರಸ್ತುತ ರಾಜ್ಯದ ಕಾಲೇಜುಗಳಲ್ಲಿ 11,500 ವೈದ್ಯಕೀಯ ಸೀಟುಗಳು ಲಭ್ಯವಿದ್ದು, ಸೀಟು ಹೆಚ್ಚಳವಾದರೆ 13,100 ಸೀಟು ದೊರೆಯಲಿವೆ.

ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆ: ಒಂದೂವರೆ ತಿಂಗಳಲ್ಲಿ 17 ಸಾವು, ಕಾರಣ ನಿಗೂಢ

ಸರಣಿ ಸಾವು: ಆತಂಕದಲ್ಲಿ ಬದಹಾಲ್

• ಜುಲ್ಫೀಕರ್ ಮಜೀದ್

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಬದಹಾಲ್ ಗ್ರಾಮವು ಅಸಹಜ ಸರಣಿ ಸಾವುಗಳಿಂದ ಕಂಗೆಟ್ಟಿದೆ. ನಗು, ಸಂತೋಷದಿಂದ ತುಂಬಿದ್ದ ಮಹಮ್ಮದ್ ಅಸ್ಲಂ ಮತ್ತು ಪತ್ನಿ ಶಾಕಿಯಾ ಬಿ ಅವರ ಮನೆಯು ಒಂದೂವರೆ ತಿಂಗಳಲ್ಲಿ ಸಾವಿನ ಮನೆಯಾಗಿ ಪರಿವರ್ತನೆಯಾಗಿದೆ.

ಡಿ.7ರಿಂದ ಜನವರಿ 19ರ ನಡುವೆ ಅಸ್ಲಂ ಅವರ ಆರು ಮಕ್ಕಳು ಸೇರಿ ಪರಸ್ಪರ ಸಂಬಂಧಿಕರಾಗಿರುವ ಮೂರು ಕುಟುಂಬಗಳ 17 ಮಂದಿ ಮೃತಪಟ್ಟಿದ್ದಾರೆ. ಈ ನಿಗೂಢ ಸಾವುಗಳಿಂದ ಅಸ್ಲಂ ಅವರ ಕುಟುಂಬ ಮಾತ್ರವಲ್ಲದೆ ಇಡೀ ಗ್ರಾಮವೇ ಆಘಾತಕ್ಕೆ ಒಳಗಾಗಿದೆ.

ಸ್ಥಳೀಯ ಪತ್ರಕರ್ತರ ಮೂಲಕ 'ಪ್ರಜಾವಾಣಿ' ಅಸ್ಲಂ ಅವರನ್ನು ಸಂಪರ್ಕಿಸಿದಾದ, 'ಆರು ಮಕ್ಕಳು ಮತ್ತು ತಂದೆ–ತಾಯಿಯಂತೆ ಮನೆಯಲ್ಲಿ ಇದ್ದ ಚಿಕ್ಕಪ್ಪ–ಚಿಕ್ಕಮ್ಮನನ್ನು ಕಳೆದುಕೊಂಡ ನಂತರ ನನ್ನಷ್ಟು ದುರದೃಷ್ಟವಂತ ಬೇರೆ ಯಾರು ತಾನೆ ಇರಲು ಸಾಧ್ಯ?' ಎಂದು ದುಃಖಿಸಿದರು.

'ಸಾವಿನ ಹಿಂದಿನ ರಹಸ್ಯ ಶೀಘ್ರವೇ ಬಯಲಾಗಲಿದೆ. ಸತ್ಯವು ಶೀಘ್ರ ಹೊರಬರಲಿ ಎಂದು ಅಲ್ಲಾಹುವನ್ನು ಪ್ರಾರ್ಥಿಸುತ್ತೇನೆ' ಎಂದು ಹೇಳಿದರು.

ಮಕ್ಕಳ ಆಟ, ನಗು, ಸಂಭ್ರಮದಿಂದ ಕಂಗೊಳಿಸುತ್ತಿದ್ದ ಅಸ್ಲಂ ಅವರ ಮನೆಯಲ್ಲೀಗ ಸ್ಮಶಾನ ಮೌನ ಆವರಿಸಿದೆ.

ಸರಣಿ ಸಾವುಗಳಿಗೆ ಕಾರಣ ಇನ್ನೂ ಅಸ್ಪಷ್ಟವಾಗಿದೆ. ಸ್ಥಳೀಯ, ರಾಷ್ಟ್ರೀಯ ಆರೋಗ್ಯ ಅಧಿಕಾರಿಗಳು, ತಜ್ಞರು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಕಾರಣವನ್ನು ಇನ್ನಷ್ಟೇ ಪತ್ತೆ ಮಾಡಬೇಕಿದೆ.

'ಸರಣಿ ಸಾವುಗಳಿಂದ ಗ್ರಾಮಸ್ಥರು ಆತಂಕಕ್ಕೊಳಗಾಗಿದ್ದಾರೆ. ಇದು ಸಾಂಕ್ರಾಮಿಕ ರೋಗವಾಗಿರಬಹುದೇ ಎಂಬ ಭಯದಲ್ಲಿದ್ದಾರೆ. ಆದರೆ 1,500 ಜನರಿರುವ ಗ್ರಾಮದಲ್ಲಿ ಈವರೆಗೆ ಮೂರು ಕುಟುಂಬದಲ್ಲಿ ಮಾತ್ರ ಸಾವುಗಳು ಸಂಭವಿಸಿವೆ' ಎಂದು ಸ್ಥಳೀಯ ಪತ್ರಕರ್ತ ಸುನಿತ್ ಭಾರ್ಗವ್ ತಿಳಿಸಿದರು.



ಒಂದೂವರೆ ತಿಂಗಳಲ್ಲಿ ನಿಗೂಢ ಕಾರಣದಿಂದ 17 ಮಂದಿ ಮೃತಪಟ್ಟಿರುವ ಬದಹಾಲ್ ಗ್ರಾಮಕ್ಕೆ ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಮಂಗಳವಾರ ಭೇಟಿ ನೀಡಿದ್ದರು — ಪಿಟಿಐ ಚಿತ್ರ

ಕಂಟೈನ್‌ಮೆಂಟ್ ವಲಯ: ಘೋಷಣೆ

ಸ್ಥಳೀಯ ಆಡಳಿತದ ಅಧಿಕಾರಿಗಳು ಬದಹಾಲ್ ಪ್ರದೇಶವನ್ನು ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಿದ್ದಾರೆ. ಗ್ರಾಮಸ್ಥರು ಒಟ್ಟಿಗೆ ಒಂದೆಡೆ ಸೇರಲು ನಿಷೇಧ ಹೇರಲಾಗಿದೆ ಮತ್ತು ಗ್ರಾಮಸ್ಥರ ಆಹಾರ ಸೇವನೆ ಮೇಲೆ ನಿಗಾ ಇಡಲಾಗಿದೆ.

ಇದಕ್ಕೂ ಮುನ್ನ ಅಧಿಕಾರಿಗಳು, ಅಸ್ಲಂ ಅವರ ಮನೆ ಮತ್ತು ಮಹಮ್ಮದ್ ರಫೀಕ್ ಅವರ ಮನೆ ಸಮೀಪದ ಬಾವಿಯ ನೀರಿನ 'ಮಾದರಿ'ಗಳನ್ನು ಪಡೆದು 'ಸೀಲ್' ಮಾಡಿದ್ದರು.



ದಲಿತ ಸಮುದಾಯದ ವರ ಬಿಗಿ ಭದ್ರತೆಯೊಂದಿಗೆ ವಿವಾಹ ನಿಗದಿಯಾದ ಸ್ಥಳಕ್ಕೆ ಬಂದರು — ಪಿಟಿಐ ಚಿತ್ರ

ದಲಿತ ವರನ ದಿಬ್ಬಣಕ್ಕೆ ಭದ್ರತೆ

ಜೈಪುರ (ಪಿಟಿಐ): ರಾಜಸ್ಥಾನದ ಅಜ್ಮೀರ್ ಜಿಲ್ಲೆಯಲ್ಲಿ ದಲಿತ ಸಮುದಾಯಕ್ಕೆ ಸೇರಿದ ವರ ಕುದುರೆ ಏರಿ ದಿಬ್ಬಣದೊಂದಿಗೆ ವಿವಾಹ ನಿಗದಿಯಾದ ಸ್ಥಳಕ್ಕೆ ಬರಲು ಸುಮಾರು 200 ಪೊಲೀಸರು ಭದ್ರತೆ ಒದಗಿಸಿದ್ದಾರೆ.

ವಿವಾಹ ಕಾರ್ಯಕ್ರಮಕ್ಕೂ ಮುನ್ನ ವರ ಕುದುರೆ ಏರಿ ಮೆರವಣಿಗೆ ನಡೆಸುವ 'ಬಿಂದೋಲಿ' ಪದ್ಧತಿ ರಾಜಸ್ಥಾನದಲ್ಲಿ ಆಚರಣೆಯಲ್ಲಿದೆ. ಈ ಪ್ರಕಾರ ವರ ವಿಜಯ್ ರೆಗಾರ್ ಅವರು ವಧು ಅರುಣಾ ಖೋರ್ವಾಲ್ ಅವರ ಲವೆರಾ ಗ್ರಾಮಕ್ಕೆ ಕುದುರೆ ಏರಿ ಮೆರವಣಿಗೆ ಮೂಲಕ ಮಂಗಳವಾರ ಬರಬೇಕಿತ್ತು.

ಕುದುರೆ ಸವಾರಿಗೆ ಗ್ರಾಮದ ಮೇಲ್ಜಾತಿ ಜನರು ವಿರೋಧಿಸಬಹುದು ಎಂದು ವಧುವಿನ ಕುಟುಂಬಸ್ಥರು ಮೊದಲೇ ದೂರು ನೀಡಿದ್ದರು. ಹೀಗಾಗಿ ವಿವಾಹ ಕಾರ್ಯಕ್ರಮ ಸುಗಮವಾಗಿ ನಡೆಯಲು ಪೊಲೀಸರು ಬಿಗಿ ಭದ್ರತೆ ಒದಗಿಸಿದರು.

'ಈ ಹಿಂದೆ ವಿವಾಹ ಸಂದರ್ಭದಲ್ಲಿ ಮೆರವಣಿಗೆ ನಡೆದಾಗ ಅನಪೇಕ್ಷಣೀಯ ಘಟನೆಗಳು ನಡೆದಿದ್ದವು. ಹೀಗಾಗಿ ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ಮತ್ತು ಸಾಮಾಜಿಕ ಹೋರಾಟಗಾರರ ನೆರವು ಕೋರಿದ್ದೆವು' ಎಂದು ವಧುವಿನ ತಂದೆ ನಾರಾಯಣ ಅವರು ತಿಳಿಸಿದರು.

ಆಟೊ ಚಾಲಕನಿಗೆ ಧನ್ಯವಾದ ಹೇಳಿದ ನಟ ಸೈಫ್

ಪ್ರಜಾವಾಣಿ ವಾರ್ತೆ

ಮುಂಬೈ: ತಮ್ಮ ಮೇಲೆ ಹಲ್ಲೆ ನಡೆದ ರಾತ್ರಿ ಆಸ್ಪತ್ರೆಗೆ ತಲುಪಲು ನೆರವಾಗಿದ್ದ ಆಟೊ ಚಾಲಕ ಭಜನ್ ಸಿಂಗ್ ರಾಣಾ ಅವರನ್ನು ನಟ ಸೈಫ್ ಅಲಿ ಖಾನ್ ತಮ್ಮ ಮನೆಗೆ ಕರೆಸಿಕೊಂಡು, ಧನ್ಯವಾದ ಹೇಳಿದ್ದಾರೆ.

ಇಬ್ಬರೂ ಅಕ್ಕ–ಪಕ್ಕ ನಿಂತು ನಗುತ್ತಿರುವ ಹಾಗೂ ಸೈಫ್ ಅಲಿ ಖಾನ್, ರಾಣಾ ಅವರ ಭುಜದ ಮೇಲೆ ಕೈಯಿಟ್ಟಿರುವ ಫೋಟೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿವೆ.

'ಮಧ್ಯಾಹ್ನ 3.30ಕ್ಕೆ ತಮ್ಮನ್ನು ಭೇಟಿ ಮಾಡುವಂತೆ ಸೈಫ್ ಅವರು ಸಮಯ ನೀಡಿದ್ದರು. ನಾನು ನಾಲ್ಕೈದು ನಿಮಿಷ ತಡವಾಗಿ ತಲುಪಿದೆ. ಅವರ ತಾಯಿ ಶರ್ಮಿಳಾ ಟ್ಯಾಗೋರ್ ಹಾಗೂ ಮಕ್ಕಳು ಇದ್ದರು. ಎಲ್ಲರೂ ನನ್ನನ್ನು ಗೌರವದಿಂದ ಸ್ವಾಗತಿಸಿದರು. ಅವರು ಬೇಗ ಗುಣಮುಖರಾಗಲಿ ಎಂದು ಪ್ರಾರ್ಥಿಸಿದ್ದೆ ಎಂದಷ್ಟೆ ಹೇಳಿ, ಬೇಗ ಚೇತರಿಸಿಕೊಳ್ಳುವಂತೆ ಹಾರೈಸಿ ಬಂದೆ. ನನ್ನನ್ನು ಈ ರೀತಿ ಮನೆಗೆ ಕರೆಸಿಕೊಂಡಿದ್ದು ಖುಷಿ ತಂದಿದೆ' ಎಂದು ರಾಣಾ ಪ್ರತಿಕ್ರಿಯಿಸಿದರು.


ಸೂರತ್: ಎಂಟನೇ ತರಗತಿ ಓದುತ್ತಿದ್ದ ಬಾಲಕಿ

ಪ್ರಕರಣದ ಬಗ್ಗೆ ಜಿಲ್ಲಾ ಶಿಕ್ಷಣ ಮಂಡಳಿಯಿಂದಲೂ ತನಿಖೆ ನಡೆಸಲಾಗುತ್ತಿದೆ. ತನಿಖಾ ತಂಡವನ್ನು ಶಾಲೆಗೆ ಕಳುಹಿಸಲಾಗಿದ್ದು, ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತದೆ ಎಂದು ಇಲಾಖೆಯ ಎಚ್.ಎಚ್. ರಾಜ್ಯಗುರು ಹೇಳಿದರು.

ಶುಲ್ಕ ಪಾವತಿಸದ್ದಕ್ಕೆ ಕಿರುಕುಳ ವಿದ್ಯಾರ್ಥಿನಿ ಆತ್ಮಹತ್ಯೆ

ಸೂರತ್ (ಗುಜರಾತ್) (ಪಿಟಿಐ): ಸೂರತ್‌ನಲ್ಲಿ 8ನೇ ತರಗತಿಯ ವಿದ್ಯಾರ್ಥಿನಿಯೊಬ್ಬಳು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. 'ಶುಲ್ಕ ಕಟ್ಟುವುದು ತಡವಾದದ್ದಕ್ಕೆ ಶಾಲೆಯವರು ನೀಡಿದ ಕಿರುಕುಳದಿಂದ ಬೇಸತ್ತು ಅವಳು ಜೀವ ಕಳೆದುಕೊಂಡಿದ್ದಾಳೆ' ಎಂದು ಕುಟುಂಬದವರು ಆರೋಪಿಸಿದ್ದಾರೆ.

'ಬಾಕಿ ಶುಲ್ಕ ಪಾವತಿಸದ ಕಾರಣ, ಶಾಲೆಯವರು ನನ್ನ ಮಗಳಿಗೆ ಪರೀಕ್ಷೆ ಬರೆಯಲು ಬಿಟ್ಟಿರಲಿಲ್ಲ. ಆಕೆಯನ್ನು ತರಗತಿಯಿಂದ ಹೊರಹಾಕಿದ್ದರು' ಎಂದು ಬಾಲಕಿಯ ತಂದೆ ರಾಜು ಖಟೀಕ್ ಆರೋಪಿಸಿದ್ದಾರೆ.



'ಬಾಲಕಿಯ ಪೋಷಕರು ₹15 ಸಾವಿರ ಬಾಕಿ ಶುಲ್ಕವನ್ನು ಶಾಲೆಗೆ ಪಾವತಿಸಿರಲಿಲ್ಲ. ಹೀಗಾಗಿ, ಆಕೆ ಮಕರ ಸಂಕ್ರಾಂತಿಯ ಬಳಿಕ ಶಾಲೆಗೆ ಹೋಗುವುದನ್ನೇ ಸಂಪೂರ್ಣವಾಗಿ ನಿಲ್ಲಿಸಿದ್ದಳು' ಎಂದು ಗೋಡಾದರಾ ಠಾಣೆಯ ಇನ್‌ಸ್ಪೆಕ್ಟರ್ ಹರ್ಷದ್ ಆಚಾರ್ಯ ತಿಳಿಸಿದ್ದಾರೆ.

ವಿದ್ಯಾರ್ಥಿನಿಯ ಪೋಷಕರು, ಸಹಪಾಠಿಗಳು, ನೆರೆಯವರು ಹಾಗೂ ಶಾಲಾ ಆಡಳಿತ ಮಂಡಳಿಯಿಂದ ಹೇಳಿಕೆಗಳನ್ನು ಪಡೆಯಲಾಗಿದೆ. ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿದ್ದು, ಬಾಲಕಿಯ ತಂದೆ ಮಾಡಿರುವ ಆರೋಪಗಳು ಸತ್ಯವೋ ಅಲ್ಲವೋ ಎಂದು ಈಗಲೇ ಹೇಳಲಾಗುವುದಿಲ್ಲ' ಎಂದು ತಿಳಿಸಿದ್ದಾರೆ.

ಮಣಿಪುರ ಜೆಡಿ(ಯು) ಮುಖ್ಯಸ್ಥ ವಜಾ

ನವದೆಹಲಿ/ಇಂಫಾಲ (ಪಿಟಿಐ): ಸಂಯುಕ್ತ ಜನತಾದಳ ಪಕ್ಷವು ತನ್ನ ಮಣಿಪುರ ರಾಜ್ಯ ಘಟಕದ ಅಧ್ಯಕ್ಷ ವಿರೇನ್ ಸಿಂಗ್ ಅವರನ್ನು ಅಶಿಸ್ತಿನ ಕಾರಣಕ್ಕೆ ಪದಚ್ಯುತಗೊಳಿಸಿದೆ.

ಮಣಿಪುರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ತಮ್ಮ ಪಕ್ಷವು ಮುಂದುವರಿಸಲಿದೆ ಎಂದು ಜೆಡಿ(ಯು) ರಾಷ್ಟ್ರೀಯ ವಕ್ತಾರ ರಾಜೀವ್ ರಂಜನ್ ಅವರು ಸ್ಪಷ್ಟಪಡಿಸಿದ್ದಾರೆ.

ಮಣಿಪುರದಲ್ಲಿ ಮಾತ್ರವಲ್ಲದೆ, ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವನ್ನು ದೇಶದ ಎಲ್ಲೆಡೆ ಬೆಂಬಲಿಸುವ ಬದ್ಧತೆಯನ್ನು ಜೆಡಿ(ಯು) ಹೊಂದಿದೆ ಎಂದು ರಂಜನ್ ಅವರು ಹೇಳಿದ್ದಾರೆ.

ಪದಚ್ಯುತಿಗೂ ಮೊದಲು ವಿರೇನ್ ಸಿಂಗ್ ಅವರು, ರಾಜ್ಯದ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಜೆಡಿ(ಯು) ಹಿಂಪಡೆಯುತ್ತಿದೆ ಎಂದು ಹೇಳಿದ್ದರು. ಅಲ್ಲದೆ, ಈ ತೀರ್ಮಾನವನ್ನು ಅವರು ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರಿಗೂ ತಿಳಿಸಿದ್ದರು.

ಮಣಿಪುರ ವಿಧಾನಸಭೆಯಲ್ಲಿನ ಜೆಡಿ(ಯು) ಪಕ್ಷದ ಏಕೈಕ ಸದಸ್ಯ ಮೊಹಮ್ಮದ್ ಅಬ್ದುಲ್ ನಾಸಿರ್ ಅವರು ಇನ್ನು ಮುಂದೆ ವಿರೋಧ ಪಕ್ಷಗಳ ಸಾಲಿನಲ್ಲಿ ಕುಳಿತುಕೊಳ್ಳಲಿದ್ದಾರೆ ಎಂದೂ ಸಿಂಗ್ ಹೇಳಿದ್ದರು.

'ಜೆಡಿ(ಯು) ಪಕ್ಷವು ಇಂಡಿಯಾ ಮೈತ್ರಿಕೂಟದ ಭಾಗವಾದ ನಂತರ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ನೀಡಿದ ಬೆಂಬಲವನ್ನು ಹಿಂಪಡೆಯಲಾಗಿದೆ...' ಎಂದು ಸಿಂಗ್ ಅವರು ರಾಜ್ಯಪಾಲರಿಗೆ ಬರೆದ ಪತ್ರದಲ್ಲಿ ಹೇಳಿದ್ದರು.

ಇಬ್ಬರು ಉಗ್ರರ ಬಂಧನ

ಮಣಿಪುರದ ಪೂರ್ವ ಇಂಫಾಲ್ ಜಿಲ್ಲೆಯಲ್ಲಿ ನಡೆಸಿದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಇಬ್ಬರು ಭಯೋತ್ಪಾದಕರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದರು.

ಬಂಧಿತನೊಬ್ಬನನ್ನು ಯೆಂಗ್‌ಖೊಮ್ ಭೋಗೇನ್ ಸಿಂಗ್ (50) ಎಂದು ಗುರುತಿಸಲಾಗಿದೆ. ಈತ ನಿಷೇಧಿತ ಪೀಪಲ್ಸ್ ಲಿಬರೇಷನ್ ಆರ್ಮಿಯ (ಪಿಎಲ್‌ಎ) ಸಕ್ರಿಯ ಸದಸ್ಯ ಎಂದರು.

ಇನ್ನೊಬ್ಬನನ್ನು ಪುಖರಾಮಬಂ ತೊಯ್ಬಾ ಸಿಂಗ್ (38) ಎಂದು ಗುರುತಿಸಲಾಗಿದ್ದು, ಈತ ನಿಷೇಧಿತ ಕಂಗ್ಲೈಪಾಕ್ ಕಮ್ಯುನಿಸ್ಟ್ ಪಾರ್ಟಿ (ಎಂಎಫ್‌ಎಲ್) ಸಂಘಟನೆಯ ಸದಸ್ಯ ಎಂದು ಪೊಲೀಸರು ತಿಳಿಸಿದ್ದಾರೆ.

'ವೈದ್ಯಕೀಯ ನೆರವು ಪಡೆಯುತ್ತಿರುವ ಡಲ್ಲೇವಾಲ್'

ನವದೆಹಲಿ (ಪಿಟಿಐ): ರೈತ ನಾಯಕ ಜಗಜೀತ್ ಸಿಂಗ್ ಡಲ್ಲೇವಾಲ್ ಅವರು ಉಪವಾಸವನ್ನು ಮುಂದುವರಿಸಿದ್ದರೂ, ವೈದ್ಯಕೀಯ ನೆರವು ಪಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ದಾಖಲಿಸಿಕೊಂಡ ಸುಪ್ರೀಂ ಕೋರ್ಟ್, ಪಂಜಾಬ್ ಸರ್ಕಾರದ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಕಾನೂನಿನ ಅಡಿ ಕ್ರಮ ಜರುಗಿಸಬೇಕು ಎಂಬ ಅರ್ಜಿಯನ್ನು ಅಮಾನತಿನಲ್ಲಿ ಇರಿಸಿದೆ.



ಡಲ್ಲೇವಾಲ್

ಪ್ರತಿಭಟನೆಯಲ್ಲಿ ತೊಡಗಿರುವ ರೈತರನ್ನು ಕೇಂದ್ರ ಸರ್ಕಾರದ ಪ್ರತಿನಿಧಿಗಳು ಭೇಟಿ ಮಾಡಿದ್ದಾರೆ. ಅವರ ವಿವಿಧ ಬೇಡಿಕೆಗಳ ಬಗ್ಗೆ ಮಾತನಾಡಿದ್ದಾರೆ. ಇನ್ನೊಂದು ಸುತ್ತಿನ ಸಭೆಯು ಫೆ.14ಕ್ಕೆ ಚಂಡೀಗಢದಲ್ಲಿ ನಿಗದಿಯಾಗಿದೆ ಎಂಬುದನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ದೀಪಾಂಕರ್ ದತ್ತ ಮತ್ತು ಉಜ್ವಲ್ ಭೂಯಾನ್ ಅವರು ಇರುವ ತ್ರಿಸದಸ್ಯ ಪೀಠವು ದಾಖಲಿಸಿಕೊಂಡಿತು.

ಡಲ್ಲೇವಾಲ್ ಅವರ ಆರೋಗ್ಯ ಸ್ಥಿತಿ ಈಗ ತುಸು ಸುಧಾರಿಸಿದ್ದು, ಅವರು ಫೆಬ್ರುವರಿ 14ರ ಸಭೆಯಲ್ಲಿ ಭಾಗಿಯಾಗಲಿದ್ದಾರೆ ಎಂಬುದನ್ನು ಪೀಠವು ದಾಖಲು ಮಾಡಿಕೊಂಡಿದೆ.

ಛತ್ತೀಸಗಢ: 8 ಕಚ್ಚಾಬಾಂಬ್ ಪತ್ತೆ

ಬಿಜಾಪುರ (ಛತ್ತೀಸಗಢ) (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯ ವಿವಿಧೆಡೆ ನಕ್ಸಲರು ನಕ್ಸಲರು ಹುದುಗಿಸಿದ್ದ 8 ಕಚ್ಚಾಬಾಂಬ್‌ಗಳನ್ನು ಭದ್ರತಾ ಪಡೆಗಳು ವಶಪಡಿಸಿಕೊಂಡಿವೆ.

ಜಿಲ್ಲಾ ಮೀಸಲು ಪಡೆ, ಬಾಂಬ್ ನಿಷ್ಕ್ರಿಯ ದಳ, ಸಿಆರ್‌ಪಿಎಫ್ ಹಾಗೂ ಕೋಬ್ರಾ ಪಡೆಗಳು ಜಂಟಿಯಾಗಿ ಉಗ್ರರ ನಿಗ್ರಹ ಕಾರ್ಯಾಚರಣೆಯನ್ನು ಬುಧವಾರ ಕೈಗೊಂಡಿದ್ದವು. ಈ ವೇಳೆ, ನಕ್ಸಲರು ಕಚ್ಚಾ ರಸ್ತೆಯೊಂದರ ಅಡಿಯಲ್ಲಿ ಸ್ಟೀಲ್ ಬಾಕ್ಸ್‌ಗಳಲ್ಲಿ ಹುದುಗಿಸಿದ್ದ ತಲಾ 5 ಕೆ.ಜಿ. ತೂಕದ ಕಚ್ಚಾಬಾಂಬ್‌ಗಳು ಪತ್ತೆಯಾಗಿವೆ. ಅವುಗಳನ್ನು ಬಾಂಬ್ ನಿಷ್ಕ್ರಿಯ ದಳವು ಸುರಕ್ಷಿತವಾಗಿ ನಿಷ್ಕ್ರಿಯಗೊಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಜಾಪುರ ಜಿಲ್ಲೆಯಲ್ಲಿ ನಕ್ಸಲರು ಅಳವಡಿಸಿದ್ದ ಕಚ್ಚಾಬಾಂಬ್ ಸ್ಫೋಟಗೊಂಡು 8 ಮಂದಿ ಪೊಲೀಸರು ಹಾಗೂ ಒಬ್ಬ ಚಾಲಕ ಜನವರಿ 6ರಂದು ಮೃತಪಟ್ಟಿದ್ದರು.

ಮತ್ತಿಬ್ಬರು ನಕ್ಸಲರ ಮೃತದೇಹ ವಶಕ್ಕೆ

ಗರಿಯಾಬಂದ್ (ಪಿಟಿಐ): ಇತ್ತೀಚೆಗೆ ನಕ್ಸಲರು ಹಾಗೂ ಪೊಲೀಸರ ನಡುವೆ ಗುಂಡಿನ ಚಕಮಕಿ ನಡೆದ ಛತ್ತೀಸಗಢದ ಗರಿಯಾಬಂದ್ ಪ್ರದೇಶದಲ್ಲಿ ಮತ್ತಿಬ್ಬರು ನಕ್ಸಲರ ಮೃತದೇವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದರು.

ಇದರೊಂದಿಗೆ ಕಾರ್ಯಾಚರಣೆಯಲ್ಲಿ ಹತರಾದ ನಕ್ಸಲರ ಸಂಖ್ಯೆ 16ಕ್ಕೆ ಏರಿಕೆಯಾಗಿದೆ ಎಂದರು. ಪ್ರಮುಖ ನಕ್ಸಲ್ ನಾಯಕ ಸೇರಿ 14 ಮಂದಿ ಮೃತಪಟ್ಟಿದ್ದಾರೆ ಎಂದು ಮಂಗಳವಾರ ಪೊಲೀಸರು ತಿಳಿಸಿದ್ದರು.

ಮಥುರಾ: ಸಮೀಕ್ಷೆಗೆ ತಡೆ ವಿಸ್ತರಣೆ

ನವದೆಹಲಿ (ಪಿಟಿಐ): ಮಥುರಾದಲ್ಲಿನ ಶಾಹಿ ಈದ್ಗಾ ಮಸೀದಿ ಸಂಕೀರ್ಣದಲ್ಲಿ ಕೋರ್ಟ್ ಮೇಲ್ವಿಚಾರಣೆಯಲ್ಲಿ ಸಮೀಕ್ಷೆ ನಡೆಸಲು ಅನುಮತಿ ನೀಡಿದ ಅಲಹಾಬಾದ್ ಹೈಕೋರ್ಟ್‌ನ ಆದೇಶಕ್ಕೆ ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ಬುಧವಾರ ವಿಸ್ತರಿಸಿದೆ.



ಈ ಮಸೀದಿ ಸಂಕೀರ್ಣವು, ಹಿಂದೂಗಳಿಗೆ ಧಾರ್ಮಿಕವಾಗಿ ಮಹತ್ವದ್ದಾಗಿರುವ ಕೃಷ್ಣ ಜನ್ಮಭೂಮಿ ದೇವಸ್ಥಾನಕ್ಕೆ ಹೊಂದಿಕೊಂಡು ಇದೆ.

ಮಸೀದಿ ಸಂಕೀರ್ಣದ ಸಮೀಕ್ಷೆಯನ್ನು ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ನಡೆಸುವುದನ್ನು ಪ್ರಶ್ನಿಸಿ 'ಶಾಹಿ ಮಸೀದಿ ಈದ್ಗಾ ಟ್ರಸ್ಟ್ ನಿರ್ವಹಣೆಯ ಸಮಿತಿ' ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಮುಂದೂಡುತ್ತಿರುವುದಾಗಿ ಸುಪ್ರೀಂ ಕೋರ್ಟ್ ಸಿಜೆಐ ಸಂಜೀವ್ ಖನ್ನಾ, ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ತ್ರಿಸದಸ್ಯ ಪೀಠವು ಹೇಳಿತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಅಧ್ಯಕ್ಷನೂ, ಸೇನಾನಿಯೂ, ಕಮ್ಮಾರನೂ, ಚಮ್ಮಾರನೂ ಕಾಯಕವೆಲ್ಲವೂ ಪೂಜ್ಯ.

-ಕುವೆಂಪು

ಔಷಧ ಪರಿವೀಕ್ಷಕ ಅಧಿಕಾರಿಗಳ ಕೊರತೆ ಕಳಪೆ, ನಕಲಿ ಔಷಧಗಳ ಹಾವಳಿಗೆ ಹಾದಿ

ಔಷಧ ಪರಿವೀಕ್ಷಕ ಅಧಿಕಾರಿಗಳ ತೀವ್ರ ಕೊರತೆಯನ್ನು ಕರ್ನಾಟಕ ಎದುರಿಸುತ್ತಿದೆ. ಇದರ ಪರಿಣಾಮವಾಗಿ, ಕಳಪೆ ಗುಣಮಟ್ಟದ ಔಷಧಗಳ ಪೂರೈಕೆ ಜಾಲವನ್ನು ನಿರ್ಮೂಲಗೊಳಿಸುವ ಯತ್ನಗಳಿಗೆ ತೊಂದರೆ ಉಂಟಾಗಿದೆ. ನಕಲಿ ಔಷಧಗಳನ್ನು ಪೂರೈಸುವ ಜಾಲವೂ ಇದೆ. ರಾಜ್ಯದಲ್ಲಿ ಒಟ್ಟು 112 ಮಂದಿ ಔಷಧ ಪರಿವೀಕ್ಷಕರನ್ನು ನೇಮಕ ಮಾಡಿಕೊಳ್ಳಲು ಅವಕಾಶ ಇದ್ದರೂ ಎಂಟು ಜನ ಮಾತ್ರ ಈಗ ಕರ್ತವ್ಯದಲ್ಲಿ ಇದ್ದಾರೆ. ಪರಿವೀಕ್ಷಕರ ಕೊರತೆಯು ಈ ಪ್ರಮಾಣದಲ್ಲಿ ಇರುವಾಗ, ಔಷಧಗಳ ತಪಾಸಣೆಯ ವಿಚಾರವಾಗಿ ಅವರಿಂದ ಆಗಬೇಕಿರುವ ಅಗತ್ಯ ಕೆಲಸಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗುವುದಷ್ಟೇ ಅಲ್ಲದೆ, ಮಾರುಕಟ್ಟೆಗೆ ಕಳಪೆ ಗುಣಮಟ್ಟದ ಔಷಧಗಳು ಲಗ್ಗೆ ಇಡಲು ಶುರುವಾಗುತ್ತದೆ. 2022ರ ಜನವರಿಯಿಂದ ಈ ವರ್ಷದ ಜನವರಿವರೆಗಿನ ಅವಧಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚಿನ ಬ್ಯಾಚ್‌ಗಳಲ್ಲಿನ ಔಷಧಗಳು ನಿರೀಕ್ಷಿತ ಗುಣಮಟ್ಟವನ್ನು ಹೊಂದಿಲ್ಲದೇ ಇದ್ದುದು ಗೊತ್ತಾಗಿದೆ. ಸಮಸ್ಯೆ ಸೃಷ್ಟಿಸಬಹುದಾದ ಇಂತಹ ಔಷಧಗಳಲ್ಲಿ ಹೆಚ್ಚಿನವು ಹೊರರಾಜ್ಯಗಳಲ್ಲಿನ ತಯಾರಕರಿಂದ ಪೂರೈಕೆ ಆಗುತ್ತಿರುವುದು ಸಮಸ್ಯೆಯನ್ನು ಇನ್ನಷ್ಟು ಹೆಚ್ಚು ಮಾಡುವಂತಿದೆ.

ಔಷಧ ತಯಾರಿಕಾ ಕಂಪನಿಗಳು ಗುಣಮಟ್ಟದ ವಿಚಾರದಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡುವುದರಲ್ಲಿ ಔಷಧ ಪರಿವೀಕ್ಷಕರ ಪಾತ್ರವು ಬಹಳ ಮಹತ್ವದ್ದು. ಔಷಧಗಳ ಮಾದರಿಯನ್ನು ಸಂಗ್ರಹಿಸಿ ಅವುಗಳ ಗುಣಮಟ್ಟವನ್ನು ಪರಿಶೀಲನೆಗೆ ಒಳಪಡಿಸುವುದು, ತಪ್ಪು ಮಾಡಿದವರ ವಿರುದ್ಧ ಕಾನೂನಿನ ಕ್ರಮಕ್ಕೆ ಮುಂದಾಗುವುದು, ಕಳಪೆ ಗುಣಮಟ್ಟದ ಔಷಧಗಳು ಮಾರುಕಟ್ಟೆಯಲ್ಲಿ ಲಭ್ಯವಾಗದಂತೆ ನೋಡಿಕೊಳ್ಳುವುದು, ಔಷಧಗಳ ವಿಚಾರವಾಗಿ ಗ್ರಾಹಕರಿಂದ ಬರುವ ದೂರುಗಳಿಗೆ ಸ್ಪಂದಿಸುವುದು ಈ ಅಧಿಕಾರಿಗಳ ಪ್ರಮುಖ ಕರ್ತವ್ಯಗಳಲ್ಲಿ ಸೇರಿವೆ. ರಾಜ್ಯದ ಪ್ರತಿಯೊಂದು ಔಷಧ ತಯಾರಿಕಾ ಘಟಕವನ್ನು ಕೂಡ ವರ್ಷಕ್ಕೆ ಒಮ್ಮೆಯಾದರೂ ತಪಾಸಣೆಗೆ ಒಳಪಡಿಸುವುದು ಸೂಕ್ತ. ಆದರೆ ರಾಜ್ಯದಲ್ಲಿನ ಔಷಧ ತಯಾರಿಕಾ ಘಟಕಗಳ ಸಂಖ್ಯೆಯು 37 ಸಾವಿರಕ್ಕೂ ಹೆಚ್ಚು ಇರುವ ಕಾರಣ, ಈಗ ಕರ್ತವ್ಯದಲ್ಲಿ ಇರುವ ಎಂಟು ಮಂದಿ ಅಧಿಕಾರಿಗಳಿಂದ ಅಷ್ಟೂ ಘಟಕಗಳ ತಪಾಸಣೆ ಸಾಧ್ಯವಿಲ್ಲ. ಹೀಗಾಗಿ, ತಿಂಗಳ ಗುರಿಯನ್ನು ತಲುಪುವುದಕ್ಕೆ ಕೂಡ ಅವರಿಗೆ ಆಗುತ್ತಿಲ್ಲ. ಇದು ಔಷಧ ತಯಾರಕರಿಗೆ ವರವಾಗಿ ಪರಿಣಮಿಸಿದೆ. ಅವರಲ್ಲಿ ಕೆಲವರು ಕಳಪೆ ಗುಣಮಟ್ಟದ ಔಷಧಗಳನ್ನು ಮಾರುಕಟ್ಟೆಗೆ ತಂದು ಸುರಿಯುತ್ತಿದ್ದಾರೆ. ಇದರಿಂದಾಗಿ ಸಾರ್ವಜನಿಕರ ಆರೋಗ್ಯಕ್ಕೆ ಗಂಭೀರ ಸ್ವರೂಪದ ಬೆದರಿಕೆ ಎದುರಾಗಿದೆ. ಮಾರುಕಟ್ಟೆಯಲ್ಲಿ ಕಳಪೆ ಗುಣಮಟ್ಟದ ಔಷಧಗಳು ಅವುಗಳನ್ನು ಬಳಸುವವರ ಮೇಲೆ ಮಾರಕ ಪರಿಣಾಮ ಉಂಟುಮಾಡಬಹುದು.



ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ನಿಭಾಯಿಸುವ ಔಷಧ ಪರಿವೀಕ್ಷಕರ ಸಂಖ್ಯೆಯನ್ನು ಸರ್ಕಾರ ಹೆಚ್ಚಿಸಬೇಕು

ಔಷಧ ಪರಿವೀಕ್ಷಕರ ಕೊರತೆಯ ಸಮಸ್ಯೆಯು ಒಂದು ದಶಕಕ್ಕೂ ಹೆಚ್ಚಿನ ಅವಧಿಯಿಂದ ಪರಿಹಾರ ಕಂಡಿಲ್ಲ. 2018ರಲ್ಲಿ ಈ ಸಮಸ್ಯೆಯನ್ನು ಪರಿಹರಿಸಲು ಯತ್ನಿಸಿದ ಸರ್ಕಾರವು ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಮುಂದಾಯಿತು. ಆದರೆ ನೇಮಕಾತಿ ಪ್ರಕ್ರಿಯೆಯು ಕಾನೂನಿನ ತೊಡಕುಗಳಿಗೆ ಸಿಲುಕಿಕೊಂಡಿತು. ಈಗ ಈ ವಿಚಾರವು ಸುಪ್ರೀಂ ಕೋರ್ಟ್ ಅಂಗಳದಲ್ಲಿದೆ. ಈ ಅಧಿಕಾರಿಗಳು ನಿರ್ವಹಿಸುವ ಪಾತ್ರವು ಬಹಳ ಮಹತ್ವದ್ದಾಗಿರುವ ಕಾರಣ, ಸರ್ಕಾರವು ತಾನೇ ಮುಂದಡಿ ಇರಿಸಿ, ಪ್ರಕರಣವನ್ನು ಇತ್ಯರ್ಥಪಡಿಸಲು ಮುತುವರ್ಜಿ ವಹಿಸಬೇಕು. ಸಾರ್ವಜನಿಕರ ಆರೋಗ್ಯವನ್ನು ಕಾಪಾಡುವ ವಿಚಾರದಲ್ಲಿ ಈ ಅಧಿಕಾರಿಗಳು ಬಹಳ ಮಹತ್ವದ ಪಾತ್ರವನ್ನು ನಿಭಾಯಿಸುತ್ತಾರೆ. ಕಳಪೆ ಗುಣಮಟ್ಟದ ಹಾಗೂ ನಕಲಿ ಔಷಧಗಳು ಮಾರುಕಟ್ಟೆಗೆ ಲಗ್ಗೆ ಇಡದಂತೆ ನೋಡಿಕೊಳ್ಳುವವರು ಇದೇ ಅಧಿಕಾರಿಗಳು. ಆ ಮೂಲಕ ಅವರು ಗ್ರಾಹಕರಿಗೆ ರಕ್ಷಣೆ ಒದಗಿಸುತ್ತಾರೆ ಕೂಡ. ಔಷಧ ಪರಿವೀಕ್ಷಕರ ಸಂಖ್ಯೆಯನ್ನು ಹೆಚ್ಚು ಮಾಡುವ ಮೂಲಕ ರಾಜ್ಯ ಸರ್ಕಾರವು ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ಔಷಧಗಳು ಮಾತ್ರ ಲಭ್ಯವಾಗುವಂತೆ ನೋಡಿಕೊಳ್ಳಬಹುದು. ತಪಾಸಣಾ ವ್ಯವಸ್ಥೆಯು ಬಲಿಷ್ಠವಾಗಿ ಇದ್ದಾಗ, ಔಷಧ ತಯಾರಕರಲ್ಲಿ ಉತ್ತರದಾಯಿತ್ವ ಹೆಚ್ಚಿನ ಮಟ್ಟದಲ್ಲಿ ಇರುತ್ತದೆ. ಔಷಧ ತಯಾರಕರು ಆಗ ಉತ್ತಮ ಗುಣಮಟ್ಟ ಕಾಯ್ದುಕೊಳ್ಳಲು ಹೆಚ್ಚಿನ ಶ್ರಮ ವಹಿಸುತ್ತಾರೆ. ಆಗ ಗ್ರಾಹಕರಿಗೆ ಬಳಕೆಗೆ ಸುರಕ್ಷಿತವಾದ ಮತ್ತು ಪರಿಣಾಮಕಾರಿಯಾದ ಔಷಧಗಳು ಸಿಗುವಂತೆ ಆಗುತ್ತದೆ. ಔಷಧ ತಯಾರಿಕಾ ಉದ್ಯಮದ ಪ್ರಾಮಾಣಿಕತೆಗೆ ಧಕ್ಕೆ ಬರದಂತೆ ನೋಡಿಕೊಳ್ಳಲು ಸಾಧ್ಯವಾಗುತ್ತದೆ.

ದಿನದ ಟ್ವೀಟ್

ಕಲುಷಿತ ನೀರು: ಎಚ್ಚರ ಅಗತ್ಯ



ಬೆಂಗಳೂರಿನ ಅರ್ಕಾವತಿ ಮತ್ತು ವೃಷಭಾವತಿ ನದಿಗಳಲ್ಲಿನ ನೀರು ಹಾಗೂ ಕೆಸರಿನ ಮಾದರಿಗಳಲ್ಲಿ ವಿಷಕಾರಿ ಅಂಶಗಳಾದ ಹೆಪ್ಟಕ್ಲರ್/ಡಿಡಿಟಿ (25,022 ಪಟ್ಟು) ಮರ್ಕ್ಯುರಿ (26 ಪಟ್ಟು) ಪಿಎಎಚ್ (3,076 ಪಟ್ಟು) ಕಂಡುಬಂದಿವೆ. ಈ ನೀರಿನಿಂದ ಬೆಳೆದ ತರಕಾರಿ ಮತ್ತು ಇತರ ಬೆಳೆಗಳು ಮನುಷ್ಯರ ಜೀವಕ್ಕೆ ಅಪಾಯವನ್ನು ತಂದೊಡ್ಡಬಲ್ಲವು. ಮುಖ್ಯಮಂತ್ರಿ ಈ ಬಗ್ಗೆ ಕ್ರಮ ಜರುಗಿಸಬೇಕು.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

ಕಿಡಿನುಡಿ

...ಈಗಾಗಲೇ ಶರಾವತಿ ನದಿಗೆ ಅಣೆಕಟ್ಟು ಕಟ್ಟಿ, ಪಶ್ಚಿಮಘಟ್ಟದ ಬಹಳಷ್ಟು ಕಾಡುಗಳು ಛಿದ್ರಛಿದ್ರ ಆಗಿರುವಾಗ ಮತ್ತೆ ಈ ಯೋಜನೆ ತಂದು, ಉಳಿದಿರುವ ಕಾಡುಗಳನ್ನೂ ನಾಶ ಮಾಡುವುದು ಎಷ್ಟು ಸರಿ?... ಸುಸ್ಥಿರ ಅಭಿವೃದ್ಧಿ ಬರೀ ಬಾಯಿಮಾತಾಗಿದೆ. ಸರಳ ಬದುಕು, ಸರಳ ಜೀವನದ ಪಾಠಕ್ಕೆ ಒತ್ತು ನೀಡಿದ ಭಾರತದ ಸಂಸ್ಕೃತಿ ನಾಶವಾಗುತ್ತಾ ಪರಿಸರವೂ ನಾಶವಾಗುತ್ತಿದೆ.

(134 ಎಕರೆ ಕಾಡು ಬಳಸುವ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಪ್ರಸ್ತಾವಕ್ಕೆ ಪ್ರತಿಕ್ರಿಯೆ)

Western Ghats ಪಶ್ಚಿಮ ಘಟ್ಟಗಳು

25 ವರ್ಷಗಳ ಹಿಂದೆ

ಭಾನುವಾರ, 23-1-2000

● **ಉಷ್ಣ ವಿದ್ಯುತ್ ಯೋಜನೆ ಕೈಬಿಟ್ಟ ಕೊಜೆಂಟ್ರಿಕ್ಸ್**

ಬೆಂಗಳೂರು, ಜ. 22– ದಕ್ಷಿಣ ಕನ್ನಡ ಜಿಲ್ಲೆಯ ನಂದಿಕೂರು ಬಳಿ ಮಂಗಳೂರು ಪವರ್ ಕಂಪನಿಯು 1.3 ಶತಕೋಟಿ ಡಾಲರ್ ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 1000 ಮೆಗಾವಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆಯಿಂದ ಹೊರಬರಲು ಅಮೆರಿಕ ಮೂಲದ ಕೊಜೆಂಟ್ರಿಕ್ಸ್ ಸಂಸ್ಥೆಯು ಅಂತಿಮವಾಗಿ ನಿರ್ಧರಿಸಿದೆ.

ಆದರೆ ಭಾರತದ ಪಾಲುದಾರರೊಬ್ಬರ ಜತೆಗೂಡಿ ಉದ್ದೇಶಿತ ಯೋಜನೆಯ ಕಾರ್ಯಗತಕ್ಕೆ, ಮಂಗಳೂರು ಪವರ್ ಕಂಪನಿಯಲ್ಲಿ ಶೇ 50ರಷ್ಟು ಬಂಡವಾಳ ಹೊಂದಿರುವ ಹಾಂಗ್‌ಕಾಂಗ್ ಮೂಲದ ಚೈನಾ ಲೈಟ್ ಪವರ್ ಕಂಪನಿ ಮುಂದೆ ಬಂದಿದೆ.

● **ಬಿಎಂಟಿಸಿ ಬಸ್‌ಗಳ ಚಲನವಲನ ನಿಗಾಕ್ಕೆ 'ಜಿಪಿಎಸ್'**

ಬೆಂಗಳೂರು, ಜ. 22– ನಗರದ ಬಸ್ ಪ್ರಯಾಣಿಕರ ಅವಕೃಪೆಗೆ ಒಳಗಾಗಿರುವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು (ಬಿಎಂಟಿಸಿ) ಪ್ರಯಾಣಿಕರ ವಿಶ್ವಾಸ ಗಳಿಸುವ ನಿಟ್ಟಿನಲ್ಲಿ ಕಾಯಕಲ್ಪಕ್ಕೆ ಮುಂದಾಗಿದೆ. ಬಸ್‌ಗಳ ಚಲನವಲನ ಹಾಗೂ ಅವು ಸಂಚರಿಸುತ್ತಿರುವ ಮಾರ್ಗಗಳ ಮೇಲೆ ನಿಗಾ ಇಡಲು 'ಜಿಪಿಎಸ್' ವ್ಯವಸ್ಥೆ ಆರಂಭಿಸಿದೆ. ನಗರದಲ್ಲಿ ಕಂಡಕ್ಟರ್‌ರಹಿತ ಬಸ್‌ಗಳನ್ನು ಶೀಘ್ರದಲ್ಲೇ ರಸ್ತೆಗಿಳಿಸಲಿದೆ.

'ಗ್ಲೋಬಲ್ ಪೊಸಿಷನ್ ಸಿಸ್ಟಮ್ಸ್' (ಜಿಪಿಎಸ್) ಎಂಬ ವಿನೂತನ ವ್ಯವಸ್ಥೆಯಲ್ಲಿ ಬಿಎಂಟಿಸಿಯು ಐದು ಬಸ್‌ಗಳಿಗೆ ಪ್ರಾಯೋಗಿಕವಾಗಿ ಈ ತಿಂಗಳ ಆರಂಭದಿಂದ 'ಟಾನ್ಸ್‌ಪಾಂಡರ್ಸ್' ಎಂಬ ಎಲೆಕ್ಟ್ರಾನಿಕ್ ಉಪಕರಣ ಅಳವಡಿಸಿದೆ. ಬಿಎಂಟಿಸಿಯ ಕೇಂದ್ರ ಕಚೇರಿಯಲ್ಲಿರುವ ಡಿಷ್ ಮಾದರಿಯ ಆ್ಯಂಟೆನಾಕ್ಕೆ ಪ್ರತಿ ನಿಮಿಷಕ್ಕೂ ಬಸ್ ಚಲನೆಯ ಮಾರ್ಗದ ಸುಳಿವಿನ ಮಾಹಿತಿಯನ್ನು ಈ ಉಪಕರಣಗಳು ಕಳುಹಿಸಲಿವೆ. ಅಲ್ಲಿಂದ ನೇರವಾಗಿ ಕೇಂದ್ರ ಕಚೇರಿಯಲ್ಲಿರುವ ಕಂಪ್ಯೂಟರ್‌ಗಳ ಪರದೆ ಮೇಲೆ ಬಸ್ ಚಲನೆಯ ಸ್ಥಳ ಅಥವಾ ಮಾರ್ಗವನ್ನು ವೀಕ್ಷಿಸಬಹುದಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 23-1-1975

● **ಪ್ರಾಮಾಣಿಕತೆ– ಪಡಿತರ**

ಬೆಂಗಳೂರು, ಜ. 22– 'ನಾವೆಷ್ಟು ಪ್ರಾಮಾಣಿಕರು?' ಈ ಪ್ರಶ್ನೆಗೆ 'ನಮ್ಮ ಮನೆಯ ರೇಷನ್ ಕಾರ್ಡ್' ಉತ್ತರ ಕೊಡಬಲ್ಲದು.

ಅನೌಪಚಾರಿಕ ಪಡಿತರ ಪದ್ಧತಿಗೆ ಒಳಪಟ್ಟ ಪ್ರದೇಶಗಳ ವ್ಯಾಪ್ತಿಗೆ ಸೇರಿದ ಬೆಂಗಳೂರಿನಲ್ಲಿ ಸುಮಾರು 50 ಸಾವಿರ ಅಕ್ರಮ ಪಡಿತರ ಚೀಟಿಗಳಿವೆಯೆಂದು ಅಂದಾಜು.

ಭ್ರಷ್ಟಾಚಾರ ಆಪಾದನೆಯನ್ನು ಸರ್ಕಾರಿ ಅಧಿಕಾರಿ ಮತ್ತು ವರ್ತಕ ಈ ಇಬ್ಬರ ಮೇಲೆ ಸಾರ್ವಜನಿಕರು ಹೊರಿಸುವುದು ಸಾಮಾನ್ಯ. ಈ ವ್ಯವಹಾರದಲ್ಲಿ ಅವರಿಬ್ಬರ ಜೊತೆಗೆ ಮೂರನೆಯವನಾಗಿ ಬಳಕೆದಾರನೂ ಸೇರಿದ್ದಾನೆ. ಮನೆಯೇ ಇಲ್ಲ, ಕಾರ್ಡ್ ಇದೆ. ಒಂದೇ ಮನೆ ಹಲವು ಕಾರ್ಡ್‌ಗಳು– ತಂದೆ ಹೆಸರಿನಲ್ಲಿ ಒಂದು, ತಾಯಿ ಹೆಸರಿನಲ್ಲಿ ಇನ್ನೊಂದು, ಮಗನ ಹೆಸರಿನಲ್ಲಿ ಮತ್ತೊಂದು. ಇವುಗಳ ಜೊತೆಗೆ ಮನೆಯಲ್ಲಿರುವ ಜನಸಂಖ್ಯೆಯೇ ಒಂದು, ಪಡಿತರಕ್ಕಾಗಿ ಕೊಟ್ಟ ಸಂಖ್ಯೆಯು ಇನ್ನೊಂದು. ನಗರದ ಹಲವು ಕಡೆಗಳಲ್ಲಿ ಅಧಿಕಾರಿಗಳು ತನಿಖೆ ನಡೆಸಿದಾಗ ಇಂಥ ಹಲವು ಬಗೆಯ ಅಕ್ರಮಗಳು ಬಯಲಾಗಿವೆ.

ಗಾಯಗಳನ್ನು ಚರಿತ್ರೆಯ ಎಚ್ಚರವನ್ನಾಗಿಸಿಕೊಂಡು ಮುನ್ನಡೆಯಬೇಕಿದೆ

ಜೊತೆಯಾಗಿ ಹಣತೆ ಹಚ್ಚುತ್ತೇವೆ



ವಿಶ್ಲೇಷಣೆ

ಸಬಿತಾ ಬನ್ನಾಡಿ

ಆ ಹುಡುಗಿ ಒಂದೇ ಸಮ ಕಣ್ಣೀರಿಡುತ್ತಿದ್ದಳು. 'ಅವಳು ಅಳುತ್ತಲೇ ಇದ್ದಾಳೆ. ಸಮಾಧಾನ ಮಾಡಿ ಮಾಡಿ ಸಾಕಾಯ್ತು' ಅಂತ ಅವಳ ಗೆಳತಿಯರು ಹೇಳಿದರು. ಮಾತಾಡಿಸಿದಾಗ, ಕಾರಣ ಕೇಳಿ ವಿಚಿತ್ರ ಸಂಕಟವೆನ್ನಿಸಿತು. ಅವಳದು ಪ್ರೀತಿ– ಪ್ರೇಮದ ಕತೆಯಲ್ಲ. ಅವಳು ಹಿಂದುಳಿದ ವರ್ಗದ ಜಾತಿಯೊಂದಕ್ಕೆ ಸೇರಿದ ಹುಡುಗಿಯಾಗಿದ್ದು, ಅವಳ ಮನೆ ಮಂದಿ ಈಗಲೂ ವಿಪರೀತ ಅಸ್ಪೃಶ್ಯತೆ ಆಚರಿಸುತ್ತಿದ್ದಾರಂತೆ. ಆಕೆ ಕಾಲೇಜಲ್ಲಾಗಲೀ ಎಲ್ಲೇ ಆಗಲಿ ಪರಿಶಿಷ್ಟ ಜಾತಿಗಳ ಸ್ನೇಹಿತೆಯರ ಜೊತೆಗೆ ಸಲುಗೆಯಿಂದ ಇರುವಂತಿಲ್ಲ. ಹಾಗೆ ಯಾರಾದರೂ ಸಲುಗೆ ತೋರಿದರೆ, ಈ ಹಿಂದುಳಿದ ಜಾತಿಯ ಪೂಜಾರಿಗಳೆನಿಸಿಕೊಂಡವರು ತಮ್ಮ ಜಾತಿಯವರಿಗೆ ಚಾಟಿಯೇಟು ನೀಡುತ್ತಾರಂತೆ. ಇದನ್ನು ಒಪ್ಪದ ಆಕೆ, ಇದನ್ನು ಹೇಗೆ ತಡೆಯುವುದು, ಮನವರಿಕೆ ಮಾಡುವುದು ಎಂಬ ಅಸಹಾಯಕತೆಯಲ್ಲಿ ಅಳುತ್ತಿದ್ದಳು.

ಮಾತೆತ್ತಿದರೆ ಈಗ ಜಾತಿಭೇದ ಇಲ್ಲವೇ ಇಲ್ಲ ಎಂದು ವಾದ ಮಾಡುವವರ ದಂಡೇ ನಮ್ಮಲ್ಲಿ ಇದೆ. ಇನ್ನೊಂದೆಡೆ, ಇದ್ಯಾವುದರೆಡೆಗೆ ನಂಬಿಕೆಯಾಗಲೀ ಹಂಗಾಗಲೀ ಇಲ್ಲದೆ ಬದುಕುವವರು ಸಣ್ಣ ಸಂಖ್ಯೆಯಲ್ಲಾದರೂ ಇದ್ದೇವೆ. ಶಿಕ್ಷಣ ಸಿಕ್ಕಿದ ನಂತರ ಎಲ್ಲ ಬದಲಾಗುತ್ತದೆ ಎಂಬ ನಂಬಿಕೆ ಹುಸಿಯಾಗುವಂತೆ 'ಶಿಕ್ಷಿತ' ತಲೆಮಾರಿನವರು ಹಿಂದಿನವರಿಗಿಂತ ಅಸಹ್ಯವಾಗಿ ಜಾತಿಗೀತಿಯ ಕೆಸರಲ್ಲಿ ಸಂಭ್ರಮದಿಂದ ಈಜಾಡುತ್ತಿದ್ದಾರೆ. ತಂತ್ರಜ್ಞಾನದ ಮೂಲಕ, ಜಗತ್ತಿನಾದ್ಯಂತ ಇರುವ 'ತಮ್ಮವರ' ಗುಂಪು ರಚಿಸಿಕೊಂಡು ನವ ಮನೋವ್ಯಾಧಿಗೆ ತುತ್ತಾಗುತ್ತಿದ್ದಾರೆ.

1925ರ ನಂತರ ಜಗತ್ತಿನಾದ್ಯಂತ ಹಲವು ವಿಪ್ಲವಗಳು, ಬದಲಾವಣೆಗಳು ಸಂಭವಿಸಿದವು. ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ನಿರ್ಣಾಯಕ ಹಂತಕ್ಕೆ ತಲುಪಿತು. ಹೊರಗಿನ ಶತ್ರುವನ್ನು ಮಣಿಸಲು ಗಾಂಧೀಜಿ ದೇಶದೆಲ್ಲೆಡೆ ಸಂಚರಿಸಿ ಸಂಘಟನೆ ಮಾಡುತ್ತಲೇ ಸಾಮಾಜಿಕ ಭೇದಗಳನ್ನು ಮನಃಪರಿವರ್ತನೆಯಿಂದ ಮಾಯಿಸಬಹುದು ಅಂದುಕೊಂಡರು. ಅಂಬೇಡ್ಕರ್, 'ಅಷ್ಟೇ ಸಾಲದು, ಒಳಗಿನ ಶತ್ರುವನ್ನು ಮೊದಲು ಮಣಿಸಬೇಕು' ಎಂದು ಪದೇ ಪದೇ ಹೇಳಿದರು. ಅಸ್ಪೃಶ್ಯರಿಗೆ ಪ್ರತಿಭಟನೆಯ ಅಹಿಂಸಾತ್ಮಕ ದಾರಿಯನ್ನು ಅರುಹಿದರು. ಹೆಣ್ಣು ಮಕ್ಕಳನ್ನೂ ಸೇರಿಸಿಕೊಂಡು ಸಂಘಟಿಸಿದರು. ಹೊರಗಿನ ಶತ್ರುವನ್ನೇನೋ ಭೌತಿಕವಾಗಿ ಹೊರಗಟ್ಟಿದ್ದಾಯಿತು. ಆದರೆ ಒಳಗಿನ ಶತ್ರುವನ್ನು ಮಣಿಸಲು ಸಾಧ್ಯವಾಯಿತೇ? ಒಳಗಿನ ಶತ್ರುವಿನ ದ್ವೇಷದ ಅಟ್ಟಹಾಸಕ್ಕೆ ಗಾಂಧಿ ಬಲಿಯಾದರು. ಈಗ 2025ರ ಹೊತ್ತಿಗೆ ಹಲವು ದೇಶಗಳು, ಹಲವು ಮನಸ್ಸುಗಳು 'ಒಳಗಿನ ಶತ್ರು'ವನ್ನು ಬಲಿಸಿಕೊಂಡು ಹೊಟ್ಟೆಯುಬ್ಬರದಿಂದ ಒದ್ದಾಡುತ್ತಿವೆ. ಈ ಹೊಟ್ಟೆಯುಬ್ಬರ ಬಲಿಯುವುದಕ್ಕೆ ಈ ಶತಮಾನದಲ್ಲಿ ಒದಗಿಬಂದಿರುವುದು ತಂತ್ರಜ್ಞಾನ ಎಂಬ ಹೊಸ ಆಯುಧ. ಈ ತಂತ್ರಜ್ಞಾನದ ಮೇಲೆ ಮಾಲೀಕತ್ವವನ್ನು ಹೊಂದುವವರು ತಮ್ಮನ್ನು ತಾವೇ ನವ ನಿರ್ಮಾಪಕರು ಎಂದು ಬಿಂಬಿಸಿಕೊಳ್ಳತೊಡಗಿದ್ದಾರೆ.

ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೂ ಉದ್ಯಮಿಗಳನ್ನು ನೇಮಿಸಬಹುದೆಂಬ ಯುಜಿಸಿಯ ಇತ್ತೀಚಿನ ಕರಡು ನಿಯಮ ಇವರಿಗೆಲ್ಲಾ ಇನ್ನಷ್ಟು ಹುಮ್ಮಸ್ಸು ನೀಡಿರಬಹುದು. ಆ ಮೂಲಕ ಜ್ಞಾನ, ಪಾಂಡಿತ್ಯಕ್ಕಿಂತ ಹಣ ಮಾಡುವ ಕೌಶಲವನ್ನಷ್ಟೇ ಅರ್ಹತೆಯನ್ನಾಗಿಸಿ, ಮಿದುಳಿಲ್ಲದ ನವ ಜೀತಗಾರರನ್ನು ಸೃಷ್ಟಿಸುವುದು ಹೆಚ್ಚು ಸುಲಭ ಅಂದುಕೊಂಡಿರಬಹುದು. ಹೆಚ್ಚು ಮಕ್ಕಳನ್ನು ಹೆತ್ತು ಕೂಲಿಕಾರರನ್ನು ಹೆಚ್ಚಿಸುವ ಟಾಸ್ಕ್ ನೀಡಿ ಅದಕ್ಕೆ ಧರ್ಮದ ಲೇಪವನ್ನೂ ಹಚ್ಚಬಹುದು. ಇಷ್ಟಾಗಿ ಇವರೆಲ್ಲಾ ಹೀಗೆ ಹೇಳಿದ ಕೂಡಲೇ ಜನರೆಲ್ಲಾ ಶಿರಸಾ ಪಾಲಿಸುತ್ತಾರೆಂಬ ಭ್ರಮೆಯೇನೂ ಬೇಡ. ಆದರೆ ಇವರ ಈ 'ಹೆಬ್ಬುಬ್ಬೆ' ಮಾತುಗಳೂ ದೊಡ್ಡ ಸುದ್ದಿಯಾಗುವ ದುರ್ದೈವದ ಬಗೆಗೆ 'ನಗೆಯು ಬರುತಿದೆ' ಅಷ್ಟೇ.

ಮನುಷ್ಯನ ದ್ವೇಷ, ಕ್ರೌರ್ಯಕ್ಕೆ ಸಾವಿರ ಮುಖಗಳು ಎಂಬುದು ದಿನವೂ ಅನಾವರಣಗೊಳ್ಳುತ್ತಲೇ ಇರುತ್ತದೆ. ಆದರೆ ಇದಕ್ಕೆ ಪರಿಹಾರವನ್ನು ಹುಡುಕುವವರು ಪ್ರೀತಿಯ ದಾರಿಯನ್ನೇ ಆರಿಸಿಕೊಳ್ಳುವುದು ಒಂದು ಅಚ್ಚರಿಯ ನಡೆಯೇ ಆಗಿರುತ್ತದೆ. ಬಿಸಿರಕ್ತದ ಯುವಜನರೂ ಈ ಹಾದಿಯನ್ನೇ ಆರಿಸಿಕೊಂಡು ಹೋಗುವುದು ಪ್ರೀತಿಯ ಶಕ್ತಿಯನ್ನು ಹೇಳುತ್ತದೆ. 'ಇಡೀ ಬೆಂಗಳೂರಿನ ಮ್ಯಾಪೇ ನಿನ್ನ ಮೈಯಲ್ಲಿದೆ' ಎಂಬ ಮಾತೊಂದು ಕ್ವಿಯರ್/ಟ್ರಾನ್ಸ್‌ಜೆಂಡರ್ ಸಮುದಾಯದವರು ಪ್ರಸ್ತುತಪಡಿಸಿದ 'ತಲ್ಕಿ' ನಾಟಕದಲ್ಲಿ ಬರುತ್ತದೆ. ಆಕೆಯ ಮೈಮೇಲೆ ಬೇರೆ ಬೇರೆ ಏರಿಯಾಗಳಲ್ಲಿ ಆದ ಹಲ್ಲೆಗಳ ಗುರುತುಗಳು ಅವು. ಇದು, ಆ ಹಲ್ಲೆಗಳ ದಾಖಲೆಯನ್ನು ಮಾತ್ರ ಹೇಳುತ್ತಿರುವುದಿಲ್ಲ. ಜೊತೆಗೇ ಈ ಸಮಾಜವು ದುರ್ಬಲರನ್ನು ನಡೆಸಿಕೊಳ್ಳುವ ರೀತಿಯನ್ನೂ ಅಮಾನುಷತೆಯನ್ನೂ ಆ ಅಮಾನುಷತೆಯು ಒಪ್ಪಿತ ಸಂಗತಿಯಾಗಿರುವುದನ್ನೂ ದಾಖಲಿಸುತ್ತಿರುತ್ತದೆ.

ಇವರ ಬದುಕಿನ ಈ ಬವಣೆಗಳ ಪರಿಚಯವೇ ಇಲ್ಲದೆ ಕೆನೆಪದರದಲ್ಲಿ ಬದುಕುತ್ತಿರುವ ಜನರ ನಡುವೆ ತಾತ್ಸಾರಕ್ಕೆ ಒಳಗಾಗಿ, ಕ್ರಿಮಿನಲ್‌ಗಳೆಂಬಂತೆ ದೂಷಿಸಿಕೊಳ್ಳಬೇಕಾದ ಇವರ ಬದುಕುಗಳನ್ನು ಅದು ಹೇಗಿದೆಯೋ ಹಾಗೆಯೇ ರಂಗಕ್ಕೆ ತಂದು, ಅವರಿಂದಲೇ ಅಭಿನಯ ಮಾಡಿಸಿದ ಯುವ ನಿರ್ದೇಶಕ ಶ್ರೀಜಿತ್ ಸುಂದರಂ, ಈ ನೋವುಗಳನ್ನು ದಾಟಿಸುವಾಗಲೂ ಹಗೆಯ ಮಾತಿಲ್ಲದೆ ಅಳುವನ್ನು ನಗುವಿನಲ್ಲಿ ಮರೆಸಿ ಹೇಳುತ್ತಾರೆ. ಕೇಳಿಸಿಕೊಳ್ಳಬೇಕಾದ, ನೋಡಬೇಕಾದ ಕಿವಿ, ಕಣ್ಣುಗಳು ಅರಿತುಕೊಳ್ಳಬೇಕಷ್ಟೇ.



'ದಿನವೆಲ್ಲಾ ಜೀತ ಮಾಡಿದರೂ ಹಿಟ್ಟು ಕಾಣದ' ಸಾಲೊಂದನ್ನು ಹಾಡಿಕೊಳ್ಳುವ ಪಾತ್ರ 'ಕೇರಿ ಹಾಡು' ನಾಟಕದಲ್ಲಿ ಬರುತ್ತದೆ. ವಾರಕ್ಕೆ 70/90 ಗಂಟೆ ದುಡಿಯಿರಿ ಎಂದು ಕರೆ ಕೊಡುವ 'ನವ ಜಮೀನ್ದಾರರು' ರೂಪುಗೊಳ್ಳುತ್ತಿರುವ ಕಾಲವಿದು. ಆದರೆ ಅಂದಿನಿಂದ ಹೀಗೆ ದುಡಿದುಡಿದೂ ಅನ್ನ, ನೀರು, ಬಟ್ಟೆ ಕಾಣದೇ ಇದ್ದ ಕಾಲವನ್ನು ಈ ಮಾತು ನೆನಪಿಸುತ್ತದೆ. ಮಾತ್ರವಲ್ಲ, ಅದು ಹೇಗೋ ಸಂವಿಧಾನದ ಬೆಳಕಿನಲ್ಲಿ ನಾಲ್ಕಕ್ಷರ ಕಲಿತು ಕಣ್ಣು ಬಿಡುತ್ತಿರುವ ಕೇರಿಯ ಮಕ್ಕಳು ದೇವಸ್ಥಾನ ಪ್ರವೇಶಿಸಿದರೆ ಇಂದಿಗೂ ಬಹಿಷ್ಕಾರ ಹಾಕಲಾಗುತ್ತಿದೆ. ಕೂಲಿ ನಿರಾಕರಿಸಲಾಗುತ್ತಿದೆ. ಈ ಪ್ರಕರಣ ನಡೆದ ಹಾಸನ ಜಿಲ್ಲೆಯ ದಿಂಡಗೂರಿನ ಕತೆಯನ್ನು ಹೇಳುವಾಗಲೂ ಯುವ ನಿರ್ದೇಶಕ ಕೆ.ಚಂದ್ರಶೇಖರ್, ಕೇರಿಯ ಚೈತನ್ಯ, ಕಸುವು, ಗಾಯಗಳನ್ನು ಹೇಳುತ್ತಾರೆಯೇ ವಿನಾ ತಮ್ಮನ್ನು ಹೊರಗಿಟ್ಟಿರುವವರೆಡೆಗೆ ವಿಷಕಾರುವ ಮಾತುಗಳನ್ನಾಡುವುದಿಲ್ಲ.

ಕೇರಿಯವರ ಎಚ್ಚೆತ್ತ ಪ್ರಜ್ಞೆಯು ಒಂದು ವಿಷಯವನ್ನರಿತಿದೆ. ಅದೆಂದರೆ, ನಮ್ಮ ಹಿಂದಿನವರ ಕತೆ ನಮಗೆ ಮತ್ತು ನಮ್ಮ ಕಿರಿಯರಿಗೆ ತಿಳಿದಿಲ್ಲ. ಅದು ತಿಳಿಯಬೇಕು. ಆ ತಿಳಿವನ್ನು ಮರೆಮಾಚಬೇಕಾಗಿಯೂ ಇಲ್ಲ, ತಮ್ಮ ಗುರುತುಗಳನ್ನು ಅಡಗಿಸಿ ಅನಾಮಿಕರಾಗಬೇಕಾಗಿಯೂ ಇಲ್ಲ. ನಮ್ಮದೇ ಗುರುತುಗಳನ್ನು ಹೊತ್ತು ಆತ್ಮವಿಶ್ವಾಸದಿಂದ ತಲೆ ಎತ್ತಿ ನಡೆಯುವ ಸ್ವಾಭಿಮಾನೀ ಪಥವೊಂದನ್ನು ನಾವೇ ಕಂಡುಕೊಂಡು ಮುನ್ನಡೆಯುವುದು. ಸ್ನೇಹದ ತಂಗಾಳಿಯಲ್ಲಿ ಚಿಲುಮೆಯಂತೆ ಚಿಮ್ಮುವುದು. ಈ ನಾಟಕದಲ್ಲೂ ಕೇರಿಯ ಹಿರಿಕಿರಿಯರಾದಿಯಾಗಿ ಅವರೇ ಪಾತ್ರಗಳಾಗಿ ತಮ್ಮದೇ ಕತೆ ಹೇಳಿದ್ದಾರೆ. ಚರಿತ್ರೆಯನ್ನು ಮರೆಯದೇ ಚರಿತ್ರೆಯನ್ನು ಕಟ್ಟುವ ಅಂಬೇಡ್ಕರ್ ಚಿಂತನೆಯ ಬೆಳಕನ್ನು ಹೊತ್ತು ಸಾಗುವವರು ಇವರು.

ಕೇರಿಯಾಚೆಯೂ ಕಟ್ಟಿಕೊಳ್ಳುವ ಆಧುನಿಕ ಬದುಕಿನಲ್ಲಿ ಹಿರಿ– ಕಿರಿದು ಎಂಬ ಭೇದವಿಲ್ಲದೆ, ಹಣದ ಥೈಲಿಯ ಹಪಹಪಿಯಿಲ್ಲದೆ, ನಾಟಕ, ಓದು, ಹಾಡು, ಚಿಂತನ ಮಂಥನಗಳ ಕ್ರಿಯಾಶೀಲತೆಯ ಸಂಗಡ ಅರಳಿಕೊಳ್ಳುವ ಬದುಕೊಂದು ಸಾಧ್ಯವಿಲ್ಲವೇ? ಪುಟ್ಟ ಪುಟ್ಟ ನೇಯ್ಗೆಯ ಘಟಕಗಳಲ್ಲಿ ಕಾರ್ಮಿಕರೇ ಮಾಲೀಕರಾಗಿ, ಮಾಲೀಕರು ಕಾರ್ಮಿಕರಾಗಿ ಸಮಸಮವಾಗಿ ದುಡಿಯುತ್ತಾ, ಬದುಕುತ್ತಾ, ಆ ಕಾರಣಕ್ಕಾಗಿಯೇ ವಾರಕ್ಕೆ ಕನಿಷ್ಠ 20 ಗಂಟೆಗಳ ದುಡಿಮೆ ಮತ್ತು ತಿಂಗಳಿಗೆ ಗರಿಷ್ಠ 150 ಮೀಟರ್‌ಗಳಷ್ಟು ಮಾತ್ರ ನೇಯ್ಗೆ ಎಂದು ವಿಧಿಸಿಕೊಳ್ಳುತ್ತಾ, ಪರಸ್ಪರರಿಗೆ ಆಪತ್ಕಾಲದಲ್ಲಿ ನೆರವಾಗುವ ಹಣಕಾಸು ವ್ಯವಸ್ಥೆ ಮಾಡಿಕೊಂಡು, ವಿಶ್ವಾಸದಲ್ಲಿ ಪ್ರಕೃತಿಗೆ ಹತ್ತಿರವಾಗಿ ಜೀವಿಸುವ ಪ್ರಯೋಗವೊಂದನ್ನು ಮೇಲುಕೋಟೆಯ ಜನಪದ ಟ್ರಸ್ಟ್‌ನಲ್ಲಿ ಪ್ರಯೋಗಿಸುತ್ತಿರುವ ಅನುಭವ ಕಥನವನ್ನು ಸುಮನಸ್ ಕೌಲಗಿ ಹೇಳುತ್ತಿದ್ದರು. ಅಲ್ಲಿ ಎಲ್ಲಾ ಜಾತಿಯ ಜನರಿದ್ದಾರೆ. ಗಾಂಧಿ, ಜೆ.ಸಿ.ಕುಮಾರಪ್ಪ ಅವರ ಚಿಂತನೆಗಳ ಅಡಿಪಾಯದಲ್ಲಿ ಸರಳ ನಡೆ ನಡೆಯುತ್ತಿದ್ದಾರೆ.

ಈ ಎಲ್ಲ ಸಂದರ್ಭಗಳಲ್ಲೂ ಕತೆ ಹೇಳುತ್ತಿರುವ ಯುವಕರ ಜೊತೆಗೆ ಹಿರಿಯರೂ ಹೆಂಗಸರೂ ಮಕ್ಕಳೂ ಕೈಜೋಡಿಸಿದ್ದಾರೆ. ಇವರೆಲ್ಲರೂ ಎಲ್ಲರೊಡನೊಂದಾಗಿ ಬದುಕುವ ಕನಸು ಕಾಣುತ್ತಿದ್ದಾರೆಂಬುದು ಎದ್ದು ಕಾಣುತ್ತಿದೆ.

ಎಡೆಬಿಡದೆ ಅಳುತ್ತಿರುವ ಹುಡುಗಿಯೇ ಕೇಳು- ಶೋಷಕಳಾಗಬಾರದೆಂಬ ನಿನ್ನ ಮೇರು ಪ್ರಜ್ಞೆಯ ಕನಸೂ ನನಸಾಗಬಲ್ಲ ದಾರಿಗಳಿವೆ. ನಗು ಧರಿಸಿ ನಡೆಯೋಣ.

ಚುರುಮುರಿ



ಎಲ್ಲರ ಮನೆ ದೋಸೆ...

● ಮಣ್ಣೆ ರಾಜು

ಹೋಟೆಲ್ ಊಟಕ್ಕೆಂದು ಪ್ರತ್ಯೇಕವಾಗಿ ಬಂದಿದ್ದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ನಾಯಕರು ಆಕಸ್ಮಿಕವಾಗಿ ಮುಖಾಮುಖಿಯಾದರು. ಒಂದೇ ಟೇಬಲ್‌ನಲ್ಲಿ ಊಟಕ್ಕೆ ಕುಳಿತರು.

'ರಾಜಕಾರಣ ಬೇಸರವಾಗಿಬಿಟ್ಟಿದೆ... ಯಾವ ಬಣವನ್ನು ಬೆಂಬಲಿಸಬೇಕು, ಯಾರಿಂದ ದೂರವಿರಬೇಕು ಅಂತ ಗೊತ್ತಾಗುತ್ತಿಲ್ಲ' ನಾಯಕರು ಜುಗುಪ್ಸೆಗೊಂಡರು.

'ನಮ್ಮ ಪಕ್ಷಕ್ಕೆ ಬನ್ನಿ, ನಿಮಗೆ ಸ್ಥಾನಮಾನ ಕೊಡ್ತೀವಿ' ಕಾಂಗ್ರೆಸ್ ನಾಯಕರು ಆಹ್ವಾನಿಸಿದರು.

'ಇದೇನ್ರೀ? ಹಬ್ಬಕ್ಕೆ ಮನೆಗೆ ಊಟಕ್ಕೆ ಕರೆದಷ್ಟು ಸಲೀಸಾಗಿ ಪಕ್ಷಕ್ಕೆ ಕರೆಯುತ್ತಿದ್ದೀರಿ. ನಿಮ್ಮ ಪಕ್ಷದಲ್ಲಿ ಇರುವವರಿಗೇ ಕುರ್ಚಿಗಳಿಲ್ಲ, ನಾವು ಬಂದು ಚಾಪೆ ಮೇಲೆ ಕೂರಬೇಕಾ? ಸಹವಾಸವೇ ಬೇಡ, ಇರೋ ಪಕ್ಷದಲ್ಲೇ ಹೆಣಗಾಡ್ತೀನಿ' ಅಂದ್ರು ಬಿಜೆಪಿ ನಾಯಕರು.

'ಕಾಂಗ್ರೆಸ್ ಅಧ್ಯಕ್ಷರಿಗೂ ಬೆಳಗಾವಿ ಕಡೆಯವರದೇ ಕಾಟ, ಬಿಜೆಪಿ ಅಧ್ಯಕ್ಷರಿಗೂ ಆ ಕಡೆಯವರದೇ ಕಾಟ!' ಜೆಡಿಎಸ್ ನಾಯಕರು ನಕ್ಕರು.

'ನಿಮ್ಮಲ್ಲಿ ಯಾರ್‍ಯಾರ ಕಾಟವಿದೆ ಅನ್ನೋದು ನಮಗೂ ಗೊತ್ತು ಕಣ್ರೀ'.

'ಎಲ್ಲರ ಮನೆ ದೋಸೆಯೂ ತೂತು... ನಿಮ್ಮ ಪಕ್ಷದ ಅಧ್ಯಕ್ಷರು ಬದಲಾಗ್ತಾರಾ?'

'ಅಧ್ಯಕ್ಷರೂ ಬದಲಾಗಲ್ಲ, ಅಧ್ಯಕ್ಷರ ವರ್ತನೆಯೂ ಬದಲಾಗಲ್ಲ...'

'ಬಹಿರಂಗ ಹೇಳಿಕೆ ನೀಡಬೇಡಿ, ಕೀಪ್‌ಕ್ವಯಿಟ್, ಕೀಪ್ ಸೈಲೆನ್ಸ್ ಅಂತ ನಮ್ಮ ಹೈಕಮಾಂಡ್‌ನ ಆಜ್ಞೆಯಾಗಿದೆ'.

'ಹೇಳೀಹೇಳಿ ಸಾಕಾಗಿ ನಮ್ಮ ಹೈಕಮಾಂಡ್‌ನವರು ತಾವೇ ಸೈಲೆಂಟ್ ಆಗಿಬಿಟ್ಟಿದ್ದಾರೆ!'

ಅಷ್ಟರಲ್ಲಿ ನಾಯಕರ ಹೆಂಡತಿ ಫೋನ್ ಮಾಡಿ, 'ರೀ, ಎಲ್ಲಿದ್ದೀರಿ?' ಕೇಳಿದರು.

'ಫ್ರೆಂಡ್ಸ್ ಜೊತೆ ಹೋಟೆಲ್‌ಗೆ ಬಂದಿದ್ದೀನಿ?'

'ಆಡಳಿತ ಪಕ್ಷದ ನಾಯಕರ ಜೊತೆ ನೀವು ಹೋಟೆಲ್‌ನಲ್ಲಿ ಗೋಪ್ಯ ಸಭೆ ಮಾಡ್ತಿದ್ದೀರಂತೆ. ಮಾತೃಪಕ್ಷ ತ್ಯಜಿಸಿ ಆಡಳಿತ ಪಕ್ಷ ಸೇರೋದು ಖಚಿತ ಅಂತ ಟಿ.ವಿ.ಯಲ್ಲಿ ನ್ಯೂಸ್ ಬರ್ತಾ ಇದೆರೀ!' ಎಂದರು ಪತ್ನಿ.

ಗಾಬರಿಗೊಂಡು ಜಾಗ ಖಾಲಿ ಮಾಡಿದ ಮೂರೂ ಪಕ್ಷಗಳ ನಾಯಕರು ಮೂರು ದಿಕ್ಕಿಗೆ ಹೊರಟು ಕಣ್ಮರೆಯಾದರು.

ಸಂಗತ

ಸಂತರು ಮತ್ತು ಮಕ್ಕಳ ಸಂಖ್ಯೆ

ಧರ್ಮಬೋಧಕರು ವಿಜ್ಞಾನದ ಸಾಧನೆಯನ್ನು ಗೌರವಿಸಬೇಕು

● ಟಿ.ಆರ್.ಭಟ್

ಬೆಂಗಳೂರಿನಲ್ಲಿ ಕೆಲ ದಿನಗಳ ಹಿಂದೆ ನಡೆದ ಬ್ರಾಹ್ಮಣರ ಒಂದು ವರ್ಗದವರ ಬೃಹತ್ ಸಮ್ಮೇಳನದಲ್ಲಿ ಮಾತನಾಡುವಾಗ, ಆ ವರ್ಗಕ್ಕೆ ಸೇರಿದ ಹಿರಿಯ ಸಂತರು ಮತ್ತು ಕಿರಿಯ ಸಂತರು 'ಸಮುದಾಯದ ಸಂತತಿ ವೃದ್ಧಿಗೆ ದಂಪತಿ ಕನಿಷ್ಠ ಮೂವರು ಮಕ್ಕಳನ್ನಾದರೂ ಪಡೆಯಬೇಕು. ಮೂರಕ್ಕಿಂತ ಹೆಚ್ಚಾದರೆ ಅದನ್ನು ಮಠಕ್ಕೆ ಕೊಡಬಹುದು' ಎಂದು ಹೇಳಿದ್ದಾರೆ. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ ಭಾಗವತ್ ಅವರೂ ಹಿಂದೂ ಮಹಿಳೆಯರು ಮೂವರು ಮಕ್ಕಳನ್ನು ಹೆರಬೇಕು ಎಂದು ಇತ್ತೀಚೆಗೆ ಕರೆ ಕೊಟ್ಟಿದ್ದು ಇಲ್ಲಿ ಪ್ರಾಸಂಗಿಕವಾಗುತ್ತದೆ.


ನಾನೂ, ಬ್ರಾಹ್ಮಣರ ಇನ್ನೊಂದು ಪಂಗಡಕ್ಕೆ ಸೇರಿದ ಮಠದಲ್ಲಿ ಮತ್ತು ಅವರು ನಡೆಸುತ್ತಿದ್ದ ವಿದ್ಯಾರ್ಥಿ ನಿಲಯದಲ್ಲಿ ವಾಸಿಸಿ, ಅವರದೇ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಪಡೆದವನು. ಆ ಬಳಿಕ ಸಮಾಜದಲ್ಲಿ ಒಂದು ನೆಲೆ ಕಂಡುಕೊಂಡವನು. ಅದೇ ರೀತಿ, ಇನ್ನೊಂದು ಮಠವು ತಮ್ಮ ವರ್ಗದ ಬಡಮಕ್ಕಳ ಏಳಿಗೆಗೋಸ್ಕರ ಸ್ಥಾಪಿಸಿ ನಡೆಸುತ್ತಿದ್ದ ಶಾಲೆ, ಕಾಲೇಜು ಮತ್ತು ವಿದ್ಯಾರ್ಥಿ ನಿಲಯದಂತಹವನ್ನು ಸ್ವತಃ ನೋಡಿ ಅಭಿಮಾನಪಟ್ಟಿದ್ದೆ. ಅವರು ಯಾರೂ ನಾವು ದೊಡ್ಡವರಾದ ಮೇಲೆ ಯಾವಾಗ ಮದುವೆ ಆಗಬೇಕು, ಎಷ್ಟು ಮಕ್ಕಳನ್ನು ಹೊಂದಬೇಕು ಎಂಬುದರ ಬಗ್ಗೆ ಸಲಹೆಗಳನ್ನು ನೀಡಲಿಲ್ಲ. ಅವರೆಲ್ಲ ತಮ್ಮದೇ ಸಮುದಾಯದಲ್ಲಿ ಹೆಚ್ಚು ಆದಾಯ ಇಲ್ಲದವರ ಮಕ್ಕಳ ಶ್ರೇಯೋಭಿವೃದ್ಧಿಗೆ ನಿರಂತರವಾಗಿ ಶ್ರಮಿಸಿದವರು. ಈ ತರಹದ ಸಂತರಿಗೆ ನಾನು ತಲೆಬಾಗಿ ಗೌರವ ಸಲ್ಲಿಸುತ್ತೇನೆ.

ತಮ್ಮ ಭಾಷಣದಲ್ಲಿ ಸಂತರಾಡಿದ ಕೆಲವು ಮಾತುಗಳು ಆಕ್ಷೇಪಾರ್ಹ. 'ಯುವಕ-ಯುವತಿಯರು ಧರ್ಮಸಮ್ಮತವಲ್ಲದ ವಿಧಾನದಿಂದ ಶರೀರ ಮತ್ತು ಮನಸ್ಸಿನ ಅಪೇಕ್ಷೆ ಪೂರೈಸಿಕೊಳ್ಳುತ್ತಿದ್ದಾರೆ. ಅದಕ್ಕೆ ಆಧುನಿಕ ವಿಜ್ಞಾನ ಸಮ್ಮತಿ ಸೂಚಿಸುತ್ತಿದೆ. ಈ ವಿಜ್ಞಾನವು ಅಧರ್ಮದ ಮಾರ್ಗದಲ್ಲಿ ಸಾಗುವ ದಾರಿ ತೋರಿಸುತ್ತಿದೆ'. ಇದಕ್ಕೆ ಪರಿಹಾರವಾಗಿ ಹೆಣ್ಣುಮಕ್ಕಳಿಗೆ 18, ಗಂಡುಮಕ್ಕಳಿಗೆ 21 ವರ್ಷಕ್ಕೆ ವಿವಾಹ ಮಾಡಿಸುವುದೇ ಪರಿಹಾರೋಪಾಯ ಎಂಬ ಸಲಹೆಯನ್ನು ಅವರು ನೀಡುತ್ತಾರೆ.

ವಿಜ್ಞಾನವೂ ಸೇರಿದಂತೆ ಯಾವುದೇ ಜ್ಞಾನವು ಅಧರ್ಮದಲ್ಲಿ ಸಾಗಿ ಎಂದು ಬೋಧಿಸುವುದಿಲ್ಲ. ಮನುಷ್ಯನ ಅರಿವಿನ ಪರಿಧಿಯನ್ನು ವಿಸ್ತರಿಸುವುದು ಮಾತ್ರ ಅದರ ಕೆಲಸ. ಮನುಷ್ಯ ವಿವೇಚನಾಶೂನ್ಯನಾದರೆ ವಿಜ್ಞಾನವನ್ನು ದೂರುವುದು ಸಮಂಜಸ ಅಲ್ಲ. ಎಲ್ಲ ಸಮಾಜಗಳಲ್ಲಿಯೂ ಕಾರಣಾಂತರದಿಂದ ದಾರಿ ತಪ್ಪಿದವರನ್ನು ನಾವು ಕಾಣಬಹುದು. ಹಾಗೆಂದ ಮಾತ್ರಕ್ಕೆ ಯುವಕ-ಯುವತಿಯರೆಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ಅತಾರ್ಕಿಕ. ಸನ್ಯಾಸ ದೀಕ್ಷೆ ಪಡೆದೂ ಸನ್ಯಾಸಧರ್ಮಕ್ಕೆ ವಿರುದ್ಧವಾಗಿ ವರ್ತಿಸಿದ ಉದಾಹರಣೆಗಳು ನಮ್ಮ ಮುಂದೆ ಇವೆ.

ಹಿಂದಿನ ಕಾಲದಲ್ಲಿ, ಪ್ರಾಯಕ್ಕೆ ಬರುವ ಮೊದಲೇ ವಿವಾಹವಾಗುತ್ತಿದ್ದಾಗಲೂ ಸಮಾಜದ ನಿರ್ಬಂಧಗಳನ್ನು ಮೀರಿದ ಪ್ರಕರಣಗಳು ಇದ್ದವು. ವಯಸ್ಸಾಗಿ ವಿವಾಹ ಬಂಧನಕ್ಕೆ ಒಳಗಾದವರೂ ದೇಹ, ಮನಸ್ಸಿನ ಅಪೇಕ್ಷೆಗಳನ್ನು ಸಮಾಜದ ಕಟ್ಟಲೆಯನ್ನು ಮೀರಿ ಪೂರೈಸಿಕೊಳ್ಳುವ ಪ್ರಕರಣಗಳು ಎಲ್ಲ ಸಮುದಾಯಗಳಲ್ಲಿಯೂ ಇವೆ. ವಿವಾಹದ ವಯಸ್ಸನ್ನು ಇಳಿಸುವುದು ಈ ಸಮಸ್ಯೆಗೆ ಎಷ್ಟು ಪರಿಣಾಮಕಾರಿ ಎಂಬುದು ಊಹೆಗಷ್ಟೇ ಸೀಮಿತ, ವಾಸ್ತವ ಬೇರೆಯೇ ಇದೆ.

ಕನಿಷ್ಠ ಮೂವರು ಮಕ್ಕಳು ಬೇಕೆಂಬುದು ಸಂತರಿಬ್ಬರ ಸಲಹೆ. ಮೂರಕ್ಕಿಂತ ಹೆಚ್ಚಾದರೆ ಆ ಮಗುವನ್ನು ಮಠಕ್ಕೆ ಬಿಡಬಹುದು ಎಂದೂ ಹೇಳಿದ್ದಾರೆ ಮಾನ್ಯರು. ಅನೇಕ ಕುಟುಂಬಗಳಲ್ಲಿ, ಕಾಲೇಜು ಶಿಕ್ಷಣ ಪಡೆದೂ ನಿರುದ್ಯೋಗಿಗಳಾದವರು, ಆರ್ಥಿಕ ಮುಗ್ಗಟ್ಟಿನಿಂದ ಉನ್ನತ ಶಿಕ್ಷಣ ಪಡೆಯಲಾರದವರನ್ನು ಗಮನಿಸಿದ್ದೇನೆ. ತಮ್ಮ ಪ್ರತಿಭೆ ಮತ್ತು ಸಾಧನೆಗೆ ಸೂಕ್ತವಾದ ಉದ್ಯೋಗ ಸಿಗದೆ, ಜೀವನೋಪಾಯಕ್ಕಾಗಿ ಸಿಕ್ಕಿದ ಕೆಲಸ ಮಾಡುವ ಯುವಜನ ಬೇಕಾದಷ್ಟಿದ್ದಾರೆ. ಸಂತರು ಇದಕ್ಕೆ ಏನು ಪರಿಹಾರವನ್ನು ಸೂಚಿಸುತ್ತಾರೆ?



ನಾಗರಿಕತೆ ಮುಂದುವರಿದಂತೆ, ಜೀವನದ ನೀತಿ, ಧೋರಣೆಗಳು ಬದಲಾಗುತ್ತಲೇ ಇರುವುದು ಸಹಜ. ಎರಡು ಶತಮಾನಗಳ ಹಿಂದೆ, ಇಂಗ್ಲೆಂಡಿನ ಥಾಮಸ್ ರಾಬರ್ಟ್ ಮಾಲ್ತಸ್ ಎಂಬ ಜನಸಂಖ್ಯಾ ಶಾಸ್ತ್ರಜ್ಞ ಜಗತ್ತಿನಲ್ಲಿ ಜನಸಂಖ್ಯಾ ಸ್ಫೋಟವಾಗಲಿದೆ, ಮಹಾಮಾರಿಗಳಿಂದ ಜನಸಂಖ್ಯೆಯಲ್ಲಿ ಕಡಿತವಾಗಲಿದೆ ಎಂದಿದ್ದ. ಅದಕ್ಕೆ ವಿರುದ್ಧವಾಗಿ ವಿಶ್ವದಲ್ಲಿ ಜನಸಂಖ್ಯೆಯ ಬೆಳವಣಿಗೆ ಇಂದು ಕುಗ್ಗುತ್ತಿದೆ. ಮಹಾಮಾರಿಗಳ ಮೇಲೂ ವೈಜ್ಞಾನಿಕ ಸಂಶೋಧನೆಗಳ ಮೂಲಕ ಮಾನವ ಬಹಳಷ್ಟು ನಿಯಂತ್ರಣ ಸಾಧಿಸಿದ್ದಾನೆ.

ಬೇರೆ ದೇಶಗಳಂತೆ ನಮ್ಮಲ್ಲಿಯೂ ದಂಪತಿಗಳು ಪ್ರಜ್ಞಾಪೂರ್ವಕವಾಗಿಯೇ ತಮಗೆಷ್ಟು ಸಂತಾನ ಬೇಕೆಂದು ಮೊದಲೇ ನಿರ್ಧರಿಸಿಕೊಳ್ಳುವುದರಿಂದ, ಆರ್ಥಿಕ ಸಂಕಷ್ಟದಿಂದಾಗಿ ಮದುವೆಯಾಗದೇ ಉಳಿಯುವುದರಿಂದ, ವೈಯಕ್ತಿಕ ಕಾರಣಗಳಿಂದ ಮತ್ತು ಸರ್ಕಾರದ ನೀತಿಗಳಿಂದ ಫಲವಂತಿಕೆ ದರವು ಇಳಿಮುಖವಾಗುತ್ತಿದೆ. ಇದು ಸಮಾಜದ ಒಂದು ಪಂಗಡದ ಸಮಸ್ಯೆಯಲ್ಲ. ಧರ್ಮಬೋಧಕರು ವಿಜ್ಞಾನದ ಸಾಧನೆಯನ್ನು ಗೌರವಿಸಬೇಕು, ಅದರ ಸದುಪಯೋಗದತ್ತ ಗಮನಹರಿಸಬೇಕು, ಮಾನವನು ಅದನ್ನು ದುರುಪಯೋಗಪಡಿಸಿಕೊಳ್ಳುವ ದಾರಿಗೆ ಹೊರಟಾಗ ಅವನನ್ನು ಎಚ್ಚರಿಸಬೇಕು.

ಮಾನವರಲ್ಲಿ ಸಹಬಾಳ್ವೆಯನ್ನು ಪ್ರೋತ್ಸಾಹಿಸಿ, ಹೃದಯವಂತಿಕೆಯನ್ನು ಬೆಳೆಸಿ, ಪ್ರಜ್ಞಾವಂತ ಮತ್ತು ವಿಚಾರಶೀಲ ಜನಾಂಗವನ್ನು ಬೆಳೆಸುವುದು ಹೇಗೆ ಎಂಬುದರತ್ತ ಅವರು ಗಮನ ಹರಿಸಬೇಕು. ಸಂತೃಪ್ತ ಸಮಾಜದ ರಚನೆಗೆ ಈ ಕಾರ್ಯ ಆಗಬೇಕು.

ವಾಚಕರ ವಾಣಿ

ದೈಹಿಕ ಶಿಕ್ಷಣ ಶಿಕ್ಷಕರಿಗೆ ಬೇಕು ಪುನಶ್ಚೇತನ

ನವದೆಹಲಿಯಲ್ಲಿ ನಡೆದ ಕೊಕ್ಕೊ ವಿಶ್ವಕಪ್ ಟೂರ್ನಿಯಲ್ಲಿ, ಭದ್ರಾವತಿ ತಾಲ್ಲೂಕು ಹಕ್ಕಿಪಿಕ್ಕಿ ಕ್ಯಾಂಪ್‌ನಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಎಸ್.ಗಿರೀಶ್ ಅವರು ತಾಂತ್ರಿಕ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ್ದು (ಪ್ರ.ವಾ., ಜ. 17) ಹೆಮ್ಮೆಯ ಸಂಗತಿ. ರಾಜ್ಯದ ಬಹುಪಾಲು ಸರ್ಕಾರಿ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರೇ ಇಲ್ಲದಿರುವುದು ಎಲ್ಲರಿಗೂ ತಿಳಿದಿರುವ ವಿಚಾರ. ಶಿಕ್ಷಕರು ಇದ್ದರೂ ಅಂತಹ ಕೆಲವು ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಇಳಿಮುಖವಾಗಿರುವುದರ ಜೊತೆಗೆ ಆಟದ ಮೈದಾನಗಳೂ ನಿರ್ವಹಣೆ ಇಲ್ಲದೆ ಗೋಮಾಳಗಳಂತೆ ಆಗಿಬಿಡುತ್ತಿವೆ. ಇಂತಹ ಸಂದರ್ಭದಲ್ಲಿ ಗಿರೀಶ್ ಅವರ ಸಾಧನೆ ವಿಶೇಷವೇ ಸರಿ.

ಶಿಕ್ಷಣ ಇಲಾಖೆಯು ಬೋಧಕರಿಗೆ ತಿಂಗಳಿಗೆ ಒಂದು ಬಾರಿಯಾದರೂ ವಿಷಯ ಪರಿಣತರಿಂದ ತರಬೇತಿ ಏರ್ಪಡಿಸಿ ಅವರ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸುತ್ತಿದೆ. ಆದರೆ ದೈಹಿಕ ಶಿಕ್ಷಣ ಶಿಕ್ಷಕರ ಸಾಮರ್ಥ್ಯ ವೃದ್ಧಿಗೆ ಯಾವುದೇ ರೀತಿಯ ಕಾರ್ಯಕ್ರಮಗಳು ಇಲ್ಲ. ಹೀಗಾಗಿ, ಬಹುತೇಕ ಶಾಲೆಗಳಲ್ಲಿ ಈ ಶಿಕ್ಷಕರು ಕ್ರೀಡಾಕೂಟಗಳ ಸಮಯದಲ್ಲಿ ಮಾತ್ರ ತಮ್ಮ ವೃತ್ತಿನೈಪುಣ್ಯ ಪ್ರದರ್ಶಿಸಿ ಉಳಿದ ದಿನಗಳಲ್ಲಿ ಅನಿವಾರ್ಯವಾಗಿ ಮಧ್ಯಾಹ್ನದ ಬಿಸಿಯೂಟ ಮೇಲ್ವಿಚಾರಣಾ ಕೆಲಸಕ್ಕೆ ಸೀಮಿತಗೊಂಡುಬಿಡುತ್ತಿದ್ದಾರೆ. ಹಾಗಾಗಿ, ಇಲಾಖೆ ಈ ಕುರಿತು ವಿಶೇಷ ಗಮನಹರಿಸಿ ಬೋಧಕರಿಗೆ ನಿರಂತರವಾಗಿ ಆಯೋಜಿಸುತ್ತಿರುವ ಪುನಶ್ಚೇತನ ಕಾರ್ಯಕ್ರಮಗಳನ್ನು ದೈಹಿಕ ಶಿಕ್ಷಣ ಶಿಕ್ಷಕರಿಗೂ ವಿಸ್ತರಿಸುವ ಅವಶ್ಯಕತೆ ಇದೆ.

ಜೆ.ಬಿ.ಮಂಜುನಾಥ, ಪಾಂಡವಪುರ

ತೆರಿಗೆದಾರರ ಹಣ ಎತ್ತಿ ಸುರಿಯುವ ಯೋಜನೆ

ಶರಾವತಿ ಕೊಳ್ಳದಿಂದ ನೀರನ್ನು ಪಂಪ್ ಮಾಡಿ ಮೇಲಕ್ಕೆತ್ತಿ ಶೇಖರಿಸಿ ಮತ್ತೆ ಕೆಳಕ್ಕೆ ಬೀಳಿಸಿ ವಿದ್ಯುತ್ ಉತ್ಪಾದನೆ ಮಾಡುವ (ಪಂಪ್ಡ್ ಸ್ಟೋರೇಜ್) ಯೋಜನೆಗೆ ಅರಣ್ಯಾಧಿಕಾರಿಗಳು ಸಣ್ಣ ಕೊಕ್ಕೆ ಹಾಕಿದ್ದು ವರದಿಯಾಗಿದೆ (ಪ್ರ.ವಾ., ಜ. 22). ಇಡೀ ಯೋಜನೆಯೇ ಒಮ್ಮೆ ಮೇಲಕ್ಕೆ ಮತ್ತೊಮ್ಮೆ ಕೆಳಕ್ಕೆ ಸೀಸಾ ಮಾಡುತ್ತಿದೆ. ತಾನು ಉತ್ಪಾದಿಸುವ ಶಕ್ತಿಗಿಂತ ಜಾಸ್ತಿ ವಿದ್ಯುತ್ತನ್ನು ನುಂಗುವ ಈ ವಿಧ್ವಂಸಕ ಯೋಜನೆಯನ್ನು ಕೈಬಿಡಲು ಸರಳ, ಪ್ರಬಲ ಕಾರಣ ಇದೆ. ಬೆಳಿಗ್ಗೆ ಮತ್ತು ಸಂಜೆಯ ವೇಳೆಯಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಿರುವುದರಿಂದ (ಪೀಕ್ ಲೋಡ್) ಆ ಸಮಯಕ್ಕೆ ತುರ್ತು ವಿದ್ಯುತ್ ಉತ್ಪಾದನೆಗೆ ಇದು ಸುಲಭ ಮಾರ್ಗವೆಂದು ಯೋಜಕರು ಹೇಳುತ್ತಿದ್ದಾರೆ. ರಾಜ್ಯದ ಈಗಿರುವ ಎಲ್ಲ ಜಲವಿದ್ಯುತ್ ಘಟಕಗಳನ್ನೂ ಹೀಗೆ ಪೀಕ್ ಲೋಡ್ ಸಮಯಕ್ಕೆಂದೇ ಮೀಸಲಿಡಬೇಕು.

ಈ ಹೊಸ ಶರಾವತಿ ಯೋಜನೆಗೆ ಸುರಿಯುವ ಅರ್ಧದಷ್ಟು ಸಮಯ ಮತ್ತು ಹಣದಲ್ಲಿ ಬರಪೀಡಿತ ಪ್ರದೇಶದ ಬಿಸಿಲಿನಿಂದ ಹಾಗೂ ಕರಾವಳಿಯ ಗಾಳಿಯಿಂದ ವಿದ್ಯುತ್ ಪಡೆಯಬಹುದು. ಇದರಿಂದ ಬೇಕಾದಷ್ಟು 'ಬೇಸ್ ಲೋಡ್' ವಿದ್ಯುತ್ತೂ ಸಿಗುತ್ತದೆ, ಸ್ಥಳೀಯರಿಗೆ ಉದ್ಯೋಗವೂ ಸಿಗುತ್ತದೆ, ಅಮೂಲ್ಯ ಖಗಮೃಗ ಸಸ್ಯಸಂಪತ್ತೂ ಉಳಿಯುತ್ತದೆ. ಜರ್ಮನಿಯಂಥ ಬಿಸಿಲಿನ ಬರವಿರುವ ದೇಶದಲ್ಲಿ ಇದು ಸಾಧ್ಯವಾದರೆ ನಮ್ಮಲ್ಲೇಕೆ ಆಗದು?

ನಾಗೇಶ ಹೆಗಡೆ, ಕೆಂಗೇರಿ

ಜನಸ್ನೇಹಿ ಮಾಧ್ಯಮ: ತೋರಬೇಕಿದೆ ಆಸ್ಥೆ, ಬದ್ಧತೆ

ಆಕಾಶವಾಣಿ ಮತ್ತು ದೂರದರ್ಶನ ಕುರಿತಾದ ಬಸವರಾಜ ಸಾದರ ಅವರ ಲೇಖನ (ಪ್ರ.ವಾ., ಜ. 22) ಬಹಳ ಪ್ರಸ್ತುತವೂ ಅತಿ ಮುಖ್ಯವೂ ಆಗಿದೆ. ಕಲಾವಿದನಾಗಿ ಆಕಾಶವಾಣಿಯ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಬಂದಿರುವ ನನಗೆ, ಇತ್ತೀಚಿನ ವರ್ಷಗಳಲ್ಲಿ ನಿರಾಶಾದಾಯಕ ಸ್ಥಿತಿಯಲ್ಲಿರುವ ಈ ಮಹಾನ್ ಸಂಸ್ಥೆಗಳ ಬಗ್ಗೆ ಬಹಳ ಖೇದವೆನಿಸುತ್ತದೆ. ಆಕಾಶವಾಣಿ ಮತ್ತು ದೂರದರ್ಶನವು ಕಾರ್ಯಕ್ರಮಗಳ ಗುಣಮಟ್ಟ, ವ್ಯಾಪ್ತಿ, ವೈವಿಧ್ಯ ಮತ್ತು ಮುಖ್ಯವಾಗಿ ವಸ್ತುನಿಷ್ಠತೆಯ ದೃಷ್ಟಿಯಿಂದ ವಿಶಿಷ್ಟವಾಗಿವೆ. ನಮ್ಮ ಸಾಂಸ್ಕೃತಿಕ ರಾಯಭಾರಿಗಳು ಎನಿಸಿಕೊಂಡು ಜನರ ಮೆಚ್ಚುಗೆಗೆ ಪಾತ್ರವಾಗಿವೆ. ಗಳಿಕೆಯ ದೃಷ್ಟಿಯಿಂದ ನೋಡದೆ ಪ್ರಬಲ ಸ್ವಾಯತ್ತ ಸಂಸ್ಥೆಗಳನ್ನಾಗಿ ಇವುಗಳನ್ನು ಉಳಿಸಿ ಬೆಳೆಸುವಲ್ಲಿ ಸರ್ಕಾರಗಳು ಆಸ್ಥೆ, ಬದ್ಧತೆಯನ್ನು ತೋರುವುದು ಅತ್ಯಂತ ಅಪೇಕ್ಷಣೀಯ ಹಾಗೂ ಅನಿವಾರ್ಯ.

ಎಚ್.ವಿ.ನಟರಾಜ, ಬೆಂಗಳೂರು

ಅಸಲಿಯಾಗಿ ಉಳಿದದ್ದು ರೋಗ ಮಾತ್ರ!

ರಾಜ್ಯದ ಔಷಧ ಮಾರುಕಟ್ಟೆಯಲ್ಲಿ ನಕಲಿ ಔಷಧಗಳ ಪೂರೈಕೆ ಜಾಲ ವ್ಯಾಪಕವಾಗಿರುವುದನ್ನು (ಪ್ರ.ವಾ., ಜ. 22) ನೋಡಿದರೆ, ನಮ್ಮ ಸಮಾಜ ಅಧೋಗತಿಯ ಹಾದಿ ಹಿಡಿದಿರುವುದು ಸ್ಪಷ್ಟವಾಗುತ್ತದೆ. ಜೊತೆಗೆ ನಕಲಿ ವೈದ್ಯರ ಹಾವಳಿ ಬೇರೆ. ಯಾವುದೇ ರೋಗವನ್ನು ಗುಣಪಡಿಸುವಲ್ಲಿ ನಂಬಿಕೆ ಎನ್ನುವುದು ಪ್ರಮುಖ ಪಾತ್ರ ವಹಿಸುತ್ತದೆ. ಅದೇ ಇಲ್ಲದಿದ್ದರೆ ರೋಗ ಗುಣಪಡಿಸುವಿಕೆ ಕಷ್ಟಕರವಾಗುತ್ತದೆ. ಇದನ್ನೆಲ್ಲಾ ನೋಡಿದರೆ ನಕಲಿ ಔಷಧ, ನಕಲಿ ವೈದ್ಯ, ಲ್ಯಾಬ್‌ಗಳ ನಕಲಿ ರಿಪೋರ್ಟ್... ಇವೆಲ್ಲದರ ಮಧ್ಯೆ ರೋಗ ಮತ್ತು ಅದರ ಪರಿಣಾಮ ಮಾತ್ರ ಅಸಲಿಯಾಗಿ ಉಳಿದಿವೆ ಎನಿಸುತ್ತದೆ.

ಆಶಾ ಅಪ್ರಮೇಯ, ದಾವಣಗೆರೆ

ಮೈಕ್ರೊ ಫೈನಾನ್ಸ್: ಹಾಕಬೇಕಿದೆ ಕಡಿವಾಣ

ರಾಜ್ಯದಲ್ಲಿ ಮೈಕ್ರೊ ಫೈನಾನ್ಸ್ ಕಂಪನಿಗಳ ಹಾವಳಿ ಮಿತಿ ಮೀರುತ್ತಿದೆ. ಈ ಬಗ್ಗೆ ಗೃಹ ಸಚಿವ ಜಿ. ಪರಮೇಶ್ವರ ಅವರೇ ಕಳವಳ ವ್ಯಕ್ತಪಡಿಸಿದ್ದಾರೆ. ಸಣ್ಣ ಪುಟ್ಟ ವ್ಯಾಪಾರಸ್ಥರಿಗೆ, ರೈತ ಮಹಿಳೆಯರಿಗೆ ಸಾಲ ನೀಡಿ, ನಂತರ ಮರುಪಾವತಿಗಾಗಿ ನಾನಾ ರೀತಿಯ ಕಿರುಕುಳ ನೀಡುತ್ತಿರುವ ಈ ಕಂಪನಿಗಳ ಏಜೆಂಟರು, ಸಾಲಗಾರರ ಮನೆಯ ಮುಂದೆ ನಿಂತು, ಸಾಲ ಪಡೆದವರನ್ನು ಅವಾಚ್ಯವಾಗಿ ನಿಂದಿಸಿರುವ ಅನೇಕ ನಿದರ್ಶನಗಳು ಸಿಗುತ್ತವೆ. ಇವರ ಕಾಟದಿಂದ ಹಲವು ಸಾಲಗಾರರು ತೀವ್ರ ಕಿರುಕುಳ ಅನುಭವಿಸುವಂತಾಗಿದೆ.

ಚಾಮರಾಜನಗರ ಜಿಲ್ಲೆಯ ಕೆಲವು ಹಳ್ಳಿಗಳ ಗ್ರಾಮಸ್ಥರು, ಈ ಕಂಪನಿಗಳ ಏಜೆಂಟರ ಹೆದರಿಕೆಯಿಂದ ಗ್ರಾಮವನ್ನೇ ತೊರೆದು ನಗರಗಳಿಗೆ ಗುಳೆ ಹೋಗುತ್ತಿರುವುದರ ಬಗ್ಗೆ ವರದಿಯಾಗಿದೆ. ಅನೇಕ ಗ್ರಾಮಗಳಲ್ಲಿ ಪ್ರಕ್ಷುಬ್ಧ ವಾತಾವರಣ ಇದೆ ಎಂದು ಹೇಳಲಾಗುತ್ತಿದೆ. ಇಂತಹ ಕಂಪನಿಗಳಿಗೆ ಕಡಿವಾಣ ಹಾಕಿ, ಗ್ರಾಮಸ್ಥರಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ರಾಜ್ಯ ಸರ್ಕಾರದಿಂದ ಆಗಬೇಕಾಗಿದೆ.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಬ್ರಿಕ್ಸ್ ಕರೆನ್ಸಿ ಬೆದರಿತೇ ಅಮೆರಿಕ?

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ತಮ್ಮ ಎರಡನೆಯ ಅವಧಿಯಲ್ಲೂ 'ಅಮೆರಿಕ ಮೊದಲು' ನೀತಿಯನ್ನು ಪ್ರಬಲವಾಗಿ ಪ್ರತಿಪಾದಿಸುತ್ತಿದ್ದಾರೆ. ಬ್ರಿಕ್ಸ್ ಕರೆನ್ಸಿ ಬಳಕೆಗೆ ಬಂದರೆ, ವಿಶ್ವ ಮಾರುಕಟ್ಟೆಯಲ್ಲಿ ಡಾಲರ್ ಏಕಸ್ವಾಮ್ಯಕ್ಕೆ ಪೆಟ್ಟು ಬೀಳುತ್ತದೆ ಎಂದು ಭಾವಿಸಿರುವ ಟ್ರಂಪ್, ಬ್ರಿಕ್ಸ್ ರಾಷ್ಟ್ರಗಳ ಮೇಲೆ ಶೇ 100ರಷ್ಟು ಸುಂಕ ವಿಧಿಸುವುದಾಗಿ ಎಚ್ಚರಿಸಿದ್ದಾರೆ. ಆದರೆ, ಪರ್ಯಾಯ ಕರೆನ್ಸಿ ಬಗ್ಗೆ ವರ್ಷಗಳಿಂದ ಚರ್ಚೆ ನಡೆಯುತ್ತಿದೆಯಾದರೂ ಸದ್ಯಕ್ಕೆ ಅದು ಕಾರ್ಯಸಾಧ್ಯವಲ್ಲ ಎನ್ನಲಾಗುತ್ತಿದೆ

• ಸೂರ್ಯನಾರಾಯಣ ವಿ., ಶ್ರೀನಾಥ್ ಬಿ.ವಿ.



ಅಮೆರಿಕದ ಅಧ್ಯಕ್ಷರಾಗಿ ಎರಡನೇ ಬಾರಿಗೆ ಅಧಿಕಾರ ಸ್ವೀಕರಿಸುತ್ತಿದ್ದಂತೆಯೇ ಡೊನಾಲ್ಡ್ ಟ್ರಂಪ್ ಅವರು ಒಂದೊಂದಾಗಿ ತಮ್ಮ ಮುಖ್ಯ ನಿಲುವುಗಳನ್ನು ಪ್ರಕಟಿಸುತ್ತಿದ್ದಾರೆ. ಅಮೆರಿಕದಲ್ಲಿ ಹುಟ್ಟಿದ ಮಕ್ಕಳ ಪೌರತ್ವದ ವಿಚಾರ ಚರ್ಚೆಯಲ್ಲಿರುವಾಗಲೇ, ಬ್ರಿಕ್ಸ್ ಕರೆನ್ಸಿ ಬಳಕೆಗೆ ತರುವ ಪ್ರಯತ್ನದ ಬಗ್ಗೆ ಅವರು ಎಚ್ಚರಿಸಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಡಾಲರ್‌ಗೆ ಪರ್ಯಾಯವಾಗಿ ಬ್ರಿಕ್ಸ್ ರಾಷ್ಟ್ರಗಳು ಬೇರೊಂದು ಕರೆನ್ಸಿಯನ್ನು ಬಳಕೆಗೆ ತಂದರೆ ಆ ರಾಷ್ಟ್ರಗಳ ಮೇಲೆ ಶೇ 100ರಷ್ಟು ಸುಂಕ ವಿಧಿಸಲಾಗುವುದು ಎಂದು ಘೋಷಿಸಿದ್ದಾರೆ.

ಅಧ್ಯಕ್ಷರಾಗಿ ಆಯ್ಕೆಯಾದ ನಂತರ 2024ರ ಡಿಸೆಂಬರ್‌ನಲ್ಲಿ ಟ್ರಂಪ್ ಇದೇ ಮಾತನ್ನು ಹೇಳಿದ್ದರು. 'ಬ್ರಿಕ್ಸ್ ಕರೆನ್ಸಿ ಜಾರಿಗೆ ತರುವುದಿಲ್ಲ ಎಂದೂ, ಅಮೆರಿಕದ ಬಲಿಷ್ಠ ಡಾಲರ್‌ಗೆ ಪರ್ಯಾಯವಾಗಿ ಯಾವುದೇ ಕರೆನ್ಸಿಯನ್ನು ಬೆಂಬಲಿಸುವುದಿಲ್ಲ ಎಂದೂ ಈ ರಾಷ್ಟ್ರಗಳಿಂದ ನಮಗೆ ಖಾತರಿ ಬೇಕು. ಇಲ್ಲದಿದ್ದರೆ ಅವರು ಶೇ 100ರಷ್ಟು ಸುಂಕವನ್ನು ಎದುರಿಸಬೇಕಾಗುತ್ತದೆ ಮತ್ತು ಅಮೆರಿಕದ ಅದ್ಭುತವಾದ ಮಾರುಕಟ್ಟೆಯಲ್ಲಿ ಅವರ ವಸ್ತುಗಳನ್ನು ಮಾರಾಟ ಮಾಡುವ ಅವಕಾಶ ಕಳೆದುಕೊಳ್ಳಬೇಕಾಗುತ್ತದೆ' ಎಂದಿದ್ದರು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಡಾಲರ್ ಅಧಿಪತ್ಯ ಸಾಧಿಸಿದ್ದು, ಶೇ 90ರಷ್ಟು ವ್ಯಾಪಾರ-ವ್ಯವಹಾರಗಳು ಡಾಲರ್‌ನಲ್ಲಿಯೇ ನಡೆಯುತ್ತಿವೆ. ತೀರಾ ಇತ್ತೀಚಿನವರೆಗೂ ಶೇ 100ರಷ್ಟು ತೈಲ ವ್ಯಾಪಾರವು ಡಾಲರ್‌ನಲ್ಲಿಯೇ ನಡೆಯುತ್ತಿತ್ತು. 2023ರಿಂದ ಈಚೆಗೆ ಐದರು ವ್ಯಾಪಾರಿಗಳಲ್ಲಿ ಒಬ್ಬರು ಡಾಲರ್‌ಗೆ ಹೊರತಾದ ಕರೆನ್ಸಿ ಬಳಸಿ ತೈಲ ವ್ಯಾಪಾರ ಮಾಡುತ್ತಿದ್ದಾರೆ.

ಡಾಲರ್ ಪ್ರಭಾವ ತಗ್ಗಿಸುವ ಗುರಿ: 2022ರಲ್ಲಿ ಉಕ್ರೇನ್ ಮೇಲೆ ರಷ್ಯಾ ಯುದ್ಧ ಸಾರುತ್ತಿದ್ದಂತೆಯೇ, ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳು ಅಂತರರಾಷ್ಟ್ರೀಯ ಪಾವತಿ ವ್ಯವಸ್ಥೆಯಿಂದ (ಸ್ವಿಫ್ಟ್) ರಷ್ಯಾವನ್ನು ಹೊರಗಿಟ್ಟಿದ್ದು ಮಾತ್ರವಲ್ಲದೇ, ಅದರ ಮೇಲೆ ಆರ್ಥಿಕ ದಿಗ್ಬಂಧನಗಳನ್ನು ಹೇರಿದ್ದವು (2012ರಲ್ಲಿ ಇರಾನ್ ಅನ್ನೂ ಸ್ವಿಫ್ಟ್‌ನಿಂದ ಹೊರಗಿಡಲಾಗಿತ್ತು). ಈ ಬೆಳವಣಿಗೆ ನಂತರ ಡಾಲರ್‌ಗೆ ಪರ್ಯಾಯವಾದ ಪಾವತಿ ವ್ಯವಸ್ಥೆ ಕಂಡುಕೊಳ್ಳಬೇಕೆನ್ನುವ ಒತ್ತಡ ತೀವ್ರವಾಯಿತು. ಡಾಲರ್ ಪಾರಮ್ಯವನ್ನು ಕುಗ್ಗಿಸುವುದರ ಜೊತೆಗೆ ಅಮೆರಿಕ ಹೇರುವ ಆರ್ಥಿಕ ನಿರ್ಬಂಧಗಳನ್ನು ನಿಭಾಯಿಸುವ ಉದ್ದೇಶವೂ ಪರ್ಯಾಯ ಕರೆನ್ಸಿ ಪ್ರಸ್ತಾವದ ಹಿಂದಿದೆ.

2022ರಲ್ಲಿ ನಡೆದ 14ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಹೊಸ ಜಾಗತಿಕ ಕರೆನ್ಸಿಯ ಅಗತ್ಯದ ಬಗ್ಗೆ ಪ್ರಸ್ತಾಪಿಸಿ, ಈ ಸಂಬಂಧ ಎಲ್ಲ ಮಾರುಕಟ್ಟೆ ಪಾಲುದಾರರ ಜತೆ ಚರ್ಚಿಸಲು ತಾವು ಸಿದ್ಧವಿರುವುದಾಗಿ ಹೇಳಿದ್ದರು. 2023ರಲ್ಲಿ ಜೊಹಾನಸ್‌ಬರ್ಗ್‌ನಲ್ಲಿ ನಡೆದಿದ್ದ ಬ್ರಿಕ್ಸ್ ಶೃಂಗಸಭೆಯಲ್ಲಿ ಮಾತನಾಡಿದ್ದ ಬ್ರೆಜಿಲ್ ಅಧ್ಯಕ್ಷ ಲುಯಿಜ್ ಇನಾಸಿಯೊ ಲುಲಾ ಡಾ ಸಿಲ್ವಾ ಕೂಡ, ಬ್ರಿಕ್ಸ್ ಕರೆನ್ಸಿ ಬಳಕೆಗೆ ತರುವುದರಿಂದ ಪಾವತಿಯ ಸಾಧ್ಯತೆಗಳು ಹೆಚ್ಚುವುದಲ್ಲದೇ ನಮ್ಮ ಆರ್ಥಿಕ ಹಿತಾಸಕ್ತಿಗಳನ್ನೂ ರಕ್ಷಿಸಿಕೊಳ್ಳಬಹುದು ಎಂದಿದ್ದರು.

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು 2024ರ ಅಕ್ಟೋಬರ್‌ನಲ್ಲಿ ರಷ್ಯಾದ ಕಜಾನ್‌ನಲ್ಲಿ ನಡೆದಿದ್ದ ಬ್ರಿಕ್ಸ್ ಶೃಂಗಸಭೆಯಲ್ಲಿ ಡಾಲರ್ ಸಾರ್ವಭೌಮತ್ವದ ವಿರುದ್ಧ ನೇರವಾಗಿಯೇ ವಾಗ್ದಾಳಿ ನಡೆಸಿದ್ದರು. 'ಡಾಲರ್ ಅನ್ನು ಅಸ್ತ್ರವಾಗಿ ಬಳಸಲಾಗುತ್ತಿದೆ. ಹೀಗೆ ಮಾಡುವುದು ದೊಡ್ಡ ತಪ್ಪು' ಎಂದು ಹೇಳಿದ್ದರು. ಅದಕ್ಕೆ ಧ್ವನಿಗೂಡಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, 'ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಆರ್ಥಿಕ ಏಕೀಕರಣಕ್ಕೆ ಭಾರತ ಒಲವು ಹೊಂದಿದೆ. ಸ್ಥಳೀಯ ಕರೆನ್ಸಿಗಳ ಮೂಲಕ ವ್ಯಾಪಾರ ಮಾಡುವುದು ಮತ್ತು ಗಡಿಯಾಚೆಗಿನ ಸುಗಮ ಪಾವತಿಗಳು ನಮ್ಮ ಆರ್ಥಿಕ ಸಹಕಾರವನ್ನು ಬಲಪಡಿಸುತ್ತವೆ' ಎಂದಿದ್ದರು.

ಬ್ರಿಕ್ಸ್ ಏಕೆ ಮುಖ್ಯ?: ಜಾಗತಿಕ ಮಾರುಕಟ್ಟೆಯ ವಿಚಾರದಲ್ಲಿ ಅಮೆರಿಕ ಹೇಗೆ ಮುಖ್ಯವೋ, ಬ್ರಿಕ್ಸ್ ರಾಷ್ಟ್ರಗಳು ಕೂಡ ಅಷ್ಟೇ ಮುಖ್ಯ. ಬ್ರೆಜಿಲ್, ರಷ್ಯಾ, ಭಾರತ ಮತ್ತು ಚೀನಾ 2006ರಲ್ಲಿ 'ಬ್ರಿಕ್' ಸಂಘಟನೆ ಹುಟ್ಟುಹಾಕಿದವು. ನಾಲ್ಕು ವರ್ಷಗಳ ಬಳಿಕ ದಕ್ಷಿಣ ಆಫ್ರಿಕಾ ಕೂಡ ಸೇರಿ, ಇದು 'ಬ್ರಿಕ್ಸ್' ಎನ್ನುವ ಹೆಸರು ಪಡೆಯಿತು. ವರ್ಷದಿಂದ ವರ್ಷಕ್ಕೆ ಬ್ರಿಕ್ಸ್ ಸದಸ್ಯತ್ವ ಪಡೆಯುತ್ತಿರುವ ಮತ್ತು ಪಡೆಯಲು ಬಯಸುತ್ತಿರುವ ರಾಷ್ಟ್ರಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಸದ್ಯ 10 ದೇಶಗಳು ಸದಸ್ಯತ್ವ ಹೊಂದಿದ್ದು, ಆರ್ಥಿಕ ಮತ್ತು ರಾಜಕೀಯ ಶಕ್ತಿಯಾಗಿ ಹೊರಹೊಮ್ಮುವ ಪ್ರಯತ್ನ ನಡೆಸುತ್ತಿವೆ. ಜಗತ್ತಿನ ಶೇ 40ರಷ್ಟು ಜನಸಂಖ್ಯೆ ಈ ರಾಷ್ಟ್ರಗಳಲ್ಲಿದ್ದರೆ, ಜಾಗತಿಕ ಜಿಡಿಪಿಯ ಮೂರನೇ ಒಂದು ಭಾಗದಷ್ಟು ಪಾಲು ಈ ರಾಷ್ಟ್ರಗಳದ್ದಾಗಿದೆ. ಜಾಗತಿಕ ಮಟ್ಟದಲ್ಲಿ ಅಮೆರಿಕ ಮತ್ತು ಪಶ್ಚಿಮದ ಬಲಾಢ್ಯ ದೇಶಗಳಿಗೆ ಪರ್ಯಾಯವಾದ ಶಕ್ತಿಯನ್ನು ಹುಟ್ಟುಹಾಕುವ ಇರಾದೆ ಈ ರಾಷ್ಟ್ರಗಳದ್ದು.

ವಿಶ್ವ ಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿಯ ಮಾದರಿಯಲ್ಲೇ ಬ್ರಿಕ್ಸ್ ರಾಷ್ಟ್ರಗಳು ಹೊಸ ಅಭಿವೃದ್ಧಿ ಬ್ಯಾಂಕ್ (ಎನ್‌ಡಿಬಿ) ಮತ್ತು ಆಪದ್ಧನ ವ್ಯವಸ್ಥೆಯನ್ನೂ (ಸಿಆರ್‌ಎ) ರೂಪಿಸಿವೆ. ಬ್ರಿಕ್ಸ್ ಕರೆನ್ಸಿಯನ್ನು ಹುಟ್ಟುಹಾಕುವುದು ಇದರ ಮುಂದಿನ ಯೋಜನೆ. ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಅಮೆರಿಕದ ಸಾರ್ವಭೌಮತ್ವವನ್ನು ಎದುರಿಸಲು, ಡಾಲರ್ ಅವಲಂಬನೆಯನ್ನು ತಪ್ಪಿಸಲು, ತಮ್ಮ ದೇಶಗಳ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಪ್ರತ್ಯೇಕ ಕರೆನ್ಸಿ ಅವಶ್ಯಕ ಎನ್ನುವುದು ಈ ರಾಷ್ಟ್ರಗಳ ನಂಬಿಕೆ.

ಆಧಾರ: ಪಿಟಿಐ, ರಾಯಿಟರ್ಸ್

ಒಮ್ಮತ ಸುಲಭವಲ್ಲ

ಅಮೆರಿಕದ ದಿಗ್ಬಂಧನಗಳನ್ನು ಎದುರಿಸುತ್ತಿರುವ ರಷ್ಯಾ ಮತ್ತು ಜಗತ್ತಿನ ದೊಡ್ಡ ಆರ್ಥಿಕತೆ ಎಂಬ ಸ್ಥಾನಕ್ಕಾಗಿ ಅಮೆರಿಕದೊಂದಿಗೆ ಜಿದ್ದಾಜಿದ್ದಿಗೆ ಬಿದ್ದಿರುವ ಚೀನಾ ಪರ್ಯಾಯ ಕರೆನ್ಸಿಯನ್ನು ಪ್ರಬಲವಾಗಿ ಪ್ರತಿಪಾದಿಸುತ್ತಾ ಬಂದಿವೆ. ಬ್ರಿಕ್ಸ್ ಕರೆನ್ಸಿ ಪರಿಕಲ್ಪನೆ ಇನ್ನೂ ಶೈಶವಾವಸ್ಥೆಯಲ್ಲಿದೆ. ಹೊಸ ಕರೆನ್ಸಿ ಬಳಕೆಗೆ ಎಲ್ಲ ಸದಸ್ಯ ರಾಷ್ಟ್ರಗಳು ಒಪ್ಪಿಗೆ ಸೂಚಿಸಬೇಕು. ಅದು ಅಷ್ಟು ಸುಲಭವಲ್ಲ. ಹಾಗಾಗಿ, ಬ್ರಿಕ್ಸ್ ಕರೆನ್ಸಿ ಜಾರಿಗೆ ಬರಲು ಸುದೀರ್ಘ ಸಮಯವೇ ಬೇಕಾಗಬಹುದು. ಬ್ರಿಕ್ಸ್ ರಾಷ್ಟ್ರಗಳ ಪೈಕಿ ಚೀನಾ, ರಷ್ಯಾ, ಬಿಟ್ಟು, ಭಾರತ, ಬ್ರೆಜಿಲ್, ದಕ್ಷಿಣ ಆಫ್ರಿಕಾ, ಅಮೆರಿಕದೊಂದಿಗೆ ಉತ್ತಮ ಬಾಂಧವ್ಯ ಹೊಂದಿವೆ. ಹಾಗಾಗಿ, ಏಕಾಏಕಿ ಅಮೆರಿಕದ ವಿರುದ್ಧವಾದ ಧೋರಣೆಯನ್ನು ಈ ರಾಷ್ಟ್ರಗಳು ತಳೆಯಲಾರವು. ಜೊತೆಗೆ, ಈ ಎಲ್ಲ ರಾಷ್ಟ್ರಗಳ ಆರ್ಥಿಕ ಸ್ಥಿತಿಗತಿಗಳು ಬೇರೆ ಬೇರೆ. ಈ ರಾಷ್ಟ್ರಗಳ ನಡುವಿನ ವ್ಯಾಪಾರ ಕೊರತೆ ತೀವ್ರವಾಗಿದೆ. ಈ ದೇಶಗಳ ವಿತ್ತೀಯ, ವ್ಯಾಪಾರ, ರಾಜಕೀಯ ನೀತಿಗಳಲ್ಲಿ ಭಿನ್ನತೆ ಇದೆ. ರಾಷ್ಟ್ರಗಳ ಕರೆನ್ಸಿಗಳ ವಿನಿಮಯ ದರಗಳಲ್ಲೂ ವ್ಯತ್ಯಾಸವಿದೆ. ಭಾರತ-ಚೀನಾ ನಡುವಿನ ಸಂಬಂಧ ಹದಗೆಟ್ಟಿದೆ. ಸದಸ್ಯ ರಾಷ್ಟ್ರಗಳ ನಡುವೆ ನಂಬಿಕೆಯ ಕೊರತೆಯೂ ಇದೆ. ಈ ಎಲ್ಲ ಸವಾಲುಗಳನ್ನು ಮೆಟ್ಟಿನಿಂತರೆ ಮಾತ್ರ ಪರ್ಯಾಯ ಕರೆನ್ಸಿ ಪರಿಕಲ್ಪನೆ ಕಾರ್ಯರೂಪಕ್ಕೆ ಬರಬಹುದು. ಆದರೆ, ಅದಷ್ಟು ಸುಲಭವಲ್ಲ ಎಂದು ಹೇಳುತ್ತಾರೆ ತಜ್ಞರು.

ಡಾಲರ್ ಮೇಲೆ ಏನು ಪರಿಣಾಮ?

ಪರ್ಯಾಯ ಕರೆನ್ಸಿ ಇನ್ನೂ ಪ್ರಸ್ತಾವದ ಹಂತದಲ್ಲಿದೆಯಷ್ಟೆ. ಹಾಗಿದ್ದರೂ, ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ಬ್ರಿಕ್ಸ್ ರಾಷ್ಟ್ರಗಳ ವಿರುದ್ಧ ಗುಡುಗಿದ್ದಾರೆ. ಏಕೆಂದರೆ, ಜಾಗತಿಕ ರಾಷ್ಟ್ರಗಳ ಪ್ರಭಾವಿ ಗುಂಪುಗಳಲ್ಲಿ 'ಬ್ರಿಕ್ಸ್' ಕೂಡ ಒಂದು. ಅಮೆರಿಕವನ್ನು ಅವಲಂಬಿಸಿರುವ ಹಲವು ರಾಷ್ಟ್ರಗಳು ಅದರ ಸದಸ್ಯರು. ಒಂದು ವೇಳೆ ಬ್ರಿಕ್ಸ್ ರಾಷ್ಟ್ರಗಳು ಪರ್ಯಾಯ ಕರೆನ್ಸಿಯಲ್ಲಿ ವ್ಯವಹಾರ ಆರಂಭಿಸಿದರೆ, ಜಾಗತಿಕ ಮಟ್ಟದಲ್ಲಿ ಡಾಲರ್ ಬೇಡಿಕೆ ಕಡಿಮೆಯಾಗಲಿದೆ. ಜಗತ್ತಿನ ಕರೆನ್ಸಿಗಳ ಎದುರು ಡಾಲರ್ ಮೌಲ್ಯ ಕಳೆದುಕೊಳ್ಳಲಿದೆ. ಇದರಿಂದ ಅಮೆರಿಕದ ಅರ್ಥವ್ಯವಸ್ಥೆಗೆ ಧಕ್ಕೆಯಾಗುವುದಲ್ಲದೇ, ಜಾಗತಿಕ ಆರ್ಥಿಕತೆ ಮೇಲೆ ಅದರ ಹಿಡಿತವೂ ಸಡಿಲವಾಗಲಿದೆ. ಹಾಗಾದ ಪಕ್ಷದಲ್ಲಿ ಜಾಗತಿಕವಾಗಿ ಚೀನಾ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರ ಹೊಮ್ಮಬಹುದು. ಜಗತ್ತಿನ ಆರ್ಥಿಕತೆಗಳಾಗಿರುವ ಚೀನಾ, ರಷ್ಯಾ, ಭಾರತದಂತಹ ಬ್ರಿಕ್ಸ್ ರಾಷ್ಟ್ರಗಳ ಕೈ ಮೇಲಾಗಿ, ತನ್ನ ಪ್ರಭಾವ ಕಡಿಮೆಯಾಗಬಹುದು ಎಂಬ ಆತಂಕ ಅಮೆರಿಕದ್ದು. ಪರ್ಯಾಯ ಕರೆನ್ಸಿ ಜಾರಿಗೆ ಬಂದರೆ, ಅಮೆರಿಕ ಮಾತ್ರವಲ್ಲ, ಡಾಲರ್ ಅನ್ನೇ ಅವಲಂಬಿಸಿರುವ ಜಾಗತಿಕ ಆರ್ಥಿಕತೆಯ ಮೇಲೂ ನಕಾರಾತ್ಮಕ ಪ್ರಭಾವ ಬೀರಬಹುದು ಎಂದೂ ಹೇಳಲಾಗುತ್ತಿದೆ.

ಭಾರತದ ನಿಲುವೇನು?

ಡಾಲರ್‌ಗೆ ಪರ್ಯಾಯವಾದ ಕರೆನ್ಸಿ ಹೊಂದುವ ಬಗ್ಗೆ ಭಾರತ ಹೆಚ್ಚು ಉತ್ಸುಕವಾಗಿದ್ದಂತೆ ಕಾಣುತ್ತಿಲ್ಲ. 'ಜಾಗತಿಕ ವ್ಯಾಪಾರದಲ್ಲಿ ಡಾಲರ್ ಬಳಕೆಯನ್ನು ಪೂರ್ಣವಾಗಿ ನಿಲ್ಲಿಸುವುದು ಅಥವಾ ಈಗಿನ ಡಾಲರ್ ವ್ಯವಸ್ಥೆ ಬದಲಿಸುವುದು ತನ್ನ ಗುರಿಯಲ್ಲ' ಎಂಬುದನ್ನು ಅದು ಈಗಾಗಲೇ ಸ್ಪಷ್ಟಪಡಿಸಿದೆ. ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಅವರು ಕಳೆದ ವರ್ಷದ ಅಕ್ಟೋಬರ್‌ನಲ್ಲಿ ವಾಷಿಂಗ್ಟನ್‌ನಲ್ಲಿ ನಡೆದ ಚಿಂತನ-ಮಂಥನ ಕಾರ್ಯಕ್ರಮವೊಂದರಲ್ಲಿ ಈ ವಿಚಾರದಲ್ಲಿ ಭಾರತದ ನಿಲುವನ್ನು ಮುಂದಿಟ್ಟಿದ್ದಾರೆ.

ಆದರೆ, ರೂಪಾಯಿಯನ್ನು ಜಾಗತಿಕ ಮಟ್ಟದ ಕರೆನ್ಸಿಯನ್ನಾಗಿಸಲು ಭಾರತ ಪ್ರಯತ್ನಿಸುತ್ತಿದೆ. ತಾನು ನಡೆಸುವ ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಡಾಲರ್ ಅವಲಂಬನೆ ತಗ್ಗಿಸಲು ರೂಪಾಯಿಯನ್ನೇ ಬಳಸುವ ಉದ್ದೇಶವನ್ನು ಹೊಂದಿದೆ. 2022ರಿಂದ ಭಾರತವು ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ರೂಪಾಯಿಯನ್ನೂ ಬಳಸಲು ಆರಂಭಿಸಿದೆ.

ಡಾಲರ್ ಕೊರತೆ ಎದುರಿಸುತ್ತಿರುವ ರಾಷ್ಟ್ರಗಳಲ್ಲಿ, ಅಮೆರಿಕದ ದಿಗ್ಬಂಧನಕ್ಕೆ ಗುರಿಯಾದ ರಾಷ್ಟ್ರಗಳೊಂದಿಗೆ ಸುಗಮವಾಗಿ ವ್ಯವಹಾರ ನಡೆಸಲು ರೂಪಾಯಿ ಇಲ್ಲವೇ ಪರ್ಯಾಯ ಕರೆನ್ಸಿಯಲ್ಲಿ ವಹಿವಾಟು ನಡೆಸುವುದು ಅನಿವಾರ್ಯ. ಭವಿಷ್ಯದಲ್ಲಿ ಜಗತ್ತಿನ ಪ್ರಭಾವಿ ಕರೆನ್ಸಿಗಳಿಂದ ಎದುರಾಗಬಹುದಾದ ಸವಾಲುಗಳನ್ನು ನಿಭಾಯಿಸಲು ಮತ್ತು ದೇಶದ ವಿತ್ತೀಯ ಹಿತಾಸಕ್ತಿ ಕಾಪಾಡುವುದಕ್ಕಾಗಿ ರೂಪಾಯಿಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವ ಅವಶ್ಯಕತೆ ಇದೆ ಎಂಬ ನಿಲುವು ಭಾರತದ್ದು.

ನೆರೆಯ ಭೂತಾನ್, ಶ್ರೀಲಂಕಾ, ರಷ್ಯಾ ಸೇರಿದಂತೆ ಹಲವು ರಾಷ್ಟ್ರಗಳೊಂದಿಗೆ ಭಾರತವು ಈಗಾಗಲೇ ರೂಪಾಯಿಯಲ್ಲೇ ವಹಿವಾಟು ನಡೆಸುತ್ತಿದೆ. ಉಕ್ರೇನ್ ಮೇಲೆ ಯುದ್ಧ ಸಾರಿದ ಕಾರಣಕ್ಕೆ ರಷ್ಯಾದ ಮೇಲೆ ಅಮೆರಿಕ ಆರ್ಥಿಕ ದಿಗ್ಬಂಧನಗಳನ್ನು ಹೇರಿದ ನಂತರ ಅಮೆರಿಕದ ವಿರೋಧದ ನಡುವೆಯೂ ರಷ್ಯಾದಿಂದ ಕಡಿಮೆ ಬೆಲೆಗೆ ಕಚ್ಚಾ ತೈಲವನ್ನು ಖರೀದಿಸುತ್ತಾ ಬಂದಿದೆ. ಈ ವಹಿವಾಟಿಗೆ ರೂಪಾಯಿಯಲ್ಲೇ ಹಣ ಪಾವತಿಸುತ್ತಿದೆ. ಅಂತರರಾಷ್ಟ್ರೀಯ ವ್ಯವಹಾರದ ಹಣವನ್ನು ರೂಪಾಯಿಯಲ್ಲೇ ಪಾವತಿಸಲು ಅನುವು ಮಾಡುವುದಕ್ಕಾಗಿ ಹೊರದೇಶಗಳು ಭಾರತದಲ್ಲಿ ವೋಸ್ಟ್ರೊ ಖಾತೆಯನ್ನು (ಒಂದು ಬ್ಯಾಂಕ್, ಇನ್ನೊಂದು ಬ್ಯಾಂಕ್‌ನ ಪರವಾಗಿ ಹೊಂದಿರುವ ಖಾತೆ) ತೆರೆಯಲು ಭಾರತೀಯ ರಿಸರ್ವ್ ಬ್ಯಾಂಕ್ ಅವಕಾಶ ಕಲ್ಪಿಸಿದೆ. ರಷ್ಯಾ, ಬ್ರಿಟನ್, ಇಸ್ರೇಲ್, ಜರ್ಮನಿ ಸೇರಿದಂತೆ 22 ದೇಶಗಳು ಭಾರತದಲ್ಲಿ ವೋಸ್ಟ್ರೊ ಖಾತೆಗಳನ್ನು ಹೊಂದಿವೆ.

'ಬ್ರಿಕ್ಸ್‌ನ ಸದಸ್ಯ ರಾಷ್ಟ್ರಗಳಾದ ರಷ್ಯಾ, ಚೀನಾಗಳ ಪೈಕಿ ಭಾರತವು ರಷ್ಯಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರೂ ಚೀನಾದೊಂದಿಗಿನ ಸಂಬಂಧ ಅಷ್ಟಕ್ಕಷ್ಟೇ. ಬ್ರಿಕ್ಸ್ ರಾಷ್ಟ್ರಗಳಲ್ಲೇ ದೊಡ್ಡ ಆರ್ಥಿಕ ಶಕ್ತಿಯಾಗಿರುವ ಚೀನಾ ಯಾವುದೇ ವಿಚಾರದಲ್ಲಿ ಇತರ ರಾಷ್ಟ್ರಗಳ ಮೇಲೆ ಪ್ರಭಾವ ಬೀರಬಹುದು. ಪರ್ಯಾಯ ಕರೆನ್ಸಿ ವಿಷಯದಲ್ಲೂ ಅದು ಪ್ರಭಾವ ಬೀರಲು ಯತ್ನಿಸಬಹುದು ಮತ್ತು ತನ್ನ ಕರೆನ್ಸಿ ಯುವಾನ್ ಅನ್ನೇ ಪರ್ಯಾಯ ಕರೆನ್ಸಿಯಾಗಿ ಮಾಡಲೂ ಯತ್ನಿಸಬಹುದು. ಭಾರತ ಇದನ್ನು ಯಾವುದೇ ಕಾರಣಕ್ಕೂ ಒಪ್ಪದು. ಹಾಗಾಗಿ, ಬ್ರಿಕ್ಸ್ ಕರೆನ್ಸಿ ಬಗ್ಗೆ ಅದು ಉತ್ಸಾಹ ತೋರುವ ಸಾಧ್ಯತೆ ಕಡಿಮೆ' ಎಂಬುದು ಹಣಕಾಸು ತಜ್ಞರ ವಿಶ್ಲೇಷಣೆ.

ಆಲಿಂಡಿಯಾ ರೇಡಿಯೋಗೆ ಅತ್ಯುತ್ತಮ ಚಿತ್ರ ಪ್ರಶಸ್ತಿ


ಆಲಿಂಡಿಯಾ ರೇಡಿಯೋ ಪೋಸ್ಟರ್

ರಂಗಸ್ವಾಮಿ ಎಸ್. ನಿರ್ದೇಶನದ 'ಆಲಿಂಡಿಯಾ ರೇಡಿಯೊ' ಸಿನಿಮಾ ಶ್ರೀಲಂಕಾ ಅಂತರರಾಷ್ಟ್ರೀಯ ವಿಶ್ವ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಪಡೆದಿದೆ.


ಇದೇ ಸಿನಿಮಾದ ನಿರ್ದೇಶನಕ್ಕಾಗಿ ರಂಗಸ್ವಾಮಿ ಅವರು ಅತ್ಯುತ್ತಮ ನಿರ್ದೇಶನ ಪ್ರಶಸ್ತಿ ಪಡೆದಿದ್ದು, ಅತ್ಯುತ್ತಮ ಕಥೆ ಹಾಗೂ ಅತ್ಯುತ್ತಮ ಸಂಕಲನ ಪ್ರಶಸ್ತಿಯೂ 'ಆಲಿಂಡಿಯಾ ರೇಡಿಯೊ'ಗೆ ದೊರಕಿದೆ. 2024ರಲ್ಲಿ ನಡೆದ 15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಕನ್ನಡ ಸಿನಿಮಾ ಸ್ಪರ್ಧೆ ವಿಭಾಗದಲ್ಲಿ ಮೂರನೇ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಈ ಸಿನಿಮಾ ಪಡೆದಿತ್ತು. ಕಳೆದ ನವೆಂಬರ್‌ನಲ್ಲಿ ನಡೆದ '5ನೇ ಇಂಡಿಕ್ ಫಿಲ್ಮ್ ಉತ್ಸವ್ 2024'ರಲ್ಲಿ ಈ ಸಿನಿಮಾ ಅತ್ಯುತ್ತಮ ಫೀಚರ್ ಫಿಲಂ ತೀರ್ಪುಗಾರರ ಪ್ರಶಸ್ತಿಯನ್ನು ಹಾಗೂ 'ಇಂಡೋಫ್ರೆಂಚ್ ಅಂತರರಾಷ್ಟ್ರೀಯ ಚಿತ್ರೋತ್ಸವ'ದಲ್ಲಿ 'ಅತ್ಯುತ್ತಮ ಭಾರತೀಯ ಫೀಚರ್ ಫಿಲಂ' ಪ್ರಶಸ್ತಿಯನ್ನು ಗೆದ್ದಿತ್ತು. ಮರಾಠಿ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಈ ಸಿನಿಮಾ ಅತ್ಯುತ್ತಮ ಸಿನಿಮಾ ವಿಭಾಗದಲ್ಲಿ ನಾಮನಿರ್ದೇಶನಗೊಂಡಿತ್ತು.

ಇದು ಲೇಖಕ, ರಂಗನಿರ್ದೇಶಕ ರಂಗಸ್ವಾಮಿ ಅವರ ಎರಡನೇ ಸಿನಿಮಾ. ಈ ಹಿಂದೆ ಅವರು ಕೊಡವ ಭಾಷೆಯ 'ಮಿಸ್ಸಿಂಗ್ ವೆಲ್' ಎಂಬ ಸಿನಿಮಾ ನಿರ್ದೇಶಿಸಿದ್ದರು. 'ಆಲಿಂಡಿಯಾ ರೇಡಿಯೊ'ವನ್ನು ಶೀಘ್ರದಲ್ಲೇ ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುವ ಯೋಜನೆ ರೂಪಿಸಿದ್ದಾರೆ ರಂಗಸ್ವಾಮಿ.

ಜ.31ಕ್ಕೆ 'ಕಾಡುಮಳೆ' ತೆರೆಗೆ

ಬಹುತೇಕ ಹೊಸಬರಿಂದಲೇ ಕೂಡಿರುವ 'ಕಾಡುಮಳೆ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಬ್ರೈನ್ ಸ್ಕ್ಯಾಮಿಂಗ್ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರ ಜನವರಿ 31ರಂದು ತೆರೆ ಕಾಣಲಿದೆ.

'ಸಿನಿಮಾ ಗೆಲ್ಲಲು ಉತ್ತಮ ಕಥೆ ಅಗತ್ಯ. ಅಂತಹ ಕಥೆಯನ್ನು ಆಯ್ಕೆ ಮಾಡಿಕೊಂಡು ಈ ಸಿನಿಮಾ ಮಾಡಿದ್ದೇವೆ. ಈ ಪ್ರಕೃತಿಯಲ್ಲಿ ಅದೆಷ್ಟೋ ಪ್ರಶ್ನೆಗಳಿಗೆ ಉತ್ತರವೇ ಇಲ್ಲ, ಅದರಲ್ಲಿ ಒಂದು ಪ್ರಶ್ನೆಯೇ ಈ 'ಕಾಡುಮಳೆ'. ಈ ಭೂಮಿ ಮೇಲೆ ಖಂಡಗಳು, ಸಮುದ್ರಗಳು, ಸ್ವರಗಳು, ವಾರ, ಎಲ್ಲವೂ ಏಳು. ಇದನ್ನೆ ಆಧಾರವಾಗಿಟ್ಟುಕೊಂಡು ಮಾಡಿರುವ ಕಥೆಯಿದು. 'ಬ್ರೈನ್ ಸ್ಕ್ಯಾಮಿಂಗ್' ಎಂಬುದು ನಮ್ಮ ಸಿನಿಮಾದ ಉಪಶೀರ್ಷಿಕೆ. ಕಾಡು ಎಂದರೆ ಭ್ರಮೆ, ಮಳೆಯೆಂದರೆ ರಿಯಾಲಿಟಿ. ಭ್ರಮೆ ಮತ್ತು ವಾಸ್ತವವನ್ನು ಅರ್ಥಮಾಡಿಕೊಳ್ಳು ಸಾಧ್ಯವಾಗದ ಸ್ಥಿತಿಯೇ ಬ್ರೈನ್ ಸ್ಕ್ಯಾಮಿಂಗ್' ಎಂದರು ನಿರ್ದೇಶಕರು.


ಹರ್ಷನ್

ಕಾಸ್ಮೋಸ್ ಮೂವೀಸ್ ಚಿತ್ರವನ್ನು ನಿರ್ಮಿಸಿದ್ದು, ನಟ ಹರ್ಷನ್‌ಗೆ ಸಂಗೀತಾ ಜೋಡಿಯಾಗಿದ್ದಾರೆ. ರಾಜು ಎನ್.ಎಮ್ ಛಾಯಾಚಿತ್ರಗ್ರಹಣ, ಮಹಾರಾಜ ಸಂಗೀತ ಈ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಗಡ್ಡಧಾರಿಯೊಬ್ಬನ ಮೇಲೆ ಕೆಲವರು ಹಲ್ಲೆ ನಡೆಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಹಲ್ಲೆಗೊಳಗಾಗುತ್ತಿರುವ ವ್ಯಕ್ತಿಯು ಬ್ಯಾನರ್‌ವೊಂದರ ಮೇಲೆ ಮೂತ್ರ ವಿಸರ್ಜನೆ ಮಾಡಿದ್ದಾನೆ ಎಂದು ಹೇಳಿರುವುದು ವಿಡಿಯೊದಲ್ಲಿ ದಾಖಲಾಗಿದೆ. ಗಡ್ಡಧಾರಿಯು ಒಬ್ಬ ಮುಸ್ಲಿಂ ಆಗಿದ್ದು, ಆತ ಮಹಾಕುಂಭ ಮೇಳದಲ್ಲಿ ಬ್ಯಾನರ್ ಮೇಲೆ ಮತ್ತು ಹಿಂದೂ ದೇವತೆಗಳ ಚಿತ್ರಗಳಿರುವ ಗೋಡೆಯ ಮೇಲೆ ಮೂತ್ರ ವಿಸರ್ಜಿಸಿದ್ದಾನೆ ಎಂದು ಪ್ರತಿಪಾದಿಸಲಾಗುತ್ತಿದೆ. ಕೆಲವು ಮಾಧ್ಯಮಗಳೂ ಈ ಸುದ್ದಿಯನ್ನು ಪ್ರಕಟಿಸಿವೆ. ಆದರೆ, ಇದು ಸುಳ್ಳು ಸುದ್ದಿ.



ಸಾಮಾಜಿಕ ಜಾಲತಾಣಗಳಲ್ಲಿ ಈ ಸುದ್ದಿ ಹರಿದಾಡುತ್ತಿದ್ದಂತೆಯೇ ರಾಯ್‌ಬರೇಲಿ ಪೊಲೀಸರು ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. ಈ ಪ್ರಕರಣದ ಆರೋಪಿಯ ಹೆಸರು ಅಬ್ದುಲ್ ಅಲ್ಲ, ವಿನೋದ್ ಎಂದು ಪ್ರಕಟಣೆ ನೀಡಿದ್ದಾರೆ. ಕನೌಜ್‌ನ ವಾಸಿಯಾಗಿರುವ ವಿನೋದ್, ತನ್ನ ಸೈಕಲ್‌ನಲ್ಲಿ ಸಂಚರಿಸುತ್ತಾ, ಸಣ್ಣಪುಟ್ಟ ವ್ಯಾಪಾರ ಮಾಡುತ್ತಾನೆ. ಮಹಾಕುಂಭ ಮೇಳದಲ್ಲಿ ರಾತ್ರಿ ಎಂಟು ಗಂಟೆಯ ವೇಳೆಗೆ ಮದ್ಯಪಾನ ಮಾಡಿ ಒಂದೆಡೆ ಕುಳಿತಿದ್ದ ವಿನೋದ್, ತಾನು ಕುಳಿತ ಸ್ಥಳದಿಂದಲೇ ಮೂರ್ನಾಲ್ಕು ಅಡಿ ದೂರಕ್ಕೆ ಮೂತ್ರ ಚಿಮ್ಮಿಸುತ್ತಿದ್ದ. ಅದನ್ನು ನೋಡಿದ ಕೆಲವರು, ಆತನನ್ನು ಬೇರೆ ಧರ್ಮದ ವ್ಯಕ್ತಿ ಎಂದು ನಿಂದಿಸಿ, ಥಳಿಸಿದ್ದಾರೆ. ವಿನೋದ್‌ನನ್ನು ಬಲ್ಲ ಕೆಲವರು ಮಧ್ಯಪ್ರವೇಶ ಮಾಡಿ, ವಾಸ್ತವಾಂಶ ವಿವರಿಸಿದ ಮೇಲೆ ಜನ ಆತನನ್ನು ಬಿಟ್ಟಿದ್ದಾರೆ. ಈ ಬಗ್ಗೆ ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ಗುಂಡಣ್ಣ



ಸರಿ ತಪ್ಪುಗಳ ಅರಿವು ಇರಬೇಕು!

ನುಡಿ ಬೆಳಗು


ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ
116

ಮನುಷ್ಯನ ಬದುಕಿನ ಉದ್ದೇಶ ಏನು? ಜೀವನದಲ್ಲಿ ಮನುಷ್ಯ ಏನು ಮಾಡಬೇಕು? ಮನುಷ್ಯ ಹಿಮಾಲಯವನ್ನು ನಿರ್ಮಿಸಲು ಸಾಧ್ಯ ಏನು? ಭೀಮಾ ನದಿಯನ್ನು ನಿರ್ಮಿಸುತ್ತಾನೇನು? ಆಕಾಶ, ಸೂರ್ಯನನ್ನು ನಿರ್ಮಿಸಬಲ್ಲನೇ ಮನುಷ್ಯ? ಏನು ಮಾಡಲು ಸಾಧ್ಯ ಇದೆ ಮನುಷ್ಯನಿಗೆ? ಇದ್ಯಾವುದೂ ಮನುಷ್ಯನಿಗೆ ಸಾಧ್ಯವಿಲ್ಲ. ಮನುಷ್ಯ ಮಣ್ಣು ತಯಾರು ಮಾಡಬೇಕಿಲ್ಲ, ನೀರು ತಯಾರು ಮಾಡಬೇಕಿಲ್ಲ. ಆದರೆ, ಈಗಾಗಲೇ ನಿರ್ಮಿಸಲಾಗಿರುವ ಮಣ್ಣು, ನೀರು, ಗಾಳಿ ಎಲ್ಲವನ್ನೂ ಕೆಡಿಸದಂತೆ ಇಟ್ಟರೆ ಅಷ್ಟೇ ಸಾಕು. ಅದೇ ಮನುಷ್ಯ ಮಾಡಬೇಕಾದ ಕರ್ತವ್ಯ. ಪರಿಸರವನ್ನು ಕೆಡಿಸದಂತೆ ಬದುಕಿ. ಅದೇ ಮನುಷ್ಯನ ಸಾರ್ಥಕತೆ. ಅದೇ ಜೀವನದ ಉದ್ದೇಶ.

ಈ ಜೀವ ಜಗತ್ತಿಗೆ ಬಂದ ಮೇಲೆ ಸುಂದರವಾದ ಜೀವನವನ್ನು ಕಟ್ಟಿಕೊಂಡು ಜೀವನದ ಯಾತ್ರೆ ಮುಗಿಸಬೇಕು. ಜೀವನದಲ್ಲಿ ಸಂತೋಷವಾಗಿರಬೇಕು. ಸ್ವಲ್ಪ ಹೆಚ್ಚುಕಡಿಮೆ ಆಗತೈತಿ. ಅದನ್ನು ಸಹಿಸಿಕೊಳ್ಳುವ ಮನಸ್ಥಿತಿ ಇರಬೇಕು. ಬೆಳಿಗ್ಗೆ ಎದ್ದ ತಕ್ಷಣ ಮುಖ ಒಣಗಿಸಿಕೊಂಡು ಕುಳಿತುಕೊಳ್ಳಬಾರದು. ತಲೆ ಮೇಲೆ ಕೈಹೊತ್ತು ಕುಳಿತುಕೊಂಡವರನ್ನು ನೋಡಿದರೆ ಇಡೀ ರಾಜ್ಯದ ಸಾಲವೆಲ್ಲಾ ಇವನ ತಲೆ ಮೇಲೆಯೇ ಇದೆಯೇನೋ ಎಂಬ ಭಾವನೆ ಬರುತ್ತದೆ. ಜೀವನದಲ್ಲಿ ಸಂತೋಷವಾಗಿ ಇರುವುದನ್ನು ಕಲಿಯಬೇಕು. ಜೀವನದಲ್ಲಿ ಆನಂದ ಇರಬೇಕು ಎಂದರೆ ಐಶ್ವರ್ಯ ಇರಬೇಕು. ಅಲ್ಲದೇ, ಯಾವುದು ಐಶ್ವರ್ಯ ಅನ್ನೋದು ಗೊತ್ತಿರಬೇಕು.

ಒಬ್ಬ ವೃದ್ಧ ಇದ್ದ. ಅವರದ್ದು ಇವರದ್ದು ಅಂತಾ ಎಲ್ಲಾ ಹೊಲ ಖರೀದಿ ಮಾಡಿ 25-30 ಎಕರೆ ಹೊಲ ಮಾಡಿದ್ದ. ಭಾರೀ ಶ್ರೀಮಂತ ಆಗಿದ್ದ. ಆದರೆ, ಮಗ ಒಂದೇ ನಂಬರ್‌ಗೆ ಎಲ್ಲವನ್ನೂ ಕಳೆದ. ಅದು ಸಂಪತ್ತಲ್ಲ ಅಂತ ಅವಾಗ ಗೊತ್ತಾತು ಅವನಿಗೆ. ಯಾವುದು ಸಂಪತ್ತು ಎನ್ನುವುದು ಗೊತ್ತಾಗುವುದಕ್ಕೆ ಜ್ಞಾನ ಇರಬೇಕು. ಒಂದು ಕೋಳಿ ಇರತೈತಿ. ಅದು ತಿಪ್ಪೆಯಲ್ಲಿ ಕೆದರತೈತಿ. ಕಸ ತುಂಬಿದ ತಿಪ್ಪೆಯಲ್ಲಿ ನೀವು ಬಂಗಾರದ ಆಭರಣ ಹಾಕಿದರೂ ಅದನ್ನು ಮುಟ್ಟೋದಿಲ್ಲ. ಎಲ್ಲ ಕಸಗಳನ್ನು ಸರಿಸಿ ಅದು ಕೇವಲ ಜೋಳದ ಕಾಳನ್ನು ಮಾತ್ರ ಆರಿಸುತ್ತದೆ. ಹಾಗೆಯೇ ಮನುಷ್ಯನಿಗೂ ಆಯ್ಕೆ ಇರಬೇಕು. ಏನು ಆಯ್ಕೆ ಮಾಡಿಕೊಳ್ಳಬೇಕು ಎನ್ನುವುದು ಗೊತ್ತಿರಬೇಕು. ಬಂಗಾರ ಬದುಕಿಸುವುದಿಲ್ಲ. ಕಾಳು ಬದುಕಿಸತೈತಿ ಎಂಬ ಜ್ಞಾನ ಕೋಳಿಗೆ ಐತಿ. ಜ್ಞಾನ ಏನು ಮಾಡತೈತಿ ಅಂದರೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು, ಯಾವುದು ಹಿತ ಯಾವುದು ಅಹಿತ ಎನ್ನುವುದನ್ನು ತಿಳಿಸತೈತಿ.

ನಮ್ಮ ಬದುಕು ಯಾಕೆ ಕೆಟ್ಟೈತಿ ಅಂದ್ರ ಸರಿ ತಪ್ಪು, ಒಳ್ಳೆಯದು ಕೆಟ್ಟದ್ದು ಯಾವುದು ಅನ್ನೋದು ನಮಗೆ ಗೊತ್ತಿಲ್ಲ. ಈಗ ನೀವು ನಿಮ್ಮ ದೇಹಕ್ಕೆ ಏನಾದರೂ ಆದರೆ ಸ್ಕ್ಯಾನ್ ಮಾಡಿಸ್ತೀರಿ. ಎಂಆರ್‌ಐ ಸ್ಕ್ಯಾನ್ ಮಾಡಿಸ್ತೀರಿ. ಅದು ಏನು ಮಾಡುತ್ತದೆ ಎಂದರೆ ದೇಹದಲ್ಲಿ ದೋಷ ಎಲ್ಲಿದೆ ಎನ್ನುವುದನ್ನು ಪತ್ತೆ ಮಾಡುತ್ತದೆ. ಹಾಗೆಯೇ ಜ್ಞಾನ ಎನ್ನುವುದು ನಮ್ಮಲ್ಲಿ ದೋಷ ಎಲ್ಲಿದೆ ಎನ್ನುವುದನ್ನು ಸೂಚಿಸುತ್ತದೆ. ನಮಗೆ ಜ್ಞಾನ ಐತಿ ಎಂದು ನಾವು ಅಂದುಕೊಂಡಿದ್ದೇವೆ. ಆದರೆ, ಸರಿ ತಪ್ಪುಗಳ ನಡುವಿನ ವ್ಯತ್ಯಾಸ ನಮಗೆ ಗೊತ್ತಿಲ್ಲ. ಜ್ಞಾನವನ್ನು ಹೊಂದಬೇಕು. ಸುಖವಾಗಿ ಬದುಕಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜನವರಿ 23, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣನವಮಿ ಗಂ. 17-38 ನಕ್ಷತ್ರ: ವಿಶಾಖ ಗಂ. 29-08 ಯೋಗ: ಗಂಡ ಗಂ. 29-07 ಕರಣ: ಗರ ಗಂ. 17-38, ಮಕರ ಮಾಸದ 09 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 4.
ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ: 07-01 ಸೂರ್ಯಾಸ್ತ: 06-23
ಮುಸ್ಲಿಂ ದಿನಾಂಕ: 22 ರಜಬ್
ದಿನ ವಿಶೇಷ: ನೇತಾಜಿಯವರ ಜನ್ಮದಿನ, ಅದೃಷ್ಟ ಸಂಖ್ಯೆ: 1, 5

ಮೇಷ: ನಿರುದ್ಯೋಗಿಗಳಿಗೆ ಹಂಗಾಮಿ ನೌಕರಿಯನ್ನು ಒಪ್ಪಿಕೊಳ್ಳುವುದು ಅನಿವಾರ್ಯ. ಮಂದಗತಿಯಲ್ಲಿ ಸಾಗುತ್ತಿದ್ದ ಕೆಲಸಗಳನ್ನು ಶೀಘ್ರ ಪೂರೈಸಲು ಸಿಬ್ಬಂದಿಗೆ ತಾಕೀತು ಮಾಡಬೇಕಾಗುವುದು.

ವೃಷಭ: ಸಂಸ್ಥೆಯಿಂದ ತರಬೇತಿ ಪಡೆದುಕೊಳ್ಳುವ ಅವಕಾಶಗಳು ಎದುರಾದಲ್ಲಿ ಸದುಪಯೋಗ ಪಡಿಸಿಕೊಳ್ಳಿ. ವಿದ್ಯಾರ್ಥಿಗಳು ಎಂಜಿನಿಯರಿಂಗ್ ಶಿಕ್ಷಣದಲ್ಲಿ ವಿಶೇಷ ಸಾಧನೆ ತೋರಲಿದ್ದಾರೆ. ಪ್ರವಾಸದಿಂದ ಸಂತೋಷ ಹೊಂದುವಿರಿ.

ಮಿಥುನ: ಯಶಸ್ಸಿನ ಹಾದಿಯಲ್ಲಿದ್ದೀರಿ. ಯಶಸ್ಸಿಗೆ ಕಾರಣರಾದವರನ್ನು ಕಾರ್ಯ ಮುಗಿಯುವವರೆಗೆ ಜತೆಯಲ್ಲಿ ಇರಿಸಿಕೊಳ್ಳಿ. ಪೋಷಕರಲ್ಲಿ ವೈವಾಹಿಕ ಮಾತುಕತೆಗಳಿಗೆ ಸೂಕ್ತ ವಾತಾವರಣ ಪಡೆಯುವಿರಿ.

ಕರ್ಕಾಟಕ: ಆಗುಹೋಗುಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಇದೆಲ್ಲವು ಕ್ಷಣಿಕ. ದೊಡ್ಡ ಸಮಾರಂಭವೊಂದರಲ್ಲಿ ಪಾಲ್ಗೊಳ್ಳುವ ಅವಕಾಶ ಲಭಿಸುವುದು. ಭೂ ವ್ಯವಹಾರಗಳಿಂದ ಲಾಭ ಗಳಿಸಬಹುದು.

ಸಿಂಹ: ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳ ಲಕ್ಷಣಗಳು ಗಮನಕ್ಕೆ ಬಂದಲ್ಲಿ, ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ, ಚಿಕಿತ್ಸೆ ತೆಗೆದುಕೊಳ್ಳಿ. ನಿವೇಶನ ಕೊಳ್ಳಲು ಸೂಕ್ತಸ್ಥಳದ ಹುಡುಕಾಟ ನಡೆಸುವಿರಿ.

ಕನ್ಯಾ: ಕೆಲ ವಿಷಯದಲ್ಲಿ ಬದಲಾವಣೆ ರೂಢಿಸಿಕೊಳ್ಳಬೇಕಾಗುವುದು. ವಕೀಲರು, ನ್ಯಾಯಾಂಗ ಇಲಾಖಾ ಅಧಿಕಾರಿಗಳು ಹೆಚ್ಚಿನ ಪ್ರಗತಿ ಕಾಣುವರು. ಅವಿವಾಹಿತರಿಗೆ ವಿವಾಹ ಯೋಗವಿರುವುದು.

ತುಲಾ: ಜನರನ್ನು ಆಕರ್ಷಿಸುವ ಕಲೆ ಚೆನ್ನಾಗಿರುವುದರಿಂದ ಕೆಲಸ ಕಾರ್ಯಗಳಲ್ಲಿ ಪ್ರಗತಿಯನ್ನು ಕಾಣುವಿರಿ. ಧಾರ್ಮಿಕತೆಯ ಫಲವಾಗಿ ಮನಸ್ಸು ನಕಾರಾತ್ಮಕ ಭಾವನೆಯಿಂದ ಹೊರ ಬರಲಿದೆ.

ವೃಶ್ಚಿಕ: ಇತರರೂ ಸ್ವಾತಂತ್ರ್ಯ ಹಾಗೂ ಸಂತೋಷವಾಗಿರಬೇಕೆಂಬ ಮನೋಭಾವದಿಂದಾಗಿ ಗೌರವವನ್ನು ಪಡೆದುಕೊಳ್ಳುವಿರಿ. ನೆಚ್ಚಿನ ಉದ್ಯೋಗ ದೊರಕಿಸಿಕೊಳ್ಳಲು ಪ್ರಯತ್ನ ನಡೆಸಬೇಕಾಗುತ್ತದೆ.

ಧನು: ಗುರಿ ಸಾಧನೆಯತ್ತ ಆಸಕ್ತಿಯಿಂದ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಿರಿ. ಧನ ಆದಾಯಕ್ಕೆ ಯಾವುದೇ ಅಡ್ಡಿಗಳು ಇರುವುದಿಲ್ಲ. ಹಿರಿಯರ ಆರೋಗ್ಯದ ವಿಚಾರದಲ್ಲಿ ವ್ಯಯವೂ ಅನಿವಾರ್ಯವಾಗುವುದು.

ಮಕರ: ಆರೋಗ್ಯದಲ್ಲಾಗುವ ಬದಲಾವಣೆಗೆ ಆಹಾರ ಮುಖ್ಯ ಕಾರಣವಾಗುವುದು. ಕೆಲಸಕ್ಕೆ ಸೋಮಾರಿತನ ಅಥವಾ ಸಮಯದ ಅಭಾವದಂತಹ ಸಮಸ್ಯೆ ಎದುರಾಗುತ್ತದೆ. ಆರಕ್ಷಕ ವರ್ಗದವರಿಗೆ ಕೆಲಸದ ಒತ್ತಡ ಇರುತ್ತದೆ.

ಕುಂಭ: ಇನ್ನೊಬ್ಬರ ಮಾತುಗಳನ್ನು ಆಲಿಸಿಕೊಂಡು ವಿಚಾರಗಳನ್ನು ತೀರ್ಮಾನಿಸುವುದಕ್ಕಿಂತ ಸ್ವತಃ ಪರೀಕ್ಷೆ ನಡೆಸಿ, ತೀರ್ಮಾನಕ್ಕೆ ಬರುವುದು ಸರಿಯಾದ ಮಾರ್ಗವೆನಿಸುತ್ತದೆ. ನೈತಿಕ ಜವಾಬ್ದಾರಿಗಳ ಕಡೆಗೆ ಗಮನವಿರಲಿ.


ಮೀನ: ಪ್ರಸ್ತುತ ಕೆಲಸದಲ್ಲೇ ಮುಂದುವರೆಯುವುದರಿಂದ ಧನ ಮತ್ತು ಗೌರವ ಸಂಪಾದನೆಯ ಅವಕಾಶಗಳನ್ನು ಪಡೆಯುವಿರಿ. ಬದಲಾವಣೆ ಬೇಡ. ನಿಮ್ಮ ಏಳಿಗೆಯಿಂದಾಗಿ ಹತ್ತಾರು ಶತ್ರುಗಳು ಹುಟ್ಟಿಕೊಳ್ಳಲಿದ್ದಾರೆ.

ಪದಬಂಧ 5931

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಂಗೀತದ ಪ್ರಾರಂಭದಲ್ಲಿ ರಾಗದ ಛಾಯೆಯನ್ನು ವಿಸ್ತರಿಸಿ ತೋರಿಸುವುದು (3)
4.ಗಾಡಿಯ ಚಕ್ರಗಳು ಬೀಳದಂತೆ ತಡೆಯುವ ಕೀಲು (3)
6.ರೀತಿಯೊಡಗೂಡುವ ಸಂಪ್ರದಾಯ (3)
7.ಕೊಲೆಯಲ್ಲಿಲೋಹದ ದೊಡ್ಡಪಾತ್ರೆ ಕಾಣುತ್ತಿದೆಯಲ್ಲಾ (6)
11.ಪ್ರೇಮಿಗಳ ಹುಸಿ ಜಗಳ (6)
14.ತತ್ತಿಯಿಂದ ಹುಟ್ಟಿದ್ದು (3)
15.ಈಕೆ ಕೆಟ್ಟ ಹೆಂಗಸು (3)
16.ದನಗಳು ಅರೆಜೀರ್ಣ ಆಹಾರವನ್ನು ಮತ್ತೆ ತಿನ್ನುವಿಕೆ (3)

ಮೇಲಿಂದ ಕೆಳಕ್ಕೆ
1.ಹೊಡೆಯುವುದಕ್ಕೆ ಬಳಸುವ ಸಾಧನ (3)
2.ಈ ಪರಿ ಹರಡಿರುವ ಸುವಾಸನೆ! (4)
3.ಅಂಜುವವನ ಮುಂದೆ ಹೀಗೆ ಹಲ್ಲುಕಿಸಿ! (2)
4.ಕಲೆಯಲ್ಲಿ ಕಾಣುತ್ತಿರುವ ಗುರಾಣಿ! (4)
5.ಉಗ್ರವಾದ ಹೊಡೆದಾಟ ಉಲ್ಟಾ ಕಾಣುತ್ತಿದೆ (4)
7.ಅಡಿಕೆ ಹಾಳೆಯಿಂದ ಮಾಡಿದ ದೊನ್ನೆ (2)
8.ದಡಿ ಹಿಡಿದಿರುವ ದಾಂಡಿಗ (3)
9.ಅಗ್ರಹ ಮಾಡಿದಾಗ ಆಕಾಶಚರ ಕಾಣಿಸಿತೇ? (2)
10.ಇಳಿಯುವುದನ್ನು ಹೀಗೆ ಹೇಳಿ (4)
11.ಎತ್ತರವಾದ ಸಮತಲ ಭೂಮಿ (4)
12.ಕೊನೆಗೆ ಜಮೆಯಾದ ಅವಶ್ಯಕ ವಸ್ತು! (4)
13.ಕೂಸು ಕುಳಿತಿರುವ ಜಾಗದಲ್ಲಿರುವ ಮರಳು (3)
14.ಪಾದ ಅಥವಾ ಹೆಜ್ಜೆ (2)



5930ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಇತಿಹಾಸ 3.ಚಿರಸ್ಥಾಯಿ
4.ಮೀಸಲು 5.ಅಪರೂಪ
7.ಕಡೆಗೀಲು 9.ಕವಳಿಗೆ
10.ಅನುರೂಪ 11.ಹೊಂಬಿಸಿಲು
13.ಮರಕತ 14.ಗಗನ
15.ಅವಗಾಹ 16.ವಿಧ್ವಂಸಕ

ಮೇಲಿಂದ ಕೆಳಕ್ಕೆ:
2.ಸಮೀಪ 3.ಚಿಲುಕ
6.ಪರಾವಲಂಬಿ 8.ಗೀತರೂಪಕ
12.ಉಗಹ 13.ಮನವಿ

ಸುಡೊಕು 6316


1		9		2			8	
	6				9		5	2
	8			4	5			
2							6	
		4		3				1
5					2			
		5		9			7	6
7			2		6	8		
9	4			7			3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6315 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4


ಷೇರುಪೇಟೆ ವಹಿವಾಟು 566



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,024
ಇಂದಿನ ಅಂತ್ಯ	23,155
▲	130
ದಿನದ ಗರಿಷ್ಠ	23,169

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಕೆ.ಜಿ) ₹211-660

ದ್ವಿತಳಿ (ಕೆ.ಜಿ) ₹140-855

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹187.50

ಆರ್‌ಎಸ್‌ಎಸ್-5 ₹182.50

ಗುಡ್ ಲಾಟ್ ₹177

(ಪ್ರತಿ ಕೆ.ಜಿಗೆ)

ಮುದ್ದೆಮನೆ ಕಾಫಿ (50 ಕೆಜಿಗೆ)



ಎಪಿ	₹22750
ಎಸಿ	₹13020
ಆರ್‌ಪಿ	₹19800
ಆರ್‌ಸಿ	₹12070

ಯುಕೊ ಬ್ಯಾಂಕ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): 2024-25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಯುಕೊ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ 27ರಷ್ಟು ಏರಿಕೆಯಾಗಿದೆ.

ಕಳೆದ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹503 ಕೋಟಿ ಲಾಭಗಳಿಸಿತ್ತು. ಈ ಬಾರಿ ₹639 ಕೋಟಿ ಗಳಿಸಿದೆ. ಬಡ್ಡಿ ಮತ್ತು ಬಡ್ಡಿಯೇತರ ವರಮಾನ ಹೆಚ್ಚಳದಿಂದ ಲಾಭದ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಒಟ್ಟು ₹6,413 ಕೋಟಿ ವರಮಾನ ಗಳಿಸಿತ್ತು. ಈ ಬಾರಿ ₹7,406 ಕೋಟಿ ಗಳಿಸಿದೆ. ಬಡ್ಡಿ ವರಮಾನವು ₹6,220 ಕೋಟಿ ಆಗಿದೆ.

ನಿವ್ವಳ ಬಡ್ಡಿ ವರಮಾನದಲ್ಲಿ ಶೇ 20ರಷ್ಟು ಏರಿಕೆಯಾಗಿದ್ದು, ₹2,378 ಕೋಟಿ ಗಳಿಸಿದೆ ಎಂದು ಬ್ಯಾಂಕ್ ತಿಳಿಸಿದೆ.

'ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಾಲ ನೀಡಿಕೆಯು ಶೇ 12ರಿಂದ ಶೇ 14ರಷ್ಟು ಏರಿಕೆಯಾಗುವ ನಿರೀಕ್ಷೆಯಿದೆ. ಠೇವಣಿ ಪ್ರಮಾಣವು ಶೇ 8ರಿಂದ ಶೇ 10ರಷ್ಟು ಹೆಚ್ಚಳವಾಗಬಹುದು' ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅಶ್ವನಿ ಕುಮಾರ ತಿಳಿಸಿದ್ದಾರೆ.


ವಸೂಲಾಗದ ಸಾಲದ ಸರಾಸರಿ ಪ್ರಮಾಣ ಶೇ 3.85ರಿಂದ ಶೇ 2.91ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.98ರಿಂದ ಶೇ 0.63ಕ್ಕೆ ಕಡಿಮೆಯಾಗಿದೆ. ಬ್ಯಾಂಕ್‌ನ ಸಮರ್ಪಕ ಬಂಡವಾಳ ಅನುಪಾತವು (ಸಿಎಆರ್) ಶೇ 16.01ರಿಂದ ಶೇ 16.25ಕ್ಕೆ ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಶಿವಮೊಗ್ಗ		ಶಿರಸಿ	
ಕೋಕ	20000-27500	ಬೆಟ್ಟೆ	50199-55399	ಬೆಟ್ಟೆ	29499-38310
ಹೊಸತು	30000-36000	ಗೊರಬಲು	17299-30590	ಬಿಳಿಗೋಟು	20700-29699
ಹಳತು	45000-49000	ರಾಶಿ	28869-51599	ಚಾಲಿ	34100-39401
ಕಾರ್ಕಳ		ಸರಕು	56410-86096	ಕೆಂಪುಗೋಟು	16698-23518
ಹೊಸತು	25000-36000			ರಾಶಿ	42109-47899
ಹಳತು	30000-49000				

ಆನ್‌ಲೈನ್ ಶಾಪಿಂಗ್ ವಂಚನೆ ತಡೆ: ಕರಡು ಮಾರ್ಗಸೂಚಿ ಪ್ರಕಟ

ಇ–ಕಾಮರ್ಸ್‌ಗೆ ಮೂಗುದಾರ



ನವದೆಹಲಿ (ಪಿಟಿಐ): ಆನ್‌ಲೈನ್ ಶಾಪಿಂಗ್ ಅಥವಾ ಡಿಜಿಟಲ್ ಮಾರುಕಟ್ಟೆಯಿಂದ ಗ್ರಾಹಕರಿಗೆ ಆಗುತ್ತಿರುವ ವಂಚನೆಗೆ ಕಡಿವಾಣ ಹಾಕಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ನಿಟ್ಟಿನಲ್ಲಿ ಇ-ಕಾಮರ್ಸ್ ವೇದಿಕೆಗಳ ಕಾರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಕರಡು ಮಾರ್ಗಸೂಚಿ ಪ್ರಕಟಿಸಿದೆ.

ಗ್ರಾಹಕರು ಹಾಗೂ ಸಂಘ–ಸಂಸ್ಥೆಗಳಿಂದ ಫೆಬ್ರುವರಿ 15ರ ವರೆಗೆ ಪ್ರತಿಕ್ರಿಯೆಗಳನ್ನು ಆಹ್ವಾನಿಸಿದೆ.

'ಇ-ಕಾಮರ್ಸ್‌ನ ಮೂಲತತ್ವಗಳು ಮತ್ತು ಸ್ವಯಂ ಆಡಳಿತ' ಕುರಿತ ಈ ಮಾರ್ಗಸೂಚಿಗಳನ್ನು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವಾಲಯದ ಮೇಲ್ವಿಚಾರಣೆಯಲ್ಲಿ ಭಾರತೀಯ ಪ್ರಮಾಣೀಕರಣ ಸಂಸ್ಥೆಯು (ಬಿಐಎಸ್) ಸಿದ್ಧಪಡಿಸಿದೆ.

ಗ್ರಾಹಕರ ರಕ್ಷಣೆ ಮತ್ತು ನಂಬಿಕೆಗೆ ಅನುಗುಣವಾಗಿ ಇ-ಕಾಮರ್ಸ್ ವಹಿವಾಟು ನಡೆಯಬೇಕು. ಅಲ್ಲದೆ, ಇಂತಹ ವೇದಿಕೆಗಳಲ್ಲಿ ಸ್ವಯಂ ಆಡಳಿತದ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ವಹಿವಾಟಿಗೂ ಮುಂಚೆ, ಗ್ರಾಹಕರ ಸಂಪರ್ಕ ಹಾಗೂ ವಹಿವಾಟಿನ ನಂತರದ ಪ್ರಕ್ರಿಯೆ ಎಂಬ ಮೂರು ಹಂತದ ಚೌಕಟ್ಟು ರೂಪಿಸಲಾಗಿದೆ.

ಇ-ಕಾಮರ್ಸ್ ವೇದಿಕೆಗಳಲ್ಲಿ ತಯಾರಕರು ಅಥವಾ ಮಾರಾಟಗಾರರು (ಥರ್ಡ್ ಪಾರ್ಟಿ) ತಮ್ಮ ಸರಕುಗಳ ಮಾರಾಟಕ್ಕೆ ಅವಕಾಶವಿದೆ. ಇಂತಹವರೊಂದಿಗೆ ವೇದಿಕೆಗಳು ಕೆವೈಸಿ ಪೂರ್ಣಗೊಳಿಸಬೇಕು ಎಂದು ಹೇಳಲಾಗಿದೆ.

ಅಲ್ಲದೆ ಅವರ ಸಂಪರ್ಕದ ವಿವರ ಮತ್ತು ಗುರುತಿನ ನಂಬರ್ ನಮೂದಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಆಮದು ಮಾಡಿಕೊಂಡ ಸರಕುಗಳ ಬಗ್ಗೆಯೂ ವಿವರ ಪ್ರಕಟಿಸಬೇಕು. ಆಮದುದಾರ, ಪ್ಯಾಕರ್, ಮಾರಾಟಗಾರರು ಮತ್ತು ಅವರ ಸಂಪರ್ಕದ ವಿವರವನ್ನೂ ನಮೂದಿಸಬೇಕಿದೆ.

ಗ್ರಾಹಕರ ಒಪ್ಪಿಗೆ, ವಹಿವಾಟಿನ ಪರಿಶೀಲನೆಗೆ ಅನುವು ಮಾಡಿಕೊಡಬೇಕು. ಸರಕುಗಳ ರದ್ದತಿ, ಹಿಂದಿರುಗಿಸುವಿಕೆ ಮತ್ತು ಮರುಪಾವತಿಯಲ್ಲಿ ಪಾರದರ್ಶಕ ನಿಯಮಗಳನ್ನು ಅನುಸರಿಸಬೇಕಿದೆ.

ವಹಿವಾಟಿಗೆ ಸಂಬಂಧಿಸಿದ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ಅವುಗಳನ್ನು ಗ್ರಾಹಕರಿಗೂ ಲಭ್ಯವಾಗಿಸಬೇಕು. ಕ್ರೆಡಿಟ್/ ಡೆಬಿಟ್ ಕಾರ್ಡ್, ಮೊಬೈಲ್ ಪಾವತಿ ವ್ಯವಸ್ಥೆ, ಇ-ವ್ಯಾಲೆಟ್ ಹೀಗೆ ಗ್ರಾಹಕರಿಗೆ ಎಲ್ಲಾ ರೀತಿಯ ಪಾವತಿ ವಿಧಾನಕ್ಕೆ ಅವಕಾಶ ಕಲ್ಪಿಸಬೇಕು. ಸಂಸ್ಕರಣ ಶುಲ್ಕದ ಬಗ್ಗೆ ವಿವರವಾಗಿ ತಿಳಿಸಬೇಕಿದೆ.

ಸಕಾಲದಲ್ಲಿ ವಿತರಣೆ ಕಡ್ಡಾಯ

ಸುರಕ್ಷಿತ ಪಾವತಿ ವ್ಯವಸ್ಥೆಗೆ ಎರಡು ಹಂತದ ದೃಢೀಕರಣ ಮಾಡಬೇಕು. ಉತ್ಪನ್ನವು ಕೈಗೆ ಸಿಕ್ಕಿದ ಬಳಿಕ ಹಣ ಪಾವತಿಸುವ ಆಯ್ಕೆಯನ್ನು (ಕ್ಯಾಶ್ ಆನ್ ಡೆಲಿವರಿ) ಗ್ರಾಹಕರ ಆದ್ಯತೆ ಪ್ರಕಾರವೇ ಜಾರಿಗೊಳಿಸಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಸಕಾಲದಲ್ಲಿ ಹಣ ಮರುಪಾವತಿ ಮಾಡಬೇಕು. ಸರಕುಗಳ ಬದಲಾವಣೆಗೆ ಹೆಚ್ಚುವರಿ ಅವಕಾಶ ನೀಡಬೇಕಿದೆ.

ಸರಕುಗಳನ್ನು ಇ-ಕಾಮರ್ಸ್ ವೇದಿಕೆಗಳಿಂದ ಆಂತರಿಕವಾಗಿ ಅಥವಾ ಥರ್ಡ್ ಪಾರ್ಟಿ ಪೂರೈಕೆದಾರರಿಂದ ನಿರ್ವಹಣೆ ಮಾಡಿದ್ದರೂ ಗ್ರಾಹಕರಿಗೆ ಸಕಾಲದಲ್ಲಿ ವಿತರಿಸಬೇಕಿದೆ. ನಿಷೇಧಿತ ಸರಕುಗಳ ಮಾರಾಟಕ್ಕೆ ನಿರ್ಬಂಧ ಹೇರಲಾಗಿದೆ.

ಸುದ್ದಿ 2 ನಿಮಿಷ

ಆಹಾರ, ರಸಗೊಬ್ಬರ, ಅಡುಗೆ ಅನಿಲ ಸಬ್ಸಿಡಿ ಶೇ 8ರಷ್ಟು ಹೆಚ್ಚಳ ನಿರೀಕ್ಷೆ

ನವದೆಹಲಿ (ರಾಯಿಟರ್ಸ್): ಸದ್ಯ ಆಹಾರ ಮತ್ತು ಇಂಧನ ಬೆಲೆ ಏರಿಕೆಯಾಗಿದೆ. ಇದರಿಂದ ಗ್ರಾಹಕರಿಗೆ ಹೊರೆಯಾಗಿದೆ. ಹಾಗಾಗಿ, 2025–26ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಆಹಾರ, ರಸಗೊಬ್ಬರ ಮತ್ತು ಅಡುಗೆ ಅನಿಲ ಸಿಲಿಂಡರ್‌ಗೆ ನೀಡುವ ಸಬ್ಸಿಡಿ ಮೊತ್ತವನ್ನು ಶೇ 8ರಷ್ಟು ಹೆಚ್ಚಿಸುವ ನಿರೀಕ್ಷೆಯಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು ಸಂಸತ್‌ನಲ್ಲಿ ಬಜೆಟ್ ಮಂಡಿಸಲಿದ್ದು, ಸುಮಾರು ₹4 ಲಕ್ಷ ಕೋಟಿ ಸಬ್ಸಿಡಿ ನೀಡುವ ಸಾಧ್ಯತೆಯಿದೆ ಎಂದು ಹೇಳಿವೆ.

ನಗರ ಪ್ರದೇಶದಲ್ಲಿ ದಿನಬಳಕೆಯ ವೆಚ್ಚದ ಪ್ರಮಾಣ ಕಡಿಮೆಯಾಗಿದೆ. ಕಂಪನಿಗಳ ಹೂಡಿಕೆಯೂ ಇಳಿಕೆಯಾಗಿದೆ. ಇದು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ನಿಧಾನಗತಿ ಬೆಳವಣಿಗೆಗೆ ಕಾರಣವಾಗಿದೆ. ಸಬ್ಸಿಡಿ ಪಾಲಿನಲ್ಲಿ ಗ್ರಾಮೀಣ ಪ್ರದೇಶದ ಪಾಲು ಹೆಚ್ಚಿದೆ. ಗ್ರಾಮೀಣ ದಿನಬಳಕೆಯ ವೆಚ್ಚದ ಏರಿಕೆಗೆ ಸಬ್ಸಿಡಿ ಸಹಕಾರಿಯಾಗಲಿದೆ ಎಂದು ಹೇಳಿವೆ.

ಕಳೆದ ಆರ್ಥಿಕ ವರ್ಷದಲ್ಲಿ ಸರ್ಕಾರವು ಆಹಾರಕ್ಕೆ ₹2 ಲಕ್ಷ ಕೋಟಿ ಸಬ್ಸಿಡಿ ನೀಡಿತ್ತು. ಇದನ್ನು ₹2.14 ಲಕ್ಷ ಕೋಟಿಗೆ ಹೆಚ್ಚಿಸುವ ಸಾಧ್ಯತೆಯಿದೆ. ಅಡುಗೆ ಅನಿಲಕ್ಕೆ ₹25 ಸಾವಿರ ಕೋಟಿ ಹಾಗೂ ರಸಗೊಬ್ಬರಕ್ಕೆ ₹1.90 ಲಕ್ಷ ಕೋಟಿ ಸಬ್ಸಿಡಿ ನೀಡುವ ಸಾಧ್ಯತೆಯಿದೆ ಎಂದು ತಿಳಿಸಿವೆ.

ಷೇರು ಸೂಚ್ಯಂಕ ಚೇತರಿಕೆ

ಮುಂಬೈ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ ಸುಂಕ ನೀತಿಯಿಂದ ಇಳಿಕೆ ಕಂಡಿದ್ದ ದೇಶದ ಷೇರುಪೇಟೆಯು ಬುಧವಾರ ನಡೆದ ವಹಿವಾಟಿನಲ್ಲಿ ಚೇತರಿಕೆಯ ಹಳಿಗೆ ಮರಳಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 566 ಅಂಶ ಏರಿಕೆ ಕಂಡು 76,404 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 130 ಅಂಶ ಹೆಚ್ಚಳ ಕಂಡು 23,255 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಇನ್ಫೊಸಿಸ್, ಟಿಸಿಎಸ್, ಟೆಕ್ ಮಹೀಂದ್ರ, ಸನ್ ಫಾರ್ಮಾ, ಬಜಾಜ್ ಫಿನ್‌ಸರ್ವ್, ಎಚ್‌ಸಿಎಲ್ ಟೆಕ್ನಾಲಜೀಸ್, ಬಜಾಜ್ ಫೈನಾನ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಇಂಡಸ್ ಇಂಡ್ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯ ಏರಿಕೆಯಾಗಿದೆ.

ಟಾಟಾ ಮೋಟರ್ಸ್, ಪವರ್ ಗ್ರಿಡ್, ಎಕ್ಸಿಸ್ ಬ್ಯಾಂಕ್, ಎಸ್‌ಬಿಐ, ಎನ್‌ಟಿಪಿಸಿ, ಟಾಟಾ ಸ್ಟೀಲ್ ಮತ್ತು ಅದಾನಿ ಪೋರ್ಟ್ಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹5,920 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ತೊಗರಿಗೆ ವಿಶೇಷ ಪ್ಯಾಕೇಜ್ ಕಲಬುರಗಿ ಬಂದ್ ನೀರಸ

ಪ್ರಜಾವಾಣಿ ವಾರ್ತೆ

ಕಲಬುರಗಿ: ನೆಟೆ ರೋಗದಿಂದ ಒಣಗಿದ ತೊಗರಿ ಬೆಳೆಗೆ ₹30 ಕೋಟಿ ವಿಶೇಷ ಪ್ಯಾಕೇಜ್ ನೀಡಬೇಕು. ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸಬೇಕು ಎಂಬುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತ ಸಂಘಟನೆಗಳ ಒಕ್ಕೂಟ ಬುಧವಾರ ಕರೆ ನೀಡಿದ್ದ 'ಕಲಬುರಗಿ ಬಂದ್'ಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

ಬೆಳಿಗ್ಗೆ ಕೇಂದ್ರ ಬಸ್ ನಿಲ್ದಾಣ ಮುಂಭಾಗದಲ್ಲಿ ಜಮಾಯಿಸಿದ್ದ ರೈತ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕೆಲ ಹೊತ್ತು ಬಸ್ ಸಂಚಾರಕ್ಕೆ ಅಡ್ಡಿಪಡಿಸಿದರು. ಬಳಿಕ ಸರ್ದಾರ್ ವಲ್ಲಭಭಾಯ್ ಪಟೇಲ್ ವೃತ್ತ, ಜಿಲ್ಲಾಧಿಕಾರಿ ಕಚೇರಿ, ಜಗತ್ ವೃತ್ತ ಮಾರ್ಗವಾಗಿ ಸೂಪರ್ ಮಾರ್ಕೆಟ್‌ವರೆಗೆ ಮೆರವಣಿಗೆ ನಡೆಸಿದರು.

ಎಪಿಎಂಸಿ, ಕಿರಾಣಿ ಅಂಗಡಿ, ದಾಲ್ ಮಿಲ್, ಆಹಾರ ಧಾನ್ಯ ಮತ್ತು ಬೀಜ ವ್ಯಾಪಾರಿ ಮಳಿಗೆಗಳು ಬಂದ್ ಆಗಿದ್ದವು. ಉಳಿದಂತೆ ಸರ್ಕಾರಿ ಕಚೇರಿಗಳು, ಆಸ್ಪತ್ರೆ, ಪೆಟ್ರೋಲ್ ಬಂಕ್‌ಗಳು, ಬಟ್ಟೆ ಅಂಗಡಿಗಳು, ಶಾಲಾ– ಕಾಲೇಜುಗಳು ಎಂದಿನಂತೆ ಕಾರ್ಯ ನಿರ್ವಹಿಸಿದವು.

ಒತ್ತಾಯ: ನೆಟೆ ರೋಗದಿಂದ ಹಾನಿಯಾದ ಪ್ರತಿ ಎಕರೆ ತೊಗರಿಗೆ ₹25 ಸಾವಿರ ಪರಿಹಾರ ನೀಡಬೇಕು. ಪ್ರತಿ ಕ್ವಿಂಟಲ್ ತೊಗರಿಗೆ ಕನಿಷ್ಠ ₹12,500 ದರ ನಿಗದಿಪಡಿಸಬೇಕು. ಕೇಂದ್ರ ಸರ್ಕಾರದಿಂದ ₹1,000 ಆವರ್ತ ನಿಧಿ ಘೋಷಿಸಬೇಕು. ದ್ವಿದಳಧಾನ್ಯ ಅಭಿವೃದ್ಧಿ ಮಂಡಳಿ ಬಲವರ್ಧನೆಗೆ ₹25 ಕೋಟಿ ಅನುದಾನ ನೀಡಬೇಕು ಎಂದು ರೈತ ಮುಖಂಡರು ಒತ್ತಾಯಿಸಿದ್ದಾರೆ.

ಕಚ್ಚಾ ಸೆಣಬಿಗೆ ಎಂಎಸ್‌ಪಿ ಏರಿಕೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು 2025–26ನೇ ಮಾರುಕಟ್ಟೆ ಋತುವಿಗೆ ಕಚ್ಚಾಸೆಣಬಿನಕನಿಷ್ಠಬೆಂಬಲಬೆಲೆಯನ್ನು (ಎಂಎಸ್‌ಪಿ) ₹315 ಹೆಚ್ಚಿಸಿದೆ.

ಪ್ರತಿ ಕ್ವಿಂಟಲ್‌ಗೆ ₹5,650 ಬೆಂಬಲ ಬೆಲೆ ನಿಗದಿಪಡಿಸಿದೆ.

2014–15ರಲ್ಲಿ ಕಚ್ಚಾ ಸೆಣಬಿಗೆ ಕ್ವಿಂಟಲ್‌ಗೆ ₹2,400 ಬೆಂಬಲ ಬೆಲೆ ಇತ್ತು. ಇದನ್ನು 2.35 ಪಟ್ಟು ಹೆಚ್ಚಿಸಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಬಿಹಾರದಲ್ಲಿ ಸೆಣಬು ಬೆಳೆಯಲಾಗುತ್ತದೆ. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ 40 ಲಕ್ಷ ರೈತ ಕುಟುಂಬಗಳು ಈ ಉದ್ಯಮದ ಮೇಲೆ ಅವಲಂಬಿತವಾಗಿವೆ.

ಚಿನ್ನದ ದರ ಸಾರ್ವಕಾಲಿಕ ಗರಿಷ್ಠ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನದ ದರವು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಮುಟ್ಟಿದೆ.



ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹630 ಏರಿಕೆಯಾಗಿದ್ದು, ₹82,730ಕ್ಕೆ ಮಾರಾಟವಾಗಿದೆ. ಆಭರಣ ಚಿನ್ನದ ಬೆಲೆಯು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು ₹82,330 ಆಗಿದೆ.

ಸತತ ಆರು ವಹಿವಾಟುಗಳಲ್ಲಿ ಹಳದಿ ಲೋಹದ ಬೆಲೆಯಲ್ಲಿ ಏರಿಕೆಯಾಗಿದೆ.

ಆಭರಣ ವ್ಯಾಪಾರಿಗಳು ಮತ್ತು ಚಿಲ್ಲರೆದಾರರಿಂದ ಖರೀದಿ ಹೆಚ್ಚಳದಿಂದಾಗಿ ಚಿನ್ನದ ಧಾರಣೆಯಲ್ಲಿ ಏರಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕಳೆದ ವರ್ಷದ ಅಕ್ಟೋಬರ್ 31ರಂದು 10 ಗ್ರಾಂ ಚಿನ್ನದ ದರವು ₹82,400ಕ್ಕೆ ತಲುಪಿದ್ದು, ಇಲ್ಲಿಯವರೆಗಿನ ಗರಿಷ್ಠ ದಾಖಲಾಗಿತ್ತು.

ಬೆಳ್ಳಿ ಧಾರಣೆಯು ಕೆ.ಜಿಗೆ ₹1 ಸಾವಿರ ಏರಿಕೆಯಾಗಿದ್ದು, ₹94 ಸಾವಿರ ಆಗಿದೆ.

'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವ್ಯಾಪಾರ ನೀತಿಯು ಅನಿಶ್ಚಿತತೆಯಿಂದ ಕೂಡಿದೆ. ಇದು ಹಳದಿ ಲೋಹದ ಬೆಲೆ ಏರಿಕೆಗೆ ಕಾರಣವಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ರೂಪಾಯಿ ಮೌಲ್ಯ 23 ಪೈಸೆ ಏರಿಕೆ

ಮುಂಬೈ (ಪಿಟಿಐ): ದೇಶೀಯ ಷೇರುಪೇಟೆಯಲ್ಲಿ ನಡೆದ ಸಕಾರಾತ್ಮಕ ವಹಿವಾಟು ಹಾಗೂ ಡಾಲರ್ ಸೂಚ್ಯಂಕ ಇಳಿಕೆ ಕಂಡಿದ್ದರಿಂದ ಬುಧವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು ಚೇತರಿಕೆ ಕಂಡಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ಮಂಡಿಯೂರಿದ್ದ ರೂಪಾಯಿ ಮೌಲ್ಯವು 23 ಪೈಸೆ ಏರಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯವು ₹86.35 ಆಗಿದೆ.

ಮಂಗಳವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 13 ಪೈಸೆ ಇಳಿಕೆ ಕಂಡಿತ್ತು.

ಜಾಗತಿಕ ಆರ್ಥಿಕ ಅನಿಶ್ಚಿತತೆಯು ಮುಂದುವರಿದಿದೆ. ಇದು ಕರೆನ್ಸಿ ಹಾಗೂ ಸರಕುಗಳ ಬೆಲೆಯ ಮೇಲೆ ಪರಿಣಾಮ ಬೀರಲಿದೆ. ಇದನ್ನು ಹೂಡಿಕೆದಾರರು ಕೂಡ ಕುತೂಹಲದಿಂದ ಗಮನಿಸುತ್ತಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮುಂಬರುವ ದಿನಗಳಲ್ಲಿ ನೀಡುವ ಹೇಳಿಕೆ ಮತ್ತು ಅಧಿಕೃತ ಘೋಷಣೆಗಳು ದೇಶದ ಷೇರುಪೇಟೆಯ ಏರಿಳಿತಕ್ಕೆ ಕಾರಣವಾಗಲಿದೆ' ಎಂದು ಮಿರೇ ಅಸೆಟ್ ಶೇರ್ಖಾನ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

ವಿನಿಮಯ ದರ

$	ಡಾಲರ್	86.35
£	ಪೌಂಡ್	106.73
€	ಯುರೊ	90.18
¥	ಯೆನ್ (100ಕ್ಕೆ)	55

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1455 (1455)
ಸೋಯಾ (ರಿಫೈನ್ಡ್)	₹1285 (1290)
ಸೂರ್ಯಕಾಂತಿ (ರಿಫೈನ್ಡ್)	₹1375 (1370)
ಪಾಮೋಲಿನ್	₹1310 (1320)

ಮುಂಬೈ ಧಾರಣೆ

ಶೇಂಗಾ

22-01-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ(ಹೊಸ)	8800-8900
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1465 (1465)
ಒಂದು ವಾರದ ಡೆಲಿವರಿ	1460 (1460)
ಪಾಮ್ ವಾರದ ಡೆಲಿವರಿ	1308 (1318)
ಸೂರ್ಯಕಾಂತಿ ಎಣ್ಣೆ ಕಚ್ಚಾ	1295 (1300)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹79,750 (79,150)

ಬೆಳ್ಳಿ ಕೆ.ಜಿ ₹91,150 (90,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸಂಕ್ಷಿಪ್ತ ಸುದ್ದಿ

ಈ ವರ್ಷ ಕ್ವಾಡ್ ಶೃಂಗಸಭೆ ಭಾರತದಲ್ಲಿ

ವಾಷಿಂಗ್ಟನ್(ಪಿಟಿಐ): ಈ ವರ್ಷ ನಡೆಯಲಿರುವ 'ಕ್ವಾಡ್ ನಾಯಕತ್ವ ಶೃಂಗಸಭೆ'ಯ ಆತಿಥ್ಯವನ್ನು ಭಾರತ ವಹಿಸಿಕೊಳ್ಳಲಿದೆ. ಈ ಶೃಂಗಸಭೆ ವರ್ಷಾಂತ್ಯಕ್ಕೆ ನಡೆಯಲಿದೆ.

ಇಲ್ಲಿ ನಡೆದ ಕ್ವಾಡ್ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಈ ಕುರಿತ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಭೆ ಬಳಿಕ ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಆಯೋಜಿಸಿದ್ದ ಈ ಸಭೆಯಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್, ಆಸ್ಟ್ರೇಲಿಯಾದ ಪೆನ್ನಿ ವಾಂಗ್, ಜಪಾನ್‌ನ ಇವಯಾ ತಕೇಶಿ ಪಾಲ್ಗೊಂಡಿದ್ದರು.

ಅಮೆರಿಕ, ಭಾರತ, ಆಸ್ಟ್ರೇಲಿಯಾ ಹಾಗೂ ಜಪಾನ್, ಕ್ವಾಡ್ ಸದಸ್ಯ ರಾಷ್ಟ್ರಗಳಾಗಿವೆ.

ಎಚ್ಚರಿಕೆ: ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶ ಸೇರಿದಂತೆ ಇತರ ಪ್ರದೇಶಗಳಲ್ಲಿನ ಯಥಾಸ್ಥಿತಿ ಬದಲಾಯಿಸಲು ಯಾವುದೇ ಏಕಪಕ್ಷೀಯ ಕ್ರಮಗಳನ್ನು ತೆಗೆದುಕೊಳ್ಳಬಾರದು ಎಂಬ ಕಠಿಣ ಸಂದೇಶವನ್ನು ಚೀನಾಕ್ಕೆ ಕ್ವಾಡ್ ರಾಷ್ಟ್ರಗಳು ರವಾನಿಸಿವೆ.

ಢಾಕಾ:10 ವರ್ಷದ ಹಳೆ ಪ್ರಕರಣ-ಖಲೀದಾ ಖುಲಾಸೆ



ಖಲೀದಾ ಜಿಯಾ

ಢಾಕಾ (ಪಿಟಿಐ): ಹತ್ತು ವರ್ಷಗಳಷ್ಟು ಹಳೆಯ ಪ್ರಕರಣ-ವೊಂದಕ್ಕೆ ಸಂಬಂಧಿಸಿ ಮಾಜಿ ಪ್ರಧಾನಿ ಹಾಗೂ ಬಿಎನ್‌ಪಿ ಮುಖ್ಯಸ್ಥೆ ಖಲೀದಾ ಜಿಯಾ ಅವರನ್ನು ಕೊಮಿಲಾ ಜಿಲ್ಲಾ ನ್ಯಾಯಾಲಯ ಬುಧವಾರ ಖುಲಾಸೆಗೊಳಿಸಿದೆ.

'ಸಾಕ್ಷ್ಯಾಧಾರ ಕೊರತೆಯಿಂದಾಗಿ ಜಿಯಾ ಅವರನ್ನು ಆರೋಪಮುಕ್ತಗೊಳಿಸಲಾಗಿದೆ' ಎಂದು ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಅಫ್ರೋಜ್ ಜೆಸ್ಮಿನ್ ಆದೇಶಿಸಿದ್ದಾರೆ.

ವಿಧ್ವಂಸಕ ಕೃತ್ಯದಲ್ಲಿ ಭಾಗಿಯಾಗಿದ್ದ ಆರೋಪದಡಿ ಜಿಯಾ ವಿರುದ್ಧ ಈ ಪ್ರಕರಣ ದಾಖಲಾಗಿತ್ತು. ಸದ್ಯ ಅವರು ಚಿಕಿತ್ಸೆಗಾಗಿ ಲಂಡನ್‌ನಲ್ಲಿದ್ದಾರೆ.

'ಸಂಧಾನಕ್ಕೆ ಬರದಿದ್ದರೆ ರಷ್ಯಾ ಮೇಲೆ ನಿರ್ಬಂಧ'

ವಾಷಿಂಗ್ಟನ್ (ಪಿಟಿಐ): 'ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ಯಾವಾಗ ಬೇಕಾದರೂ ಭೇಟಿಯಾಗಲು ಸಿದ್ಧ' ಎಂದಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ಉಕ್ರೇನ್ ವಿಷಯ ಕುರಿತು ಸಂಧಾನ ಮಾತುಕತೆಗೆ ಪುಟಿನ್ ಬರದಿದ್ದರೆ ರಷ್ಯಾ ವಿರುದ್ಧ ನಿರ್ಬಂಧ ಹೇರುವ ಸಾಧ್ಯತೆಯಿದೆ' ಎಂದು ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು,'ಒಂದು ವೇಳೆ ನೀವು ಸಮರ್ಥ ಅಧ್ಯಕ್ಷರನ್ನು ಹೊಂದಿದ್ದಲ್ಲಿ ಈ ಯುದ್ಧ ಪ್ರಾರಂಭವಾಗುತ್ತಿರಲೇ ಇಲ್ಲ. ಒಂದು ವೇಳೆ, ನಾನು ಅಧ್ಯಕ್ಷನಾಗಿದ್ದರೂ ಉಕ್ರೇನ್–ರಷ್ಯಾ ಯುದ್ಧ ಸಂಭವಿಸುತ್ತಿರಲಿಲ್ಲ' ಎಂದು ಹೇಳಿದ್ದಾರೆ.

ಪ್ರಮುಖ ಬೆಳವಣಿಗೆಗಳು

- ವೈವಿಧ್ಯ, ಸಮಾನತೆ ಹಾಗೂ ಒಳಗೊಳ್ಳುವಿಕೆ (ಡಿಇಐ) ಕಚೇರಿಯ ಎಲ್ಲ ಸಿಬ್ಬಂದಿಯನ್ನು ವೇತನ ಸಹಿತ ರಜೆ ಮೇಲೆ ಕಳುಹಿಸಲು ನಿರ್ದೇಶಿಸಲಾಗಿದೆ. ಈ ಸಿಬ್ಬಂದಿಯನ್ನು ವಜಾಗೊಳಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸುವಂತೆ ಸಿಬ್ಬಂದಿ ಮತ್ತು ನಿರ್ವಹಣಾ ಕಚೇರಿ ಏಜೆನ್ಸಿಗಳಿಗೆ ಸೂಚಿಸಿದೆ
- ಫೆ.1ರಿಂದ ಅನ್ವಯವಾಗುವಂತೆ ಚೀನಾದಿಂದ ಆಮದಾಗುವ ಸರಕುಗಳ ಮೇಲೆ ಶೇ 10ರಷ್ಟು ಸುಂಕ ವಿಧಿಸಲು ಚಿಂತನೆ ನಡೆಸುತ್ತಿರುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅತ್ಯಂತ ಮಾರಕ ಡ್ರಗ್ಸ್ ಎನಿಸಿರುವ ಫೆಂಟಾನಿಲ್ ಅನ್ನು ಕೆನಡಾ ಮತ್ತು ಮೆಕ್ಸಿಕೊಗೆ ಚೀನಾ ರಫ್ತು ಮಾಡುತ್ತಿದೆ. ಈ ಮಾದಕವಸ್ತು ಅಮೆರಿಕಕ್ಕೆ ಸಾಗಣೆಯಾಗುವುದನ್ನು ತಡೆಗಟ್ಟಲು ಈ ಕ್ರಮಕ್ಕೆ ಮುಂದಾಗಿರುವುದಾಗಿ ಹೇಳಿದ್ದಾರೆ.
- ಶ್ವೇತಭವನದ ಅಧಿಕೃತ ವೆಬ್‌ಸೈಟ್‌ನ ಸ್ಪ್ಯಾನಿಷ್ ಭಾಷಾ ಅವೃತ್ತಿಯನ್ನು ತೆಗೆದುಹಾಕಲಾಗಿದೆ

ಭಾರತ ಜತೆಗಿನ ಸಂಬಂಧ ವೃದ್ಧಿಗೆ ಒತ್ತು– ರುಬಿಯೊ

ವಾಷಿಂಗ್ಟನ್(ಪಿಟಿಐ): ಆರ್ಥಿಕ ವಿಚಾರವೂ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಭಾರತದೊಂದಿಗಿನ ಸಂಬಂಧ ವೃದ್ಧಿ ಅಮೆರಿಕದ ಅಪೇಕ್ಷೆಯಾಗಿದೆ ಎಂದು ನೂತನ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.



ನೂತನ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕಗೊಂಡ ನಂತರ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಮಂಗಳವಾರ ನಡೆಸಿದ ಮೊದಲ ಸಭೆಯಲ್ಲಿ ಅವರು ಈ ಮಾತು ಹೇಳಿದ್ದಾರೆ.

ಈ ಹುದ್ದೆಗೇರಿದ ನಂತರ ಅವರು ಮೊಟ್ಟಮೊದಲ ದ್ವಿಪಕ್ಷೀಯ ಮಾತುಕತೆಯನ್ನು ಭಾರತದೊಂದಿಗೆ ನಡೆಸಲು ನಿರ್ಧರಿಸಿದರು. ಇದು, ಭಾರತ ಜತೆಗಿನ ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಅಧ್ಯಕ್ಷ ಟ್ರಂಪ್ ಆಡಳಿತ ನೀಡುತ್ತಿರುವ ಮಹತ್ವ ತೋರಿಸುತ್ತದೆ ಎಂದು ವಿಶ್ಲೇಷಿಸಲಾಗುತ್ತಿದೆ.



ಇಂಡೊನೇಷ್ಯಾದ ಜಾವಾ ದ್ವೀಪದಲ್ಲಿ ಭಾರಿ ಮಳೆಯಿಂದಾಗಿ ಭೂಕುಸಿತ ಉಂಟಾಗಿದ್ದು, ವಿಪತ್ತು ನಿರ್ವಹಣಾ ಸಿಬ್ಬಂದಿ, ಪೊಲೀಸರು ಹಾಗೂ ಯೋಧರು ಬುಧವಾರ ಜಂಟಿಯಾಗಿ ರಕ್ಷಣಾ ಕಾರ್ಯಾಚರಣೆ ನಡೆಸಿದರು–ಎಎಫ್‌ಪಿ ಚಿತ್ರ

ಇಂಡೊನೇಷ್ಯಾ: ಭೀಕರ ಪ್ರವಾಹ–ಮೃತರ ಸಂಖ್ಯೆ 19ಕ್ಕೆ ಏರಿಕೆ

ಜಕಾರ್ತ (ಎಪಿ): ಇಂಡೊನೇಷ್ಯಾದ ಪ್ರಮುಖ ದ್ವೀಪ ಜಾವಾದಲ್ಲಿ ಪ್ರವಾಹ ಹಾಗೂ ಭೂಕುಸಿತದ ಪರಿಣಾಮ ಕಾಣೆಯಾಗಿರುವವರ ಪತ್ತೆಗಾಗಿ ಬುಧವಾರ ಶೋಧ ಕಾರ್ಯ ಮುಂದುವರಿದಿದೆ. ಈ ಅವಘಡದಲ್ಲಿ ಮೃತರ ಸಂಖ್ಯೆ 19ಕ್ಕೆ ಏರಿದೆ.

ಪ್ರವಾಹದಿಂದಾಗಿ, ಜಾವಾ ದ್ವೀಪದಾದ್ಯಂತ ಒಟ್ಟು 25 ಮನೆಗಳು ಕುಸಿದಿವೆ. ಒಂದು ಅಣೆಕಟ್ಟು ಒಡೆದಿದ್ದು, ಮೂರು ಪ್ರಮುಖ ಸೇತುವೆಗಳು ಕೊಚ್ಚಿ ಹೋಗಿವೆ ಎಂದು ವಿಪತ್ತು ನಿರ್ವಹಣಾ ಅಧಿಕಾರಿಗಳು ತಿಳಿಸಿದ್ದಾರೆ.

13 ಮಂದಿ ಗಾಯಗೊಂಡಿದ್ದು, 300ಕ್ಕೂ ಹೆಚ್ಚು ಜನರನ್ನು ತಾತ್ಕಾಲಿಕ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ. ಇನ್ನೂ 7 ಮಂದಿ ಕಾಣೆಯಾಗಿದ್ದು, ಹುಡುಕಾಟ ಮುಂದುವರಿದಿದೆ ಎಂದು ಅವರು ಹೇಳಿದ್ದಾರೆ. ಭಾರಿ ಮಳೆ ಹಾಗೂ ದಟ್ಟ ಮಂಜಿನಿಂದಾಗಿ ರಕ್ಷಣಾ ಕಾರ್ಯಾಚರಣೆಯನ್ನು ಮಂಗಳವಾರ ಸ್ಥಗಿತಗೊಳಿಸಲಾಗಿತ್ತು ಎಂದು ತಿಳಿಸಿದ್ದಾರೆ.

ಜಾವಾ ದ್ವೀಪದಲ್ಲಿ ಸೋಮವಾರದಿಂದ ಭಾರಿ ಮಳೆಯಾಗುತ್ತಿದ್ದು, ಹಲವು ಗ್ರಾಮಗಳು ಪ್ರವಾಹಕ್ಕೆ ಸಿಲುಕಿವೆ. ಪರ್ವತ ಪ್ರದೇಶದ ಕುಗ್ರಾಮ-ಗಳಲ್ಲಿ ಭೂಕುಸಿತ ಉಂಟಾಗಿದೆ.

ಜನ್ಮದಿಂದ ಸಿಗುವ ಪೌರತ್ವ ಹಕ್ಕು ರದ್ದು: ಭಾರತೀಯರ ಮೇಲೂ ಪರಿಣಾಮ

ಅಧ್ಯಕ್ಷ ಟ್ರಂಪ್ ಆದೇಶಕ್ಕೆ ವ್ಯಾಪಕ ವಿರೋಧ

ವಾಷಿಂಗ್ಟನ್ (ಪಿಟಿಐ): ಜನ್ಮದಿಂದ ಸಿಗುವ ಅಮೆರಿಕ ಪೌರತ್ವ ಹಕ್ಕನ್ನು ರದ್ದುಪಡಿಸಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊರಡಿಸಿರುವ ಕಾರ್ಯಕಾರಿ ಆದೇಶವನ್ನು ಭಾರತೀಯ ಅಮೆರಿಕನ್ ಸಂಸದರು ತೀವ್ರವಾಗಿ ವಿರೋಧಿಸಿದ್ದಾರೆ.

ಅಧ್ಯಕ್ಷರ ಈ ಕ್ರಮವು ವಿಶ್ವದ ವಿವಿಧೆಡೆಯಿಂದ ಅಮೆರಿಕಕ್ಕೆ ಅಕ್ರಮವಾಗಿ ವಲಸೆ ಬಂದಿರುವವರ ಮೇಲಷ್ಟೇ ಅಲ್ಲದೆ, ಶಿಕ್ಷಣ ಮತ್ತು ಉದ್ಯೋಗ ಅರಸಿ ಅಮೆರಿಕಕ್ಕೆ ಬಂದಿರುವ ಭಾರತೀಯರ ಮೇಲೂ ಪರಿಣಾಮ ಬೀರುತ್ತದೆ ಎಂದು ಅವರು ಆಕ್ಷೇಪಿಸಿದ್ದಾರೆ.

ಅಮೆರಿಕದ 47ನೇ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಟ್ರಂಪ್ ಅವರು ದಾಖಲೆರಹಿತ ವಲಸಿಗರಿಗೆ ಜನಿಸಿದ ಮಕ್ಕಳನ್ನು ಇನ್ನು ಮುಂದೆ ದೇಶದ ನಾಗರಿಕರಾಗಿ ಪರಿಗಣಿಸಲು ಆಗುವುದಿಲ್ಲ ಎಂದು ಘೋಷಿಸುವ ಆದೇಶಕ್ಕೆ ಸಹಿ ಹಾಕಿದರು. ವಿದೇಶಿ ವಿದ್ಯಾರ್ಥಿಗಳು ಮತ್ತು ಪ್ರವಾಸಿಗರು ಸೇರಿದಂತೆ ಕಾನೂನುಬದ್ಧವಾಗಿ ದೇಶದಲ್ಲಿರುವ ಆದರೆ ತಾತ್ಕಾಲಿಕವಾಗಿ ವಾಸವಿರುವ ತಾಯಂದಿರ ಮಕ್ಕಳಿಗೂ ಇದು ಅನ್ವಯವಾಗುತ್ತದೆ ಎಂದು ಆದೇಶದಲ್ಲಿ ಹೇಳಲಾಗಿದೆ.



ಡೊನಾಲ್ಡ್ ಟ್ರಂಪ್

ಆದೇಶದ ಪ್ರಕಾರ, ಪೋಷಕರಲ್ಲಿ ಒಬ್ಬರು ಅಮೆರಿಕದ ಪ್ರಜೆ ಅಥವಾ ಕಾನೂನುಬದ್ಧ ಶಾಶ್ವತ ನಿವಾಸಿ ಆಗಿಲ್ಲದಿದ್ದರೆ 2025ರ ಫೆಬ್ರುವರಿ 19ರ ನಂತರ ಅವರಿಗೆ ಜನಿಸಿದ ಮಕ್ಕಳಿಗೆ ಸ್ವಯಂಚಾಲಿತವಾಗಿ ಪೌರತ್ವ ದೊರೆಯುವುದಿಲ್ಲ. ದೇಶದ ನಾಗರಿಕಲ್ಲ-ದವರಿಗೆ ಜನಿಸಿದ ಮಕ್ಕಳು ಅಮೆರಿಕದ ಕಾನೂನು ವ್ಯಾಪ್ತಿಗೆ ಒಳಪಡುವುದಿಲ್ಲ. ಹೀಗಾಗಿ, ಸಂವಿಧಾನದ 14ನೇ ತಿದ್ದುಪಡಿ ಅಡಿ ಪೌರತ್ವದ ಖಾತರಿಗೆ ಅವರು ಒಳಪಡುವುದಿಲ್ಲ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'ಜನ್ಮದಿಂದ ದೊರೆಯುವ ಪೌರತ್ವ ಹಕ್ಕಿನಲ್ಲಿ ಬದಲಾವಣೆ ಸಂಬಂಧ ಹೊರಡಿಸಲಾಗಿರುವ ಆದೇಶವು ಅಕ್ರಮ ಮತ್ತು ದಾಖಲೆರಹಿತ ವಲಸಿಗರ ನವಜಾತ ಶಿಶುಗಳ ಮೇಲೆ ಪರಿಣಾಮ ಬೀರುವುದರ ಜತೆಗೆ ಎಚ್–1ಬಿ ವೀಸಾದಡಿ ಕಾನೂನು-ಬದ್ಧವಾಗಿ ದೇಶದಲ್ಲಿ ಉಳಿದಿರುವವರ ಮೇಲೂ ಪರಿಣಾಮ ಬೀರುತ್ತದೆ' ಎಂದು ಭಾರತೀಯ ಅಮೆರಿಕನ್ ಸಂಸದ ರೋ ಖನ್ನಾ ಬೇಸರ ವ್ಯಕ್ತಪಡಿಸಿದ್ದಾರೆ.

'ಎಚ್–1ಬಿ ವಲಸೆ ರಹಿತ ವೀಸಾ ಆಗಿದೆ. ತಾಂತ್ರಿಕ ಪರಿಣತಿ ಹೊಂದಿರುವ ವಿದೇಶಿಯರನ್ನು ಉದ್ಯೋಗಿಗಳನ್ನಾಗಿ ನೇಮಿಸಿಕೊಳ್ಳಲು ಇದು ಅಮೆರಿಕದ ಕಂಪನಿಗಳಿಗೆ ಅವಕಾಶ ನೀಡುತ್ತದೆ. ಹಲವು ಕಂಪನಿಗಳು ಭಾರತ, ಚೀನಾದಂತಹ ದೇಶಗಳಿಂದ ಸಹಸ್ರಾರು ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ಈ ವೀಸಾವನ್ನು ಅವಲಂಬಿಸಿವೆ' ಎಂದು ಅವರು ಹೇಳಿದ್ದಾರೆ.

'ಕಾನೂನುಬದ್ಧವಾಗಿ ಎಚ್–1ಬಿ/ ಎಚ್2ಬಿ ವೀಸಾ, ವಿದ್ಯಾರ್ಥಿ ವೀಸಾ, ವ್ಯಾಪಾರ ವೀಸಾ ಅಡಿ ಅಮೆರಿಕದಲ್ಲಿ ವಾಸಿಸುತ್ತಿರುವವರಿಗೆ ಜನಿಸಿದ ಮಕ್ಕಳಿಗೂ ಟ್ರಂಪ್ ಆದೇಶವು ಪೌರತ್ವದ ಹಕ್ಕನ್ನು ನಿರಾಕರಿಸುತ್ತದೆ' ಎಂದು ಖನ್ನಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಟ್ರಂಪ್ ಅವರು ಏನೇ ಹೇಳಲಿ ಅಥವಾ ಮಾಡಲಿ. ಜನ್ಮದಿಂದ ಸಿಗುವ ಪೌರತ್ವವು ಈ ನೆಲದ ಕಾನೂನು ಆಗಿದೆ ಮತ್ತು ಆಗಿರುತ್ತದೆ. ಇದರ ರಕ್ಷಣೆಗಾಗಿ ಪಣತೊಟ್ಟು ಹೋರಾಡುತ್ತೇನೆ' ಎಂದು ಮತ್ತೊಬ್ಬ ಭಾರತೀಯ ಅಮೆರಿಕನ್ ಸಂಸದ ಶ್ರೀ ಥಾಣೇದಾರ್ ಪ್ರತಿಕ್ರಿಯಿಸಿದ್ದಾರೆ.

'ಇದು ಅಸಾಂವಿಧಾನಿಕ ಕ್ರಮವಾಗಿದ್ದು, ಒಂದು ಸಹಿಯಿಂದ ಅದನ್ನು ಮಾಡಲು ಸಾಧ್ಯವಿಲ್ಲ. ಹಾಗೆ ಮಾಡಿದ್ದೇ ಆದರೆ ನಮ್ಮ ದೇಶದ ಕಾನೂನು ಮತ್ತು ಸಂವಿಧಾನವನ್ನು ಅಪಹಾಸ್ಯ ಮಾಡಿದಂತಾಗುತ್ತದೆ' ಎಂದು ಸಂಸದೆ ಪ್ರಮೀಳಾ ಜಯಪಾಲ್ ಹೇಳಿದ್ದಾರೆ.

ಆದೇಶ ಪ್ರಶ್ನಿಸಿ ನ್ಯಾಯಾಲಯಕ್ಕೆ ಮೊರೆ

ಜನ್ಮದಿಂದಾಗಿ ಸಿಗುವ ಪೌರತ್ವ ಹಕ್ಕು ರದ್ದುಪಡಿಸಿರುವ ಆದೇಶವನ್ನು ಅಮೆರಿಕದ 22 ರಾಜ್ಯಗಳ ಅಟಾರ್ನಿ ಜನರಲ್‌ಗಳು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ.

'ದೇಶದಲ್ಲಿ ಜನ್ಮದಿಂದ ದೊರೆಯುವ ಪೌರತ್ವವನ್ನು ಸಂವಿಧಾನದ 14ನೇ ತಿದ್ದುಪಡಿ ಅಡಿಯಲ್ಲಿ ನೀಡಲಾಗಿದೆ. ಇದನ್ನು ಪರಿಷ್ಕರಿಸಲು ಅಧ್ಯಕ್ಷರು ಅಥವಾ ಕಾಂಗ್ರೆಸ್‌ಗೆ ಸಾಂವಿಧಾನಿಕ ಅಧಿಕಾರವಿಲ್ಲ' ಎಂದು ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ. ಈ ಕುರಿತ ಅಧ್ಯಕ್ಷರ ಆದೇಶಕ್ಕೆ ತುರ್ತಾಗಿ ತಡೆಯಾಜ್ಞೆ ನೀಡುವಂತೆ ಅರ್ಜಿಯಲ್ಲಿ ಕೋರಲಾಗಿದೆ.

ಇನ್ನೊಂದೆಡೆ, 22 ರಾಜ್ಯಗಳು ಹೂಡಿರುವ ದಾವೆಗಳನ್ನು ಎದುರಿಸಲು ಸಿದ್ಧ ಎಂದು ಶ್ವೇತಭವನ ಹೇಳಿದೆ. 'ರಾಜ್ಯಗಳ ಈ ನಡೆಯು ಅಧ್ಯಕ್ಷ ಟ್ರಂಪ್ ಕೈಗೊಂಡ ಕ್ರಮಕ್ಕೆ ಎಡಪಂಥೀಯರ ಪ್ರತಿರೋಧದ ಮುಂದುವರಿದ ಭಾಗವಾಗಿದೆ' ಎಂದು ಶ್ವೇತಭವನ ತಿಳಿಸಿದೆ. ಟ್ರಂಪ್ ಅವರ ಕಾರ್ಯನಿರ್ವಾಹಕ ಆದೇಶವನ್ನು ಅಸಾಂವಿಧಾನಿಕ ಎಂದು ಆರೋಪಿಸಿರುವ ವಲಸೆ ಹಕ್ಕುಗಳ ಗುಂಪು ಸಹ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದೆ.

ಪನಾಮಾ ಕಾಲುವೆ: ಟ್ರಂಪ್ ಹೇಳಿಕೆ ವಿರುದ್ಧ ವಿಶ್ವಸಂಸ್ಥೆಗೆ ದೂರು

ಪನಾಮಾ ಸಿಟಿ(ಎಎಫ್‌ಪಿ): 'ಪನಾಮಾ ಕಾಲುವೆಯನ್ನು ಮರಳಿ ಪಡೆಯಲಾಗುವುದು' ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ ಹೇಳಿಕೆ ವಿಚಾರವಾಗಿ ಪನಾಮಾ ಸರ್ಕಾರ ವಿಶ್ವಸಂಸ್ಥೆಗೆ ದೂರು ನೀಡಿದೆ.



ಜೋಸ್ ರೌಲ್ ಮುಲಿನೊ

'ಟ್ರಂಪ್ ಅವರ ಬೆದರಿಕೆ ಕಳವಳಕಾರಿಯಾಗಿದ್ದು, ಈ ವಿಷಯವನ್ನು ವಿಶ್ವಸಂಸ್ಥೆ ಭದ್ರತಾ ಮಂಡಳಿಗೆ ಒಪ್ಪಿಸಬೇಕು' ಎಂದು ಪನಾಮಾ ಸರ್ಕಾರ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರಿಗೆ ಬರೆದ ಪತ್ರದಲ್ಲಿ ಕೋರಿದೆ.

ಅಧ್ಯಕ್ಷರಾಗಿ ಪ್ರಮಾಣ ಸ್ವೀಕರಿಸಿದ ನಂತರ ಮಾತನಾಡಿದ ಟ್ರಂಪ್, 'ಪನಾಮಾ ಕಾಲುವೆ ಮೂಲಕ ಚೀನಾ ಕಾರ್ಯಾಚರಣೆ ಮಾಡುತ್ತಿದೆ. ಈ ಕಾಲುವೆಯನ್ನು ಪನಾಮಾಕ್ಕೆ ನೀಡಿದ್ದೇವೆಯೇ ಹೊರತು ಚೀನಾಕ್ಕೆ ಅಲ್ಲ. ಈ ಕಾಲುವೆಯನ್ನು ನಾವು ವಾಪಸ್ ಪಡೆಯುತ್ತೇವೆ' ಎಂದು ಟ್ರಂಪ್ ಹೇಳಿದ್ದರು.

ತಿರುಗೇಟು: ಸ್ವಿಟ್ಜರ್ಲೆಂಡ್‌ನ ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆ ಸಮಾವೇಶದ ಸಂದರ್ಭದಲ್ಲಿ ಮಾತನಾಡಿರುವ ಪನಾಮಾ ಅಧ್ಯಕ್ಷ ಜೋಸ್ ರೌಲ್ ಮುಲಿನೊ,'ಪನಾಮಾ ಕಾಲುವೆಯು ಅಮೆರಿಕ ನೀಡಿರುವ ಉಡುಗೊರೆ ಅಲ್ಲ' ಎಂದು ತಿರುಗೇಟು ನೀಡಿದ್ದಾರೆ.

ಟಿ20 ಕ್ರಿಕೆಟ್: ವರುಣ್, ಅರ್ಷದೀಪ್ ಮೋಡಿ; ಅಭಿಷೇಕ್ ಅಬ್ಬರದ ಬ್ಯಾಟಿಂಗ್

ಈಡನ್‌ನಲ್ಲಿ ಭಾರತ ಜಯಭೇರಿ

ಕೋಲ್ಕತ್ತ (ಪಿಟಿಐ): ಅರ್ಷದೀಪ್ ಸಿಂಗ್ ಮತ್ತು ವರುಣ್ ಚಕ್ರವರ್ತಿ ಅವರ ಅಮೋಘ ಬೌಲಿಂಗ್ ಮುಂದೆ ಇಂಗ್ಲೆಂಡ್ ಸಾಧಾರಣ ಮೊತ್ತಕ್ಕೆ ಕುಸಿಯಿತು. ಅಭಿಷೇಕ್ ಶರ್ಮಾ ಅವರ ಅಬ್ಬರದ ಬ್ಯಾಟಿಂಗ್‌ನಿಂದ ಭಾರತ ತಂಡವು ಗೆಲುವಿನ ದಡ ಸೇರಿತು. ವೇಗಿ ಮೊಹಮ್ಮದ್ ಶಮಿಗೆ ಹನ್ನೊಂದರ ಬಳಗದಲ್ಲಿ ಸ್ಥಾನ ಸಿಗಲಿಲ್ಲ. ಇದರಿಂದಾಗಿ ಅವರು ಇನ್ನೂ ಸಂಪೂರ್ಣ ಫಿಟ್ ಆಗಿಲ್ಲವೆಂಬ ಮಾತುಗಳು ಕೇಳಿಬಂದಿವೆ

ಬುಧವಾರ ಈಡನ್ ಗಾರ್ಡನ್‌ನಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ ಭಾರತ ತಂಡವು 7 ವಿಕೆಟ್‌ಗಳಿಂದ ಜಯಿಸಿತು. ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಭಾರತದ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾದ ಎಡಗೈ ವೇಗಿ ಅರ್ಷದೀಪ್ ಸಿಂಗ್ (17ಕ್ಕೆ2) ಹಾಗೂ ಸ್ಪಿನ್ನರ್ ವರುಣ ಚಕ್ರವರ್ತಿ (23ಕ್ಕೆ3) ಅವರ ದಾಳಿಯ ಮುಂದೆ ಇಂಗ್ಲೆಂಡ್ 20 ಓವರ್‌ಗಳಲ್ಲಿ 132 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಹಾರ್ದಿಕ್ ಪಾಂಡ್ಯ ಮತ್ತು ಅಕ್ಷರ್ ಪಟೇಲ್ ತಲಾ 2 ವಿಕೆಟ್ ಗಳಿಸಿದರು.

ಇದಕ್ಕುತ್ತರವಾಗಿ ಭಾರತ ತಂಡವು 12.5 ಓವರ್‌ಗಳಲ್ಲಿ 3ಕ್ಕೆ133 ರನ್ ಗಳಿಸಿತು. ಅಭಿಷೇಕ್ ಶರ್ಮಾ (79; 34ಎ, 4X5, 6X8) ಅವರು ತಂಡವನ್ನು ಜಯದತ್ತ ಮುನ್ನಡೆಸಿದರು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರ ನಿರ್ಧಾರವನ್ನು ಬೌಲರ್‌ಗಳು ಸಮರ್ಥಿಸಿಕೊಂಡರು.

ಇನಿಂಗ್ಸ್‌ನ ಮೂರನೇ ಎಸೆತದಲ್ಲಿಯೇ ಫಿಲ್ ಸಾಲ್ಟ್ ವಿಕೆಟ್ ಗಳಿಸಿದ ಅರ್ಷದೀಪ್ ಸಂಭ್ರಮಿಸಿದರು. ಮೂರನೇ ಓವರ್ ಹಾಕಿದ ಅರ್ಷದೀಪ್ ಸಿಂಗ್ ಅವರು ಬೆನ್ ಡಕೆಟ್ ವಿಕೆಟ್ ಅನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡರು. ಇಂಗ್ಲೆಂಡ್ ತಂಡಕ್ಕೆ ಆರಂಭದಲ್ಲಿಯೇ ಬಲವಾದ ಪೆಟ್ಟು ಬಿದ್ದಿತು. ಈ ಹಂತದಲ್ಲಿ ನಾಯಕ ಬಟ್ಲರ್ ಮತ್ತು ಬ್ರೂಕ್ ಜೊತೆಗೂಡಿ 3ನೇ ವಿಕೆಟ್‌ಗೆ 48 ರನ್ ಸೇರಿಸಿದರು. ತಂಡಕ್ಕೆ ಚೇತರಿಕೆ ನೀಡುವ ಪ್ರಯತ್ನ ಮಾಡಿದರು. ಇವರಿಬ್ಬರೂ ವೇಗವಾಗಿ ರನ್ ಗಳಿಸಿದರು. ಎಂಟನೇ ಓವರ್‌ನಲ್ಲಿ 'ನಿಗೂಢ ಸ್ಪಿನ್ನರ್' ವರುಣ ಚಕ್ರವರ್ತಿ ಮೋಡಿಗೆ ಬ್ರೂಕ್ ಕ್ಲೀನ್‌ಬೌಲ್ಡ್ ಆದರು. ಜೊತೆಯಾಟ ಮುರಿಯಿತು. ಅದೇ ಓವರ್‌ನಲ್ಲಿ ಲಿಯಾಮ್ ಲಿವಿಂಗ್‌ಸ್ಟೋನ್ ಅವರನ್ನೂ ಕ್ಲೀನ್‌ಬೌಲ್ಡ್ ಮಾಡಿದ ವರುಣ್ ಮಿಂಚಿದರು.

ಇಲ್ಲಿಂದ ಒಂದರ ಹಿಂದೆ ಒಂದರಂತೆ ವಿಕೆಟ್ ಪತನವಾದವು. ಬಟ್ಲರ್ ಒಬ್ಬರೇ ರನ್ ಗಳಿಕೆಗೆ ಪ್ರಯತ್ನಿಸಿದರು. ಅವರು 8ಬೌಂಡರಿ ಮತ್ತು 2 ಸಿಕ್ಸರ್ ಸಿಡಿಸಿದರು. 17ನೇ ಓವರ್‌ನಲ್ಲಿ ವರುಣ್ ಅವರೇ ಬಟ್ಲರ್ ವಿಕೆಟ್ ಗಳಿಸಿದರು. ಜೋಸ್ ಬಟ್ಲರ್ (68; 44ಎಸೆತ) ಅವರ ಅರ್ಧಶತಕದಿಂದಾಗಿ ತಂಡವು ಮೂರಂಕಿ ಮೊತ್ತ ಗಳಿಸಿತು. ಹ್ಯಾರಿ ಬ್ರೂಕ್ (17 ರನ್) ಮತ್ತು ಜೋಫ್ರಾ ಆರ್ಚರ್ (12 ರನ್) ಅವರಿಬ್ಬರೇ ಎರಡಂಕಿ ಮೊತ್ತ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 20 ಓವರ್‌ಗಳಲ್ಲಿ 132 (ಬಟ್ಲರ್ 68, ಬ್ರೂಕ್ 17, ಜೋಫ್ರಾ 12, ಅರ್ಷದೀಪ್ 17ಕ್ಕೆ2, ಹಾರ್ದಿಕ್ ಪಾಂಡ್ಯ 42ಕ್ಕೆ2, ವರುಣ ಚಕ್ರವರ್ತಿ 23ಕ್ಕೆ3, ಅಕ್ಷರ್ ಪಟೇಲ್ 22ಕ್ಕೆ2) ಭಾರತ: 12.5 ಓವರ್‌ಗಳಲ್ಲಿ 3ಕ್ಕೆ133 (ಸಂಜು ಸ್ಯಾಮ್ಸನ್ 26, ಅಭಿಷೇಕ್ ಶರ್ಮಾ 79, ತಿಲಕ್ ಔಟಾಗದೆ 19, ಹಾರ್ದಿಕ್ ಪಾಂಡ್ಯ ಔಟಾಗದೆ 3, ಜೋಫ್ರಾ ಆರ್ಚರ್ 21ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ ಕ್ಕೆ 7 ವಿಕೆಟ್‌ಗಳ ಜಯ.



ಅಭಿಷೇಕ್ ಶರ್ಮಾ



ಅರ್ಷದೀಪ್ ಸಿಂಗ್ ಪಿಟಿಐ ಚಿತ್ರ

ಅರ್ಷದೀಪ್ ವಿಕೆಟ್ ದಾಖಲೆ

ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಭಾರತದ ಬೌಲರ್ ಆದರು.

ಅವರು 97 ವಿಕೆಟ್ ಗಳಿಸಿದ್ದಾರೆ. ಇದರೊಂದಿಗೆ ಸ್ಪಿನ್ನರ್ ಯಜುವೇಂದ್ರ ಚಾಹಲ್ (96) ಅವರನ್ನು ಹಿಂದಿಕ್ಕಿದರು. 2022ರಲ್ಲಿ ಅರ್ಷದೀಪ್ ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಒಟ್ಟು 61 ಪಂದ್ಯಗಳಲ್ಲಿ ಈ ಸಾಧನೆ ಮಾಡಿದ್ದಾರೆ. ಚಾಹಲ್ 80 ಪಂದ್ಯಗಳಲ್ಲಿ ಆಡಿದ್ದರು.

ಸಿನ್ನರ್ ಆಟಕ್ಕೆ ಮಿನೋರ್ ನಿರುತ್ತರ

ಆಸ್ಟ್ರೇಲಿಯನ್ ಓಪನ್: ಮೆಲ್ಬರ್ನ್‌ನಲ್ಲಿ ಮೊದಲ ಪ್ರಶಸ್ತಿಯತ್ತ ಶ್ವಾಂಟೆಕ್

ಮೆಲ್ಬರ್ನ್ (ಎಎಫ್‌ಪಿ): ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್ ಅವರು ಬುಧವಾರ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಅಧಿಕಾರಯುತ ರೀತಿಯಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು. ಮಹಿಳೆಯರ ವಿಭಾಗದಲ್ಲಿ ಇಗಾ ಶ್ವಾಂಟೆಕ್ ಕೂಡ ತ್ರಾಸವಿಲ್ಲದೇ ಎದುರಾಳಿಯನ್ನು ಮಣಿಸಿ ಮೆಲ್ಬರ್ನ್‌ನಲ್ಲಿ ಮೊದಲ ಬಾರಿ ಕಿರೀಟ ಧರಿಸುವತ್ತ ದಾಪುಗಾಲಿಟ್ಟರು.

ವಿಶ್ವದ ಅಗ್ರಮಾನ್ಯ ಆಟಗಾರ ಸಿನ್ನರ್ 6–3, 6–2, 6–1 ರಿಂದ ಆತಿಥೇಯ ದೇಶದ ಅಲೆಕ್ಸ್ ಡಿ ಮಿನೋರ್ ಅವರನ್ನು ಬಗ್ಗುಬಡಿದು, ರಾಡ್ ಲೇವರ್ ಅರೇನಾದಲ್ಲಿದ್ದ ಪ್ರೇಕ್ಷಕರ ಸದ್ದಡಗಿಸಿದರು. 23 ವರ್ಷ ವಯಸ್ಸಿನ ಸಿನ್ನರ್ ಮತ್ತು ಅಲೆಕ್ಸ್ ಹತ್ತು ಬಾರಿ ಮುಖಾಮುಖಿ ಆಗಿದ್ದು ಸಿನ್ನರ್ ಎಲ್ಲ ಸಂದರ್ಭಗಳಲ್ಲಿ ಜಯಗಳಿಸಿದ್ದಾರೆ.

ಇಟಲಿಯ ಆಟಗಾರ ಸೆಮಿಫೈನಲ್‌ನಲ್ಲಿ 21ನೇ ಶ್ರೇಯಾಂಕದ ಬೆನ್ ಶೆಲ್ಟನ್ ಅವರನ್ನು ಎದುರಿಸಲಿದ್ದಾರೆ. ಇನ್ನೊಂದು ಸೆಮಿಫೈನಲ್‌ನಲ್ಲಿ 10 ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಅವರು ಎರಡನೇ ಕ್ರಮಾಂಕದ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಎದುರಿಸಲಿದ್ದಾರೆ. ಈ ಎರಡೂ ಪಂದ್ಯಗಳು ಶುಕ್ರವಾರ ನಡೆಯಲಿವೆ.

ಡೆನ್ಮಾರ್ಕ್‌ನ ಹೋಲ್ಗರ್ ರೂನ್ ವಿರುದ್ಧ ಸೋಮವಾರ 16ರ ಘಟ್ಟದ ಪಂದ್ಯವನ್ನು ಬಿಸಿಲಿನಲ್ಲಿ ಆಡಿ ಸುಸ್ತಾಗಿದ್ದ ಸಿನ್ನರ್, ಎಂಟರ ಘಟ್ಟದ ಪಂದ್ಯವನ್ನು ಸಂಜೆಯ ತಂಪು ವಾತಾವರಣದಲ್ಲಿ ಆಡಿ ನಿರಾಯಾಸವಾಗಿ ಗೆದ್ದರು.

ಅಮೆರಿಕದ 22 ವರ್ಷ ವಯಸ್ಸಿನ ಶೆಲ್ಟನ್ 6–4, 7–5, 4–6, 7–6 (7–4) ರಿಂದ ಶ್ರೇಯಾಂಕರಹಿತ ಆಟಗಾರ ಲೊರೆಂಜೊ ಸೊನೆಗೊ (ಇಟಲಿ) ಅವರನ್ನು ಮಣಿಸಿದರು. ಶೆಲ್ಟನ್ 2023ರ ಅಮೆರಿಕ ಓಪನ್‌ನಲ್ಲಿ ಸೆಮಿಫೈನಲ್ ತಲುಪಿದ್ದರು. ಅವರು ಶರವೇಗದ ಸರ್ವ್‌ಗಳನ್ನು ಪ್ರದರ್ಶಿಸಿದರು. ಒಮ್ಮೆ ಗಂಟೆಗೆ 232 ಕಿ.ಮೀ. ವೇಗದ ಸರ್ವ್ ಮಾಡಿ ಟೂರ್ನಿಯ ದಾಖಲೆ ಸರಿಗಟ್ಟಿದರು.

ಶ್ವಾಂಟೆಕ್‌ಗೆ ಜಯ: ಐದು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ವಿಜೇತೆ, ಪೋಲೆಂಡ್‌ನ ಇಗಾ ಶ್ವಾಂಟೆಕ್ ಕ್ವಾರ್ಟರ್‌ಫೈನಲ್‌ನಲ್ಲಿ 6–1, 6–2 ರಿಂದ ಎಂಟನೇ ಶ್ರೇಯಾಂಕದ ಎಮ್ಮಾ ನವಾರೊ (ಅಮೆರಿಕ) ಅವರನ್ನು ಹಿಮ್ಮೆಟ್ಟಿಸಲು ಕಷ್ಟಪಡಲಿಲ್ಲ.

ವಿಶ್ವದ ಎರಡನೇ ಕ್ರಮಾಂಕದ ಆಟಗಾರ್ತಿ ಸೆಮಿಫೈನಲ್‌ನಲ್ಲಿ 19ನೇ ಶ್ರೇಯಾಂಕದ ಮ್ಯಾಡಿಸನ್ ಕೀಸ್ (ಅಮೆರಿಕ) ಅವರನ್ನು ಎದುರಿಸಲಿದ್ದಾರೆ. ಇಲ್ಲಿ ಸತತ ಮೂರನೇ ಬಾರಿ ಚಾಂಪಿಯನ್ ಆಗಲು ಯತ್ನಿಸುತ್ತಿರುವ ಅರಿನಾ ಸಬಲೆಂಕಾ (ಬೆಲರೂಸ್) ಇನ್ನೊಂದು ಸೆಮಿಫೈನಲ್‌ನಲ್ಲಿ 11ನೇ ಶ್ರೇಯಾಂಕದ ಪಾಲ್ ಬಡೋಸಾ (ಸ್ಪೇನ್) ವಿರುದ್ಧ ಆಡಲಿದ್ದಾರೆ.

ಈ ಸೆಮಿಫೈನಲ್ ಪಂದ್ಯಗಳು ಗುರುವಾರ ನಡೆಯಲಿವೆ.

2009ರ ನಂತರ ಇದೇ ಮೊದಲ ಬಾರಿ ಬೆನ್ ಶೆಲ್ಟನ್ ಮತ್ತು ಮ್ಯಾಡಿಸನ್ ಕೀಸ್ ಮೂಲಕ ಅಮೆರಿಕದ ಟೆನಿಸಿಗರು ಪುರುಷರ ಮತ್ತು ಮಹಿಳಾ ವಿಭಾಗದಲ್ಲಿ ಸೆಮಿಫೈನಲ್‌ನಲ್ಲಿ ಸ್ಥಾನ ಪಡೆದಂತಾಗಿದೆ. ಆ ವರ್ಷ ಪುರುರ ವಿಭಾಗದಲ್ಲಿ ಆ್ಯಂಡಿ ರಾಡಿಕ್ ಮತ್ತು ಮಹಿಳಾ ವಿಭಾಗದಲ್ಲಿ ಸೆರೆನಾ ವಿಲಿಯಮ್ಸ್ ನಾಲ್ಕರ ಘಟ್ಟ ತಲುಪಿದ್ದರು.



ಪೋಲೆಂಡ್‌ನ ಇಗಾ ಶ್ವಾಂಟೆಕ್ ಎಎಫ್‌ಪಿ ಚಿತ್ರ

ಟೆನಿಸ್: ಅಂಕಿತಾ, ಸಹಜಾಗೆ ಪ್ರಯಾಸದ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಅಗ್ರ ಆಟಗಾರ್ತಿ ಅಂಕಿತಾ ರೈನಾ, ಕೆಪಿಬಿ ಟ್ರಸ್ಟ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ರಷ್ಯಾದ ದರಿಯಾ ಕುದಶೋವಾ ಅವರನ್ನು ಬುಧವಾರ 7–6 (7–2), 7–6 (7–4)ರಲ್ಲಿ ಪ್ರಯಾಸದಿಂದ ಸೋಲಿಸಿದರು.

ಕಬ್ಬನ್ ಪಾರ್ಕ್‌ನ ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆಯ ಅಂಕಣದಲ್ಲಿ ಕ್ವಾಲಿಫೈಯರ್, 21 ವರ್ಷ ವಯಸ್ಸಿನ ಕುದಶೋವಾ ಮೊದಲ ಸೆಟ್‌ನಲ್ಲಿ 5–2 ಲೀಡ್ ಪಡೆದು ಸೆಟ್ ಗೆಲ್ಲುವ ಹಂತದಲ್ಲಿದ್ದರು. ಆದರೆ ಸಕಾಲದಲ್ಲಿ ಚೇತರಿಸಿಕೊಂಡ ಅನುಭವಿ ಅಂಕಿತಾ ಟೈಬ್ರೇಕರ್‌ನಲ್ಲಿ ಸೆಟ್ ಗೆದ್ದುಕೊಂಡರು. ಎರಡನೇ ಸೆಟ್ ಕೂಡ ಟೈಬ್ರೇಕರ್‌ಗೆ ಬೆಳೆಯಿತು.

ಅಂಕಿತಾ ಅವರು ಗುರುವಾರ ಎರಡನೇ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ತಾತ್ಯನಾ ಮರಿಯಾ ಎದುರು ಆಡಲಿದ್ದಾರೆ. ಜರ್ಮನಿಯ ಮರಿಯಾ 6–4, 7–5 ರಿಂದ ಕ್ರೊವೇಷ್ಯಾದ ಪೆಟ್ರಾ ಮರ್ಸಿಂಕೊ ಅವರನ್ನು ಹಿಮ್ಮೆಟ್ಟಿಸಿದರು. ವೈಲ್ಡ್ ಕಾರ್ಡ್ ಪ್ರವೇಶ ಪಡೆದಿರುವ, ಭಾರತದ ಎರಡನೇ ಉತ್ತಮ ಆಟಗಾರ್ತಿ ಸಹಜಾ ಯಮಲಪಲ್ಲಿ ಇನ್ನೊಂದು ಪಂದ್ಯದಲ್ಲಿ 6–3, 3–6, 6–0 ಯಿಂದ ಬ್ರಿಟನ್‌ನ ಯುರಿಕೊ ಲಿಲಿ ಮಿಯಾಝಾಕಿ ಅವರನ್ನು ಸೋಲಿಸಿದರು. ಈ ಪಂದ್ಯ ಎರಡೂಕಾಲು ಗಂಟೆ ನಡೆಯಿತು.

ಬ್ರೆಂಡಾ ನಿವೃತ್ತಿ: 2023ರ ಚಾಂಪಿಯನ್ ಬ್ರೆಂಡಾ ಫ್ರುಹಿರ್ಟೊವಾ (ಝೆಕ್ ಗಣರಾಜ್ಯ) ಅವರು ಬೆನ್ನು ನೋವಿನಿಂದಾಗಿ ನಾಲ್ಕನೇ ಶ್ರೇಯಾಂಕದ ಮರಿಯಾ ಟಿಮೊಫೀವಾ ಅವರಿಗೆ ಪಂದ್ಯ ಬಿಟ್ಟುಕೊಟ್ಟರು. ಮರಿಯಾ ಆಗ 3–4ರಲ್ಲಿ ಹಿಂದಿದ್ದರು. ಮಂಗಳವಾರ ಡಬಲ್ಸ್ ಆಡುವಾಗಲೂ ಬ್ರೆಂಡಾ ಅವರಿಗೆ ಬೆನ್ನುನೋವಿನ ಸಮಸ್ಯೆ ಎದುರಾಗಿತ್ತು. ಟಿಮೊಫೀವಾ ಮುಂದಿನ ಪಂದ್ಯದಲ್ಲಿ ಭಾರತದ ಸಹಜಾ ಅವರನ್ನು ಎದುರಿಸಲಿದ್ದಾರೆ.



ಅಂಕಿತಾ ರೈನಾ ಚಿತ್ರ: ಪುಷ್ಕರ್ ವಿ.

ಅಗರವಾಲ್ ಪಡೆಗೆ ಗಿಲ್ ಸವಾಲು

ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯ ಇಂದಿನಿಂದ: ಕರ್ನಾಟಕ–ಪಂಜಾಬ್ ಮುಖಾಮುಖಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಮುಂದಿನ ತಿಂಗಳು ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಭಾರತ ತಂಡದ ಉಪನಾಯಕರಾಗಿರುವ ಶುಭಮನ್ ಗಿಲ್ ಅವರಿಗೆ ಕರ್ನಾಟಕದ ಬೌಲರ್‌ಗಳು ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾಗಲಿರುವ ರಣಜಿ ಟ್ರೋಫಿ ಟೂರ್ನಿಯ ಆರನೇ ಸುತ್ತಿನ ಪಂದ್ಯದಲ್ಲಿ ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ಮತ್ತು ಗಿಲ್ ಪ್ರತಿನಿಧಿಸಲಿರುವ ಪಂಜಾಬ್ ಮುಖಾಮುಖಿಯಾಗಲಿವೆ. ಈಚೆಗೆ ಆಸ್ಟ್ರೇಲಿಯಾ ಎದುರಿನ ಟೆಸ್ಟ್ ಸರಣಿಯಲ್ಲಿ ವೈಫಲ್ಯ ಅನುಭವಿಸಿ ಟೀಕೆಗಳಿಗೆ ಗುರಿಯಾಗಿರುವ ಗಿಲ್ ತಮ್ಮ ಬ್ಯಾಟಿಂಗ್ ಲಯ ಕಂಡುಕೊಳ್ಳುವ ಛಲದಲ್ಲಿದ್ದಾರೆ. ಭಾರತ ತಂಡದ ಆಟಗಾರರು ಬಿಡುವು ಲಭಿಸಿದಾಗ ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ಆಡುವುದನ್ನು ಬಿಸಿಸಿಐ ಕಡ್ಡಾಯ ಮಾಡಿದೆ. ಆದ್ದರಿಂದ ಗಿಲ್, ರಣಜಿ ಟೂರ್ನಿಯಲ್ಲಿ ಉಳಿದಿರುವ ಎರಡೂ ಪಂದ್ಯಗಳಲ್ಲಿ ಕಣಕ್ಕಿಳಿಯಲಿದ್ದಾರೆ.

ಇದೆಲ್ಲದರೊಂದಿಗೆ ಮಯಂಕ್ ಪಡೆಗೆ ನಾಕೌಟ್ ಪ್ರವೇಶಿಸಲು ಇರುವ ಸಣ್ಣ ಅವಕಾಶವನ್ನು ಬಳಸಿಕೊಳ್ಳುವ ಕಠಿಣ ಸವಾಲು ಕೂಡ ಇದೆ. ಮೊದಲ ಹಂತದಲ್ಲಿ ಕರ್ನಾಟಕ ತಂಡವು 5 ಪಂದ್ಯಗಳಿಂದ 12 ಅಂಕ ಗಳಿಸಿ, ನಾಲ್ಕನೇ ಸ್ಥಾನದಲ್ಲಿದೆ.

ಪಂಜಾಬ್ ತಂಡವು 11 ಅಂಕಗಳೊಂದಿಗೆ 5ನೇ ಸ್ಥಾನದಲ್ಲಿದೆ. ಕ್ವಾರ್ಟರ್‌ಫೈನಲ್ಸ್ ವೇಶಿಸಬೇಕಾದರೆ ಉತ್ತಮ ರನ್ ರೇಟ್‌ನೊಂದಿಗೆ ಎರಡೂ ಪಂದ್ಯಗಳನ್ನು ಗೆದ್ದು ಪೂರ್ಣ ಅಂಕಗಳನ್ನು ಬುಟ್ಟಿಗೆ ಹಾಕಿಕೊಳ್ಳಬೇಕು. ವಿಜಯ್ ಹಜಾರೆ ಟೂರ್ನಿಯಲ್ಲಿ ತಂಡಸ್ಫೂರ್ತಿಯೊಂದಿಗೆ ಆಡಿ ಪ್ರಶಸ್ತಿ ಗೆದ್ದಿದೆ. ಅದೇ ರೀತಿ ಇಲ್ಲಿಯೂ ಆಡಿದರೆ ಜಯ ಸಾಧ್ಯವಾಗಬಹುದು.

ಉಳಿದಿರುವ ಎರಡೂ ಪಂದ್ಯಗಳೂ ಬೆಂಗಳೂರಿನಲ್ಲಿಯೇ ನಡೆಯಲಿರುವುದು ಕರ್ನಾಟಕಕ್ಕೆ ಒಳ್ಳೆಯ ಸಂಗತಿ. ಪಂಜಾಬ್ ತಂಡದಲ್ಲಿ ಅಬ್ಬರದ ಬ್ಯಾಟರ್ ಅಭಿಷೇಕ್ ಶರ್ಮಾ ಮತ್ತು ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರಿಲ್ಲ. ಇದು ಪಂಜಾಬ್ ಬಲವನ್ನು ಸ್ವಲ್ಪ ಕುಂದಿಸಿದೆ. ಏಕದಿನ ಮಾದರಿಯ ದೇಶಿ ಟೂರ್ನಿಯಲ್ಲಿ 600ಕ್ಕೂ ಹೆಚ್ಚು ರನ್ ಗಳಿಸಿರುವ ಮಯಂಕ್, ಶತಕಗಳನ್ನು ಸಿಡಿಸಿ ಉತ್ತಮ ಲಯದಲ್ಲಿರುವ ದೇವದತ್ತ ಪಡಿಕ್ಕಲ್, ಕೆ.ಎಲ್. ಶ್ರೀಜಿತ್, ಸ್ಮರಣ್ ರವಿಚಂದ್ರನ್, ಮಧ್ಯಮಕ್ರಮಾಂಕದ ಶಕ್ತಿಯಾಗಿರುವ ಅಭಿನವ್ ಮನೋಹರ್ ಅವರು ತಮ್ಮ ಲಯವನ್ನು ಇಲ್ಲಿಯೂ ಮುಂದುವರಿಸಿದರೆ ತಂಡಕ್ಕೆ ಬಲ ಹೆಚ್ಚಲಿದೆ.

ವೇಗಿ ಪ್ರಸಿದ್ಧಕೃಷ್ಣ, ರಣಜಿ ಟೂರ್ನಿಯ ಮೊದಲಾರ್ಧದಲ್ಲಿ ಉತ್ತಮವಾಗಿ ಆಡಿದ್ದ ವಾಸುಕಿ ಕೌಶಿಕ್ ಅವರ ಮೇಲೆ ವಿಶ್ವಾಸವಿಡಬಹುದು. ವಿದ್ಯಾಧರ್ ಪಾಟೀಲ, ಎಡಗೈ ವೇಗಿ ಅಭಿಲಾಷ್ ಶೆಟ್ಟಿ ಅವರಲ್ಲಿ ಒಬ್ಬರಿಗೆ ಸ್ಥಾನ ಲಭಿಸಬಹುದು. ಸ್ಪಿನ್ ಆಲ್‌ರೌಂಡರ್ ಶ್ರೇಯಸ್ ಗೋಪಾಲ್, ಹಾರ್ದಿಕ್ ರಾಜ್ ಕೂಡ ತಂಡಕ್ಕೆ ಉಪಯುಕ್ತ ಕಾಣಿಕೆ ನೀಡಬಲ್ಲ ಆಟಗಾರರು.

ಈ ಪಂದ್ಯವು ಪಂಜಾಬ್ ತಂಡಕ್ಕೂ ಮುಖ್ಯವಾಗಿದೆ. ಆತಿಥೇಯರಿಗೆ ಕಠಿಣ ಪೈಪೋಟಿಯೊಡ್ಡಲೂ ಸಿದ್ಧವಾಗಿದೆ. ಗಿಲ್ ಅವರೊಂದಿಗೆ ಅನ್ಮೋಲ್‌ಪ್ರೀತ್ ಸಿಂಗ್, ಜಸ್ಕರಣ್‌ವೀರ್ ಪಾಲ್, ಸಲಿಲ್ ಅರೋರಾ, ಸನ್ವೀರ್ ಸಿಂಗ್ ಅವರ ಬ್ಯಾಟಿಂಗ್ ಮೇಲೆ ತಂಡವು ಹೆಚ್ಚು ಅವಲಂಬಿತವಾಗಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30



ನಾಯಕ ಮಯಂಕ್ ಅಗರವಾಲ್
ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

ರಣಜಿ ಕಣದಲ್ಲಿ ರೋಹಿತ್, ರಿಷಭ್

ರಣಜಿ ಟೂರ್ನಿಯ ಎರಡನೇ ಹಂತದ ಪಂದ್ಯಗಳಲ್ಲಿ ಖ್ಯಾತನಾಮ ಅಟಗಾರರು ಕಣಕ್ಕಿಳಿಯುತ್ತಿದ್ದಾರೆ. ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮುಂಬೈ ತಂಡದಲ್ಲಿ ಆಡುತ್ತಿದ್ದಾರೆ. ಇನ್ನೊಂದೆಡೆ ರಿಷಭ್ ಪಂತ್ ದೆಹಲಿ ತಂಡದಲ್ಲಿ ಹಾಗೂ ಶುಭಮನ್ ಗಿಲ್ ಪಂಜಾಬ್ ತಂಡದಲ್ಲಿ ಕಣಕ್ಕಿಳಿಯುತ್ತಿದ್ದಾರೆ.

ಟೆಸ್ಟ್ ಪರಿಣತ ಚೇತೇಶ್ವರ್ ಪೂಜಾರ ಮತ್ತು ಆಲ್‌ರೌಂಡರ್ ರವೀಂದ್ರ ಜಡೇಜ ಕಣಕ್ಕಿಳಿಯುತ್ತಿದ್ದಾರೆ. ಈಚೆಗೆ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ವಿದರ್ಭ ತಂಡದ ಕರುಣ್ ನಾಯರ್ ಅವರು ಇಲ್ಲಿಯೂ ತಮ್ಮ ರನ್ ಬೇಟೆ ಮುಂದುವರಿಸುವ ಛಲದಲ್ಲಿದ್ದಾರೆ.

ದೆಹಲಿ: ಬಿರುಸು ಪಡೆದ ಪ್ರಚಾರ • 'ಮಧ್ಯಮ ವರ್ಗ ತೆರಿಗೆ ಭಯೋತ್ಪಾದನೆಯ ಬಲಿಪಶು'

ಮಧ್ಯಮ ವರ್ಗದ ಏಳಿಗೆಗೆ 7 ಸಲಹೆ

ನವದೆಹಲಿ (ಪಿಟಿಐ): 'ಮಧ್ಯಮ ವರ್ಗದ ಜನರು 'ತೆರಿಗೆ ಭಯೋತ್ಪಾದನೆ'ಯ ಬಲಿಪಶುಗಳು'. ಇವರನ್ನು ಸರ್ಕಾರಗಳು ಕಡೆಗಣಿಸಿವೆ' ಎಂದು ಹೇಳಿರುವ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್, ಈ ವರ್ಗದವರ ಕಲ್ಯಾಣಕ್ಕಾಗಿ ಏಳು ಹಕ್ಕೊತ್ತಾಯಗಳಿರುವ 'ಪ್ರಣಾಳಿಕೆ' ಬಿಡುಗಡೆ ಮಾಡಿದ್ದಾರೆ.

ಬುಧವಾರ ಈ ಕುರಿತು ವಿಡಿಯೊ ಸಂದೇಶ ನೀಡಿರುವ ಕೇಜ್ರಿವಾಲ್ ಅವರು, 'ಮಧ್ಯಮ ವರ್ಗದವರು ದೇಶದ ಆರ್ಥಿಕತೆಯ ನಿಜವಾದ ಶಕ್ತಿ. ಆದರೆ, ವರ್ಷಗಳಿಂದ ಕೇವಲ ತೆರಿಗೆ ಉದ್ದೇಶಕ್ಕಾಗಿ ಶೋಷಣೆ ಮಾಡಲಾಗುತ್ತಿದೆ' ಎಂದು ಹೇಳಿದ್ದಾರೆ.

ಮಧ್ಯಮ ವರ್ಗದವರ 'ಏಳಿಗೆ'ಗಾಗಿ ಏಳು ಅಂಶಗಳನ್ನು ಪ್ರಕಟಿಸಿದ ಅವರು, ರಾಜಕೀಯ ಪಕ್ಷಗಳ ಹಿಂದಿನ ವರ್ಷಗಳಲ್ಲಿನ ಆಡಳಿತ ವೈಖರಿ ವಿರೋಧಿಸಿ ವಾಗ್ದಾಳಿ ನಡೆಸಿದರು.

ಸ್ವಾತಂತ್ರ್ಯಾನಂತರ ಈ ಮಧ್ಯಮ ವರ್ಗದವರಲ್ಲಿ ಗುಲಾಮಗಿರಿಯ ಮನಃಸ್ಥಿತಿ ಮೂಡುವಂತೆ ಈ ಸರ್ಕಾರಗಳು ಮಾಡಿವೆ. ಸಂಸತ್ ಅಧಿವೇಶನದಲ್ಲಿ ಈ ವರ್ಗದವರ ಪರ ಎಎಪಿ ಸಂಸದರು ಧ್ವನಿ ಎತ್ತಬೇಕು. ಈ ಅಂಶ ರಾಜಕೀಯ ಪಕ್ಷಗಳ ಆದ್ಯತೆಯ ಕೇಂದ್ರವಾಗಬೇಕು ಎಂದು ಪ್ರತಿಪಾದಿಸಿದ್ದಾರೆ.

ದೆಹಲಿ ವಿಧಾನಸಭೆ ಚುನಾವಣೆಗೆ ಕೆಲವೇ ದಿನಗಳು ಇರುವಾಗ ಈ ಘೋಷಣೆ ಹೊರಬಿದ್ದಿದೆ. ದೆಹಲಿ ವಿಧಾನಸಭೆಗೆ ಫೆ. 5ರಂದು ಚುನಾವಣೆ ನಡೆಯಲಿದೆ.

ಚುನಾವಣಾ ಆಯೋಗಕ್ಕೆ ಆತಿಶಿ ದೂರು: ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ತಾವು ಸ್ಪರ್ಧಿಸುತ್ತಿರುವ ಕಾಲ್ಕಾಜಿ ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರು ತಮ್ಮ ಪಕ್ಷದವರಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಮುಖ್ಯಮಂತ್ರಿಯೂ ಆಗಿರುವ ಆತಿಶಿ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ. ಕಿರುಕುಳದ ಏಳು ಪ್ರಕರಣಗಳನ್ನು ಅವರು ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ.



ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಮುಖ್ಯಮಂತ್ರಿ ಆತಿಶಿ ಉಪಸ್ಥಿತರಿದ್ದರು —ಪಿಟಿಐ ಚಿತ್ರ

ಕೇಜ್ರಿವಾಲ್ ಹೇಳಿದ ಏಳು ಅಂಶಗಳು...

- ಶಿಕ್ಷಣ ಕ್ಷೇತ್ರದ ಅನುದಾನವನ್ನು ಈಗಿನ ಶೇ 2ರಿಂದ ಶೇ 10ಕ್ಕೆ ಏರಿಸಬೇಕು
- ಗುಣಮಟ್ಟದ ಉನ್ನತ ಶಿಕ್ಷಣ ಸಿಗುವಂತೆ ಸಬ್ಸಿಡಿ ಸೌಲಭ್ಯ ಮತ್ತು ವಿದ್ಯಾರ್ಥಿವೇತನ ನೀಡಬೇಕು
- ಜಿಡಿಪಿಯ ಶೇ 10ರಷ್ಟು ಆರೋಗ್ಯ ಕ್ಷೇತ್ರಕ್ಕೆ ವ್ಯಯಿಸಬೇಕು. ಆರೋಗ್ಯ ವಿಮೆ ಪ್ರೀಮಿಯಂ ಮೇಲೆ ತೆರಿಗೆ ಕೈಬಿಡಬೇಕು
- ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು ಈಗಿನ ₹ 7 ಲಕ್ಷದಿಂದ ₹ 10 ಲಕ್ಷಕ್ಕೆ ಏರಿಸಬೇಕು
- ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿ ಕೈಬಿಡಬೇಕು
- ನಿವೃತ್ತಿ ಬಳಿಕ ಖಾಸಗಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಸೇವೆ ಸಿಗುವಂತೆ ಉಚಿತ ಆರೋಗ್ಯ ವಿಮೆ ಕಲ್ಪಿಸಬೇಕು
- ರೈಲುಗಳಲ್ಲಿ ಹಿರಿಯ ನಾಗರಿಕರಿಗೆ ಶೇ 50ರ ಪ್ರಯಾಣದರ ರಿಯಾಯಿತಿ ಮರುಜಾರಿಗೊಳಿಸಬೇಕು

'ಎಎಪಿ, ಕಾಂಗ್ರೆಸ್‌ನಿಂದ ವಂಚನೆ'

ನವದೆಹಲಿ (ಪಿಟಿಐ): 'ಎಎಪಿ ಒಂದು ವಿಪತ್ತು. ದೆಹಲಿಯ ನಾಗರಿಕರು ಈಗಾಗಲೇ ಎಎಪಿ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದಾರೆ.

ದೆಹಲಿಯ ಬಿಜೆಪಿ ಸದಸ್ಯರ ಜೊತೆಗೆ ನಡೆದ ಆನ್‌ಲೈನ್ ಸಂವಾದಲ್ಲಿ ಅವರು, ಪಕ್ಷವು ವಿಧಾನಸಭೆ ಚುನಾವಣೆಯಲ್ಲಿ ಶೇ 50ಕ್ಕೂ ಅಧಿಕ ಸ್ಥಾನ ಗೆಲ್ಲುವ ಗುರಿ ಹೊಂದಬೇಕು ಎಂದು ಸಲಹೆ ನೀಡಿದರು.

₹100 ಕೋಟಿ ಮಾನನಷ್ಟ ಮೊಕದ್ದಮೆ

ನವದೆಹಲಿ: ಅರವಿಂದ ಕೇಜ್ರಿವಾಲ್ ಮತ್ತು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ವಿರುದ್ಧ ಬಿಜೆಪಿ ಸಂಸದ ಪರ್ವೇಶ್ ವರ್ಮಾ ₹100 ಕೋಟಿಗೆ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ.

'ತಮ್ಮ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ' ಎಂದಿದ್ದಾರೆ. ನಾನು ಪ್ರಕರಣ ಗೆದ್ದರೆ ನವದೆಹಲಿ ಕ್ಷೇತ್ರದ ಅಭಿವೃದ್ಧಿಗೆ ಆ ಹಣ ಬಳಸುತ್ತೇನೆ ಎಂದು ವರ್ಮಾ ಹೇಳಿದ್ದಾರೆ.

ಪಂಜಾಬ್ ನೋಂದಣಿಯಿರುವ ಸಾವಿರಾರು ವಾಹನಗಳು ದೆಹಲಿಗೆ ಬರುತ್ತಿವೆ. ಸಚಿವರು, ಶಾಸಕರು, ಮುಖಂಡರು ಬರುತ್ತಿದ್ದು, ಎಎಪಿ ಪರ ಪ್ರಚಾರ ಮಾಡುತ್ತಿದ್ದಾರೆ. ಇದಕ್ಕೆ ಆಕ್ಷೇಪವಿಲ್ಲ. ಆದರೆ, ಚೀನಾ ಉತ್ಪಾದಿತ ಸಿಸಿಟಿವಿ ಕ್ಯಾಮೆರಾ, ಮದ್ಯ, ಹಣ ನೀಡಿ ಪ್ರಚಾರ ನಡೆಸುತ್ತಿದ್ದಾರೆ ಎಂದು ವರ್ಮಾ ಆರೋಪಿಸಿದರು.

'ಪಂಜಾಬಿಗಳು ದೇಶಕ್ಕಿರುವ ಬೆದರಿಕೆ' ಎಂದು ಹೇಳಿದ್ದೇನೆ ಎಂದು ಕೇಜ್ರಿವಾಲ್ ಹೇಳಿದ್ದಾರೆ. ಆದರೆ, ಸಿಖ್ ಸಮುದಾಯಕ್ಕೆ ನನ್ನ ಕೊಡುಗೆ ಏನೆಂದು ಹೇಳಿಕೊಳ್ಳುವ ಅಗತ್ಯವಿಲ್ಲ' ಎಂದರು.

ಬಿಜೆಪಿಯ ಸಣ್ಣ ಮಗುವೊಂದು ಪಂಜಾಬಿಗರಿಗೆ ಸವಾಲು ಒಡ್ಡುತ್ತಿದೆ ಎಂದು ವರ್ಮಾ ಹೇಳಿಕೆಗೆ ಕೇಜ್ರಿವಾಲ್ ಪ್ರತಿಕ್ರಿಯಿಸಿದ್ದಾರೆ. ಪಂಜಾಬಿಗರ ಅಪಮಾನಿಸಿದ ಹೇಳಿಕೆಗಾಗಿ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದ್ದಾರೆ.

ಸಂಭಲ್: ಉತ್ಖನನ ಆರಂಭ

ಸಂಭಲ್ (ಪಿಟಿಐ): ಸಂಭಲ್ ಆಡಳಿತ ಮಂಡಳಿಯು ಶಾಹಿ ಜಾಮಾ ಮಸೀದಿಯ ಸಮೀಪ ಪತ್ತೆಯಾಗಿರುವ ಪುರಾತನ ಬಾವಿಯ ಉತ್ಖನನವನ್ನು ಬುಧವಾರ ಆರಂಭಿಸಿದೆ. ವಿವಾದಿತ ಶಾಹಿ ಜಾಮಾ ಮಸೀದಿ–ಹರಿಹರ ದೇಗುಲದಿಂದ 50 ಮೀಟರ್ ದೂರದಲ್ಲಿ ಬಾವಿ ಪತ್ತೆಯಾಗಿತ್ತು. ಈ ಪ್ರದೇಶದಲ್ಲಿರುವ 19 ಪುರಾತನ ಬಾವಿಗಳಲ್ಲಿ ಇದೂ ಒಂದು ಎಂದು ಭಾವಿಸಲಾಗಿತ್ತು. ಬಾವಿಗೆ ಐತಿಹಾಸಿಕ ಮತ್ತು ಧಾರ್ಮಿಕ ಮಹತ್ವ ಇದೆ ಎಂದು ಸ್ಥಳೀಯರು ಹೇಳಿದ್ದರು.

ಕುಂಭಮೇಳಕ್ಕೆ ಮೋದಿ ಫೆ.5ರಂದು ಭೇಟಿ?

ಪ್ರಜಾವಾಣಿ ವಾರ್ತೆ

ಲಖನೌ: ಪ್ರಧಾನಿ ನರೇಂದ್ರ ಮೋದಿ ಅವರು ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ಫೆ.5ರಂದು ಭೇಟಿ ನೀಡಿ, 'ಸಂಗಮ'ದಲ್ಲಿ ಪವಿತ್ರ ಸ್ನಾನ ಮಾಡುವ ಸಾಧ್ಯತೆ ಇದೆ.

ಪ್ರಧಾನಿ ಅವರ ಭೇಟಿ ಕಾರ್ಯಕ್ರಮವನ್ನು ಇನ್ನಷ್ಟೇ ಅಂತಿಮಗೊಳಿಸಬೇಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಫೆ.10ರಂದು ಮಹಾಕುಂಭಕ್ಕೆ ಭೇಟಿ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಫೆ.1ರಂದು ಸಂಗಮದಲ್ಲಿ ಪವಿತ್ರ ಸ್ನಾನ ಮಾಡುವ ಸಾಧ್ಯತೆ ಇದೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರೂ ಮಹಾ ಕುಂಭಮೇಳಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ. ಈ ಬಗ್ಗೆ ಇನ್ನೂ ಅಂತಿಮ ನಿರ್ಧಾರ ಆಗಿಲ್ಲ ಎಂದು ಪಕ್ಷದ ಮೂಲಗಳು ತಿಳಿಸಿವೆ.


ರೈಲಿನಿಂದ ಹಾರಿದ ಪ್ರಯಾಣಿಕರು: 12 ಸಾವು

ಒಂದನೇ ಪುಟದಿಂದ...

'ತಕ್ಷಣವೇ ಯಾರೋ ಒಬ್ಬರು ರೈಲಿನ ಚೈನ್ ಎಳೆದಿದ್ದಾರೆ' ಎಂದು ಕೇಂದ್ರೀಯ ರೈಲ್ವೆ ವಿಭಾಗದ ಅಧಿಕಾರಿ ಮಾಹಿತಿ ನೀಡಿದರು. ಸಾವಿನ ಸಂಖ್ಯೆಯ ಕುರಿತು ರೈಲ್ವೆ ಅಧಿಕಾರಿಗಳು ನಿಖರ ಮಾಹಿತಿ ನೀಡಿಲ್ಲ. '12 ಮೃತ ದೇಹಗಳನ್ನು ಹತ್ತಿರ ಸರ್ಕಾರಿ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. 6–7 ಮಂದಿಗೆ ಗಾಯಗಳಾಗಿವೆ. ಗಾಯಗಳು ಗಂಭೀರ ಸ್ವರೂಪದ್ದಲ್ಲ. ಇವರಿಗೆ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಪೊಲೀಸ್ ಮಹಾನಿರ್ದೇಶಕ (ವಿಶೇಷ) ದತ್ತಾತ್ರೇಯ ಕರಳೆ ಹೇಳಿದರು.

ಘಟನಾ ಸ್ಥಳದ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಅಲ್ಲಲ್ಲಿ ಮೃತದೇಹಗಳು ಬಿದ್ದಿರುವ, ದೇಹದ ಭಾಗಗಳು ಚೆಲ್ಲಾಪಿಲ್ಲಿಯಾಗಿರುವ ದೃಶ್ಯಗಳು ವಿಡಿಯೊಗಳಲ್ಲಿವೆ. ಘಟನೆ ನಡೆದ ಕೆಲವೇ ಹೊತ್ತಿನಲ್ಲಿ ಎರಡೂ ರೈಲುಗಳು ತಮ್ಮ ಸಂಚಾರವನ್ನು ಪುನರಾರಂಭಿಸಿದವು.

ಆಗಿದ್ದೇನು?: 'ಪುಷ್ಪಕ್ ಎಕ್ಸ್‌ಪ್ರೆಸ್‌ನ ಜನರಲ್ ಬೋಗಿಯೊಂದರ ಆಕ್ಸೆಲ್ ತೀವ್ರವಾಗಿ ಬಿಸಿಯಾಗಿತ್ತು. ಆದ್ದರಿಂದ ಆಕ್ಸೆಲ್‌ನಲ್ಲಿ ಕಿಡಿ ಹೊತ್ತಿಕೊಂಡಿತು. ಇದರಿಂದ ಹೊಗೆ ಎದ್ದಿತು. ಹೊಗೆ ನೋಡುತ್ತಿದ್ದಂತೆಯೇ ಜನರು ಭೀತರಾದರು. ಯಾರೋ ಒಬ್ಬರು ರೈಲಿನ ಚೈನ್ ಎಳೆದರು. ಕೆಲವರು ರೈಲಿನಿಂದ ಹಾರಿ, ಪಕ್ಕದ ಹಳಿಯ ಮೇಲಿದ್ದರು. ಇದೇ ವೇಳೆ ಪುಷ್ಪಕ್ ಎಕ್ಸ್‌ಪ್ರೆಸ್‌ಗೆ ವಿರುದ್ಧ ದಿಕ್ಕಿನಲ್ಲಿ ಸಂಚರಿಸುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್‌ಗೆ ಸಿಕ್ಕಿ ಹಲವರು ಮೃತಪಟ್ಟರು' ಎಂದು ರೈಲ್ವೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.



ಘಟನಾ ಸ್ಥಳದಲ್ಲಿ ಜನರು ಜಮಾಯಿಸಿದ್ದರು —ಪಿಟಿಐ ಚಿತ್ರ

ರಾಯ್‌ಗೆ ಗಲ್ಲು: ಸಿಬಿಐ ಮೇಲ್ಮನವಿ?

ನವದೆಹಲಿ (ಪಿಟಿಐ): ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಆಕೆಯ ಕೊಲೆ ಪ್ರಕರಣ ಅಪರಾಧಿ ಸಂಜಯ್ ರಾಯ್‌ಗೆ ಗಲ್ಲು ಶಿಕ್ಷೆ ವಿಧಿಸುವಂತೆ ಕೋರಿ ಸಿಬಿಐ, ಕಲ್ಕತ್ತ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಕೃತ್ಯ ಎಸಗಿರುವುದು ಸಾಬೀತಾದ ಹಿನ್ನೆಲೆಯಲ್ಲಿ ವಿಚಾರಣಾ ನ್ಯಾಯಾಲಯವು ಅಪರಾಧಿ ಜೀವನ ಪೂರ್ತಿ ಜೈಲಿನಲ್ಲಿ ಕಳೆಯುವಂತೆ ಜೀವಾವಧಿ ಶಿಕ್ಷೆ ವಿಧಿಸಿತ್ತು.

ಈ ಪ್ರಕರಣ ಸಂಬಂಧ ಕಾನೂನು ಸಲಹೆ ಪಡೆಯಲಾಗಿದ್ದು, ಇದು ಮರಣದಂಡನೆಗೆ ಅರ್ಹವಾದ ಪ್ರಕರಣ. 'ಅಪರೂಪದಲ್ಲಿ ಅಪರೂಪದ್ದೆಂದು ವರ್ಗೀಕರಿಸಬಹುದಾಗಿದೆ ಎಂದು ಕಾನೂನು ಪರಿಣತರು ಅಭಿಪ್ರಾಯ ಪಟ್ಟಿದ್ದಾರೆ. ಹಾಗಾಗಿ, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಜೈಲಿನಲ್ಲಿ ರಾಯ್‌ಗೆ ಮಾಲಿ ಕೆಲಸ: ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ–ಕೊಲೆ ಪ್ರಕರಣದ ಅಪರಾಧಿ ಸಂಜಯ್ ರಾಯ್‌ನಿಂದ ಅಲಿಪುರದ ಕೇಂದ್ರ ಗೃಹದಲ್ಲಿ ತೋಟದ ಮಾಲಿ ಕೆಲಸವನ್ನು ಮಾಡಿಸುವ ಸಾಧ್ಯತೆಯಿದೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಕೋಲ್ಕತ್ತ ಪೊಲೀಸ್ ಇಲಾಖೆಯಲ್ಲಿ ಮಾಜಿ ನಾಗರಿಕ ಸ್ವಯಂಸೇವಕನಾಗಿದ್ದ ರಾಯ್‌ನನ್ನು ಟೈಲರಿಂಗ್, ಮರಗೆಲಸ ಅಥವಾ ಅಲ್ಯೂಮಿನಿಯಂ ಪಾತ್ರೆಗಳ ತಯಾರಿಕೆಯಂತಹ ಇತರ ಕೆಲವು ಉದ್ಯೋಗಗಳಲ್ಲಿ ತೊಡಗಿಸುವ ಮೊದಲು ತರಬೇತಿ ನೀಡಲಾಗುವುದು ಎಂದು ಅವರು ಹೇಳಿದರು.

'ಅಪರಾಧಿ ರಾಯ್ ಕೌಶಲರಹಿತ ಕಾರ್ಮಿಕನಾಗಿದ್ದು, ₹105 ದಿನಗೂಲಿ ಪಡೆಯಲಿದ್ದಾನೆ. ನಾವು ಅತನನ್ನು ಕಠಿಣ ಪರಿಶ್ರಮದ ಕೆಲಸದಲ್ಲಿ ತೊಡಗಿಸಬೇಕಾಗಿದೆ. ಸದ್ಯಕ್ಕೆ ತೋಟಗಾರಿಕೆ ಕೆಲಸದಲ್ಲಿ ತೊಡಗಿಸಲಾಗುವುದು. ಇದು ಒಂದೆರಡು ದಿನಗಳಲ್ಲಿ ಆರಂಭವಾಗಲಿದೆ' ಎಂದು ಕಾರಾಗೃಹದ ಅಧಿಕಾರಿ ತಿಳಿಸಿದ್ದಾರೆ.

ಈಜು: ಚಿಂತನ್, ರಚನಾ ಚಾಂಪಿಯನ್ಸ್

ಕರ್ನಾಟಕ ಕ್ರೀಡಾಕೂಟ: 6 ಚಿನ್ನ ಗೆದ್ದ ಚಿಂತನ್, 4 ಚಿನ್ನ ಗೆದ್ದ ರಚನಾ

- ನವೀನ್ ಕುಮಾರ್ ಜಿ
- ಪ್ರವೀಣ್ ಕುಮಾರ್ ಪಿ.ವಿ

ಮಂಗಳೂರು/ ಉಡುಪಿ: ಮಂಗಳೂರಿನ ಚಿಂತನ್ ಎಸ್ ಶೆಟ್ಟಿ ಹಾಗೂ ಎಸ್.ಆರ್. ರಚನಾ ಅವರು ಇಲ್ಲಿ ನಡೆಯುತ್ತಿರುವ ಕರ್ನಾಟಕ ಕ್ರೀಡಾಕೂಟದ ಈಜು ಸ್ಪರ್ಧೆಗಳಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದ ಚಾಂಪಿಯನ್ ಪಟ್ಟಕ್ಕೇರಿದರು. ಚಿಂತನ್ ಅವರು ಆರು ಚಿನ್ನ ಹಾಗೂ ಒಂದು ಬೆಳ್ಳಿ ಪದಕ ಜಯಿಸಿದರು. ರಚನಾ ಅವರು ನಾಲ್ಕು ಚಿನ್ನ ಹಾಗೂ ಮೂರು ಬೆಳ್ಳಿ ಪದಕ ಗೆದ್ದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಮತ್ತು ದಕ್ಷಿಣ ಕನ್ನಡ–ಉಡುಪಿ ಜಿಲ್ಲಾಡಳಿತವು ಮಂಗಳೂರಿನ ಎಮ್ಮೆಕೆರೆಯ ಅಂತರರಾಷ್ಟ್ರೀಯ ಈಜುಕೊಳದಲ್ಲಿ ಆಯೋಜಿಸಿದ್ದ ಈಜು ಸ್ಪರ್ಧೆಗಳಲ್ಲಿ ಚಿಂತನ್ ಶೆಟ್ಟಿ ಬುಧವಾರ ಪುರುಷರ 100 ಮೀ ಬಟರ್ ಫ್ಲೈ (58.47 ಸೆಕೆಂಡ್) ಮತ್ತು 200 ಮೀ ಮೆಡ್ಲೆ (2 ನಿ. 14.64 ಸೆಕೆಂಡ್) ಸ್ಪರ್ಧೆಗಳಲ್ಲಿ ಚಿನ್ನದ ಪದಕಗಳಿಗೆ ಮುತ್ತಿಕ್ಕಿದರು. ಈ ಕೂಟದ 100 ಮೀಟರ್ ಫ್ರೀ ಸ್ಟೈಲ್, 200 ಮೀ ಫ್ರೀ ಸ್ಟೈಲ್, 50 ಮೀ ಬಟರ್‌ಫ್ಲೈ ಹಾಗೂ 4X100 ಮೀ ಫ್ರೀಸ್ಟೈಲ್ ರಿಲೇ ಸ್ಪರ್ಧೆಗಳಲ್ಲಿ ಅವರು ಮಂಗಳವಾರ ಚಿನ್ನ ಗೆದ್ದಿದ್ದರು. ಪುರುಷರ 4X100 ಮೆಡ್ಲೆ ರಿಲೇಯಲ್ಲಿ ಮಂಗಳೂರು ಬಿ ತಂಡವು ಬೆಳ್ಳಿ ಗೆಲ್ಲುವಲ್ಲೂ ಚಿಂತನ್ ಶೆಟ್ಟಿ ಕೊಡುಗೆ ಇದೆ. ರಚನಾ ರಾವ್ ಅವರು ಮಹಿಳೆಯರ 50 ಮೀ ಬ್ರೆಸ್ಟ್ ಸ್ಟ್ರೋಕ್ (36.35 ಸೆಕೆಂಡ್) ಹಾಗೂ 50 ಮೀ ಫ್ರೀಸ್ಟೈಲ್ (29.27 ಸೆ) ಸ್ಪರ್ಧೆಗಳಲ್ಲಿ ಚಿನ್ನದ ಪದಕ ಗಳಿಸಿದರು. ಮಂಗಳವಾರ 100 ಮೀ ಬ್ರೆಸ್ಟ್ ಸ್ಟ್ರೋಕ್ ಮತ್ತು 50 ಮೀ ಬಟರ್ ಫ್ಲೈ ಸ್ಪರ್ಧೆಗಳಲ್ಲಿ ಚಿನ್ನ ಹಾಗೂ 100 ಮೀ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದಿದ್ದರು. ಅವರು ಮೂರು ರಿಲೇ ಸ್ಪರ್ಧೆಗಳಲ್ಲಿ ಬೆಳ್ಳಿ ಗೆದ್ದ ತಂಡದಲ್ಲಿದ್ದರು.



ಎಸ್‌ಆರ್‌ ರಚನಾ ರಾವ್



ಚಿಂತನ್ ಎಸ್‌ ಶೆಟ್ಟಿ

ಪ್ರಜಾವಾಣಿ ಚಿತ್ರ : ಫಕ್ರುದ್ದೀನ್ ಎಚ್

ಬ್ಯಾಡ್ಮಿಂಟನ್: ಜಿಲಾನಿಶ್ ಚಾಂಪಿಯನ್

ಉಡುಪಿಯ ಜಿಲಾನಿಶ್ ಆಶ್ಲೆ ಪಿಂಟೊ ಮತ್ತು ಮಂಗಳೂರಿನ ಟ್ರಿವಿಯಾ ಕ್ರೇಡಾ ವೇಗಸ್ ಅವರು ಮಂಗಳೂರಿನಲ್ಲಿ ನಡೆದ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಸಿಂಗಲ್ಸ್ ಮಹಿಳಾ ಸಿಂಗಲ್ಸ್‌ನಲ್ಲಿ ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು.

ಜಿಲಾನಿಶ್ ಅವರು ಫೈನಲ್ ಪಂದ್ಯದಲ್ಲಿ ಉಡುಪಿಯವರೇ ಆದ ಶೋಧನ್ ನಕ್ಷತ್ರಿ ವಿರುದ್ಧ 21–10 ಮತ್ತು 21–13 ರಲ್ಲಿ ಜಯಗಳಿಸಿದರು. ಬೆಂಗಳೂರಿನ ಯುವರಾಜ್ ಎಸ್. ಕಂಚಿನ ಪದಕ ಗೆದ್ದರು. ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಟ್ರಿವಿಯಾ ಅವರು ಬೆಂಗಳೂರಿನ ಆನಿಯಾ ಸುರೇಶ್ ವಿರುದ್ಧ 21-6, 21-11ರಲ್ಲಿ ಜಯಗಳಿಸಿದರು. ಮಂಗಳೂರಿನ ಅದಿತಿ ಆಚಾರ್ಯ ಕಂಚಿನ ಪದಕ ಗೆದ್ದರು.

ಫಲಿತಾಂಶಗಳು:

ಈಜು: ಪುರುಷರು: 200 ಮೀ. ಬ್ರೆಸ್ಟ್ ಸ್ಟ್ರೋಕ್: ಸೂರ್ಯ ಜೋಯಪ್ಪ ಒ.ಆರ್. (ಬೆಂಗಳೂರು ದಕ್ಷಿಣ)–1, ಕಾಲ: 2 ನಿ. 48.92 ಸೆ; ವರ್ಧನ್ ದೀಪಕ್ ರೈ (ದ.ಕ.)–2; ಪಾರ್ಥ ಪಿ.ಶೆಟ್ಟಿ (ಮಂಡ್ಯ)–3; 200 ಮೀ. ಬ್ಯಾಕ್ ಸ್ಟ್ರೋಕ್: ಧ್ಯಾನ್ ಎಂ (ಬೆಂಗಳೂರು)–1, ಕಾಲ: 2 ನಿ. 24.44 ಸೆ; ದಿಗಂತ್ ವಿ.ಎಸ್ (ದಕ್ಷಿಣ ಕನ್ನಡ)–2; ವಫಿ ಅಬ್ದುಲ್ ಹಕೀಂ (ದ.ಕ)–3; 100 ಮೀ ಬಟರ್ ಫ್ಲೈ: ಚಿಂತನ್ ಎಸ್. ಶೆಟ್ಟಿ, ಕಾಲ: 58.47 ಸೆ.; ಅಲೈಸ್ಟರ್ ಸ್ಯಾಮ್ಯುವೆಲ್ ರೇಗೊ (ಮಂಗಳೂರು)–2; ಅನ್ವಿತ್ ರೈ (ದ.ಕ.)–3; 4X100 ಮೆಡ್ಲೆ ರಿಲೇ: ಮಂಗಳೂರು ಎ, ಕಾಲ:4 ನಿ.26.67 ಸೆ.; ಮಂಗಳೂರು ಬಿ–2, ಬೆಂಗಳೂರು–3; 800 ಮೀ ಫ್ರೀಸ್ಟೈಲ್: ಧ್ರುವ ಬಿ (ಬೆಂಗಳೂರು)–1, ಕಾಲ: 9 ನಿ. 16.18 ಸೆ; ಧೋನೀಶ್ ಎನ್ (ಬೆಂಗಳೂರು)–2; ಸಚಿನ್ ವಿಶ್ವನಾಥ್ (ಬೆಂಗಳೂರು)–3; 200 ಮೀ ಮೆಡ್ಲೆ: ಚಿಂತನ್ ಶೆಟ್ಟಿ (ಮಂಗಳೂರು)–1, ಕಾಲ: 2 ನಿ 14.64 ಸೆ; ಸೂರ್ಯ ಜೋಯಪ್ಪ ಒ.ಆರ್. (ಬೆಂಗಳೂರು)–2; ಗ್ಯಾನ್ ಡಿ (ಮಂಗಳೂರು)–3; 400 ಮೀ ಫ್ರೀಸ್ಟೈಲ್: ಧೋನೀಶ್ ಎನ್ (ಬೆಂಗಳೂರು)–1, ಕಾಲ: 4ನಿ 30.44 ಸೆ; ಧ್ರುವ ಬಿ (ಬೆಂಗಳೂರು)–2; ಆರ್. ಅಮನ್ ರಾಜ್ (ಪುತ್ತೂರು)–3; 50 ಮೀ ಬ್ರೆಸ್ಟ್ ಸ್ಟ್ರೋಕ್: ಸೂರ್ಯ ಜೋಯಪ್ಪ ಒ.ಆರ್. (ಬೆಂಗಳೂರು ದಕ್ಷಿಣ), ಕಾಲ: 31.67 ಸೆ; ವರ್ಧನ್ ದೀಪಕ್ ರೈ (ಪುತ್ತೂರು)–2; ದಿಗಂತ್ ವಿ.ಎಸ್ (ಪುತ್ತೂರು)–3; 50 ಮೀ ಫ್ರೀಸ್ಟೈಲ್: ಧ್ಯಾನ್ ಎಂ (ಬೆಂಗಳೂರು)–1, ಕಾಲ: 4.71 ಸೆ; ಅವಿತ್ ರೈ (ಪುತ್ತೂರು)–2; ಧೋನೀಶ್ ಎನ್ (ವಿಜಯನಗರ)–3;

ಮಹಿಳೆಯರು: 200 ಮೀ ಬ್ರೆಸ್ಟ್ ಸ್ಟ್ರೋಕ್; ಪ್ರತೀಕ್ಷಾ ಎನ್.ಶೆಣೈ (ದ.ಕ.)–1, 3 ನಿ.9.81 ಸೆ; ರಿಯಾನ ಧೃತಿ ಫರ್ನಾಂಡಿಸ್ (ಮಂಗಳೂರು)–2; 800 ಮೀ ಫ್ರೀಸ್ಟೈಲ್: ನಮ್ರತಾ ಶೆಟ್ಟಿ (ದಕ್ಷಿಣ ಕನ್ನಡ)–1, 19 ನಿ. 16.23 ಸೆ.; 4X100 ಫ್ರೀ ಸ್ಟೈಲ್ ರಿಲೇ: ಮಂಗಳೂರು ಬಿ–1, ಕಾಲ: 5 ನಿ. 05.03 ಸೆ.; ಮಂಗಳೂರು ಎ–2; 200 ಮೀ ಮೆಡ್ಲೆ: ರಿಯಾನಾ ಧೃತಿ ಫರ್ನಾಂಡಿಸ್–1, ಕಾಲ: 2 ನಿ.45.64 ಸೆ; ತನ್ಮಯಿ ಧರ್ಮೇಶ್ (ಬೆಂಗಳೂರು)–2; ಕೃತಿಕಾ ಪಿ (ಬೆಂಗಳೂರು)–3; 400 ಫ್ರೀ ಸ್ಟೈಲ್: ಪೂರ್ವಿ ಎಂ (ದಕ್ಷಿಣಕನ್ನಡ)–1, ಕಾಲ: 5 ನಿ. 52.76 ಸೆ.; ಕೃತಿಕಾ (ಬೆಂಗಳೂರು)–2; ನಮ್ರತಾಶೆಟ್ಟಿ (ದಕ್ಷಿಣ ಕನ್ನಡ)–3; 50 ಮೀ ಬ್ರೆಸ್ಟ್ ಸ್ಟ್ರೋಕ್: ರಚನಾ ರಾವ್ (ಮಂಗಳೂರು), ಕಾಲ: 36.35 ಸೆ; ಪ್ರತೀಕ್ಷಾ ಎನ್. ಶೆಣೈ (ಪುತ್ತೂರು)–2; ರಿಯಾನಾ ಧೃತಿ ಫರ್ನಾಂಡಿಸ್ (ಮಂಗಳೂರು)–3; 50 ಮೀ ಫ್ರೀಸ್ಟೈಲ್: ರಚನಾ ರಾವ್ (ಮಂಗಳೂರು), ಕಾಲ: 29.27; ಪ್ರತೀಕ್ಷಾ ಎನ್.ಶೆಣೈ (ಪುತ್ತೂರು)–2; ಪೂರ್ವಿ ಎಂ.(ದ.ಕ.)–3.

ಅಥ್ಲೆಟಿಕ್ಸ್: ಪುರುಷರು: ಟ್ರಿಪಲ್ ಜಂಪ್: ಯಶಸ್ ಗೌಡ (ಮಂಡ್ಯ)–1, ದೂರ: 15.28 ಮೀ; ರಾಧಾಕೃಷ್ಣ (ಬೆಂಗಳೂರು ನಗರ)–2; ಅಬ್ದುಲ್ ಮುನಾಫ್ (ಬೆಂಗಳೂರು)–3; 1500 ಮೀ. ಓಟ: ವೈಭವ್ ಪಾಟೀಲ್ (ಬೆಂಗಳೂರು)–1, ಕಾಲ: 3ನಿ.55.42 ಸೆ., ಕಮಲ್ ಎಸ್. (ಬೆಂಗಳೂರು)–2, ಕಲ್ಯಾಣ್ ಜೆ.ಆರ್. (ಬೆಂಗಳೂರು)3; 400 ಮೀ.ಓಟ: ಶ್ರಿನಾಥ್ (ಬೆಂಗಳೂರು)–1, ಕಾಲ: 48.ನಿ.80 ಸೆ.; ದಯಾನಂದ (ಬೆಳಗಾವಿ)–2, ಭುವನ್ (ಬೆಂಗಳೂರು)–3; 3000 ಮೀ.ಸ್ಟಿಪಲ್ ಚೇಸ್: ನಾಗರಾಜ್ ವೆಂಕಟೇಶ್ ದಿವಟೆ (ಧಾರವಾಡ)–1, ಕಾಲ: 9 ನಿ.36.24ಸೆ:, ಪಟಪ್ಪ ಚಂದ್ರಪ್ಪ (ಧಾರವಾಡ)–2, ಭೀಮಾಶಂಕರ್ (ಯಾದಗಿರಿ)–3.

ಮಹಿಳೆಯರು: 1500 ಮೀ ಓಟ: ಸ್ಮಿತಾ ಡಿ.ಆರ್. (ಹಾಸನ)–1, ಕಾಲ: 4 ನಿ.55.98 ಸೆ., ರೇಖಾ ಬಸಪ್ಪ (ಬೆಳಗಾವಿ)–2, ಶಿಲ್ಪಾ (ಬೆಳಗಾವಿ)–3; ಹ್ಯಾಮರ್ ಥ್ರೋ: ಅಮ್ರೀನ್ (ದ.ಕ.)–1, ದೂರ: 44.20 ಮೀ., ನಿಶೆಲ್ ಡೆಲ್ವಿನಾ ಡಿಸೋಜ (ದ.ಕ.)–2, ಸ್ಪ್ರುಹಾ ನಾಯ್ಕ್ (ಬೆಳಗಾವಿ)–3; ಡಿಸ್ಕಸ್ ಥ್ರೋ: ಸುಷ್ಮಾ ಬಿ. (ದಕ್ಷಿಣ ಕನ್ನಡ)–1, ದೂರ: 42.63 ಮೀ, ಸುಷ್ಮಾ ಎಂ.ಎನ್. (ಮೈಸೂರು)–2, ಐಶ್ವರ್ಯ ಮಾರುತಿ (ಬೆಳಗಾವಿ)–3; ಟ್ರಿಪಲ್ ಜಂಪ್: ಪವಿತ್ರಾ (ಉಡುಪಿ)–1, ಅಂತರ: 12.80 ಮೀ; ನಿತ್ಯಶ್ರೀ (ಬೆಂಗಳೂರು ಗ್ರಾಮೀಣ)–2; ಸ್ಮಿತಾ ಪ್ರಮೋದ್ ಕಾಕತ್ಕರ್ (ಬೆಳಗಾವಿ)–3; 3000 ಮೀ. ಸ್ಟಿಪಲ್ ಚೇಸ್: ದೀಕ್ಷಾ (ಶಿವಮೊಗ್ಗ)–1, ಕಾಲ: 11 ನಿ. 58.25 ಸೆ.; ನಕೊಶಾ ಮಂಗಾಂಕರ್ (ಬೆಳಗಾವಿ)–2, ಸ್ಪಂದನಾ(ಹೊಸಕೋಟೆ)–3; 400 ಮಿ. ಓಟ: ಮೇಘಾ (ಹುಬ್ಬಳ್ಳಿ)–1, ಕಾಲ 55ನಿ. 49 ಸೆ., ಅಭಿಜ್ಞಾ (ಶಿವಮೊಗ್ಗ) –2, ಮಾನಸ (ಬೆಂಗಳೂರು)–3.

ಚಾಂಪಿಯನ್ಸ್ ಟ್ರೋಫಿ ವಸ್ತ್ರಸಂಹಿತೆ ಪಾಲನೆಗೆ ಬದ್ಧ: ಸೈಕಿಯಾ

ನವದೆಹಲಿ (ಪಿಟಿಐ): ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿ ನಿಗದಿಯಾಗಿರುವ ವಸ್ತ್ರಸಂಹಿತೆಯನ್ನು ಪಾಲಿಸಲು ಬದ್ಧವಾಗಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸ್ಪಷ್ಟಪಡಿಸಿದೆ.

ಫೆಬ್ರುವರಿ 19ರಿಂದ ಚಾಂಪಿಯನ್ಸ್ ಟ್ರೋಫಿ ಟೂರ್ನಿಯು ಆರಂಭವಾಗಲಿದೆ. ಪಾಕಿಸ್ತಾನದ ಆತಿಥ್ಯದಲ್ಲಿ ಟೂರ್ನಿಯು ನಡೆಯಲಿದೆ. ಆದರೆ ಭಾರತ ತಂಡವು ಪಾಕ್‌ನಲ್ಲಿ ಆಡಲು ನಿರಾಕರಿಸಿದ್ದರಿಂದ ತಟಸ್ಥ ಸ್ಥಳವಾದ ದುಬೈನಲ್ಲಿ ಭಾರತದ ಪಂದ್ಯಗಳನ್ನು ಆಯೋಜಿಸಲಾಗುತ್ತಿದೆ.

ಟೂರ್ನಿಯಲ್ಲಿ ಆಟಗಾರರು ಧರಿಸುವ ಪೋಷಾಕಿನಲ್ಲಿ ಆತಿಥೇಯ ಪಾಕ್ ತಂಡದ ಲಾಂಛನ ಮತ್ತು ಹೆಸರು ಇರುತ್ತದೆ. ಆದ್ದರಿಂದ ಈ ಪೋಷಾಕು ಧರಿಸಲು ಭಾರತ ತಂಡ ನಿರಾಕರಿಸಿದೆ ಎಂಬ ಸುದ್ದಿಗಳು ಹರಿದಾಡಿದ್ದವು.

‘ಚಾಂಪಿಯನ್ಸ್ ಟ್ರೋಫಿ ಸಂದ ರ್ಭದಲ್ಲಿ ಐಸಿಸಿ ಜಾರಿ ಮಾಡಿರುವ ನಿಯಮ ಗಳನ್ನು ನಾವು ಪಾಲಿಸುತ್ತೇವೆ. ಸಮವಸ್ತ್ರಕ್ಕೆ ಸಂಬಂಧಿಸಿದ ಎಲ್ಲ ನಿಬಂಧನೆಗಳನ್ನೂ ಪಾಲಿಸುತ್ತಿದ್ದೇವೆ. ಟೂರ್ನಿಯಲ್ಲಿ ಬೇರೆಲ್ಲ ತಂಡಗಳು ವಸ್ತ್ರಸಂಹಿತೆ ಮತ್ತು ಲಾಂಛನದ ಕುರಿತು ಅನುಸರಿಸುವ ನಿಯಮವನ್ನೇ ನಾವೂ ಪಾಲನೆ ಮಾಡುತ್ತೇವೆ ಎಂದು ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ತಿಳಿಸಿದ್ದಾರೆ.



ಮಹಾ ಕುಂಭಮೇಳವನ್ನು ಆಚರಿಸಲಾಗುತ್ತಿದೆ...

ಬಿಯುಎಫ್‌ಸಿ, ಇಂಡಿಪೆಂಡೆಂಟ್ಸ್ ಪಂದ್ಯ ಡ್ರಾ

ಬೆಂಗಳೂರು: ಬಿಯುಎಫ್‌ಸಿ ತಂಡ ಸೂಪರ್ ಡಿವಿಷನ್ ಲೀಗ್ ಪಂದ್ಯದಲ್ಲಿ ಬುಧವಾರ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ವಿರುದ್ಧ 2–2 ಗೋಲುಗಳಿಂದ ಡ್ರಾ ಸಾಧಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡ 4–0 ಗೋಲುಗಳಿಂದ ರಿಯಲ್ ಚಿಕ್ಕಮಗಳೂರು ಎಫ್‌ಸಿ ತಂಡದ ವಿರುದ್ಧ ಜಯಿಸಿತು.

ಕ್ರಿಕೆಟ್: ರೋಹಿತ್ ರೆಡ್ಡಿ ನಾಯಕ

ಬೆಂಗಳೂರು: ಕರ್ನಾಟಕ ರಾಜ್ಯ 14 ವರ್ಷದೊಳಗಿನವರ ಕ್ರಿಕೆಟ್ ತಂಡಕ್ಕೆ ರೋಹಿತ್ ರೆಡ್ಡಿ ನಾಯಕರಾಗಿದ್ದಾರೆ.

ಇದೇ 27ರಿಂದ ಫೆಬ್ರುವರಿ 15ರವರೆಗೆ ಪುದುಚೇರಿಯಲ್ಲಿ ನಡೆಯಲಿರುವ ದಕ್ಷಿಣ ವಲಯ (14 ವರ್ಷದೊಳಗಿನವರು) ಕ್ರಿಕೆಟ್ ಟೂರ್ನಿಯಲ್ಲಿ ತಂಡವು ಆಡಲಿದೆ.

ಬುಧವಾರ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಪ್ರಕಟಿಸಿರುವ ತಂಡ ಇಂತಿದೆ: ಆರ್. ರೋಹಿತ್ ರೆಡ್ಡಿ (ನಾಯಕ), ನಿತೀಶ್ ಆರ್ಯ, ಆರ್. ಶಿವರಾಜ್, ಆರ್ಯನ್‌ಸಿಂಹ ಚಾವ್ಡಾ, ರುಹಾನ್ ಶೇಖ್, ಅಲನ್ ಕೆ. ವಿನಯ್, ಪಾರ್ಥ ಮದನ್, ನರಸಿಂಹ, ಕೃಷ್ಣ, ಕಾರ್ತಿಕ್ ರಾಥೋಡ್, ಎಸ್. ವಿದ್ವತ್, ವೈ.ಎಸ್. ಆಯುಷ್, ಅಯಾತ್ ರಹೀಮ್ ಖಾನ್, ಎಸ್.ಎನ್. ಅವನೀಶ, ಪೂರಬ್ ಸೋನಿ, ಸಾದ್ ರಯಾನ್ ಖಾನ್. ಕುನಾಲ್ ಕಪೂರ್ (ಕೋಚ್), ಆದಿತ್ಯ ಬಿ ಸಾಗರ್ (ಬೌಲಿಂಗ್ ಕೋಚ್), ಸ್ಯಾಮುಯೆಲ್ ಜಯರಾಜ್ ಮುತ್ತು (ಮ್ಯಾನೇಜರ್), ಜಿ.ಡಿ. ವಿನಯಕುಮಾರ್ (ಫಿಸಿಯೊ), ಸಚಿನ್ ಘೋರ್ಪಡೆ (ಸ್ಟ್ರೆಂಥ್–ಕಂಡಿಷನಿಂಗ್).

ಮತ್ತೊಂದು ಗೆಲುವು ಸಾಧಿಸಿದ ಪ್ರಜ್ಞಾನಂದ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್): ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಅವರು ಸ್ವದೇಶದ ಲಿಯಾನ್ ಲ್ಯೂಕ್ ಮೆಂಡೊನ್ಸ ಅವರನ್ನು ಸುಲಭವಾಗಿ ಸೋಲಿಸಿ ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನ ನಂತರ ಏಕಾಂಗಿಯಾಗಿ ಅಗ್ರಸ್ಥಾನಕ್ಕೇರಿದರು.

ಚೆನ್ನೈನ ಪ್ರಜ್ಞಾನಂದ 3.5 ಪಾಯಿಂಟ್ಸ್ ಗಳಿಸಿದರೆ, ಎರಡನೇ ಸ್ಥಾನದಲ್ಲಿರುವ ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೊವ್ (3) ಒಬ್ಬರೇ ಎರಡನೇ ಸ್ಥಾನದಲ್ಲಿದ್ದಾರೆ.

ಮಂಗಳವಾರ ನಡೆದ ಪಂದ್ಯದಲ್ಲಿ ಮಧ್ಯಮ ಹಂತದ ಆಟದಲ್ಲಿ ಒತ್ತಡ ನಿಭಾಯಿಸಲಾಗದೇ ಮೆಂಡೊನ್ಸಾ (0.5) ಅವರು 46 ನಡೆಗಳಲ್ಲಿ ಸೋಲು ಅನುಭವಿಸಿದರು. ಇದು 19 ವರ್ಷದ ಪ್ರಜ್ಞಾನಂದ ಅವರಿಗೆ ಸತತ ಮೂರನೇ ಜಯ. ಮೂರೂ ಗೆಲುವು ಸ್ವದೇಶದ ಆಟಗಾರರ ವಿರುದ್ಧ (ಇನ್ನೆರಡು ಹರಿಕೃಷ್ಣ ಮತ್ತು ಅರ್ಜುನ್ ಇರಿಗೇಶಿ ವಿರುದ್ಧ) ದಾಖಲಾಗಿದೆ. ಅವರು ಭಾರತದ ಇನ್ನೊಬ್ಬ ಆಟಗಾರ ಗುಕೇಶ್ ಎದುರು ಆಡಬೇಕಾಗಿದೆ.

ಬುಧವಾರ ಟೂರ್ನಿಗೆ ಮೊದಲ ವಿರಾಮದ ದಿನ. ಒಟ್ಟು 13 ಸುತ್ತುಗಳಿವೆ.

ವಿಶ್ವ ಚಾಂಪಿಯನ್ ಡಿ.ಗುಕೇಶ್ (2.5) ಅವರು ಸರ್ಬಿಯಾಕ್ಕೆ ಆಡುತ್ತಿರುವ ರಷ್ಯನ್ ಗ್ರ್ಯಾಂಡ್‌ಮಾಸ್ಟರ್ ಅಲೆಕ್ಸಿ ಸರನ ಎದುರು ಡ್ರಾ ಮಾಡಿಕೊಳ್ಳಲಷ್ಟೇ ಶಕ್ತರಾದರು.

ಬಿಳಿ ಕಾಯಿಗಳಲ್ಲಿ ಆಡಿದ ಸರನ ಯಾವುದೇ ಸಾಹಸಕ್ಕೆ ಹೋಗದೇ ಮೂಲತತ್ವಗಳಿಗೆ ಅಂಟಿಕೊಂಡು ಡ್ರಾ ಸಾಧಿಸುವಲ್ಲಿ ಯಶಸ್ವಿಯಾದರು.

ವಿದಿತ್ ಗುಜರಾತಿ ಗೈರಾದ ಕಾರಣ ಇಲ್ಲಿ ಆಡುವ ಅವಕಾಶ ಪಡೆದ ಪಿ.ಹರಿಕೃಷ್ಣ (2.5) ನಾಲ್ಕನೇ ಸುತ್ತಿನಲ್ಲಿ ಆತಿಥೇಯ ಹಾಲೆಂಡ್‌ನ ಮ್ಯಾಕ್ಸ್ ವಾರ್ಮೆರ್‌ಡನ್ ಅವರನ್ನು ಕೇವಲ 23 ನಡೆಗಳಲ್ಲಿ ಮಣಿಸಿದರು.

ಇರಿಗೇಶಿಗೆ ನಿರಾಸೆ:

ಭಾರತದ ಅಗ್ರ ಆಟಗಾರ ಅರ್ಜುನ್ ಇರಿಗೇಶಿ (0.5) ಮತ್ತೆ ನಿರಾಸೆಗೊಳಗಾದರು. ಸ್ಲೊವೇನಿಯಾಕ್ಕೆ ಆಡುತ್ತಿರುವ ರಷ್ಯನ್ ಸಂಜಾತ ವ್ಲಾದಿಮಿರ್ ಫೆಡೊಸೀವ್ (2.5) ಅವರು ಇರಿಗೆಶಿ ಅವರನ್ನು ಮಣಿಸಿದರು.

ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನ (2.5) ಅವರು ಹಾಲೆಂಡ್‌ನ ಅನಿಶ್ ಗಿರಿ (1.5) ಎದುರು ಡ್ರಾ ಮಾಡಿಕೊಂಡರು.

ಒಡಿಶಾ ಎಫ್‌ಸಿಗೆ ಮಣಿದ ಬಿಎಫ್‌ಸಿ

ಬೆಂಗಳೂರು: ಡೀಗೊ ಮೌರಿಸಿಯೊ ಗಳಿಸಿದ ಎರಡು ಗೋಲುಗಳ ನೆರವಿ ನಿಂದ ಒಡಿಶಾ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ ಪಂದ್ಯದಲ್ಲಿ ಬುಧವಾರ 3–2 ಗೋಲುಗಳಿಂದ ಬೆಂಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆತಿಥೇಯ ತಂಡ ಎಡ್ಗರ್ ಮೆಂಡಿಸ್ (10ನೇ ನಿಮಿಷ) ಮತ್ತು ಸುನಿಲ್ ಚೆಟ್ರಿ (13ನೇ ನಿಮಿಷ) ಮೂಲಕ ಗೋಲು ಗಳಿಸಿ ಬೇಗ ಮನ್ನಡೆ ಪಡೆದಿತ್ತು. ಆದರೆ ಮೌರಿಸಿಯೊ 29 ಮತ್ತು 38ನೇ ನಿಮಿಷ ಗೋಲು ಗಳಿಸಿ ಸ್ಕೋರ್ ಸಮ ಮಾಡಿದರು.

ವಿರಾಮದ ನಂತರ ಜೆರಿ ಮೊವಿಮಿಂಗ್‌ತಂಗ 50ನೇ ನಿಮಿಷ ಗಳಿಸಿದ ಗೋಲು ಒಡಿಶಾಕ್ಕೆ ಗೆಲುವು ತಂದುಕೊಟ್ಟಿತು.